THE BOOK WAS DRENCHED

UNIVERSAL
LIBRARY
OU_200633
UNIVERSAL
LIBRARY

OSMANIA UNIVERSITY LIBRARY

Call No. K 81.1 / K 44M Vol IV Accession No. K 48

Author

Title

This book should be returned on or before the date last marked below.

Government Oriental Library Series

EDITED BY PANDITS UNDER THE SUPERVISION OF THE CURATOR, GOVERNMENT ORIENTAL LIBRARY, MYSORE

Kannada Section No. VII

ಕುಮಾರವ್ಯಾಸ ಮಹಾಕವಿ ವಿರಚಿತ

ಕರ್ಣಾಟಕ ಮಹಾಭಾರತ

೪ನೆಯ ಸಂಪುಟ

ಅರಣ್ಯಪರ್ವ

THE KARNATAKA MAHABHARATA

BY

KUMARAVYASA MAHAKAVI

Volume IV

ARANYA PARVA

EDITED BY

V. SYAMACHARYA

Pandit, Government Oriental Library, Mysore

Published under the authority of the Government of His Highness the Maharaja of Mysore

MYSORE:
PRINTED AT THE GOVERNMENT BRANCH PRESS
1918

ಅವತರಣಿಕೆ.

ಈ ಪುಸ್ತಕವು ಕರ್ಣಾಟಕ ಮಹಾಭಾರತದ ನಾಲ್ಕನೆಯ ಸಂಚಿಕೆಯಾಗಿರುವುದು ಈ ಗ್ರಂಥಕರ್ತನಾದ ಕುಮಾರವ್ಯಾಸನ ವಿಷಯದಲ್ಲಿ ಮತ್ತು ಆತನ ಭಾಷೆಯ ವಿಷಯದಲ್ಲಿಯೂ ಆವಶ್ಯಕವಾಗಿ ಬರೆಯ ಬೇಕಾದ ವಿಷಯಗಳೆಲ್ಲಾ (ಕನ್ನಡ ಸೆಕ್ಷನ್ 3—4ನೆಯ ಪುಸ್ತಕಗಳಾದ) ಉಪೋದ್ಘಾತ ಸಂಚಿಕೆ ಮತ್ತು ಸಂಭವಪರ್ವ ಇವುಗಳ ಅವತರಣಿಕೆಯಲ್ಲಿ ಪ್ರಾಯಿಕವಾಗಿ ಹೇಳಲ್ಪಟ್ಟಿವೆ, ಆದುದರಿಂದ ಈ ಪುಸ್ತಕದಲ್ಲಿ ಅಡಗಿರುವ ಗ್ರಂಥಕ್ಕೆ ಸಂಬಂಧಿಸಿದ ವಿಶೇಷವಿಷಯಗಳನ್ನು ಮಾತ್ರ ಬರೆವುದು ಈಗ ಆವಶ್ಯಕವಾಗಿದೆ.

ಈ ಪುಸ್ತಕದಲ್ಲಿ ಆರಣ್ಯಕಪರ್ವ 1, ಕಿಮ್ಮೀರವಧಪರ್ವ 2, ಅರ್ಜುನಾಭಿಗಮನಪರ್ವ 3, ಕೈರಾತಪರ್ವ 4, ಇಂದ್ರಲೋಕಾಭಿಗಮನಪರ್ವ 5, ತೀರ್ಥಯಾತ್ರಾಪರ್ವ 6, ಜಟಾಸುರವಧಪರ್ವ 7, ನಿವಾತಕವಚಯುದ್ಧಪರ್ವ 8, ಆಜಗರಪರ್ವ 9, ಮಾರ್ಕಂಡೇಯಸಮಾಖ್ಯಾಪರ್ವ 10, ದ್ರೌಪದೀಸತ್ಯಭಾಮಾಸಂವಾದಪರ್ವ 11, ಘೋಷಯಾತ್ರಾಪರ್ವ 12, ಕುಂಡಲಾಹರಣಪರ್ವ 13, ದ್ರೌಪದೀಹರಣಪರ್ವ 14, ಆರಣೇಯಪರ್ವ 15, ಎಂದು ಹದಿನೈದುಪರ್ವಗಳು ಅಡಗಿವೆ.

ಈ ಅರಣ್ಯಪರ್ವದಲ್ಲಿ ಚ. ಡ. ಛ. ಗುರ್ತುಗಳುಳ್ಳ ಪುಸ್ತಕಗಳಲ್ಲಿ 3—4 17·23·25 ಈ ಸಂಧಿಗಳು ಇರುವುದಿಲ್ಲ. ಆದರೂ ಖ. ಝು. ಗ, ಗುರ್ತುಗಳುಳ್ಳ ಪುಸ್ತಕಗಳಲ್ಲಿ ಮೇಲೆ ಕಂಡ ಸಂಧಿಗಳು ಕಂಡು ಬಂದುದರಿಂದ ಅವುಗಳು ಉಪೇಕ್ಷೆಗೆ ಅರ್ಹವಲ್ಲವೆಂದು ಭಾವಿಸಿ ಈ ಪುಸ್ತಕದಲ್ಲಿ ಮುದ್ರಿಸಲ್ಪಟ್ಟಿವೆ.

ಈ ಗ್ರಂಥಕಾರನ ವಿಷಯದಲ್ಲಿ ಹೇಳಬೇಕಾದ ವಿಷಯಗಳು ಪ್ರಾಯಿಕವಾಗಿ 1ನೆಯ ಸಂಚಿಕೆಯ ಅವತರಣಿಕೆಯಲ್ಲಿ ನಿರೂಪಿಸಲ್ಪ

ಟ್ಟುವೆ. ಆದರೆ ಅರಣ್ಯಪರ್ವದ 7ನೆಯ ಸಂಧಿಯಲ್ಲಿ ಕೆಲವು ಪದ್ಯಗಳನ್ನು ಸಾವಧಾನವಾಗಿ ಪರಾಮರ್ಶಿಸಿದರೆ, ಈ ಕವಿಯನ್ನು ಶಿವಭಕ್ತನಾದ ಅದ್ವೈತಿ ಎಂದು ನಿರ್ಧರಿಸಬಹುದೆಂಬ ಕೆಲವರ ಅಭಿಪ್ರಾಯವನ್ನು ಅರಣ್ಯಪರ್ವದಲ್ಲಿಯೇ ವಿಚಾರಮಾಡುವುದೆಂದು ಹೇಳಿದ್ದೆವಷ್ಟೆ. ಆಪ್ರಕಾರ ಸ್ವಲ್ಪ ವಿಚಾರವು ಮಾಡಲ್ಪಡುತ್ತದೆ. ಈ ಗ್ರಂಥಕರ್ತನು ಶಿವಭಕ್ತನಾದ ಅದ್ವೈತಿಯೆಂದು ಹೇಳುವುದಕ್ಕೆ ಅನುಕೂಲವಾಗಿ ತೋರುವ 7ನೆ ಸಂಧಿಯಲ್ಲಿರುವ ಪದ್ಯಗಳು.

"ಆವನನು ಜೀವಾತ್ಮಚೈತ
ನ್ಯಾವಲಂಬನದಲ್ಲಿ ಈಶ್ವರ
ನಾವನೀತನೊಳಮಗೆ ತೋಟಿಯೆ ಶಿವ ಶಿವಾ ಯೆಂದ ॥ ೭—೫೫

"ಲೋಕರಚನಾ ರಕ್ಷೆ ಸಂಹೃತಿ
ವ್ಯಾಕರಣೆ ತಾನಾರದೀಜಗ
ದೇಕದೈವದ ಕೂಡೆ ತೋಟಿಯೆ ಶಿವ ಶಿವಾ ಯೆಂದ ॥ ೭ —೫೬

"ಅವನೊಬ್ಬನಣೋರಣೀಯನ
ದಾವನುರುಮಹತೋಮಹೀಯನ
ದಾವ ನುರುತರ ॥ ೭—೬೩

"ಸರಸಿಜಾಸನ ವಿಷ್ಣು ರುದ್ರೇ
ಶ್ವರಸದಾಶಿವರಾವಳೊಬ್ಬಳ
ಚರಣಸೇವಾಸಂಗದಲ್ಲಿಯೆ ಸುಪ್ರತಿಷ್ಠಿತರು।
ಪರಮ ಶಕ್ತಿಯದಾವನಂಘ್ರಿಗೆ
ಶಿರವನೊಡ್ಡುವಳಾ ಪರಾತ್ಪರ
ಪರಮಶಿವನಲಿ ಸಣಸಿದೆವಲಾ ಶಿವ ಶಿವಾ ಯೆಂದ" ೭—೬೬

ಇವೇ ಮೊದಲಾದ ಪದ್ಯಗಳು ಅರ್ಜುನನು ಕಿರಾತರೂಪಿಯಾದ ಶಿವನೊಡನೆ ಯುದ್ಧವನ್ನು ಮಾಡಿ ಆ ಕಿರಾತನು ಶಿವನೆಂದು ವ್ಯಕ್ತವಾ

ಗಲು ತಾನು ಮಾಡಿದ ಕಾರ್ಯವು ಅನುಚಿತವೆಂದು ಚಿಂತಿಸುವ ರೀತಿಯನ್ನು ಹೇಳುತ್ತವೆ. ಈ ಸಂದರ್ಭವನ್ನು ಚನ್ನಾಗಿ ಬುದ್ಧಿವಂತರು ಪರಿಭಾವಿಸಿದರೆ ಈ ಪದ್ಯಗಳು ಮೇಲೆ ಹೇಳಿದ ಅಭಿಪ್ರಾಯಕ್ಕೆ ಸಾಧಕವೆಂದು ಹೇಳಲವಕಾಶವಿರುವುದಿಲ್ಲ.

ಹೇಗೆಂದರೆ — ಈ ಶ್ಲೋಕಗಳು ಅರ್ಜುನನು ಚಿಂತಿಸಿದ ರೀತಿಯನ್ನು ತಿಳಿಸುತ್ತವೆಯೇ ಹೊರತು ಗ್ರಂಥಕಾರನ ಮತವನ್ನು ತಿಳಿಸುವುವಲ್ಲ. ಅರ್ಜುನನು ಮಹಾಜ್ಞಾನಿಯೆಂದು ಸರ್ವಸಮ್ಮತನಾದುದರಿಂದ ಅರ್ಜುನನ ಮತವು ದ್ವೈತಾ ದ್ವೈತಾದಿಮತಗಳಲ್ಲಿ ಬಂದೆಂದು ನಿಶ್ಚಯಿಸುವುದು ಶಕ್ಯವಲ್ಲ. ಈ ಪ್ರಕರಣದಲ್ಲಿ ಅರ್ಜುನನು ಶಿವಭಕ್ತಿಯನ್ನು ತೋರಿಸಿದಂತೆ ಸ್ಥಳಾಂತರಗಳಲ್ಲಿ ವಿಷ್ಣುಭಕ್ತಿಯನ್ನು ಇನ್ನು ಹೆಚ್ಚಾಗಿ ವ್ಯಕ್ತಪಡಿಸಿದಂತೆ ಪ್ರತಿಪಾದಿಸುವ ವಚನಗಳು ದೊರೆಯುತ್ತವೆ. ಅರ್ಜುನನ ಮತವು ಯಾವುದಾದರೂ ಆಗಲಿ ಕವಿಯ ಮತವು ಅರ್ಜುನನ ಮತವೇ ಯೆಂದು ಹೇಳುವುದಕ್ಕೆ ಸಾಧಕವೇ ಇಲ್ಲವಾದುದರಿಂದ, ಈ ವಚನಗಳಿಂದ ಕವಿಯ ಮತದ ನಿಶ್ಚಯವಾಗುವುದಿಲ್ಲ. ಮತ್ತು ಅರ್ಜುನನು ಶ್ರೀಕೃಷ್ಣ ಪ್ರೇರಣಾನುಸಾರವಾಗಿ ಪಾಶುಪತಾಸ್ತ್ರವನ್ನು ಸಂಪಾದಿಸಲು ಶಿವಸನ್ನಿಧಿಗೆ ಬಂದು ಶಿವಾರ್ಚನೆಯನ್ನು ಮಾಡಿದಾಗ ಈ ಸಂಭವವು ಉಂಟಾಯಿತಲ್ಲವೆ ? ಫಲಕಾಮನೆಯಿಂದ ಆರಾಧನೆಯನ್ನು ಮಾಡತಕ್ಕವನು ತನ್ನಿಂದ ಆರಾಧಿಸಲ್ಪಡುವ ದೇವತೆಗೆ ಸಂತೋಷಕರವಾದ ಧ್ಯಾನಸ್ತುತಿನಮೊದಲಾದುದನ್ನು ಮಾಡುವುದು ಸಹಜವಲ್ಲವೆ ? ಆದರೆ ಅದ್ವೈತಮತಪ್ರಕಾರವಾಗಿ ಧ್ಯಾನಕಾಲದಲ್ಲಿ ತೋರುವ ಧರ್ಮಗಳೆಲ್ಲವೂ ಆರೋಪಿತವಾದುದರಿಂದ ಶಿವನಲ್ಲಿ ಸರ್ವೋತ್ತಮತ್ವಾದಿಗಳನ್ನು ಫಲಾರ್ಥವಾಗಿ ಆರೋಪಿಸಿ ಅರ್ಜುನನು ಉಪಾಸಿಸಿದನೆಂದು ಹೇಳಬಹುದಾಗಿದೆ. ಆದುದರಿಂದ ಈ ಪದ್ಯಗಳು ತತ್ವವನ್ನು ತಿಳಿಸುವುವಲ್ಲ ಅಲ್ಲದೆ ಅರ್ಜುನನು ಮತ್ತು ಇತರಪಾಂಡವರು ಸರ್ವದಾ ಶ್ರೀಕೃಷ್ಣನನ್ನೇ ಪರದೇವತೆಯೆಂದು ನಂಬಿದವರೆಂಬುದು ಇದೇ ಗ್ರಂಥದಲ್ಲಿ ಅನೇಕ ಭಾಗಗಳಲ್ಲಿಯೂ ಮತ್ತು ಭಗವದ್ಗೀತೆಯಲ್ಲಿಯೂ ಅತ್ಯಂತ ಸ್ಪಷ್ಟವಾಗಿರುತ್ತದೆ.

ಇದರಿಂದ ಶಿವಸರ್ವೋತ್ತಮತ್ವವು ಅರ್ಜುನನ ಮತವೇ ಅಲ್ಲದಾಗಿರುವಾಗ ಅರ್ಜುನನ ಧ್ಯಾನಪ್ರಕಾರವನ್ನು ಅನುವದಿಸುವ ಗ್ರಂಥಕಾರನು ಆಮತದವನೆಂದು ಹೇಳುವುದು ಸಕಾರಣವಾಗಿರುವುದಿಲ್ಲ.

ಹೀಗೆಯೇ ಶಿವನನ್ನು ಸಮೀಪಿಸಿದಾಗ ಅರ್ಜುನನ ಅಪರಾಧಕ್ಷಮಾಪನಪೂರ್ವಕವಾದ ಶಿವಸ್ತುತಿವಾಕ್ಯಗಳು ಕೂಡ ಗ್ರಂಥಕಾರನ ಮತವನ್ನು ತಿಳಿಸುವುದಕ್ಕೆ ಅನುಕೂಲವಲ್ಲ ವಾಸ್ತವವಾಗಿ ಮೂಲಭಾರತದಲ್ಲಿ ಈ ಪ್ರಕರಣದಲ್ಲಿ ಕಂಡು ಬರುವ ಕೆಲವು ಶ್ಲೋಕಗಳ ಅಭಿಪ್ರಾಯವನ್ನು ತಿಳಿಸುವ ವಾಕ್ಯಗಳು ಕರ್ಣಾಟಕ ಭಾರತದಲ್ಲಿ ಈಪ್ರಕರಣದಲ್ಲಿ ಕಂಡುಬರುವುದಿಲ್ಲ. ಕೆಲವು ಅಭಿಪ್ರಾಯಗಳಿಗೆ ಸಂವಾದಿಯಾದ ವಾಕ್ಯಗಳು ಕಂಡುಬಂದರೂ ಆ ವಾಕ್ಯಗಳು ಸರ್ವಮತದವರೂ ತಮ್ಮ ತಮ್ಮ ಮತಾನುಸಾರವಾಗಿ ಹೊಂದಿಕೆಮಾಡಿಕೊಳ್ಳಲು ತಕ್ಕುವಾಗಿವೆ. ಆದುದರಿಂದ ಇಲ್ಲಿರುವ ವಾಕ್ಯಗಳು ಕೂಡ ಮೂಲಭಾರತದಲ್ಲಿರುವ ವಾಕ್ಯಗಳಂತೆ ಸರ್ವಮತಗಳಿಗೂ ಅನುಕೂಲವಾಗತಕ್ಕವುಗಳಾಗಿವೆ. ಮೂಲಭಾರತದಲ್ಲಿಲ್ಲದ ಅಭಿಪ್ರಾಯಗಳನ್ನು ತಿಳಿಸುವ ವಾಕ್ಯಗಳು ಮತಾಭಿಮಾನಿಗಳಿಂದ ಸೇರಿಸಲ್ಪಟ್ಟವೆಂದಾಗಲಿ ಇತರ ಮತಗಳಿಗನುಕೂಲವಾದ ವಾಕ್ಯಗಳು ಗ್ರಂಥದಿಂದ ತೆಗೆದು ಹಾಕಲ್ಪಟ್ಟವೆಯೆಂದಾಗಲಿ ಹೇಳಬಹುದಾಗಿದೆ. ಆದುದರಿಂದ ಇಷ್ಟಮಾತ್ರದಿಂದೇ ಗ್ರಂಥಕಾರನ ಮತನಿರ್ಣಯವು ಆಗುವುದಿಲ್ಲ.

ಅಲ್ಲದೆ ಮೊದಲನೆಯ ಸಂಪುಟದ ಅವತರಣಿಕೆಯಲ್ಲಿ ಗ್ರಂಥಕಾರನು ಇಂತಹ ಮತದವನೆಂಬುದನ್ನು ನಿರ್ಣಯಿಸುವುದಕ್ಕೆ ಸಾಧಕಗಳೆಂದು ನಾವು ತೋರಿಸಿರುವ ಆದ್ಯಂತಗಳಲ್ಲಿ ವೀರನಾರಾಯಣನಾಮಾಂಕನಾದಿಗಳೇ ಸಾಧಕಗಳೆಂದು ತಿಳಿವುದುಚಿತವೆಂದು ಹೇಳಬಹುದಾಗಿದೆ.

ಇದೇ ವಿಷಯದಲ್ಲಿ ಅದ್ವೈತಮತದ ತತ್ವವನ್ನು ಅರಿತು ವಿಚಾರಮಾಡಿದರೆ ಆ ಮತದ ಪ್ರಕಾರ ಶೈವವೈಷ್ಣವ ವಿಭಾಗವು ಅನಾವಶ್ಯಕ

ವೆಂಬುದು ಮೊದಲಾದುದನ್ನು ಅನುತ ರಹಸ್ಯವ್ಯಕ್ತಿ ಪೂರ್ವಕವಾಗಿ ತಿಳಿಸಿದರೆ ಸರ್ವಜನರಿಗೂ ಗ್ರಾಹ್ಯವಾಗಲಾರದೆಂದು ಸಂಕ್ಷೇಪಿಸಲ್ಪಟ್ಟಿದೆ.

ಇದರ ಶೋಧನಕ್ಕಾಗಿ ಉಪಯೋಗಿಸಿರುವ ಪುಸ್ತಕಗಳ ವಿವರಣೆ.

ಗುರ್ತು	ಗ॥ ಟ॥	ಲೈಬ್ರರಿ ನಂಬರು	ವಿಶೇಷ.
ಕ.	ನಂ॥	70	ಸಮಗ್ರ.
ಖ	,,	,,	ಸಮಗ್ರ ಕೌರ್ಟಪ್ರಸ್ ಪ್ರೊ ಪೈಟರಾದ ವೆ॥ ಮಾದಪ್ಪನವರಿಂದ ಬಂದದ್ದು.
ಗ	,	251	ಸಮಗ್ರ.
ಳ	,,	57	ಅಸಮಗ್ರ.
ಙ	,,	2	ಸಮಗ್ರ.
ಝು	,,	266	ಅಸಮಗ್ರ.
ಟ	,,	205	ಸಮಗ್ರ.
ಡ	,,	227	ಸಮಗ್ರ.

ಮೇಲೆ ತೋರಿಸಿದ ಪುಸ್ತಕಗಳೊಳಗೆ ಅನೇಕ ಪುಸ್ತಕಗಳಲ್ಲಿ ಕಂಡು ಅತ್ಯಂತಸಂಗತವಾಗಿರುವುದನ್ನು ಪುಸ್ತಕವೊಭ್ಯದಲ್ಲಿ ಸೇರಿಸಿ ಉಳಿದ ಏನೋ ಬಂದು ರೀತಿಯಾಗಿ ಹೊಂದಿಸಿಕೊಳ್ಳಬಹುದಾದ ಪುಸ್ತಕಾಂತರ ಪಾಠಗಳನ್ನು ಆಯಾ ಪುಟದ ಕೆಳಗಡೆ ಆಯಾ ಪುಸ್ತಕದ ಗುರ್ತಿನೊಡನೆ ತೋರಿಸಿದೆ. ಪ್ರಾಯಿಕವಾಗಿ ನಿರ್ಮೂಲವಾಗಿಯೂ ಅನಾವಶ್ಯಕವಾಗಿಯೂ ಯಾವ ಶೋಧನೆಯೂ ಮಾಡಲ್ಪಟ್ಟಿರುವುದಿಲ್ಲ. ಇದರ ಮೇಲೂ ಪ್ರಮಾದಿಕ ದೋಷಗಳೇನಾದರೂ ಇದ್ದರೆ ಗುಣಜ್ಞರು ಕ್ಷಮಿಸುವುದಕ್ಕೆ ಯೋಗ್ಯವಾಗಿರುವುದರಿಂದ ಗುಣಗ್ರಾಹಿಗಳು ಅಭಿಜ್ಞರೂ ಆದವರೆಲ್ಲರೂ ಸಂತೋಷಿಸುವರೆಂದು ನಂಬಿದೆ.

ಶೋಧನ ಪತ್ರಿಕೆ.

ಪುಟ	ಪಙ್ತಿ	ಅಶುದ್ಧ	ಶುದ್ಧ
2	19	ಧರ	ಧಾರ
4	10	ಖಟೆ	ಖಟಿ
14	18	ನಿಷ	ನಿಷ್ಪ
15	19	ವ್ಯೋ	ವ್ಯೈ
16	9	ವ	ವೇ
48	24	ಗಾವೋ	ಗಾವೋ
50	18	ಜೌ	ಜೌ
52	24	ಲವೆ	ಲವ
53	16	ವಿಗೆತ	ಳಿಗೆ
,,	17	ದಾಧಿ	ಧಾ
56	15	ವರ್ತಿ	ವತಿ
67	9	ಕರಣಾ	ಕರುಣಾ
70	4	ತಿಂಳಿ	ತಿಂಗಳ
70	16	ಭ್ರಮುಸು	ಭ್ರಮಿಸು
70	23	ಕಮು	ಕ್ರಮು
142	6	ಕೇಳಿ	ಖೀಳಿ
143	12	ಬಾಲ	ಬಾಲಿ
146	10	ದೇವಿ	ದೇವ
153	7	ನಲೆದೊ	ನಲೆದ
158	24	ಖತ	ಖತು
169	1	ಭೀವ	ಭೀಮು
180	13	ಹೊಗ	ಹೋಗ
180	13	ಭೀನು	ಭೀಮು

ಪುಟ	ಪಙ್ತಿ	ಅಶುದ್ಧ	ಶುದ್ಧ
211	13	ರತ	ತರ
214	24	ಸಕಂ	ಸಕ್ಕಂ
224	13	ತಡಾರು	ಕನಾರು
225	7	ನಿಂದ್ಯದ	ನಿಂದ್ಯರ
261	5	ತುಷ್ಟ	ತುಷ್ಟಿ
284	15	ಹಾಯು	ಹಾಯ್ದು
286	20	ಮುದುದೇ	ಮುಳ್ದಿದುದೇ
315	14	ಗಿದ	ಗಿದು
328	21	ಗೆಳು	ಗಳಿ
364	9	ವಿವಲ	ವಿವುಲ

ವಿಷಯ ಸೂಚಿಕೆ.

ವಿಷಯ				ಪುಟ
೧ನೆಯ ಸಂಧಿ—				
ಪಾಂಡವರು ಗಂಗೆಯನ್ನು ದಾಟಿ ಉತ್ತರತೀರದಲ್ಲಿ ಇರುವಿಕೆ	....			1
ರಾಯನನ್ನು ಪುರಜನಗಳು ಹಿಂಬಾಲಿಸಿದುದು		....		2
ಧರ್ಮರಾಯನ ಚಿಂತೆ	....	....		,,
ಜನಗಳು ರಾಯನನ್ನು ಸ್ತುತಿಸುವಿಕೆ	....	....		,,
ಧೌಮ್ಯರು ಸೂರ್ಯನನ್ನು ಪ್ರಾರ್ಥಿಸೆಂದು ಹೇಳುವಿಕೆ		....		3
ಧರ್ಮರಾಯನ ಸೂರ್ಯಪ್ರಾರ್ಥನೆ	....	....		,,
ಸೂರ್ಯನು ಪಾಂಡವರಿಗೆ ಅಕ್ಷಯ ಪಾತ್ರವನ್ನು ಕೊಟ್ಟುದು				4
ಇತ್ತ ಮೈತ್ರೇಯನು ದುರ್ಯೋಧನನನ್ನು ನೋಡುವಿಕೆ		....		,,
ಮೈತ್ರೇಯನು ಪಾಂಡವರಿಗೆ ರಾಜ್ಯವನ್ನು ಕೊಡು ಎಂದು ಹೇಳಿದುದು	....	....		5
ಮೈತ್ರೇಯನು ತನ್ನ ಮಾತನ್ನೊಪ್ಪದಿರಲು ಶಾಪವನ್ನು ಕೊಡುವಿಕೆ	....	....	....	,,
ಮೈತ್ರೇಯನ ಮಾತನ್ನು ವಿದುರನು ಒಪ್ಪಲು ವಿದುರನನ್ನು ಧಿಕ್ಕರಿಸಿದುದು	....	...	....	6
ಕಾಮ್ಯಕವನವನ್ನು ಕುರಿತು ವಿದುರನ ಗಮನ			....	,,
ಧೃತರಾಷ್ಟ್ರನು ವಿದುರನನ್ನು ಕರೆಕಳುಹಿಸಿದುದು			....	7
ಪಾಂಡವರ ಸ್ಥಿತಿಯನ್ನು ಕೇಳುವಿಕೆ	....	....		,,
ಕಾಮ್ಯಕವನಕೆ ಬರಲು ಕಿಮ್ಮೀರನು ದಾರಿಗೆ ಅಡ್ಡಕಟ್ಟಿದುದು			....	8
ಆಗ ಪಾಂಡವರ ಭಯ	....	....	....	9
ದೈತ್ಯನ ಘೋರವಾದ ಧ್ವನಿ		....	....	,,
ಪಾಂಡವಕಿಮ್ಮೀರರ ಸಂವಾದ		....	....	,,
ಭೀಮನ ಪರಾಕ್ರಮವಾಕ್ಯ		....	....	10

ವಿಷಯ				ಪುಟ
ದೈತ್ಯನ ಪರಾಕ್ರಮವಾಕ್ಯ	....	....		10
ಯುದ್ಧಜರುಗಿದ ಕ್ರಮ	....	....	....	11
ಕಿಮ್ಮೀರನ ಮರಣ	....	....	....	,,

ಎನೆಯ ಸಂಧಿ—

ಪಾಂಡವರ ವರ್ತಮಾನವನ್ನು ಕೇಳಿ ಕೃಷ್ಣನು ಇವರೆದ್ದೆಡೆಗೆ ಬಂದುದು	....	....	....	12
ಆಗ ಅನೇಕರಾಜರ ಆಗಮನ		....	....	13
ಪಾಂಡವರು ಸರ್ವರನ್ನು ಆದರಿಸಿದುದು	....	....		14
ದ್ರೌಪದಿಯು ಶ್ರೀಕೃಷ್ಣನ ಪಾದದ ಮೇಲೆ ಬಿದ್ದುದು		....		15
ಶ್ರೀಕೃಷ್ಣಸ್ತುತಿ	....	....	....	,,
ದ್ರೌಪದಿಗೆ ಶ್ರೀಕೃಷ್ಣನ ಸಮಾಧಾನ		....	....	17
ನಿಮ್ಮಗೆ ತೊಂದರೆ ಬಂದಾಗ ನಾನು ದ್ವಾರಕೆಯಲ್ಲಿರಲಿಲ್ಲವೆಂದು ಶ್ರೀಕೃಷ್ಣನ ವಾಕ್ಯ	....	....	....	18
ಸಾಲ್ವಪುರಿಗೆ ಯುದ್ಧಕ್ಕೆ ಹೋದಸಂಗತಿಯನ್ನು ಹೇಳಿದುದು			....	19
ಆಗ ಜಾಜು ನಿಮ್ಮಲ್ಲಿ ಸಂಭವಿಸಿತೆಂದು ಶ್ರೀಕೃಷ್ಣನ ವಚನ			....	20
ದ್ರೌಪದಿಯು ಮಾಡಿದ ಶ್ರೀಕೃಷ್ಣಸ್ತುತಿ			....	,,
ನಿನ್ನ ಪ್ರತಿಜ್ಞೆಯನ್ನು ನಡೆಸಿಕೊಡುವೆನೆಂದು ಶ್ರೀಕೃಷ್ಣನ ವಚನ	....	....	....	,,
ವನದಲ್ಲಿ ಕಲವು ಕಾಲವನ್ನು ಕಳೆಯಬೇಕೆಂದು ಹೇಳುವಿಕೆ			....	21
ಪಾಂಡವರು ಹೆಂಡರು ಮಕ್ಕಳನ್ನು ಅವರವರ ತೌರುಮನೆಗಳಿಗೆ ಕಳುಹಿದುದು	....	....	....	,,

ಳಿನೆಯ ಸಂಧಿ—

ಪಾಂಡವರ ಪ್ರಾರ್ಥನೆಯಂತೆ ಇನ್ನೊಂದು ದಿವಸ ಶ್ರೀಕೃಷ್ಣನು ಇರುವಿಕೆ	...	....	....	22
ಆಗ ಪಾಂಡುರಾಯರ ಶ್ರಾದ್ಧನಡೆದ ಕ್ರಮ	....		....	23
ಭೀಮಸೇನನ ಪ್ರತಿಗೆ ಜೈಮಿನಿಯ ಚಿಂತೆ			....	25

ವಿಷಯ			ಪುಟ
ಆಗ ಭೀಮಸೇನನು ಶ್ರೀಕೃಷ್ಣನ ಅಪ್ಪಣೆಯಂತೆ ತಮ್ಮನನ್ನು ಕರೆದುದು ಯೆಂದು ಹೇಳುವಿಕೆ	...		25
ಜೈಮಿನಿಯು ಧರ್ಮರಾಯನನ್ನು ಸ್ತುತಿಸುವಿಕೆ	...		26
ಭೀಮನ ಆಗಮನ	....	...	27
ಶ್ರೀಕೃಷ್ಣನು ಜೈಮಿನಿಯ ಅಭಿಪ್ರಾಯವನ್ನು ಕೇಳಿದುದು		...	,,
ಮುನಿಯು ಅಸಮಾಧಾನವನ್ನು ಹೇಳಿದುದು		...	28
ಅಸಮಾಧಾನಕ್ಕೆ ಕಾರಣವನ್ನು ಹೇಳಿಂದು ಶ್ರೀಕೃಷ್ಣನನ್ನು ಕುರಿತು ಪ್ರಾರ್ಥನೆ	....	....	29
ಆಗ ಕೃಷ್ಣನ ಧರ್ಮೋಪದೇಶ	....	....	,,
ಧರ್ಮರಾಯನನ್ನು ಕುರಿತು ಜೈಮಿನಿಯು ಸ್ತುತಿ	....		32
ಜೈಮಿನಿಯು ಶ್ರೀಕೃಷ್ಣನನ್ನು ನಮಸ್ಕರಿಸಿದುದು	....		,,
ಆಗ ಜೈಮಿನಿಗೆ ಶ್ರೀಕೃಷ್ಣನ ಆದರ	....	....	,,
ಪಿತೃಯಾಗವನ್ನಾರಂಭಿಸೆಂದು ಶ್ರೀಕೃಷ್ಣನ ಆಜ್ಞೆ	....		,,
ಯಾಗ ಕ್ರಮ	....	....	34
ಪಿತೃಯಾಗದಿಂದ ಪಿತೃಗಳಿಗೆ ಆಗುವ ತೃಪ್ತಿಕ್ರಮ	....		,,
ಜೈಮಿನಿಯು ಸಂತೋಷಪಟ್ಟು ಪಾಂಡವರನ್ನು ಆಶೀರ್ವದಿಸುವಿಕ	....	....	35
ಆಗ ದ್ರೌಪದಿಯು ಶ್ರೀಕೃಷ್ಣನ ಪಾದದ ಮೇಲೆ ಬಿದ್ದು ಪ್ರಾರ್ಥಿಸಿದುದು	....	....	36

ಳನೆಯ ಸಂಧಿ —

ಧರ್ಮರಾಯನು ಮುನಿಜನಗಳೊಡನೆ ವನದಲ್ಲಿ ಸಂಚರಿಸುವಿಕೆ	....		37
ಆ ವನದ ವರ್ಣನೆ	....	....	37
ಗಂಗಾತೀರದಲ್ಲಿಯೇ ಮಧುವಾಸವವನ್ನು ಕಳೆದುದು	....		39
ಗ್ರೀಷ್ಮಋತುವು ಬರಲು ಜಂಬೂಫಲವನ್ನು ಕೊಡುವ ಇಚ್ಛೆ ಹುಟ್ಟಿದುದು	....	....	,,
ಆ ವನದಲ್ಲಿ ಭಿಮಸೇನನು ಬೇಟೆಯಾಡಿದುದು	....		,,

ವಿಷಯ				ಪುಟ
ಆಗ ಭೀಮಸೇನನಿಗೆ ದೂರದಲ್ಲಿ ಒಂದು ವೃಕ್ಷವು ಕಣ್ಣಿಗೆ ಬೀಳುವಿಕೆ	....	...	....	41
ಆ ಜಂಬೂಫಲವನ್ನು ಕೊಯಿದುದು	....	....	....	,,
ಆ ಜಂಬೂಫಲವನ್ನು ಸ್ಥಳಕ್ಕೆ ಸೇರಿಸಿದುದು			....	51
ಕಣ್ವಋಷಿಯು ತಪಸ್ಸಿನಿಂದೇಳುವಿಕೆ		....	....	52
ಆಗ ಆ ಮುನಿಗೆ ಶ್ರೀಕೃಷ್ಣ ದರ್ಶನ		....	....	,,
ಆ ಹಣ್ಣನ್ನು ವಿಪ್ರರಿಗೆ ಕೊಟ್ಟುದು		....	....	53
ಶ್ರೀಕೃಷ್ಣನು ದ್ವಾರಕೆಗೆ ಹೋದುದು		....	....	55

ಮೂನೆಯ ಸಂಧಿ—

ಕಾಮ್ಯಕವನದ ಸಂಚಾರ		....	....	56
ದ್ವೈತವನ ಪ್ರವೇಶ	....	....	....	57
ದ್ರೌಪದೀಭೀಮಸೇನರ ಕೋಪ		....	....	,,
ಧರ್ಮರಾಯನ ಸಮಾಧಾನ		....	....	,,
ಆಗ ವೇದವ್ಯಾಸರ ಆಗಮನ		....	....	58
ಧರ್ಮರಾಯನ ಆದರ		....	....	,,
ಮುನಿಗಳ ಆದರ	....	....	....	,,
ವೇದವ್ಯಾಸರಿಗೂ ಪಾಂಡವರಿಗೂ ಸಂವಾದ		....	....	59
ವ್ಯಾಸರನ್ನು ಕುರಿತು ಮುನಿಗಳ ನುಡಿ		....	....	60
ವ್ಯಾಸರು ಧರ್ಮರಾಜನಿಗೆ ಮುಂತ್ರೋಪದೇಶ ಮಾಡಿದುದು			....	61
ಅರ್ಜುನನು ಇಂದ್ರಕೀಲದಲ್ಲಿ ಈಶ್ವರನನ್ನು ಪ್ರಾರ್ಥಿಸಲೆಂದು ವ್ಯಾಸರ ಆಜ್ಞೆ	....	....	....	62
ವ್ಯಾಸರು ತಮ್ಮಾಶ್ರಮಕ್ಕೆ ಹೋಗುವಿಕೆ		....	....	,,
ವ್ಯಾಸರ ಅಪ್ಪಣೆಯನ್ನು ಅರ್ಜುನನಿಗೆ ತಿಳಿಸುವಿಕೆ			....	,,
ಆಗ ಆದ ಶಕುನಗಳು		....	....	65
ಇಂದ್ರಕೀಲ ಪರ್ವತದ ಬಳಿಗೆ ಹೋದುದು		....	....	,,
ಅದರ ಸಮೀಪದ ವನದ ವರ್ಣನೆ		....	....	,,

ವಿಷಯ			ಪುಟ
ಇದು ಶಿವನ ಕ್ಷೇತ್ರವೆಂದು ಆಕಾಶವಾಣಿಯಾಗುವಿಕೆ	....		67
ವನಪ್ರವೇಶಮಾಡಿ ಅರ್ಜುನನ ತಪಸ್ಸು	....	....	,,
ಇಂದ್ರನ ಆಗಮನ ಮತ್ತು ಸಂವಾದ	....	....	68
ಅರ್ಜುನನಿಗೆ ಇಂದ್ರನ ವರದಾನ	....	....	,,

ಒನೆಯ ಸಂಧಿ—

ಅರ್ಜುನನು ಧ್ಯಾನವನ್ನು ಮಾಡಿದುದು	....	....	69
ಅರ್ಜುನನ ಧ್ಯಾನಕ್ರಮವನ್ನು ತಿಳಿದು ಋಷಿಗಳ ಅಸೂಯೆ	....		72
ಆಗ ವನದಲ್ಲಿದ್ದ ಮುನಿಗಳು ಅರ್ಜುನನ ತಪಸ್ಸನ್ನು ನೋಡಿ ಶಿವನನ್ನು ಮರೆಹೋದುದು	....	....	73
ಆಗ ಈಶ್ವರನು ಜ್ಞಾನದೃಷ್ಟಿಯಿಂದ ಅರ್ಜುನನೆಂದು ತಿಳಿದು ಮುನಿಗಳಿಗೆ ಅಭಯವನ್ನು ಕೊಟ್ಟುದು	....	....	75
ಬೇಟೆಗಾಗಿ ಸರ್ವರನ್ನೂ ಸಿದ್ಧಪಡಿಸೆಂದು ನಂದೀಶ್ವರನಿಗೆ ಶಿವನ ಅಪ್ಪಣೆ ಮತ್ತು ಹಂಗುರ	....	....	76
ಈಶ್ವರನು ಕಿರಾತವೇಷವನ್ನು ತಾಳಿದುದು		....	,,
ಬಳಿಕ ಈಶ್ವರನ ಪರಿವಾರವೆಲ್ಲ ಕಿರಾತರ ರೂಪವನ್ನು ತಾಳಿದುದು	....	....	77
ಕಿರಾತವೇಷಿಯಾದ ಈಶ್ವರನು ಸಪರಿವಾರನಾಗಿ ಇಂದ್ರಕೀಲಕ್ಕೆ ಬಂದುದು	....	....	79
ಈ ರಭಸವನ್ನು ಮೂಕದಾನವನು ಕೇಳಿ ಹಂದಿಯ ರೂಪವನ್ನು ತಾಳಿ ಬಂದುದು	....	....	,,
ಈಶ್ವರನ ಬಾಣದ ಏಟಿನಿಂದ ಧ್ವನಿಮಾಡುತ್ತಾ ಬಂದ ಹಂದಿಯನ್ನು ಪಾರ್ಥನು ನೋಡಿದುದು	....	....	80
ಪಾರ್ಥನ ಬಾಣದಿಂದ ಹಂದಿಯು ಮೃತವಾಗುವಿಕೆ	....		81
ಹಂದಿ ನನ್ನದು ನನ್ನದು ಯೆಂದು ಶಿವಾರ್ಜುನರ ವಿವಾದ	....		,,

ಎರಡನೆಯ ಸಂಧಿ—

ಕಿರಾತನನ್ನು ಕುರಿತು ಅರ್ಜುನನು ನಿನ್ನ ಯಜಮಾನನನ್ನು ಕರೆದು ತಾ ಎಂದು ಹೇಳಿದುದು	....	....	82

ವಿಷಯ				ಪುಟ
ಈಶ್ವರನು ನಕ್ಕು ಪಾರ್ವತಿಯ ಮುಂದೆ ಈತನ ಪರಾಕ್ರಮವನ್ನು ಹೇಳಿದುದು	....	....	....	82
ಅರ್ಜುನನ ಉಪೇಕ್ಷಾವಾಕ್ಯಗಳು	....	....		83
ಈಶ್ವರನ ವಾಕ್ಯ	....	....	....	,,
ಅರ್ಜುನನು ನಾನು ಈಶ್ವರನ ಶಿಷ್ಯನೆಂದು ಹೇಳಿದುದು		....		,,
ಅದಕ್ಕೆ ಈಶ್ವರನ ನುಡಿ		....	....	,,
ಪಾರ್ಥನು ಕೋಪದಿಂದ ಬಾಣಗಳನ್ನು ಹಾಕಿದುದು		....		84
ಕೋಪದಿಂ ಬಂದ ವಿನಾಯಕಾದಿಗಳನ್ನು ಸಮಾಧಾನ ಪಡಿಸಿದುದು	....	...	....	85
ಈಶ್ವರಾರ್ಜುನರ ಪರಸ್ಪರಬಾಣವೃಷ್ಟಿ	....		...	,,
ಅರ್ಜುನನ ಬಾಣಗಳು ಮುಗಿದರೂ ಉತ್ಸಾಹ ವಿಕಲತೆ ಯಾಗಿರುವಿಕೆ	....	...	....	86
ಅರ್ಜುನನ ಬಾಣಗಳನ್ನು ಈಶ್ವರನು ನುಂಗಿದುದು		....		,,
ಆಗ ಅರ್ಜುನನ ಪರಿತಾಪ		....	....	87
ಅರ್ಜುನನು ಭಯಗೊಂಡುದು		...	....	,,
ಬಾಹುಯುದ್ಧಕ್ಕಾಗಿ ಈಶ್ವರನನ್ನು ಕರೆದುದು		....		88
ಪಾರ್ವತಿಯ ಮುಂದೆ ಈತನ ತಪಸ್ಸಿನ ಕೃತಜ್ಞತೆಯನ್ನು ಹೇಳಿದುದು	...	....	....	,,
ಪಾರ್ಥ ಮತ್ತು ಈಶ್ವರನ ಬಾಹುಯುದ್ಧ		....	...	89
ಅರ್ಜುನನು ಈಶ್ವರನನ್ನು ಬೇಡಿದುದು		....	....	91
ಅರ್ಜುನನನ್ನು ನೋಡಿ ಶಿವನ ಪಶ್ಚಾತ್ತಾಪ			....	,,
ಅರ್ಜುನನ ಸಂತಾಪ	....	....	....	92
ತಿರುಗಿ ಶಿವನನ್ನು ಪ್ರಾರ್ಥಿಸಲಾರಂಭಿಸಿದುದು			....	93
ತಿರುಗಿ ಯುದ್ಧಕ್ಕೆ ಕರೆಯುವಾಗ ಶಿವನು ಪ್ರತ್ಯಕ್ಷವಾದುದು			....	94
ಯುದ್ಧ ಮಾಡಿದ್ದಕ್ಕಾಗಿ ಅರ್ಜುನನ ಪಶ್ಚಾತ್ತಾಪ			....	95
ಈಶ್ವರನು ತನ್ನ ರೂಪವನ್ನು ಅರ್ಜುನನಿಗೆ ತೋರಿಸಿದುದು			....	99
ಈಶ್ವರನ ರೂಪವನ್ನು ನೋಡಿ ಅರ್ಜುನನು ಬೆರಗಾದುದು			....	102
ಈಶ್ವರನನ್ನು ಕುರಿತು ಅರ್ಜುನನ ಪ್ರಾರ್ಥನೆ			....	,,

ವಿಷಯ			ಪುಟ
ಈಶ್ವರನನ್ನು ಕುರಿತು ಪರಿಪರಿಯಾಗಿ ಅರ್ಜುನನ ಪ್ರಾರ್ಥನೆ	....		105
ಈಶ್ವರನು ಅರ್ಜುನನನ್ನು ಆದರಿಸಿದುದು	....		106
ಅರ್ಜುನನಿಗೆ ಈಶ್ವರನು ಖಡ್ಗಾದಿಗಳನ್ನು ಕೊಟ್ಟುದು	....		,,
ಆಗ ಅರ್ಜುನನನ್ನು ಅಸ್ತ್ರಗಳನ್ನು ಬೇಡಿದುದು	....		107
ಈಶ್ವರನು ಅರ್ಜುನನಿಗೆ ಪಾಶುಪತಾಸ್ತ್ರವನ್ನು ಕೊಟ್ಟುದು	....		,,
ಆಗ ದೇವತೆಗಳ ಸಂತೋಷ	....	....	,,
ಸ್ತುತಿಯಿಂದ ಸಂತುಷ್ಟಳಾದ ಗಿರಿಜೆಯು ಅರ್ಜುನನಿಗೆ ವರವನ್ನು ಕೊಡುವಿಕೆ	....	....	108
ಆಗ ಗಣೇಶ ಷಣ್ಮುಖರಿಂದ ಅಸ್ತ್ರಲಾಭ	....	....	109
ನಿನ್ನ ಕಾರ್ಯಗಳಿಗೋಸ್ಕರ ಹೋಗೆಂದು ಶಿವನ ಆಜ್ಞೆ	....		110
ಅರ್ಜುನನಿಗೆ ಈಶ್ವರನು ವರವನ್ನು ಕೊಟ್ಟುದು	...		,,
ಬಳಿಕ ಈಶ್ವರನು ಕೈಲಾಸವನ್ನು ಕುರಿತು ತೆರಳಿದುದು	....		111
ಆಗ ಅರ್ಜುನನ ಪಶ್ಚಾತ್ತಾಪ	....	...	,,

ಆನೆಯ ಸಂಧಿ—

ಅರ್ಜುನನ ಯೋಚನೆ	....	....	112
ಅರ್ಜುನನ ಆಗಮನ	...	....	113
ಆಗ ಇಂದ್ರನು ಭೂಲೋಕಕ್ಕೆ ಬರುವಿಕೆ	....	....	,,
ದಿಕ್ಪಾಲಕರು ಅರ್ಜುನನ್ನು ಉಪಚರಿಸಿದುದು	....		114
ಇಂದ್ರಾದಿಗಳು ಬಾಣಗಳನ್ನು ಕೊಟ್ಟುದು	....		,,
ಅರ್ಜುನನಿಗೆ ಇಂದ್ರನ ಆದರ	....	....	,,
ದಿಕ್ಪಾಲಕರು ಹೊರಟು ಹೋಗಲು ಮಾತಲಿಯು ಸರಥನಾಗಿ ಬಂದುದು	..	....	115
ಆ ರಥವನ್ನು ನೋಡಿ ಅರ್ಜುನನು ವಿಸ್ಮಿತನಾದುದು	....		116
ಮಾತಲಿಯು ಅರ್ಜುನನನ್ನು ಸ್ತುತಿಸುವಿಕೆ	....		,,
ಅರ್ಜುನನು ಹೊರಡುವಾಗ ವನದಲ್ಲಿದ್ದವರನ್ನು ಆಜ್ಞೆ ಕೇಳಿದುದು	....	....	117
ಅರ್ಜುನನು ರಥದಲ್ಲಿ ಕುಳಿತ ಬಳಿಕ ರಥವನ್ನು ವೇಗದಿಂದ ಬಿಡುವಿಕೆ	....	....	,,

ವಿಷಯ				ಪುಟ
ಆಗ ಅರ್ಜುನನು ಭೂಗೋಳಖಗೋಳಗಳನ್ನು ಹೇಳಿಂದು ಕೇಳಿದುದು	....	....	....	118
ಮಾತಲಿಯು ಭೂವಿಸ್ತಾರವನ್ನು ಹೇಳಿದುದು			....	119
ಚತುರ್ಮುಖಬ್ರಹ್ಮನ ಪುರವರ್ಣನೆ	....		....	121
ಅಲ್ಲಿ ಮೇಲಿಂದಿಳಿದು ಬರುವ ಗಂಗೆಯನ್ನು ವರ್ಣಿಸುವಿಕೆ			....	,,
ನಾನಾದಿಕ್ಕುಗಳಲ್ಲಿರುವ ಪರ್ವತವೃಕ್ಷನದನದೀವರ್ಣನೆ			....	122
ವರ್ಷದಧಿಪತಿಗಳು	....	....	....	126
ಕ್ರೀಪತಿಯ ನಗರ ಮತ್ತು ಅದರ ವರ್ಣನೆ			....	127
ಅಷ್ಟದಿಕ್ಪಾಲಕರ ಪುರಗಳು		....	....	129
ಸೂರ್ಯರಥ ಮತ್ತು ನಕ್ಷತ್ರಗಳ ಸ್ಥಿತಿ		....	....	130
ಸೂರ್ಯವೊದಲಾದುವುಗಳ ಗ್ರಹಸ್ಥಾನವು		....	...	131
ಮಂದೇಹರೆಂಬ ದೈತ್ಯರ ವೃತ್ತಾಂತ		....	....	132
ಭೂಲೋಕದಲ್ಲಿ ಪುಣ್ಯವನ್ನು ಮಾಡಿ ಸ್ವರ್ಗಕ್ಕೆ ಹೋದವರನ್ನು ತೋರಿಸಿದುದು		....	....	133
ಪುರಾತನ ಚಕ್ರವರ್ತಿಗಳನ್ನು ತೋರಿಸಿದುದು			....	134
ಅಮರಾವತಿಯನ್ನು ನೋಡೆಂದು ಮಾತ ಹೇಳಿದುದು			....	135
ಅರ್ಜುನನು ಅಮರಾವತಿಯನ್ನು ಪ್ರವೇಶಿಸಿದುದು			...	,,
ಆಗ ಅರ್ಜುನನನ್ನು ಕಂಡು ಇಂದ್ರನು ತನ್ನ ಅರ್ಧಾಸನದಲ್ಲಿ ಕುಳಿಸಿದುದು	....	....	....	135
ಆಗ ಅರ್ಜುನನನ್ನು ನೋಡಲು ಸರ್ವರು ಬಂದುದು			....	136
ಆಗ ಸಭೆಯಲ್ಲಿ ಸ್ವೇಚ್ಛೆಯಾಗಿ ಬಂದವರನ್ನು ತಡೆದುದು			....	137
ಆಗ ಊರ್ವಶಿ ಮೊದಲಾದವರು ಇಂದ್ರನ ಸಭೆಗೆ ಬಂದುದು			....	,,
ಆಗ ಅಲ್ಲಲ್ಲಿ ನಡೆದ ಗಾನನರ್ತನಾದಿಗಳ ವರ್ಣನೆ			....	138
ಆಸಭೆಯಲ್ಲಿ ಊರ್ವಶಿಯನ್ನು ಅರ್ಜುನನು ನೋಡಿದುದು			....	139
ಸಭೆಯ ಸಮಾಪ್ತಿ	....	....	....	,,
ಅರ್ಜುನನ ಬಳಿಗೆ ಊರ್ವಶಿಯನ್ನು ಕಳುಹಿಸೆಂದು ಇಂದ್ರನ ಅಪ್ಪಣೆ	....	....	....	,,
ಊರ್ವಶಿ ಮನೆಗೆ ಚಿತ್ರಸೇನನು ಬಂದುದು		....	....	,,
ಚಿತ್ರಸೇನನು ಇಂದ್ರನ ಅಪ್ಪಣೆಯನ್ನು ಹೇಳಿದುದು			....	140

ವಿಷಯ		ಪುಟ
೯ನೆಯ ಸಂಧಿ—		
ಊರ್ವಶಿಯು ಸಾಖಿರಾರು ನರ್ತಕಿಯರನ್ನು ಕರಸಿದುದು	....	142
ಊರ್ವಶಿಯು ಅರ್ಜುನನ ಮನೆಗೆ ಬಂದುದು	....	144
ಊರ್ವಶಿಯ ಸಂಗಡ ಬಂದ ತರುಣಿಯರ ವರ್ಣನೆ	....	,,
ಊರ್ವಶಿಯು ಅರ್ಜುನನಿದ್ದ ಮನೆಗೆ ಖಂದುದು	....	145
ಆಗ ಅರ್ಜುನನು ಊರ್ವಶಿಗೆ ಮರ್ಯಾದೆ ಮಾಡಿದುದು	....	146
ಅರ್ಜುನನು ಊರ್ವಶಿಯನ್ನು ಕುರಿತು ಬಂದ ಕಾರಣವನ್ನು ಕೇಳಿದುದು	....	146
ಆಗ ಊರ್ವಶಿಯ ಚಿಂತೆ ...	....	147
ಅರ್ಜುನೋರ್ವಶಿಯರ ಸಂವಾದ ...	....	,,
ಆಗ ಊರ್ವಶಿಯು ಕೋಪದಿಂದ ಅರ್ಜುನನಿಗೆ ಶಾಪವನ್ನು ಕೊಟ್ಟುದು	....	151
ಆಗ ಅರ್ಜುನನು ಸುಮ್ಮನೆ ಚಿಂತೆ ಮಾಡಿದುದು	....	153
ಅರ್ಜುನನಿದ್ದ ಮನೆಗೆ ಇಂದ್ರನು ಬಂದು ಮಾತನಾಡಿದುದು	....	154
ಆಗ ಅರ್ಜುನನು ಸುಮ್ಮನೆ ಇರಲು ಇಂದ್ರನು ಸಮಾಧಾನವನ್ನು ಹೇಳಿದುದು	....	,,
ಇಂದ್ರನು ತನ್ನ ಮನೆಗೆ ಅರ್ಜುನನನ್ನು ಕರತಂದುದು	....	155
ಅಲ್ಲಿ ಅರ್ಜುನನಿಗೆ ಖಹುವಿಧಾಸ್ತ್ರಪ್ರಸ್ತ್ರಲಾಭ	....	,,
೧೦ನೆಯ ಸಂಧಿ—		
ಅರ್ಜುನನ ವಿಷಯದಲ್ಲಿ ಧರ್ಮರಾಯನ ಚಿಂತೆ	....	156
ಇಂದ್ರನ ಮಾತಿನಂತೆ ಬಂದ ಲೋಮಶಖುಷಿಗಳನ್ನು ಧರ್ಮರಾಯ ಉಪಚರಿಸಿದುದು	....	,,
ಅರ್ಜುನನ ವಾರ್ತೆಯನ್ನು ಕೇಳಿ ಸಂತೋಷಿಸಿ ತೀರ್ಥಯಾತ್ರೆಗೆ ಹೊರಡುವಿಕೆ	....	157
ಆಗ ಲೋಮಶರು ಮಹಾತ್ಮರ ಕಥೆಗಳನ್ನು ಹೇಳಿದುದು	...	,,
ಆಗ ಯುಧಿಷ್ಠಿರನು ಗಂಧಮಾಧನದ ಖಳಿಗೆ ಸಪರಿವಾರನಾಗಿ ಖಂದುದು	....	161

ವಿಷಯ				ಪುಟ
ಅಲ್ಲಿಂದ ಹೊರಡಲಾಗಿ ದಾರಿಯಲ್ಲಿ ಮಳೆಯಿಂದ ಆದ ತೊಂದರೆ	....			161
ಆಗ ಮಳೆಯಲ್ಲಿ ತೊಂದರೆಪಟ್ಟು ಹಿಂದೆ ನಿಂತ ದ್ರೌಪದಿಯನ್ನು ಹುಡಕಿ ಆದರಿಸಿದುದು	....	....		163
ದ್ರೌಪದಿಯ ಆಗಿನ ಸ್ಥಿತಿಯನ್ನು ನೋಡಿ ಧರ್ಮರಾಯನ ವ್ಯಸನ	....			164
ಆಗ ಜನಗಳು ಶ್ರಾಂತರಾಗಿರುವುದನ್ನು ತಿಳಿದು ಘಟೋತ್ಕಚನನ್ನು ಸ್ಮರಿಸಲು ಆತನ ಆಗಮನ	....	...		165
ಆಗ ಘಟೋತ್ಕಚನು ಸರ್ವರನ್ನು ಬದರಿಕಾಶ್ರಮಕ್ಕೆ ಕರೆತಂದುದು	....	....	....	166

೧೧ನೆಯ ಸಂಧಿ—

ಆಗ ದ್ರೌಪದಿಯು ಸೌಗಂಧಿಕ ಪುಷ್ಪದ ವಾಸನೆಯನ್ನು ಅನುಭವಿಸಿ ವಿಸ್ಮಿತಳಾದುದು	....	....		167
ಆ ಪುಷ್ಪವನ್ನು ತರಲು ಭೀಮಸೇನನನ್ನು ಪ್ರಾರ್ಥಿಸಿದುದು	....			168
ಭೀಮಸೇನನು ಹೊರಟಾಗ ದಾರಿಯಲ್ಲಾದ ಚಿತ್ರಕಾರ್ಯಗಳು	...			169
ಆಗ ಭೀಮಸೇನನ ಧ್ವನಿಯಿಂದ ಹನುಮಂತನು ಆಲೋಚಿಸಿದುದು	...	...	....	170
ಆಗ ಹನುಮಂತನು ತನ್ನ ಬಾಲವನ್ನು ದೊಡ್ಡದಾಗಿ ಮಾಡಿ ದಾರಿಯಲ್ಲಿಟ್ಟುದು	....	....	....	171
ಭೀಮಸೇನನನ್ನು ಹನುಮಂತನು ಸೀನಾರೆಂದು ಕೇಳಿದುದು	....			,,
ಅದಕ್ಕೆ ಭೀಮಸೇನನ ಉತ್ತರ	....	....		,,
ದಾರಿಯಲ್ಲಿಟ್ಟ ಬಾಲವನ್ನು ತೆಗೆಯೆಂದು ಹನುಮಂತನು ಕೇಳಿದುದು	....	....	...	172
ನೀವು ನೂಕಿಕೊಂಡು ಹೋಗಿರೆಂದು ಹನುಮಂತನ ಉತ್ತರ	....			,,
ಎಷ್ಟು ಪ್ರಯತ್ನಮಾಡಿದರೂ ಬಾಲವು ಹಾಗೆ ಇರಲು ಭೀಮನ ಚಿಂತೆ	....	....	....	173
ಆಗ ಹನುಮಂತನನ್ನು ಸೀನಾರೆಂದು ಕೇಳಿದುದು	....			,,
ಹಾಗೆಯೇ ಹನುಮಂತನು ಕೇಳಿದುದು	....			174
ಭೀಮಸೇನನ ಉತ್ತರ	....	....	....	,,

ವಿಷಯ				ಪುಟ
ಹನುಮಂತನ ಉತ್ತರ	...	....	....	174
ಆಗ ಹನುಮಂತನನ್ನು ಸ್ತುತಿಸಿದುದು		....	....	175
ಭೀಮನ ಸ್ತುತಿ	....	....	....	,,
ಸಮುದ್ರತರಣದ ರೂಪವನ್ನು ತೋರಿಸೆಂದು ಭೀಮನ ಪ್ರಶ್ನೆ			....	176
ಆ ರೂಪವನ್ನು ಭೀಮಸೇನನಿಗೆ ಹನುಮಂತನು ತೋರಿಸಿದುದು			....	177
ಆ ರೂಪವನ್ನು ನೋಡಿ ಭೀಮಸೇನನು ಭೀತನಾದುದು			....	178
ಹನುಮಂತನು ಪೂರ್ವರೂಪವನ್ನು ತಾಳಿದುದು			....	,,
ಸರೋವರ ದರ್ಶನ	....	...	....	179
ಅಲ್ಲಿ ಕುಬೇರ ಪಂಪಾವರಕ್ಕೂ ಭೀಮಸೇನನಿಗೂ ಸಂವಾದ			....	,,
ಆ ಭಟರು ಕುಬೇರನಲ್ಲಿಗೆ ಹೋಗಬಹುದೆಂದು ಭೀಮಸೇನನನ್ನು ಕಂಡು ಹೇಳಿದುದು			....	180
ಭೀಮಸೇನನಿಗೂ ಕುಬೇರಭಟರಿಗೂ ಯುದ್ಧ			....	181
ಆಗ ಭೀಮಸೇನನ ದಯೆ			....	182

೧೦ನೆಯ ಸಂಧಿ—

ಧರ್ಮರಾಯನ ಚಿಂತೆ	....	...	....	183
ಧರ್ಮರಾಯನು ಭೀಮಸೇನನನ್ನು ನೋಡಿದುದು			....	184

೧೪ನೆಯ ಸಂಧಿ—

ಅರ್ಜುನನನ್ನು ಕುರಿತು ಇಂದ್ರನು ಸ್ವರ್ಗದ ತೊಂದರೆಯನ್ನು ಹೇಳಿದುದು	....	...	....	193
ಇಂದ್ರನ ಅಪೇಕ್ಷೆಯಂತೆ ದೈತ್ಯರ ಮೇಲೆ ಯುದ್ಧಕ್ಕೆ ಹೊರಟುದು	....	....	....	195
ಅಸುರರು ಯುದ್ಧಕ್ಕೊಕ್ಕೀಸ್ಕರಸಿದ್ಧರಾದುದು			....	197
ಅಸುರರು ಅರ್ಜುನನನ್ನು ಸ್ತುತಿಮಾಡಿದರೆಂದು ಹೇಳಿದುದು			....	199
ಅಸುರರು ಹೆಚ್ಚಾಗಿ ಬಂದು ಮುತ್ತುವಿಕೆ			....	200
ದೇವತೆಗಳ ಜಯ	....	....	....	201
ಅಸುರರ ಜಯ	....	...	....	,,

ವಿಷಯ			ಪುಟ
ದೇವಾಸುರರ ಅಸ್ತ್ರ ಯುದ್ಧ	....	....	202
ನಿವಾತಕವಚರ ಸಂಹಾರ	....	....	204
ಕಾಲಕೇಯರೊಡನೆ ಯುದ್ಧಮಾಡಿದುದು	...	....	,,
ಕಾಲಕೇಯರ ಪರಾಜಯ	....	...	206
ಶತ್ರುನಾಶವಾಗಲಾಗಿ ಸುರರು ಸುಖದಿಂದಿರುವಿಕೆ		....	207
ಅರ್ಜುನನು ಈ ವೃತ್ತಾಂತವನ್ನು ಹೇಳಿ ಇವೆಲ್ಲವೂ ತಮ್ಮ ಕೃಪಾಲಬ್ಧವೆಂದು ಹೇಳಿದುದು	....	....	208
ಧರ್ಮರಾಯನ ಸಂತೋಷವಚನಗಳು		....	,,
೧೪ನೆಯ ಸಂಧಿ—			
ಬೇಟೆಯಾಡುವಾಗ ಮೃಗಗಳು ಇಲ್ಲದಿರುವು		...	217
ಭೀಮಸೇನನು ಸಿಂಹಾದಿಗಳನ್ನು ಕೊಂದುದು		....	218
ಆಗ ಒಂದು ಹಂದಿ ತಪ್ಪಿಸಿಕೊಂಡು ಅರಣ್ಯದಲ್ಲಿ ಓಡಿದುದು		....	,,
ಅದನ್ನು ಅಟ್ಟಿಕೊಂಡು ಹೋದಾಗ ಸರ್ಪವು ಭೀಮನನ್ನು ಹಿಡಿದುದು	....	....	218
ಅದನ್ನು ಬಿಡಿಸಲು ಮಾಡಿದ ಭೀಮನ ಪ್ರಯತ್ನ ವ್ಯರ್ಥವಾಗುವಿಕೆ	....	....	219
ಆಗ ಅಪಶಕುನಸೂಚನೆಯಿಂದ ಅರಣ್ಯಕ್ಕೆ ಧರ್ಮರಾಯನು ಬಂದುದು	....	....	,,
ವನದಲ್ಲಿ ಸರ್ಪಾಕ್ರಾಂತನಾದ ಭೀಮನ ದರ್ಶನ		....	220
ಅದಕ್ಕೊಸ್ಕರ ರಾಯನ ಚಿಂತೆ	....	....	,,
ಆ ಸರ್ಪವನ್ನು ಕುರಿತು ಧರ್ಮರಾಯನ ಪ್ರಶ್ನೆ		....	221
ಆಗ ಸರ್ಪದ ಉತ್ತರ	....	....	,,
ಧರ್ಮದ ವಿಷಯದಲ್ಲಿ ಸರ್ಪದ ಪ್ರಶ್ನೆ	....	....	223
ಧರ್ಮರಾಯನ ಉತ್ತರ	....	....	,,
ಸರ್ಪವು ತನ್ನ ವೃತ್ತಾಂತವೆಲ್ಲವನ್ನು ಧರ್ಮರಾಯನನ್ನು ಕುರಿತು ಹೇಳಿದುದು	....	....	226
೧೫ನೆಯ ಸಂಧಿ—			
ಧರ್ಮಭೀಮರನ್ನು ಸಮಾಧಾನಗೊಳಿಸಿದುದು		....	229

ವಿಷಯ			ಪುಟ
ತಿರುಗಿ ಕಾಮ್ಯಕ ವನಕ್ಕೆ ಬಂದುದು	...	....	230
ಶ್ರೀಕೃಷ್ಣನ ಆಗಮನ	....	....	231
ಕುಶಲಪ್ರಶ್ನೆ	....	....	232
ಧರ್ಮರಾಯನು ತಮ್ಮ ವೃತ್ತಾಂತವೆಲ್ಲವನ್ನು ಹೇಳಿದುದು		....	,,
ಆಗ ನಾರದಮಾರ್ಕಂಡೇಯರು ಬಂದುದು	...	....	233
ಮಾರ್ಕಂಡೇಯರು ಧರ್ಮರಾಯನನ್ನು ಸ್ತುತಿಮಾಡಿದುದು		....	,,
ಪ್ರಳಯಕಾಲದಲ್ಲಿ ನಡೆದ ಕ್ರಮವನ್ನು ಹೇಳಿದುದು		....	,,
ಆಗ ಮಾರ್ಕಂಡೇಯರು ತನ್ನ ದುರವಸ್ಥೆಯನ್ನು ಹೇಳಿದುದು		....	236
ಆಗ ಬ್ರಹ್ಮಾಚ್ಯುತರ ಬಳಿಗೆ ಬ್ರಹ್ಮನು ಬಂದುದು		....	,,
ಆಗ ಬ್ರಹ್ಮಾಚ್ಯುತರ ಸಂಭಾಷಣ	...	....	,,
ತಿರುಗಿ ಸೃಷ್ಟಿ ಕ್ರಮ ನಿರೂಪಣ	....	....	238
ಚತುರ್ಯುಗಗಳ ಸ್ಥಿತಿ ..	....	....	239
ಅಲ್ಲಿ ಆಶ್ರಮಚತುಷ್ಟಯದ ಸ್ಥಿತಿ	....	....	241
೧೬ನೆಯ ಸಂಧಿ—			
ವಿಪ್ರನ ಕೋಪದಿಂದ ಪಕ್ಷಿಯ ಮೃತಿ	....	....	242
ಭಿಕ್ಷೆಯನ್ನಿಡುವವಳ ಉತ್ತರ	....	....	243
ಬಳಿಕ ತನ್ನ ವರ್ತಮಾನವನ್ನು ಹೇಳಿ ಧರ್ಮವ್ಯಾಧನ ಬಳಿಗೆ ಕಳುಹಿಸಿದುದು	....	....	243
ಧರ್ಮವ್ಯಾಧನ ಅಂಗಡಿ	....	....	244
ಆತನು ತನ್ನ ಚರಿತ್ರವನ್ನು ಹೇಳಿದುದು	....	....	245
ಆಗ ನಾರದಾದಿಗಳು ಧರ್ಮರಾಯನಿಗೆ ಸಮಾಧಾನವನ್ನು ಹೇಳಿ ಹೊರಡುವಿಕ	....	....	247
ದ್ರೌಪದೀಸತ್ಯಭಾಮೆಯರ ಸಂವಾದ	....	....	248
೧೭ನೆಯ ಸಂಧಿ—			
ಪಾಂಡವರು ದ್ವೈತವನದಲ್ಲಿ ವಾಸಮಾಡಿದುದು		....	251
ದೂರ್ವಾಸರ ಆಗಮನ	....	....	,,
ದುರ್ಯೋಧನನು ದೂರ್ವಾಸರನ್ನು ಮರ್ಯಾದೆಯಿಂ ಕರೆತಂದುದು	....	....	252

ವಿಷಯ			ಪುಟ
ದುರ್ಯೋಧನನು ದೂರ್ವಾಸರಿಗೆ ಆತಿಥ್ಯಮಾಡಿದುದು	....		252
ದೂರ್ವಾಸರು ಪಾಂಡವರು ಇದ್ದೆಡೆಗೆ ಬಂದುದು	....		254
ಆಗ ಪರಸ್ಪರ ಕುಶಲಪ್ರಶ್ನೆ	...	....	,,
ದೂರ್ವಾಸರು ಭೋಜನವನ್ನಪೇಕ್ಷಿಸಿದುದು		....	255
ಆಗ ನಾನಾವಿಧಚಿಂತೆ	..	....	,,
ಆಗ ಶ್ರೀಕೃಷ್ಣನನ್ನು ದ್ರೌಪದಿಯು ಪ್ರಾರ್ಥಿಸುವಿಕೆ		...	257
ದ್ರೌಪದಿಯು ಶ್ರೀಕೃಷ್ಣನನ್ನು ನಾನಾರೀತಿಯಾಗಿ ಸ್ತುತಿ ಮಾಡಿದುದು	....	...	,,
ಶ್ರೀಕೃಷ್ಣನ ಆಗಮನ	... .	....	259
ದ್ರೌಪದಿಯು ಸಂತೋಷದಿಂದ ಪದದಲ್ಲಿ ಬಿದ್ದು ಸ್ತುತಿ ಮಾಡಿದುದು	....	....	260
ಶ್ರೀಕೃಷ್ಣನು ಪಾಂಡವರ ಇಷ್ಟವನ್ನು ನೆರವೇರಿಸಿದುದು		....	261
ಆಗ ದೂರ್ವಾಸರು ಕೃಷ್ಣಗಮನವನ್ನು ತಿಳಿದುದು		....	262
ಆಗ ಕೃಷ್ಣದೂರ್ವಾಸರ ಪ್ರೇಮಾಲಿಂಗನಸಂವಾದಗಳು		....	,,
ಧರ್ಮರಾಯನು ದೂರ್ವಾಸರನ್ನು ಭೋಜನಕ್ಕಾಗಿ ಕರೆದುದು		...	264
ಆಗ ತೃಪ್ತರಾಗಿ ದೂರ್ವಾಸರು ಆಡಿದ ಮಾತುಗಳು		....	,,

೧೪ನೆಯ ಸಂಧಿ—

ಕೃಷ್ಣನು ದ್ವಾರಕೆಗೆ ಹೊರಡಲು ಪಾಂಡವರ ಚಿಂತೆ		....	265
ಕಾಮ್ಯಕವನದಿಂದ ಬಂದ ಬ್ರಾಹ್ಮಣನಿಂದ ಪಾಂಡವರ ವರ್ತಮಾನ ಕೇಳಿದುದು	....	....	266
ಅದರಿಂದ ಧೃತರಾಷ್ಟ್ರರಾಯನ ಚಿಂತೆ	....	...	267
ಇದನ್ನು ನೋಡಿ ಕರ್ಣಾದಿಗಳ ಪ್ರಶ್ನೆ ಮತ್ತು ರಾಯನ ಉತ್ತರ	... .	....	,,
ಅದಕ್ಕೆ ಶಕುನಿಯ ಸಮಾಧಾನ		....	268
ಶಕುನಿಯು ಹೇಳಿದ್ದನ್ನು ಕರ್ಣನು ಅನುಮೋದಿಸಿದುದು		....	269
ಘೋಷಯಾತ್ರೆಗೆ ಹೋಗುವುದಕ್ಕೆ ಉಪಾಯ		....	270

ವಿಷಯ			ಪುಟ
ಅದಕ್ಕೆ ಧೃತರಾಷ್ಟ್ರನ ಅಸಮ್ಮತಿ	....	....	271
ಧೃತರಾಷ್ಟ್ರನನ್ನು ಸಮ್ಮತಿ ಪಡಿಸಿದುದು	....	....	,,
ಇದು ಉಚಿತನಲ್ಲೆಂದು ಭೀಷ್ಮಾದಿಗಳು ಹೇಳಿದುದು		....	,,
ಯಾರ ಮಾತನ್ನೂ ಕೇಳಿದ ಘೋಷಯಾತ್ರೆಗೆ ಹೊರಡುವಿಕೆ		...	272
ಘೋಷಯಾತ್ರಾ ವರ್ಣನೆ	....	...	273
ಆ ಕಾಲದಲ್ಲಿ ಅಪಶಕುನಗಳಾದರೂ ಅದನ್ನುಪೇಕ್ಷಿಸಿ ಹೊರಡುವಿಕೆ	....	....	274
ದ್ವೈತವನಕ್ಕೆ ಹೋಗಿ ಅಲ್ಲಿನ ಗೋವುಗಳನ್ನು ನೋಡಿದುದು	....		,,
ಆಗ ಅನೇಕ ಗೋವುಗಳನ್ನು ದಾನವಾಗಿ ಕೊಡುವಿಕೆ	....		275

೧೯ನೆಯ ಸಂಧಿ—

ಪಾಂಡವರು ಇದ್ದ ವನದಬಳಿ ದುರ್ಯೋಧನನು ಪಾಳಿಯವನ್ನು ಬಿಡಿಸಿದುದು	....	....	276
ಆಗ ಪುರವಾರದ ತರುಣಿಯರ ಕಾರ್ಯಗಳು	....	....	277
ಆಗ ಅಲ್ಲಿದ್ದ ಬ್ರಾಹ್ಮಣರ ಅವಸ್ಥೆ	....	....	278
ಆಗ ದ್ವಿಜರುಗೂ ತರುಣಿಯರಿಗೂ ನಡೆದ ವಿವಾದ		....	279
ಈ ತೊಂದರೆಯನ್ನು ಧರ್ಮರಾಯರಿಗೆ ತಿಳಿಸುವಿಕೆ		....	281
ಇದಕ್ಕೆ ಧರ್ಮರಾಯರ ಸಮಾಧಾನ	....	....	,,
ಭೀಮನ ಕೋಪವನ್ನು ಧರ್ಮರಾಯರು ಶಮನಮಾಡುವಿಕೆ		....	,,
ದುರ್ಯೋಧನನ ಸ್ತ್ರೀಜನರ ಬರುವಿಕೆಯ ವರ್ಣನೆ		....	,,
ಆರಭಸಕ್ಕೆ ಕೋಪಿಸಿದ ವನಪಾಲರು ಬರುವಿಕೆ		....	283
ಆಗ ಗಂಧರ್ವರು ಜಲಕೇಳಿಯನ್ನು ತಡೆಯಲು ಯುದ್ಧವಾಗುವಿಕೆ	....	....	283
ಆಗ ಗಂಧರ್ವರಾಜನು ಯುದ್ಧಕ್ಕೆ ಬಂದುದು		....	286
ಕೌರವರ ಪರಾಜಯ	....	....	287

೨೦ನೆಯ ಸಂಧಿ—

ಆಗ ದುರ್ಯೋಧನನ ಚಿಂತೆ	....	...	288
ಕರ್ಣಾದಿಗಳು ಯುದ್ಧವನ್ನು ಮಾಡಿದುದು	....	....	,,

ವಿಷಯ				ಪುಟ
ಗಂಧರ್ವನು ಸೈನಿಕರಿಗೆ ಅಭಯವನ್ನು ಹೇಳಿದುದು			....	290
ಆಗ ಕೌರವಸೇನೆಯ ದುರವಸ್ಥೆ		...	....	291
ಕೌರವರ ಸೇನೆಯ ಪರಾಕ್ರಮ		....	....	202
ಚಿತ್ರಸೇನನ ಯುದ್ಧ	....	....	....	293
ಕರ್ಣನು ಗಂಧರ್ವರನ್ನು ಓಡಿಸಿದುದು		....	....	,,
ಆ ಯುದ್ಧವನ್ನು ಪಾಂಡವರು ನೋಡಿದುದು		....	....	295
ಕರ್ಣನು ಅಸ್ತ್ರಗಳನ್ನು ಬಿಡುವಿಕೆ		...	....	296
ಕರ್ಣ ಚಿತ್ರಸೇನರ ಪರಸ್ಪರಾಸ್ತ್ರಯುದ್ಧ		...	....	297
ಗಂಧರ್ವನು ಕರ್ಣನನ್ನು ಅಸ್ತ್ರಗಳಿಂದ ನೋಯಿಸಿದುದು			....	298
ಕರ್ಣನು ಗಂಧರ್ವನನ್ನು ನೋಯಿಸಿದುದು			....	,,
ತಿರುಗಿ ಗಂಧರ್ವನು ಬಿಟ್ಟ ಅಸ್ತ್ರಗಳ ವಿಷಯದಲ್ಲಿ ಕರ್ಣನು ಬೆರಗಾದುದು		....	...	 299
ಕರ್ಣನು ಹಿಂದಾಗಲು ಕೌರವರು ಚಿಂತೆ ಮಾಡಿದುದು			....	,,
ಗಂಧರ್ವನ ಮೇಲೆ ಕೌರವರು ಯುದ್ಧ ಮಾಡಿದುದು			....	300
ಅವರನ್ನು ಸೋಲಿಸಲು ದುರ್ಯೋಧನನೇ ಯುದ್ಧಕ್ಕೆ ಬರುವಿಕೆ			....	,,
ಆಗ ದುರ್ಯೋಧನನನ್ನು ನೋಡಿ ಜನಗಳು ಪರಿಹಾಸ ಮಾಡಿದುದು		....	....	 301
ದುರ್ಯೋಧನನು ಗಂಧರ್ವನ ವಶನಾದುದು		...	....	302

ಎಂಟನೆಯ ಸಂಧಿ—

ದುರ್ಯೋಧನನನ್ನು ಹಿಡಿದಾಗ ಕೊಳ್ಳೆಯನ್ನು ಹೊಡೆದುದು			....	305
ಕೌರವರ ಪತ್ನಿಯರ ರೋದನ		...	....	,,
ಭಾನುಮತಿ ಬಂದು ಧರ್ಮರಾಯನನ್ನು ಮರೆಹೋಗುವಿಕೆ			...	,,
ಧರ್ಮರಾಯನು ಭಾನುಮತಿಯನ್ನೆತ್ತಿ ಸಮಾಧಾನ ಪಡಿಸಿದುದು		....	....	 307
ಗಂಧರ್ವರನ್ನು ಗೆಲ್ಲುವುದಕ್ಕಾಗಿ ಭೀಮಸೇನನಿಗೆ ಹೇಳುವಿಕೆ			....	,,
ಅದಕ್ಕೆ ಭೀಮಸೇನನ ಅಸಮ್ಮತಿ		....	....	,,
ಧರ್ಮರಾಯನ ನೀತಿವಾಕ್ಯಗಳು		....	....	308

ವಿಷಯ			ಪುಟ
ಯುದ್ಧಕ್ಕೊತ್ತಾಸ್ಕರ ಅರ್ಜುನನನ್ನು ಆಜ್ಞಾಪಿಸಿದುದು	....		309
ಧರ್ಮರಾಯನ ಅಪೇಕ್ಷೆಯಂತೆ ಅರ್ಜುನನು ಯುದ್ಧಕ್ಕೆ ಹೊರಟುದು			,,
ಚಿತ್ರಸೇನನು ಹೇಳಿದ ನೀತಿ	...	...	312
ಅರ್ಜುನನು ಅಣ್ಣನ ಆಪ್ಪಣೆಯೇ ಮುಖ್ಯವೆಂದು ಕೇಳಿದುದು		...	313
ಆಗ ಅರ್ಜುನಚಿತ್ರಸೇನರಿಗೆ ಕೌರವರನ್ನು ಬಿಡಿಸುವ ವಿಷಯದಲ್ಲಿ ಯುಕ್ತಾಯುಕ್ತ ವಿಚಾರ	....	...	314
ಆದರೂ ಅಣ್ಣನ ಆಪ್ಪಣೆಯಂತೆ ಇವನನ್ನು ಬಿಡಿಸಬೇಕಾಗಿದೆ ಎಂದು ಹೇಳಿದುದು	.... ..	...	535
ಆಗ ಚಿತ್ರಸೇನನು ಧರ್ಮರಾಯನ ಬಳಿಗೆ ಬಂದು ಅರ್ಜುನನನ್ನು ಸ್ತುತಿಮಾಡಿದುದು	....	....	317

ಎಂಟನೆಯ ಸಂಧಿ—

ಕಟ್ಟಿದ ದುರ್ಯೋಧನನನ್ನು ಧರ್ಮರಾಯನ ಬಳಿಗೆ ತಂದುದು	....		317
ಗಂಧರ್ವನು ತನ್ನ ಅಭಿಪ್ರಾಯವನ್ನು ಧರ್ಮರಾಯನ ಮುಂದೆ ಹೇಳಿದುದು	....	....	,,
ಆಗ ಆತನಿಗೆ ಮರ್ಯಾದೆಮಾಡಿ ಕಳುಹಿದುದು		....	,,
ಆಗ ಧರ್ಮರಾಯನ ಆಪ್ಪಣೆಯಂತೆ ಬಂದು ದ್ರೌಪದಿಯು ಇವರ ಅವಸ್ಥೆಯನ್ನು ನೋಡಿದುದು	....	....	317
ಎಲ್ಲರನ್ನು ಬಿಡಿಸಿ ದುರ್ಯೋಧನಾದಿಗಳಿಗೆ ಉಪಚಾರವನ್ನು ಹೇಳಿದುದು	... .	....	318
ಭೀಮನುಮತಿಯು ಧರ್ಮರಾಯನಿಗೆ ನಮಸ್ಕಾರಮಾಡಿದುದು		....	319
ದುರ್ಯೋಧನನಿಗೆ ಧರ್ಮರಾಯನು ಹೇಳಿದ ಮಾತುಗಳು		....	320
ದುರ್ಯೋಧನನು ಅವಮಾನಿತನಾಗಿ ಹೊರಟುದು		....	,,
ದುರ್ಯೋಧನನ ಪ್ರಾಯೋಪವೇಶ	...	....	321
ಆಗ ಭೀಮನುಮತಿ ಬಂದು ಸಮಾಧಾನ ಹೇಳಲು ನಡೆದ ಸಂವಾದ		....	,,
ಆಗ ಗಾಂಧಾರಿಯು ಹೇಳಿದುದು	....	....	323
ದುರ್ಯೋಧನನ ನುಡಿ	....	....	324

ವಿಷಯ				ಪುಟ
ಧೃತರಾಷ್ಟ್ರರಾಯರ ಆಗಮನ ಮತ್ತು ಉಚಿತ ಭಾಷಣ	...			325
ದುರ್ಯೋಧನನು ತನಗೆ ಈ ಜಗತ್ತು ಬೇಡವೆಂದು ಹೇಳಿದುದು	....			,,
ಅದಕ್ಕೆ ಧೃತರಾಷ್ಟ್ರರಾಯನ ಉತ್ತರ	....			326
ದುರ್ಯೋಧನನ ಮಾತು	....	....	....	,,
ತಂದೆಯ ಮಾತನ್ನು ಕೇಳದೇಯಿರಲು ಹಿಂತಿರುಗುವಿಕೆ	....			327
ಭೀಷ್ಮಾದಿಗಳು ಬಂದು ಹೇಳಿದುದು	....	...		,,
ದುರ್ಯೋಧನೋಕ್ತಿ	....	....	....	,,
ಭೀಷ್ಮಪ್ರತ್ಯುಕ್ತಿ	....	....	....	328
ದುರ್ಯೋಧನನು ತನ್ನ ದುಃಖವನ್ನು ಹೇಳಿಕೊಳ್ಳುವಿಕೆ	....			,,
ಆಗ ಭೀಷ್ಮಾದಿಗಳ ವಚನ	....	...		,,
ಭೀಷ್ಮಾದಿಗಳ ಮಾತನ್ನು ಸಹಿಸದೇ ಇರಲು ಅವರು ಹಿಂತಿರುಗಿದುದು	....	....	...	329
ಕರ್ಣಾದಿಗಳ ಆಗಮನ ಮತ್ತು ಭಾಷಣ	....	....		,,
ಅವರ ಮಾತನ್ನು ಒಪ್ಪದೆ ಇರಲು ಅವರು ಹಿಂತಿರುಗುವಿಕೆ	....			330
ದುಶ್ಶಾಸನರು ಬಂದು ಮಾತನಾಡಿದುದು	....	....		331
ದುಶ್ಶಾಸನನು ಹಿಂತಿರುಗಿದುದು	...	....		333
ನಗರಕ್ಕೆ ಬರಬೇಕೆಂದು ಪುರಜನರ ಪ್ರಾರ್ಥನೆ		....		,,
ದುಶ್ಶಾಸನನೇ ಮುಂದೆ ನಿವ್ಮಾಗರಸಾಗುವನೆಂದು ಹೇಳುವಿಕೆ	....			333
ಹೀಗಿರುವಾಗ ದೈತ್ಯರು ಬಂದು ಸಹಾಯರಾಗಿರುವೆವೆಂದು ಹೇಳಿದುದು	....	....	....	334

ಎಳನೆಯ ಸಂಧಿ —

ಕರ್ಣನಿಂದೊಡಗೂಡಿ ದುರ್ಯೋಧನನ ಚಿಂತೆ			....	336
ಕರ್ಣನಿಗೆ ಸೂರ್ಯನ ಹಿತೋಕ್ತಿ	....		....	338
ಕರ್ಣನು ಅದನ್ನೊಪ್ಪದೆ ತನ್ನ ಔದಾರ್ಯವನ್ನು ಹೊಗಳಿಕೊಂಡುದು	....	....	....	,,
ವಿಪ್ರವೇಷಧಾರಿಯಾಗಿ ಇಂದ್ರನು ಬಂದುದು			—	339
ಇಂದ್ರನು ಕವಚಕುಂಡಲಗಳನ್ನು ಬೇಡಿದುದು			....	340
ಕರ್ಣನ ದಾನ	....	....	....	,,

ವಿಷಯ				ಪುಟ
ಇಂದ್ರನು ತನ್ನ ಆಯುಧವನ್ನು ಕರ್ಣಾದಿಗಳಿಗೆ ಕೊಟ್ಟುದು	....			341

ಎಳನೆಯ ಸಂಧಿ—

ಕೌರವನ ಬಿಡುಗಡೆಯನ್ನು ಸೈಂಧವನು ಕೇಳಿದುದು	....			,,
ಜೋಯಿಸರ ಮಾತನ್ನು ಪೆಕ್ಷಿಸಿ ಸೂರಟುದು	....			342
ನಾನಾವಿಧ ಅಪಶಕುನಗಳು	....			,,
ಪಾಂಡವರ ಆಶ್ರಮದ ಬಳಿ ಬಂದು ಸೈಂಧವನು ಇಳಿದುದು	....			343
ದೂತರೂಪನೆ ಆಚರಣಗಳನ್ನು ಕಳುಹಿದುದು	....			,,
ಅವುಗಳನ್ನು ಸ್ವೀಕರಿಸದೆ ಇರಲು ಸೈಂಧವನಿಗೆ ತಿಳುಹಿದುದು	....			345
ಸೈಂಧವನ ಬರುವಿಕೆ	....	...	...	,,
ಸೈಂಧವನ ಮಾತು	...	....	...	346
ದ್ರೌಪದಿಯ ಮಾತು	....	....	....	,,
ಮುನಿಜನಗಳ ಬುದ್ಧಿವಾದ		....	....	,,
ಋಷಿಜನರಿಂದ ಅಲ್ಲಿನ ವರ್ತಮಾನವನ್ನು ಕೇಳಿದುದು			...	347
ಭೀಮಾರ್ಜುನಸೈಂಧವರ ಯುದ್ಧ		....	....	348
ಸೈಂಧವನ ರಥವನ್ನು ತಡೆದುದು		....	....	349
ಸೈಂಧವನನ್ನು ಕಟ್ಟಿ ಧರ್ಮರಾಯನ ಬಳಿಗೆ ತಂದುದು			....	351
ಅಣ್ಣನ ಅಪ್ಪಣೆಯಿಂದ ಭೀಮನು ಸೈಂಧವನನ್ನು ಬಿಡುವಿಕೆ			....	,,
ಬಳಿಕ ಸೈಂಧವನ ತಪಸ್ಸು		....	....	352
ಸೈಂಧವನಿಗೆ ಈಶ್ವರನು ವರವನ್ನು ಕೊಟ್ಟುದು			....	353
ಯುಧಿಷ್ಠಿರಮಾರ್ಕಂಡೇಯಸಂವಾದ		....	....	354
ಶ್ರೀರಾಮರ ಕಥೆಯನ್ನು ಮಾರ್ಕಂಡೇಯರು ಹೇಳಿದುದು			....	,,

ಮೂಳನೆಯ ಸಂಧಿ—

ಮಾರ್ಕಂಡೇಯನು ನಾನಾ ಕಥೆಗಳನ್ನು ಹೇಳಿದುದು			....	356
ಕೀಚಕನು ಕೌರವರ ಗೋವುಗಳನ್ನು ಹಿಡಿದುಕೊಂಡು ಹೋದುದು	....	....	...	357
ಭೀಷ್ಮಾದಿಗಳು ಕೀಚಕನನ್ನು ತಡೆದುದು		....	....	,,

ವಿಷಯ	ಪುಟ
ದುರ್ಯೋಧನನು ಮಾರಣಾಪೋವುಕ್ಕೋಸ್ಕರ ಕನಕನನ್ನು ಕರೆಕಳುಹಿಸಿದುದು	358
ಕನಕನು ತನ್ನನ್ನು ಹೊಗಳಿಕೊಂಡುದು	,,
ಆಗ ದುರ್ಯೋಧನನು ಯಜ್ಞಸಾಧನವನ್ನು ಒದಗಿಸಿ ಕೊಟ್ಟುದು	359
ಯುದ್ಧದಲ್ಲಿ ಭೂತೋತ್ಪತ್ತಿ	,,
ಆಭೂತವು ಕನಕನ ಅಪೇಕ್ಷೆಯಂತೆ ಪಾಂಡವರನ್ನು ಕೊಲ್ಲಲು ಅವರ ಆಶ್ರಮಕ್ಕೆ ಬಂದುದು	360
ಆಗ ಶ್ರೀಕೃಷ್ಣನು ಪಾಂಡವರ ಸಂರಕ್ಷಣೆಗೋಸ್ಕರ ಉಪಾಯವನ್ನು ಚಿಂತಿಸಿದುದು	361
ಯಮನಿಗೆ ಯಕ್ಷನಾಗೆಂದು ಹೇಳಿ ತಾನು ಮೃಗರೂಪವನ್ನು ತಾಳುವೆನೆಂದು ಹೇಳಿದುದು	362
ಆ ಭೂತವು ಇವನ್ನು ನೋಡಿ ಹಿಂತಿರುಗುವುದೆಂದು ಹೇಳಿದುದು....	,,

ಎಟನೆಯ ಸಂಧಿ—

ಪಾಂಡವರು ವನದಲ್ಲಿದ್ದುದು	363
ಮೃಗರೂಪಿಯಾಗಿ ಅರಣಿಯನ್ನುಕೊಂಡೊಯ್ದುದು	364
ಧರ್ಮರಾಯರಲ್ಲಿ ಈ ಸಂಗತಿಯನ್ನು ತಿಳಿಸಿದುದು	,,
ಅರಣಿಯನ್ನು ತಂದುಕೊಡುವುದಕ್ಕಾಗಿ ಹೋದ ಪಾಂಡವರನ್ನು ವಿಷಸರೋವರಕ್ಕೆ ಕರೆತಂದುದು	365
ಆಮೃಗವನ್ನು ಹಿಡಿದುದು	366
ಆಗ ದಾಹವಾಗಲು ನೀರನ್ನು ತಾರೆಂದು ನಕುಲನಿಗೆ ಹೇಳಿದುದು	,,
ನಕುಲನ ಗಮನ	,,
ನಕುಲನು ನೀರನ್ನು ಕುಡಿಯುವಾಗ ಯಕ್ಷನು ಬೇಡವೆಂದು ಹೇಳಿದುದು	368
ನಕುಲನು ಕೆಳಗೆ ಬೀಳಲು ಸಹದೇವನ ಆಗಮನ	,,
ಆತನು ಯಕ್ಷನ ಮಾತನ್ನುಪೇಕ್ಷಿಸಲು ಕೆಳಗೆ ಬೀಳುವಿಕೆ	368

ವಿಷಯ				ಪುಟ
ಅರ್ಜುನಾಗಮನ	....	....	....	369
ಅರ್ಜುನನು ಪರವಶನಾಗಿ ಕಳಗೆ ಬಿದ್ದುದು	....	....		370
ಭೀಮನು ಬಂದು ಇವರ ಸ್ಥಿತಿಯನ್ನು ನೋಡಿ ತಾನೂ ನೀರನ್ನು ಕುಡಿದುದು	....	....	....	,,
ಭೀಮನೂ ಪರವಶನಾಗಿ ಬಿದ್ದುದು	...	...		371
ಆಗ ಧರ್ಮರಾಯನ ಆಗಮನ	....	....		,,
ಧರ್ಮರಾಯನ ಪ್ರಲಾಪ	....	....	....	372
ನೀರನ್ನು ಕುಡಿಯಲು ಧರ್ಮರಾಯನ ಪ್ರಯತ್ನ	....			374
ಯಕ್ಷನು ಹೇಳಿದುದು	..	....	....	,,
ಧರ್ಮರಾಯನ ವಾಕ್ಯ	....	....	....	375
ಯಕ್ಷ ಮತ್ತು ಧರ್ಮರಾಯನ ಪ್ರಶ್ನೋತ್ತರಗಳು			....	,,
ಆ ಭೂತವು ಕನಕನನ್ನು ತಿಂದುಹೋಗುವಿಕೆ			....	379
ಬಳಿಕ ಯಮನು ಈ ಮೃತ್ತಾಂತವನ್ನು ಮಂಗನಿಗೆ ಹೇಳಲಾಗಿ ಕೃಷ್ಣನನ್ನು ಕೊಂಡಾಡಿದುದು	....	....		,,

ಶ್ರೀ

ಕುಮಾರವ್ಯಾಸ ಮಹಾಕವಿ ವಿರಚಿತ

ಕರ್ಣಾಟಕ ಮಹಾಭಾರತ

ಅರಣ್ಯಪರ್ವ

ಚತುರ್ಥ ಸಂಪುಟ

ಬಂದನೆಯ ಸಂಧಿ

ಸೂಚನೆ.

ಸಕಲರಾಜ್ಯವನುಚಿದವರು ಕಾ
ಮ್ಯಕಮಹಾಕಾನನಕೆ ಬಂದುಱೆ [1]
ಬಕ [2] ಕುಲಾಂತಕ ಕೆಡಹಿದನು ಕಿಮ್ಮೀರದಾನವನ ॥

ಪಾಂಡವರು ಗಂಗೆಯನ್ನು ದಾಟಿ ಉತ್ತರ ತೀರದಲ್ಲಿ ಇರುವಿಕೆ.

ಕೇಳು ಜನಮೇಜಯ ಧರಿತ್ರೀ
ಪಾಲ ಗಂಗಾತೀರದಲಿ ಭೂ
ಪಾಲಕರು ಗುರುಭೀಷ್ಮವಿದುರಾದ್ಯಖಿಳಬಾಂಧವರ ।
ಬೀಱುಕೊಟ್ಟರು ಗಜಪುರದ ಜನ
ಜಾಲವನು ಕಳುಹಿದರು ಗಂಗಾ
ಕೂಲದುತ್ತರಭಾಗದಲಿ ಮೊಡಿದರು ವಿಶ್ರಮವ ॥ ೧

---

1 ದೊಳಗೆಱೀ, ಡ. 2 ಚಕ್ರ, ಡ.

ರಾಯನನ್ನು ಪುರಜನಗಳು ಹಿಂಬಾಲಿಸಿದುದು.

ನಿಲಿಸೆ ನಿಲ್ಲದೆ ಬಂದರರಸನ
ಬಿಟ್ಟಿಯಲಗ್ಗದ ಮಂಡಲೇಶ್ವರ
ರೊಲಿದು ಸಾಕಿದ ರಾಜಪುತ್ರರು ಹಲವುಮನ್ನಣೆಯ ।
ಬಲುಭಟರು ಬಾಹತ್ತರದ ನಿ
ಶ್ಚಲನಿಯೋಗಿಗಳಾಶ್ರಮಿಗಳ
ಗ್ಗಳರು ವಿಪ್ರಸ್ತೋಮ ಬಂದುದು ಕೋಟಿಸಂಖ್ಯೆಯಲಿ ॥ ೂ

ಧರ್ಮರಾಯನ ಚಿಂತೆ.

ತಿರುಗಿ ಕಂಡನು ಭೂಮಿಭಾರದ
ನೆರವಿಯನು ಮೊಗಿನಲಿ ಬರಳಿ [1]
ಟ್ಟರಸ ತಲೆದೂಗಿದನು ಸುಯ್ದನು ಬೈದು ದುಷ್ಕೃತವೆ ।
ಧರಣಿ ಸೇರಿದುದಹಿತರಿಗೆ ಕರಿ
ತುರಗರಥವೆಮಗಿಲ್ಲ ವಿಪಿನದ
ಪರಿಬವಣೆಗಿವರೇಕೆ ಬೆಸಗೊಳು ಭೀಮ ನೀನೆಂದ [2] ॥ ೩

ನಿಲ್ಲಿರೈ ದ್ವಿಜನಿಕರ ಕಳುಹಿಸಿ
ಕೊಳ್ಳಿರೈ ಪುರವರ್ಗ ನೇಮವ
ಕೊಳ್ಳಿರೈ ಪರಿವಾರ ಮಕ್ಕಳ ತಂಡವೊದಲಾಗಿ ।
ಎಲ್ಲಿ ಮೆಳೆ ಮರ ಗಾಡು ಪಲ್ಲವೆ
ಪುಲ್ಲಫಲಪಾನೀಯಪೂರಿತ
ವೆಲ್ಲಿ ರಾಯನ ಸೆಜ್ಜೆ ಯುರಮನೆಗೆಂದನಾಭೀಮ ॥ ೪

ಜನಗಳು ರಾಯನನ್ನು ಸ್ತುತಿಸುವಿಕೆ.

ಅವನಿಪತಿ ಚಿತ್ತೈಸು ಬಹಳಾ
ರ್ಣವವ ಹೊಗು ಹಿಮಗಿರಿಯಲಿರು ಭೂ
ವಿವರಗತಿಯಲಿ ಗಮಿಸು ಗಾಹಿಸು ಗಹನಗಹ್ವರವ ।

---

[1] ಗಲ್ಲದಲಿ ಕರವಿ, ಚ. [2] ನಿಲಿಸೆಂದ, ಟ

ಎವಗೆ ನೀನೇ ಜೀವ ನೀನೇ
ವಿವಿಧಧನ ಗತಿ ನೀನೆ ಮತಿ ನೀ
ನವಗಡಿಸಬೇಡಕಟ ಕೃಪೆಮಾಡೆಂದುದಖಿಳಜನ ॥ ೫

ತುಂಬಿದನು ಕಂಬನಿಯನಕಟ ವಿ
ಡಂಬಿಸಿತೆ ವಿಧಿ ಯೆನ್ನ ನಿನಿಬರ
ನಂಬಿಸುವ ಪರಿಯೆಂತು ವಸನಗ್ರಾಸವಾಸದಲಿ ।
ತುಂಬಿ ಸವಿಗೆಡಹಿದಳಲಕ್ಷ್ಮ್ಯಯ
ಮುಂಬಿಗನೊಳಪದೆಸೆಯ ಪಂತದ [1]
ಚುಂಬಕನೊಳೇನುಂಟು ಫಲವೆಂದರಸ ಬಿಸುಸುಯ್ದ ॥ ೬

ಧೌಮ್ಯರು ಸೂರ್ಯನನ್ನು ಪ್ರಾರ್ಥಿಸೆಂದು ಹೇಳುವಿಕೆ.

ಭೇದ [2] ವೇಕೆಲೆ ನೃಪತಿ ಹರುಷ ವಿ
ಷಾದದಲಿ ಸುಖದುಃಖದಲಿ ನುತಿ
ವಾದಪರಿವಾದದಲಿ ಸಮಬುದ್ಧಿಗಳಲೇ ಬುಧರು ।
ಈದುರಂತದ ಚಿಂತೆ ಬೇಡೀ
ದ್ವಾದಶಾತ್ಮನ ಭಜಿಸಿದೊಡೆ ಭ
ಕ್ಷ್ಯಾದಿಬಹುವಿಧದನ್ನ ಸಿದ್ಧಿಪುದೆಂದನಾಧೌಮ್ಯ ॥ ೭

ಧರಣಿಪತಿ ಕೇಳ್ ಧೌಮ್ಯವಚನಾಂ
ತರದೊಳಮರನದೀವಿಗಾಹನ
ಪರಮಪಾವನಕರಣನೀಕ್ಷಿಸಿ ತರಣಿಮಂಡಲವ ।

ಧರ್ಮರಾಯನ ಸೂರ್ಯಪ್ರಾರ್ಥನೆ.

ಮುರುಹಿ ಮೂಲಾಧರಪವನನ
ನುರುಸುಷುಮ್ನೆಗೆ ನೆಗಹಿ ನಿಶ್ಚಲ
ವರಸಮಾಧಿಯೊಳಿನನ ಮೆಚ್ಚಿಸಿದನು ಮಹೀಪಾಲ [3] ॥ ೮

---

1 ಕ್ರಂತದ, ಚ ಕ್ರಂದದ, ಟ. 2 ಖೇದ, ಡ.
3 ನೆನೆಯಲು ಖಂದನಾಕ್ಷಣಕೆ, ಝ,

ಸೂರ್ಯನು ಪಾಂಡವರಿಗೆ ಅಕ್ಷಯ ಪಾತ್ರವನ್ನು ಕೊಟ್ಟದ್ದು.

ಏನು ವರಿಸಿದೆ ಧರ್ಮಸುತ ಹೇ
ಳೆನಲು ಕಂದೆಱೆಯುತ್ತ ನುಡಿದನು
ನೀನಲೈ ತ್ರೈಮೂರ್ತಿರೂಪನು ಕರ್ಮಸಾಕ್ಷಿಯಲೈ।
ತಾನು ಬಿನ್ನಹಮಾಡಲೇಕೀ
ಕಾನನದಿ ವಿವಿಧಾನ್ನಪಾನ
ಕ್ಕೇನಪಾಯವು ವಿಲ್ಲದಂತಿರೆ ಕರುಣಿಸುವುದೆಂದೆ ॥ ೯

ವರವನಿತ್ತೆನು ನಿನಗೆ ಹೇಮದ
ಚರುಕವಿದೆ ವಿವಿಧಾನ್ನಪಾನೋ
ತ್ಕರದ ತವನಿಧಿ ನಿನ್ನ ವಧು ಬಾಣಸದ ಕರಣದಲಿ।
ಇರವು ರಚಿಸಲಿ ಬಚ್ಚಿಕೊಣಲಿ ಸಾ
ವಿರವನಂತರ ನೀವು ಬಂದಿಕಂ
ಬುರುಹಮುಖಿ ಮಱುದಿವಸವೀಪರಿಯೆಂದನಾದ್ಯಮುನಿ ॥ ೧೦

ಭೂಮಿಪತಿ ಭುಲ್ಲವಿಸಿದನು ನಿ
ಸ್ಸೀಮಸಂತೋಷದಲಿ ಸುಜನ
ಸ್ತೋಮರಕ್ಷಣಕಾದ ನಿರ್ವಾಹದ ನಿರೂಢಿಯಲಿ।
ಆಮುನೀಂದ್ರಂಗಱಿಗಿದನು ನಿಜ
ಕಾಮಿನಿಯ ಕರೆದೀಹದನು ಸು
ಪ್ರೇಮದಿಂದಱಿಹಿದನು ಭೀಮಧನಂಜಯಾದ್ಯರಿಗೆ [1] ॥ ೧೧

ಇವರು ತಿರುಗಿದರಿತ್ತ ಲಡವಿಯ
ಭವಣಿಗೆಯ ಭಾರಾಂಕಭೂಷೆಯ
ಲವಿರಳತಜನಜಾಲಸಹಿತಾರಣ್ಯವಾಸದಲಿ [2]।

ಇತ್ತ ಮೈತ್ರೇಯನು ದುರ್ಯೋಧನನನ್ನು ನೋಡುವಿಕೆ.

ಅವನಿಪತಿ ಕೇಳಿತ್ತಲಾ ಕೌ

---

[1] ತನ್ನ ಸಹೋದರವ್ರಜಕೆ, ಚ. [2] ಮಾರ್ಗದಲಿ, ಚ,

ರವನ ನಗರಿಗೆ ಪಾರಿಕಾಂಕ್ಷಿ
ಪ್ರವರನೊಬ್ಬನು ಬಂದು ಕಂಡನು ಕೌರವೇಶ್ವರನ ॥ ೧೦

ಮುನಿಯ ಸತ್ಕರಿಸಿದನು ಕೌರವ
ಜನಪನಾಮುನಿಮುಖ್ಯನೀತನ
ವಿನುತರಚಿಸಿಗೆ ಪೊಚ್ಚಿ ನುಡಿದನು ರಾಜಕಾರಿಯವ ।

ಮೈತ್ರೇಯನು ಪಾಂಡವಂಗೆ ರಾಜ್ಯವನ್ನು ಕೊಡು ಎಂದು ಹೇಳಿದುದು.

ನಿನಗಿದೊಂದೇ ಕೊಱತೆ ಪಾಂಡವ
ಜನಪರನು ಜೂಜಿನಲಿ ಸೋಲಿಸಿ
ಕನಲಿಸಿದೆ ನೀ ಕೆಡುವೆ ಯೆಂದನು ಕೌರವೇಶ್ವರನ[1] ॥ ೧೩

ಹೋದ ಕೃತಿಯಂತಿರಲಿ ಸಾಕಿ
ನ್ನಾದರೆಯು ಕೌಂತೇಯರನು ಕರೆ
ದಾದರಿಸಿ ಕೊಡು ಧರೆಯನೆನೆ ಕೊಪ್ಪರಿಸಿ ಖಾತಿಯಲಿ ।

ಮೈತ್ರೇಯನು ತನ್ನ ಮಾತನ್ನೊಪ್ಪದಿರಲು ಶಾಪವನ್ನು ಕೊಡುವಿಕೆ.

ಹೊಯ್ದು ತೊಡೆಯನು ಹಗೆಗೆ ಕೊಡುವನೆ
ಮೇದಿನಿಯನೆನೆ ರೋಷಶಿಖೆಯಲಿ
ಕಾದುದಾತನ ಹೃದಯ ಶಪಿಸಿದನಂದು ಮೈತ್ರೇಯ ॥ ೧೪

ತೊಡೆಗಳನು ಕಲಿಭೀಮ ಬವರದೊ
ಳುಡಿದು ಬಿಸುಡಲಿ ಯೆಂದು ಖತಿಯಲಿ[2]
ನುಡಿಯೆ ಮುನಿಪನ ಸಂತವಿಟ್ಟನು ಬಂದು ಧೃತರಾಷ್ಟ್ರ ।
ತೊಡೆಗೆ ಬಂದುದು ತೋಟಿ ಸಾಕಿ
ನ್ನೊಡಬಡಿಸಿ ಫಲವಿಲ್ಲ ನಮ್ಮಯ
ನುಡಿಗೆ ಮಱುಮಾತಿಲ್ಲೆನುತ ಮುನಿ ಸರಿದನಾಶ್ರಮಕೆ ॥ ೧೫

---

[1] ಯದಱಿಂದ ಖಲುಗೇಡಹುದು ನಿನಗೆಂದ, ಚ. [2] ಶಪವ, ಚ.

ಆಮಹಾಮುನಿಶಾಪಭಯವನು
ಭೀಮಸೇನನ ಬಲುಹ ನೆನೆಯುತ
ವೈಮನಸ್ಯದ ಬೇಗೆಯಲಿ ಬಲು ಬೆಂದು ಬೇಸಱದೆ ।
ಭೂಮಿಪತಿ ಕರೆಸಿದನು ವಿದುರನ
ನಾಮಹಾಜ್ಞಾನಿಯನು ಮುನಿಪನ
ತಾಮಸವನಳಿಹಿದರೆ ಬಟಿಕಿಂತೆಂದನಾವಿದುರ ॥ ೧೬

ಮೈತ್ರೇಯನ ಮಾತನ್ನು ವಿದುರನು ಒಪ್ಪಲು ವಿದುರನನ್ನು ಧಿಕ್ಕರಿಸಿದುದು.

ತಪ್ಪದಿದು ನಿನ್ನಾತಗಳ ಭುಜ
ದರ್ಪತೀವ್ರಜ್ವರದ ವಿಕಳರ
ನೊಪ್ಪಿ ಕಾದೆ ಸುಯೋಧನಾದ್ಯರು ಜನಿಸಲೀಜಗಕೆ ।
ತಪ್ಪುವುದೆ ಋಷಿವಚನ ಸಂಧಿಯೊ
ಳೊಪ್ಪುಕೊಳು ಪಾಂಡವರನಲ್ಲದೊ
ಡಪ್ಪಿಕೊಂಬಳು ಮೃತ್ಯು ನಿನ್ನ ಕುಮಾರಕರನೆಂದ ॥ ೧೭

ಎಸಲು ಕಿಡಿ ಕಿಡಿ ಯಾಗಿ ಕೌರವ
ಜನಪ ವಿದುರನ ಬೈದು ಕುಂತಿಯ
ತನುಜರಲಿ ಬಾಂಧವನಲಾ ಹೋಗವರ ಹೊರೆಗೆಂದು ।

ಕಾಮ್ಯಕವನವನ್ನು ಕುರಿತು ವಿದುರನ ಗಮನ

ಮುನಿದು ಗರ್ಜಿಸೆ ಜೇಯ ಕರ ಲೇ
ಸೆನುತ ಮನದುಬ್ಬಿನಲಿ ಪಾಂಡವ
ಜನಪರಿಹ ಕಾಮ್ಯಕವನಾಂತರಕೈದಿದನು ಬಟಿಕ [1]॥ ೧೮

ಇದಿರುಗೊಂಡರು ಹಿರಿದು ಮನ್ನಿಸಿ
ವಿದುರನನು ಕೊಂಡಾಡಿದರು ಕೇ
ಳಿದರು ಧೃತರಾಷ್ಟ್ರಾದಿಗಳ ಸುಕ್ಷೇಮಕುಶಲವನು ।

---

[1] ತಕ್ಕ ಬಂದನಾವಿದುರ, ಡ,

ವಿದುರನಾಗಮೆನಪ್ರಪಂಚದ
ಹದನನೆಲ್ಲವ ಕೇಳಿದರು ಹೇ
ಟಿದನು ನಿಜವೃತ್ತಾಂತವನು ವಿದುರಂಗೆ ಯಮಸೂನು ॥ ೧೯

ಧೃತರಾಷ್ಟ್ರನು ವಿದುರನನ್ನು ಕರಕಳುಹಿಸಿದುದು.

ಇತ್ತಲಾವಿದುರನ ವಿಯೋಗದ
ಚಿತ್ತದಂತಸ್ತಾಪದಲಿ ನೃಪ
ಮತ್ತೆ ದೂತರ ಕಳುಹಿ ಕರೆಸಿದನಾತನನು ಪುರಕೆ [1] ।
ಹೆತ್ತಮಕ್ಕಳ ಬಿಡು ಪೃಥಾಸುತ
ರತ್ತ ತಿರುಗೆನೆ ಖಾತಿಗೊಂಡೆನು
ಮತ್ತೆ ಮುನಿಯದಿರೆಂದು ವಿದುರನನಪ್ಪಿದನು ನೃಪತಿ ॥ ೨೦

ಪಾಂಡವರ ಸ್ಥಿತಿಯನ್ನು ಕೇಳುವಿಕೆ.

ಆವ ಬನದಲಿ ಪಾಂಡುಸುತರಿಗೆ
ತಾವು ಸಿನಗೇನೆಂದರನಿಬರ
ನಾವ ಬನದಲಿ ಕಂಡೆ ಕೂಡೆನಿತುಂಟು ಪರಿವಾರ ।
ಆವ್ರದಭಿಮತ ಭೀಮಸೇನನ
ಭಾವವೇನು ಯುಧಿಷ್ಠಿರಾದಿಗ
ಳಾವ ಭಂಗಿಯಲಿದ್ದರೆಂದನು ನಗುತ ಧೃತರಾಷ್ಟ್ರ ॥ ೨೧

ಅರಸ ಕೇಳ್ ಗಂಗಾನದಿಯಲು
ತ್ತರಿಸಲವರಿಗೆ ಕಮಲಮಿತ್ರನ
ಕರುಣವಾಯಿತು ಕನಕಪಾತ್ರೆಯೊಳಕ್ಷಯಾನ್ನದಲಿ ।
ಪರಿಕರದ ಪರುಠವಣೆಯಲಿ ಸಾ
ವಿರದ ಶತಸಂಖ್ಯಾತಧರಣೀ
ಸುರನಿಯೋಗಿಗಳಾಪ್ತಜನಸಹಿತೈದಿದರು ವನವ ॥ ೨೨

[1] ದನು ಕರತರಿಸಿದನು ಗಜಪುರಿಗೆ, ಡ.

ಜನಪ ಕೇಳ್ ಕಿಮ್ಮೀರನೆಂಬವ
ನನಿಮಿಷರಿಗುಬ್ಬಸದ ಖಳನಾ
ತನ ವಿಭಾಡಿಸಿ ಹೊಕ್ಕ ರವೆರಾರಣ್ಯಮೆಂದಿರವ ।
ದನುಜನೇ ಕಿಮ್ಮೀರನಾತನ
ನನಿಲಜನೊ ಫಲುಗುಣನೊ ಕೊಂದಾ
ತನೊ ಯುಧಿಷ್ಠಿರನೊ ನೃಪ ವಿಸ್ತರವಾಗಿ ಹೇಟೆಂದ ॥ ೦೩

ಅರಸ ಕೇಳುವುದೇಕಚಕ್ರದೊ
ಳೂರಸಿದನಲಾ ಭೀಮನಾತನ
ಹಿರಿಯನೀಕಿಮ್ಮೀರ ಬಾಂಧವನಾಹಿಡಿಂಬಕಗೆ ।
ಧರಣಿಪನ ಪರಿವಾರದುಬ್ಬಿನ
ಭರವ ಕಂಡನು ತನ್ನ ತಮ್ಮನ
ಹರಿಬವನು ಮರಳಚುವೆನೆಂದಿದಿರಾದನಮರಾರಿ ॥ ೦೪

ಕಾಮ್ಯಕವನಕೆ ಖರಲು ಕಿಮ್ಮೀರನು ದಾರಿಗೆ ಅಡ್ಡ ಕಟ್ಟಿದುದು.

ಇವರು ಮೂಱೀ ದಿನಕೆ ಕಾಮ್ಯಕ
ನವಮಹಾಕಾನನಕೆ ಬರೆ ದಾ
ನವನು ದಾರಿಯ ಕಟ್ಟಿ ನಿಂದನು ಕೋಪ ಭುಗಿಲಿಡಲು [1] ।
ಅವನ ಕಂಗಳ ಕೆಂಪಿನಲಿ ಮೇ
ಣಿವನ ದಾಡೆಯ ಮಿಂಚಿನಲಿ ಖಳ
ನವಯವವ ಕಂಡಳುಕಿ ನಿಂದರು ಮುಂಗುಡಿಯ ಭಟರು ॥ ೦೫

ಮುಂದೆ ಘೋರಾರಣ್ಯವಿದೆ ಸುರ
ಬಂದಿಕಾಱನ ಕಾಹಿನಲಿ ಕಾ
ಳಿಂದಿಯುದರದ ಮೆಬ್ಬಿನಂತಿದೆ ತೀವ್ರತರತಿಪ್ಪಿರ ।
ಇಂದಿನಿರುಳಲಿ ಬದುಕಿದರೆ ಸಾ

[1] ಕೈಯಮುಷ್ಟಿಯಲಿ, ಡ.

ಆಗ ಪಾಂಡವರ ಭಯ.

ವೆಂದಿಗೆಮಗಿಲ್ಲೆನುತ ಭಯದಲಿ
ನಿಂದುದಲ್ಲಿಯದಲ್ಲಿ ಪಾಂಡುಕುಮಾರಪರಿವಾರ[1] ॥ ೬೬

ದೈತ್ಯನ ಘೋರವಾದ ಧ್ವನಿ.

ಅಡಿಗಡಿಗೆ ಮಾನವರ[2] ಸೊಗಡವ
ಗಡಿಸುತಿದೆ ಬರಹೇಳಿ ನೆತ್ತರು
ಗುಡುಹಿಗ್ಗೈನೆಯುರೆಲ್ಲಿ ಕಾಕಿನಿಡಾಕಿನೀನಿಕರ ।
ತಡೆಯ ಬೇಡಾ ತಿನ್ನೆನುತ ಬೊ
ಬ್ಬಿಡುತ ಖಳ ತಳಿಬಿದನು ರಾಯನ
ಮಡದಿ ಹೊಕ್ಕಳು ಮಜ್ಜಿಯನರ್ಜುನಭೀಮಧರ್ಮಜರ ॥ ೬೭

ಎಲೆಲೆ ರಾಹ್ಷಸ ಭೀತಿ ಹೋ ಹೋ[3]
ನಿಲಲಿ ನೀವ್ ನಿಮಿಷಾರ್ಧಮಾತ್ರಕೆ[4]
ಗೆಲುವರೀ ನೃಪರೆನುತ ಮುನಿ ರಕ್ಷೋಘ್ನಸೂಕ್ತವನು ।
ಜಲವ್ರವಿಧದಲಿ ಜಪಿಸಿ ದಿಜ್ಮಂ
ಡಲದ ಬಂಧವ ರಚಿಸಿ ಜನಸಂ
ಕುಲವ ಸಂತೈಸಿದನು ಧೌಮ್ಯನು ಮುಂದೆ ಭೂಪತಿಯ ॥ ೬೮

ಪಾಂಡವಕಿರ್ಮೀರರ ಸಂವಾದ.

ಆರು ನೀವ್ ನಡುವಿರುಳು ಪಾಂಡುಕು
ಮಾರಕರು ನಾವಿತ್ತಲೇನು ವಿ
ಚಾರಿಸಲು ನೀವಾರು ನಾವಾ ಬಕಹಿಡಿಂಬಕರ ।
ವೈರಿಗಳಲಾ ಹೊಲ್ಯಹೇನು ವಿ
ಕಾರಿಗಳನೊಡೆಹೊಯ್ದು ಶೋಣಿತ
ವಾರಿಯೋಕುಳಿಯಾಡಬೇಹುದೆನುತ್ತ ಖಳ ಜಜ್ಜಿದ ॥ ೬೯

[1] ದಲ್ಲಿ ಪಾಂಡುಕುಮಾರಕರ ಸೇನೆ, ಡ. [2] ಮಾನಿಸರ, ಚ
[3] ಹೋಗದೆ, ಚ. [4] ನಿಲು ನಿಲೆಲವ್ವೋ ನಿಮಿಷಮಾತ್ರಕೆ, ಚ.

ಭೀಮನ ಪರಾಕ್ರಮವಾಕ್ಯ

ಮಿಡಿದನರ್ಜುನ ಧನುವನಾತನ
ತಡೆದು ನಿಂದನು ಭೀಮನಸುರನ
ಕೆಡೆಹಿ ಕಾವ್ಯೇಕವನದ ಭೂಮಿಯ ಭೂತಸಂತತಿಗೆ ।
ಬಡಿಸುವೆನು ನೀ ಸೈರಿಸೆನುತವೆ
ಗಡಿಸಿದನು ಕಲಿ ಭೀಮನಂತ್ಯವ
ಸಿಡಿಲ ಸೆಜ್ಜೆಬಿಟ್ಟಂತೆ ಬೊಬ್ಬಿಡುತಿರ್ದನಾಭೀಮ ॥ ೫೦

ದೈತ್ಯನ ಪರಾಕ್ರಮವಾಕ್ಯ.

ಎಂಬನೇನನು ಪವನಜನ ಕೈ
ಕೊಂಬದೈತ್ಯನೆ ಹೆಮ್ಮರನ ಹೆ
ಗ್ಗೊಂಬ ಮುಷ್ಟಿದನು ಸವಳ್ಳಿದನು ಶಾಖೋಪಶಾಖೆಗಳ ।
ತಿಂಬೆನಿವನನು ತಳ್ಳಿದು ತಮ್ಮ ಹಿ
ಡಿಂಬಕನ ಹಗೆ ಸಿಲುಕಿತೇ ನಾ
ನಂಬಿದುದು ಬಲುದೈವವೆನುತಿದಿರಾದನಮರಾರಿ ॥ ೫೧

ಹಣುಗುವಾಯುತದೃಷ್ಟಿಯೋರೆಯ
ಕುಣಿವವೊಸೆಯ ದೈತ್ಯನೊಲಿದ
ಟ್ಟಣಿಸಿ ಬರಲಾ ಭೀಮನಾಧರ್ಮಜಗೆ ಮಾರುತಗೆ ।
ಕ್ಷಣದಿ ನಮಿಸುತುದಾರವೀರಾ
ಗ್ರಣಿ ಕಿಡಿಯ ವದನದಲಿ ಸೂಸುತ
ಸೆಣಸಲನುವಾಗಿರ್ದ ಕೇಳ್ ನೃಪ ಸಮರಸಂಭ್ರಮವ ॥ ೫೨

ಯುದ್ಧ ಜರುಗಿದಕ್ರಮ.

ಹೊಯ್ದನವನುರವಣಿಸಿ ಕುಸಿದೊಡೆ [1]
ಹೊಯ್ದು ಹೊಕ್ಕನು ಭೀಮನೆಲವೋ
ಕೈದು ಮರನೇ ಸೆಳಗಿ ಸಡೆವುದೆ ಭದ್ರಮದದಂತಿ ।

---

[1] ಮುಷ್ಟಿದೊಳ,

ಕೈದುವಿಲ್ಲಾ ತರಿಸಿ ಕೊಡುವೆನು
ಕೈದುವನು ಬಿಲುಸರಳನೆನುತವೆ
ಹೊಯ್ದು ಹುರಿಯೋಹುರಿ ಯೆನುತ ಗಹಗಹಿಸಿದನು ಭೀಮ ॥೩೩

ಮುಱುಕಿಸುವ ಪವನಜನ ನೆತ್ತಿಯ
ನೆಱಗಿದನು ಬಟಿಕವನ ಹೊಯ್ಲಿನ
ಬಿಱುಸಿನೈಯ್ಯನೊ ಸಿಡಿಲ ಶಿಷ್ಯನೊ ವಜ್ರಕರಪತಿಯೊ ।
ಕಱಗಿದನು ಮಯಜಾದಿಮೆಗಳಿಂ
ದೆಱೆದ ಕಾಹಿನ ಕಱುವೆನಲು ಕು
ಕ್ಕುರಿಸಲಸುರನನಿಕ್ಕಿದನು ಚಾಪಳಚಪೇಟದಲಿ ॥ ೩೪

ಕಿರ್ಮಿರನ ಮರಣ.

ಡೆಂಡಣಿಸಿ ಸುರವೈರಿ ದೊಪ್ಪನೆ
ದಿಂಡು ಗೆಡೆದನು ನೀಲಶೈಲದ
ವಂಡಿಕಾಱಿನ ದೇಹಗರ್ತದ ರಕ್ತನಿರ್ಝರದ ।
ದೊಂಡೆಗರುಳಿನ ಬಾಯಿಜೋಲಿನ
ಕುಂಡಲಿತಕರಜಂಘೆಗಳ ಬಿಡು
ವಂಡೆಗೆವಱಿವ ಖಳನ ಕಂಡುದು ಭೂಸುರವ್ರಾತ ॥ ೩೫

ಅರಸ ಹೇಱುವುದೇನು ಹೋರಿದ
ನರೆಳುಗಳಿಗೆ ಕೊಂಡಾಡಿ ಬಱಿಕಿ
ಟ್ಟೊರಸಿ ಹುಡಿಯಲಿ ಹೂಳಿದನು ಕಿರ್ಮಿರದಾನವನ ।
ಬೆಱಸಿತಾ ವಿಪ್ರಾಶ್ರಮವಾಮುನಿ
ವರಿಯರೀಕಾಮಿನಿಯರೀ ನೃಪ
ವರನ ಪರಿಕರವಾಮಹಾಕಾಮ್ಯಕವನಾಂತರವೆ ॥ ೩೬

ತಳಿತು ಬಿಟ್ಟುದು ಕೂಡೆ ಹರಹಿನ
ಹಱುವೆದಲಿ ದ್ವಿಜನಿಕರ ರಚಿಸಿದ
ತಳಿರಗುಡಿಗಳ ಪರ್ಣಶಾಲೆಯ ಭದ್ರಭವನಿಕೆಯ ।

ಮೆಳೆಯ ಮಂಟಪ ಹೊದಱಿದುಱುಗಲ
ನೆಳಲ ಚಂಕಿಗೆ ವಿಪ್ರುಳವರಸಂ
ಕುಳದೊಳೋಲಗಶಾಲೆ ಮೆಱೆದುದು ಧರ್ಮನಂದನನ ॥ ೩೩

ಅಸಕಲಸಾಮ್ರಾಜ್ಯಲಕ್ಷ್ಮ್ಮವಿ
ಲಾಸದರಮನೆಗಳನು ಮೞಿಸಿದು
ದಾಶರಭಶಾರ್ದೂಲಸೇವಿತಘೋರಕಾಂತಾರ ।
ಆಸುಧಾಕಲಿತಾನ್ನವೇ ಫಲ
ರಾಸಿಯೂದುದು ಗೇಯರಸವಿ
ನ್ಯಾಸವೇ ಮಧುಮಕ್ಷಿಕವ್ರಜಜಂಬುಕಧ್ವನ ॥ ೩೪

ದಿನಪ ಕೃಪೆಮಾಡಿದನಲೇ ಕಾಂ
ಚನಮಯದ ಭಾಂಡವನು ಬೞಿಕಾ
ವನಜಮುಖಿ ಮಾಡಿದ ಸುಪಾಕದ ಪತ್ರಶಾನ್ನದಲಿ ।
ಮುನಿಜನಕೆ ಪರಿಜನಕೆ ಭೂಸುರ
ಜನಕೆ ತುಷ್ಟಿಯ ಮಾಡಿ ಭೂಪತಿ
ವನದೊಳಿರ್ದನು ವೀರನಾರಾಯಣನ ಕರುಣದಲಿ ॥ ೩೫

ಒಂದನೆಯ ಸಂಧಿ ಮುಗಿದುದು.

ಎರಡನೆಯ ಸಂಧಿ.

ಸೂಚನೆ.

ಸಕಲಯದುಬಲಸಹಿತ ಭಕ್ತ
ಪ್ರಕರಪಾಲಕನೊಲಿವು ವಿುಗೆ [1] ಕಾ
ಮ್ಯಕಮಹಾಕಾನನಕೆ ಬಿಜಯಂಗೈದನಸುರಾರಿ ।

[1] ನೊಲವಿನಲಿ, ಚ.

ಪಾಂಡವರ ವರ್ತಮಾನವನ್ನು ಕೇಳಿ ಕೃಷ್ಣನು ಇವರಿದ್ದೆಡೆಗೆ ಬಂದುದು.

ಅರಸ ಕೇಳ್ಳೈ ದ್ವಾರಕಾಪುರ
ವರಕೆ ಬಂದುದು ವಾರ್ತೆ ಪೀತಾಂ
ಬರನ ಬಹಳಾಶ್ಚರ್ಯದಲಿ ವರ್ತಿಸಿದುದಡಿಗಡಿಗೆ ।
ಧರೆಸಹಿತ ನಿಜವಸ್ತುವಾಹನ
ಪರಮವಿಭವವ ಬಿಸುಟು ಬಾರಿಯ
ಪರಿಭವದಿ ನಟ್ಟಡವಿಯೊಳಕ್ಕರು ಪಾಂಡುಸುತರೆಂದು ॥ ೧

ಕೇಳಿ ತಲೆದೂಗಿದನು ಮೊಗಿನ
ಮೇಲುವೆರಳಿನ ಹೊತ್ತುದುಗುಡದ
ತೂಬಿದುಬ್ಬಿಯ ನೆಟ್ಟನೋಟದ ನೆಗ್ಗಿನುತ್ಸವದ ।
ಹೂಬಿನೂಹೆಯ ಹಿಡಿದ ನೆನಹಿನ
ಹೇಂಬಲಜ್ಜಿದೆನೆ ಹುದಿದ ಭಾವದೆ
ಲಾಲಿಸಿದನಸುರಾರಿ ನೂತನವ್ರಜದ ಬಿನ್ನಪವ ॥ ೨

ಅಕಟ ಕಪಟದ್ಯೂತದಲಿ ನೃಪ
ಮುಕುರದುನ್ನತಿ ಮುಚ್ಚಿದುದೇ ಕೌ
ಳಿಕದಲೀ ಕೌರವರು ಕೊಂಡರೇ ಧರ್ಮಜನ ನೆಲನ ।
ಅಕುಟಿಲರಿಗೇಕಿನ್ನು ನಿರಾಬಾ
ಧಕರಿಗೇಕಿದು ಸಕಲಸುಜನ
ಪ್ರಕರವಂದ್ಯರಿಗೇಕನುತ ಬಿಸುಸುಯ್ದನಸುರಾರಿ[1] ॥ ೩

ಹಿರಿದು ಹರಿ ಚಿಂತಿಸಿದನೀವ್ಯತಿ
ಕರವನಳಿಯದ ಮುಗ್ಧರಿದನಾ
ರಱಿವರೈ ವಿಶ್ವಂಭರಾಭಾರೋಪರೋಧನಕೆ ।

[1] ನುತ್ತ ಸುರಾರಿ ಚಿಂತಿಸಿದ, ಚ.

ಧರಣಿಯಲಿ ಮೈಗೊಂಡು ದೈತ್ಯರ
ನೊರಸಿದನು ಬಲಿಕುಟಿದ ಪಾಂಡವ
ಕುರುನೃಪರ ಕದಡಿಸಿದನೆಲೆ ಭೂಪಾಲ ಕೇಳೆಂದ ॥ ೪

ಏನನೆಂಬೆನು ಜೀಯ ಕಡು ದು
ರ್ಮಾನದಲಿ ಹೊಯಿವಂಟು ಬಂದನು
ದಾನವಾಂತಕನೈದಿದುವು ದಂಡಿಗೆಗಳರಸಿಯರ ।
ಆನಿಖಿಳನೃಪವರ್ಗಯಾದವ
ಸೇನೆ ಕವಿದುದು ಪಾಂಡುಪುತ್ರರ
ಕಾನನವ ಕರುಣಾಳು ಹೊಕ್ಕನು ಹಲವು ಪಯಣದಲಿ ॥ ೫

ಆಗ ಅನೇಕರಾಜರ ಆಗಮನ.

ಕೇಳಿದಾಗಳೆ ಬಂದರಾಪಾಂ
ಚಾಲಕೈಕಯಧೃಷ್ಟಕೇತುವೆ
ರಾಳಕುಂತೀಭೋಜಸೃಂಜಯಸೋಮಕಾದಿಗಳು ।
ಮೇಲೆಮೇಲೀನಾಲ್ಕು ದಿಕ್ಕಿನ
ಮೂಲೆಯರಸುಗಳಿವರ ಕಂಡುಪ
ಲಾಲಿಸಲು ಬರುತಿರ್ದರಾಕಾಮ್ಯಕಮಹಾವನಕೆ ॥ ೬

ಪಾಂಡವರು ಸರ್ವರನ್ನು ಆದರಿಸಿದುದು.

ಇವರು ಬಂದರು ನಿಖಿಳಭೂಸುರ
ನಿವಹಸಹಿತದಿರಾಗಿ ವರಬಾಂ
ಧವರೊಳಭಿವಂದ್ಯರಿಗೆ ತತ್ಸಮರಿಗೆ ಕನಿಷ್ಠರಿಗೆ ।
ಅವರವರಿಗವರುಚಿತಸತ್ಕಾ
ರವನು ಮಾಡಿ ಮುರಾರಿಯಂಘ್ರಿಯ
ನವಿರಳಾಶ್ರುಗಳಿಂದನಾದಿದರರಸ ಕೇಳೆಂದ ॥ ೭

ಬೇಱೆ ಬೇಱೆ ಯ್ವರನು ತೆಗೆದು ಮು
ರಾರಿಯಪ್ಪಿದನಡಿಗಡಿಗೆ ದೃಗ್

ವಾರಿಗಳನೊರಸಿದನು ಪೀತಾಂಬರದ ಸೆಱಗಿನಲಿ ।

ದ್ರೌಪದಿಯು ಶ್ರೀಕೃಷ್ಣನ ಪಾದದ ಮೇಲೆ ಬಿದ್ದುದು.

ಸಾರೆಸಾರೆನಲುಘ್ಘಡಣಿಯ ವಿ
ಕಾರವಿನ್ನೇಕೆಸುತ ರಾಯನ
ನಾರಿ ಬಂದಳು ಕಪಿದು ಬಿದ್ದಳು ಹರಿಯ ಚರಣದಲಿ ॥ ೪

ಒಱಲಿದಳು ದೆಸೆಯೊಡನೊಱಲೆ ಮಿಗ
ಹೊಱಳಿದಳು ಹರಿಪಾದದಲಿ ಮೈ
ಮಱೆದಳಂಗನೆ ತನುವ ಮುಸುಕಿದ ಕೇಶಪಾಶದಲಿ ।
ಕಱುಗಿದಳು ಕಂದಿದಳು ಮೊಮ್ಮಲ
ಮಱುಗಿ ಕರುಗಂದಿದಳು ದೃಗ್ಜಲ
ದೊಱತೆಯುಕ್ಕಿತು ಮೇಲೆ ಮೇಲೆ ಮಹೀಶನಂಗನೆಗೆ ॥ ೫

ಶ್ರೀಕೃಷ್ಣಸ್ತುತಿ

ಹಿಂದೆ ಸೀರೆಯ ಸೆಳೆಯುತ್ತಿಕಟ ಗೋ
ವಿಂದ ರಕ್ಷಿಸನಾಥನಾಥ ಮು
ಕುಂದ ಕಾಯೈ ಕೃಷ್ಣ ರಕ್ಷಿಸು ಕರುಣಿಸಸುರಾರಿ ।
ಇಂದಿರಾಪತಿಯೇ ಯಶೋದಾ
ನಂದನನೆ ಕಾರುಣ್ಯನಿಧಿ ಸಲ
ಹೆಂದೊಡುಱುಹಿದ ದೈವ ನೀ ಮೈದೋಱುದೈ ತನಗೆ ॥ ೧೦

ಶ್ರುತಿಗಳಿಗೆ ಮೈದೋಱೆ ಸುಪಥ
ವ್ರತೆಯರಿಗೆ ಗೋಚರಿಸೆ ಯತಿಸಂ
ತತಿಗೆ ನಿರ್ಮಳಸಾರಸಮ್ಯಜ್ಞಾನಭಾವನೆಗೆ ।
ಮತಿಗೊಡದ ಮಹಿಮಾಂಬುನಿಧಿ ಯೆನ
ಗತಿಶಯವ ನೆಱೆ ಮಾಡಿ ಲಜ್ಜಾ
ಸ್ಥಿತಿಯನುಱುಹಿದ ದೈವ ನೀ ಮೈದೋಱುದೈ ತನಗೆ ॥ ೧೧

ಪತಿಗಳಿವರಂಜಿದರು ಧರ್ಮಾ
ಸ್ಥಿತಿಯನಱುದವರಳುಕಿದರು ತ
ತ್ಪಿತೃಪಿತಾಮಹಗುರುಗಳಡಗಿದರವನಿಯನು ಬಗಿದು ।
ಗತಿವಿಹೀನನೆಗೆ ಕೃಷ್ಣಾ ನೀನೇ
ಗತಿಯೆನುತ ಬಾಯ್ಬಿಡಲು ಲಜ್ಜಾ
ಸ್ಥಿತಿಯನುಱುಹಿದ ದೈವ ನೀ ಮೈದೋಱಿದೈ ತನಗೆ ॥ ೧೦

ಹೆಸರುಗೊಂಡರೆ ಹಿಂದೆ ಬಂದು
ಬ್ಬಸದ ಭಾರವ್ಯಸನವನು ಹಿಂ
ಗಿಸಿದೆ ಸೂಕ್ಷ್ಮಾತ್ಪದದ ದರುಶನವೀನನಿತ್ತಪುದೊ ॥
ಹೆಸರುಗೊಳಲಱಿಯದೆ ಮನೋವಾ
ಗ್ವಿಸರ ಮರಳಿದ ತರ್ಕನಿಗಮ
ಪ್ರಸರಣದ ಪರಬೊಮ್ಮ ನೀ ಮೈದೋಱಿದೈ ತನಗೆ ॥ ೧೧

ದಾನಯಜ್ಞತಪೋವ್ರತಾನು
ಷ್ಠಾನನಿಷ್ಠರು ಕಾಣರಷ್ಟವಿ
ಧಾನಯೋಗದ ಸಿದ್ಧರಱಿಯರು ನಿಮ್ಮ ಸುಚಿವುಗಳ ।
ಜ್ಞಾನಮುದ್ರಾತ್ರಿಪುಟಿಯನು ಸಂ
ಧಾನರಹಿತಜ್ಞಪ್ತಿರೂಪನು
ನೀನೆನಿಪ ಪರಬೊಮ್ಮ ನೀ ಮೈದೋಱಿದೈ ತನಗೆ । ೧೨

ಕಾಯಿದೈ ಪ್ರಹ್ಲಾದಮಾರ್ಕಂ
ಡೇಯವನಗಜವೆಂಬರೀಷನ
ಕಾಯಿದೈ ಕಾರುಣ್ಯದಲಿ ಪಾತಕಿಯಜಾಮಿಳನ ।
ಕಾಯಿದೈ ಗೋವಿಂದ ಯೆನೆ ಯೆ
ನ್ನಾಯತಿಕೆಯಭಿಮಾನವನು ನೀ
ಕಾಯಿದೈ ಯೆಂದೆನುತ ಪದದಲಿ ಹೊಱಳಿದಳು ತರಳ ॥ ೧೩

ದ್ರೌಪದಿಗೆ ಶ್ರೀಕೃಷ್ಣನ ಸಮಾಧಾನ

ಏಳು ತಾಯೆ ಮಹಾಸತಿಯೆ[1] ಪಾಂ
ಚಾಲಿ ನೊಂದೌ ತಂಗಿ ಯೆನುತ ಕೃ
ಪಾಳು ಕಂಬನಿದೊಡೆದು ಕೊಡಹಿದನವೆಯವದ ರಜವ ।
ಮೇಲು ಮುಚ್ಚಳದೆಱೆದ ತನುವಿನ
ಹೇಳಿಗೆಯ ಶೋಕಾಹಿ ಯಿಂತಿರೆ
ಲೋಲಲೋಚನೆಯಚಲು ವಿಗೆ ಹೆಕ್ಕಳಿಸತಡಿಗಡಿಗೆ ॥ ೧೬

ಆಸಕಲಪರಿವಾರವಾಧರ
ಣೀಶರಾಮುನಿನಿಕರವಾಜನ
ವಾಸತೀನಿಕುರುಂಬವಾಗಜಘೋಟಕವ್ರಾತ ।
ಆಸರೋಜಾನನೆಯು ಬಹಳ
ಕ್ಲೇಶವೆನು ಕಂಡಕ್ಷಿಜಲವಾ
ರಾಸಿಯಲಿ ತೇಂಕಾಡಿತೇನೆಂಬೆನು ಮಹಾದ್ಭುತವ ॥ ೧೭

ಮುಡಿಯು ಸಂವೆರಿಸಬಲೆ ಸೀರೆಯು
ನುಡು ನವಾಂಬರವಿದೆ ವಿರೋಧವ
ಬಿಡು ಸುಯೋಧನರಾಜಸಂತತಿಯುರಿದುದಿನ್ನೇನು ।
ಕೆಡಿಸಕೊಂಡರು ನಾಯ್ಗಳಿನ್ನದ
ನುಡಿದು ಫಲವೇನಕಟ ಕೈಕೊಂ
ಡಡಹಿಯನುಭವ ಸವೆಯೆ ಸೈರಿಪುದೆಂದನಸುರಾರಿ ॥ ೧೮

ತುಱಿಬಕಟ್ಟುವ ಪದನ ನಿಮ್ಮಡಿ
ಯಱಿಯದೆಂಬನೆ ಸಕಲಸಚರಾ
ಚರದ ಚೇತನರೂಪದೇಹಿನಿಕಾಯಕೃತಿಸಾಕ್ಷಿ ।
ತಱಿದು ದುಶ್ಶಾಸನನ ವಕ್ಷದೊ

[1] ಸರೋಜಮುಖಿ, ಚ.

ಳೂಜಿವೆ ರಕುತದಲದ್ದಿ ಕಟ್ಟುವ
ತುಱುಬನಱಿಯೂ ಕೃಷ್ಣ ಯೆಂದಳು ನಗುತ ಪಾಂಚಾಲಿ ॥ ೧೯

ಐಸಲೀ ದುರ್ಯೋಧನಾದಿಗ
ಳೀಸರವೆದಿರು ಭೀಮಪಾರ್ಥರ
ಬೀಸಱಿಕೆ ಬಲುಗೈಯೆ ಬಹಿರ್ಮುಖರ ಭಾರವಣೆ ।
ದೂಷಕನ ರಕ್ತದಲಿ ನಿನ್ನಯ
ಕೇಶವನು ಕಟ್ಟಿಸುವೆ ನಿನ್ನೀ
ಭಾಷೆ ಯೆನ್ನದು ತಾಯೆ ತವಕಿಸಬೇಡ ನೀನೆಂದ ॥ ೨೦

ವರತಪಸ್ವಿನಿ ನೀನು ನಿನ್ನನು
ಕೆರಳಿಚಿದರೇ ನಾಯ್ಗಳಕಟಾ
ಭರತಸಂತತಿ ಫಲಿತಕದಳಿಯ ತೆಱದಲಾಯಿತಲ ।
ಕುರುಡನಱಿಯದೆ ಹೋದಡೆಯು ಕಂ
ಗರುಡರಾದರೆ ಭೀಷ್ಮವಿದುರಾ
ದ್ಯರು ಮಹಾದೇವನುತ ಮುರರಿಪು ತೂಗಿದನು ಶಿರವ ॥ ೨೧

ಶಕುನಿ ಕಲಿಸಿದ ಕಪಟವೀ ಕೌ
ಳಿಕದ ಜೂಜಿದು ನಿಮ್ಮನೀ ಕಾ
ಮ್ಯಕಕೆ ತಂದುದು ದ್ಯೂತದಲಿ ನಾವಿಲ್ಲಲೀ ಯೆನಲು ।
ಸಕಲಜೀವರ ಕರ್ಮಸಾಕ್ಷಿ
ಪ್ರಕಟ [1] ಚೈತನ್ಯಸ್ವರೂಪಾ
ತ್ಮಕನು ನೀನೆಲ್ಲಿಲ್ಲ [2] ಹುಸಿ ಹುಸಿ ಯೆಂದಳಿಂದುಮುಖಿ ॥ ೨೨

ನಿನಗೆ ತೊಂದರೆಬಂದಾಗ ನಾನು ದ್ವಾರಕೆಯಲ್ಲಿರಲಿಲ್ಲವೆಂದು
ಶ್ರೀಕೃಷ್ಣನ ವಾಕ್ಯ.

ದೇವಿ ತಾನಿದನಱಿದೊಡಾವಸು [3]
ದೇವನಾಣೆ ಮಹಾದ್ಭುತವನದ [4]

---

1 ಪ್ರಕರ, ಚ. 2 ನೀನಲ್ಲಿಲ್ಲ, ಚ.
3 ನಿದನಱಿದೆನಾದೊಡೆ, ಡ. 4 ಭೂವಿಸಲು ವಸುದೇವನಾಣೆಯು, ಡ.

ನಾವನಳಿಯನು ಯದುನೃಪಾಲವಿಪತ್ಪರಂಪರೆಯು[1] ।
ನೀವು ಮಾಡಿದ ಯಜ್ಞ ಮುಖದ ಫ
ಲಾವಳಿಯಲಾವಿರಲು ಮುತ್ತಿತು
ದೇವರಿಪುಬಲನಿಕರವಸ್ಮದ್ದ್ವಾರಕಾಪುರಿಯ ॥ ೨೩

ಸಾಲ್ವಪುರಿಗೆ ಯುದ್ಧಕ್ಕೆ ಹೋದ ಸಂಗತಿಯನ್ನು ಹೇಳಿದುದು.

ಲಗ್ಗೆ ಗಳುಕುವುದಲ್ಲಲೇ ಬಲು
ದುರ್ಗವದು ದುರ್ಭೇದವದಱೊಳ
ಗಗ್ಗಳೆಯರಿದ್ದರು ಹಲಾಯುಧಮುಖ್ಯ ಪ್ರಧಾದಿಗಳು । ಮ
ಬಿಗ್ಗಿ ಕವಿವಕಠೋರದೈತ್ಯರ
ನುಗ್ಗು ನುಸಿಮಾಡಿದರು ಸೋಲದ[2]
ಸುಗ್ಗಿಯಾಯಿತು[3] ಮೊರ್ಚಲದೊಳಬುಜಾಕ್ಷ ಕೇಳೆಂದ ॥ ೨೪

ಅಳುಕಿ ಮುತ್ತಿಗೆದೆಗೆದು ಸಾಲ್ವನ
ದಳ ಮುಱಿದು ನಿಜಪುರಕೆ ಹಾಯ್ದುದು
ಗೆಲವು ಸಾತ್ಯಕಿ[1] ರಾಮಕಾಮಾದಿಗಳ ವಶವಾಯ್ತು ।
ಬೀಕ ನಿಮ್ಮಯ ರಾಜಸೂಯಕೆ
ಕಳಶವಿಟ್ಟ ಮದೀಯನಗರಿಯ
ಕಳಕಳನ ಸಂತೈಸ ನಡೆದೆವು ಸಾಲ್ವಪುರಿಗಾಗಿ ॥ ೨೫

ಏನನೆಂಬೆನು ಸಾಲ್ವಪುರದ ನ
ವೀನಮಾಯಾರಚನೆಯನು ತನ
ಗಾನಲಸದಳ ವೃತ್ತಿದಗಿರ್ವಾಣರಿಗೆ ಗೋಚರವೆ ।
ದಾನವನ ಮಾಯಾಪುರದ ಸಂ
ಸ್ಥಾನವರ್ಮವನಱಿದು ಶರಸಂ
ಧಾನದಲಿ ಸಂಪರಿಸಿದೆವು ಸಾಲ್ವಾದಿರಿಪುಭಟರ ॥ ೨೬

---

1 ಹಾವಿನೋದವನೇವೊಗಟ್ಟೆನು ಯದುಪರಂಪರೆಯು, ಡ.
2 ಹರಣದ, ಚ. 3 ನೆಱಿದುದು, ಚ. 4 ನಮ್ಮಯ, ಚ.

ಆಗ ನಿಮ್ಮಲ್ಲಿ ಜಾಜು ಸಂಭವಿಸಿತೆಂದು ಶ್ರೀಕೃಷ್ಣನ ವಚನ

ಅತ್ತಲಾಕೋಳಾಹಳದಲಿರ
ಲಿತ್ತಲಾನುದು ಜಾಜು ನಿಮ್ಮ ವಿ
ಪತ್ತು ಕಂಡುದು ತೆರಹ ತಪ್ಪಿಸಿ ನಮ್ಮ ಸುಚಿವುಗಳ ।
ಇತ್ತಲಾವಿರೆ ಮೇಣು ದ್ವಾರಕೆ
ಯತ್ತಲಿರೆ ನೀವಡವಿಯೊಳಕ್ಕರೆ
ಹೆತ್ತಳೋ ದೇವಕಿ ಮಗನನೆಂದನು ಮುರಧ್ವಂಸಿ ॥ ೂಟಿ

ದ್ರೌಪದಿಯು ಮಾಡಿದ ಶ್ರೀಕೃಷ್ಣಸ್ತುತಿ.

ದ್ವಾರಕೆಯಲಿರು ಮೆತ್ತುರದಲಿರು
ದೂರದಲ್ಲಿರು ಮೇಣು ನಿಮ್ಮೊಯ
ಸಾಖೆ ನಿಮ್ಮೊಡಿ ಇರಲಿ ನಿಮ್ಮಾಪಾಂಡುನಂದನರ ।
ಭಾವ ನಿನ್ನದು ಭಕ್ತಜನದಾ
ಧಾರ ನಿನ್ನದನಾಥರಾವತಿ
ಕಾರುಣಿಕ ನೀನೆಂದು ಬಿದ್ದಳು ಮತ್ತ ಚರಣದಲಿ ॥ ೂಟ

ಮಗನ ಕರೆದರೆ ಯಮನ ದೂತರ
ತಗುಳುವೆಂದು ಸಮೀಪವರ್ತಿಯೆ
ನಗಧರ ಶ್ರೀಕಾಂತ ಸಲಹೆನೆ ಮುನಿಕುಮೊರಕನ ।
ಮಗಳ ಚಿದೆಲಾ ಮೃತ್ಯುವಿನ ತಾ
ಳಿಗೆಯಿನಂದು ಸಮೀಪವರ್ತಿಯೆ
ಜಗನುಮೊಯ ನೀ ಜಾಣನಹೆ ಯೆಂದಳು ಸರೋಜಮುಖಿ ॥ ೂಗ

ನಿನ್ನ ಪ್ರತಿಜ್ಞೆಯನ್ನು ನಡೆಸಿ ಕೊಡುವೆನೆಂದು ಶ್ರೀಕೃಷ್ಣ ವಚನ.

ಆಯಿತೇಳೌ ತಂಗಿ ನೀ ಪಿರಿ
ದಾಯುಸವನನುಭವಿಸಲುದಿಸಿದೆ
ರಾಯನಾಡಿದ ಭಾಷೆ ಸಲಲಿ ವನಪ್ರವಾಸದಲಿ ।

ವಾಯುತನುಜನ ನುಡಿ ಯೆಲೇ ನಿ
ನ್ನಾಯತಿಕೆ ಹೊಣೆಯಾಪ್ರತಿಜ್ಞೆಗೆ
ತಾಯೆ ನಾ ಹೊಣೆ ಯೆಂದು ಕೊಟ್ಟನು ಸತಿಗೆ ನಂಬುಗೆಯ ॥ ೫೦

ವನದಲ್ಲಿ ಕೆಲವು ಕಾಲವನ್ನು ಕಳಿಯಬೇಕೆಂದು ಹೇಳುವಿಕೆ.

ಸಂತವಿಟ್ಟನು ಬೇಱೆ ಬೇಱೆ ಕೃ
ತಾಂತಸುತಭೀಮಾದಿಗಳ ಮುನಿ
ಸಂತತಿಯ ಮನ್ನಿಸಿದನವರವರುಚಿತವೃತ್ತಿಯಲಿ ।
ಎಂತು ಹದಿಮೂಱುದವೀನೃಪ
ಸಂತತಿಗೆ ಸೌಹಾರ್ದವಕಟ ವ
ನಾಂತರವಲೆಂವಸುರರಿಪು ನುಡಿದನು ಯುಧಿಷ್ಠಿರಗೆ ॥ ೫೧

ಪಾಂಡವರ ಹೆಂಡರುಮಕ್ಕಳನ್ನು ಅವರವರ ತೌರುಮನೆಗಳಿಗೆ ಕಳುಹಿಸಿದುದು.

ಕಳುಹುವುದು ಸೌಭದ್ರನನು [1] ನಿಜ
ಲಲನೆಯರನವರವರ ತಾಯ್ವನೆ
ಗಳಿಗೆ ಬೀಱ್ಕೊಡಿ ನಿಮ್ಮ ಪಂಚದೌಪದೀಸುತರ ।
ಹುಲುವೆ ದಾಟಲಿ ದ್ರುಪದನಂದನೆ
ಯಲಿಲ್ಲಿಖಿಗಿಂಧನವಲೇ ಕುರು
ಕುಲದ ಕರತನ ಬಣ್ಣಬೆ ಕಾದುವುದಿಲ್ಲ ಬಚ್ಚಿಕೆಂದ [2] ॥ ೫೨

ಎಂದು ಕಳುಹಿ ಸುಭದ್ರೆಯನು ನರ
ನಂದನನ ಬೀಱ್ಕೊಳಿಸಿದನು ನೃಪ
ನಂದನರ ಕಳುಹಿಸಿದನಾಪಾಂಚಾಲಪತಿಯೊಡನೆ ।
ಇಂದುವದನೆಯ ಸಂತವಿಟ್ಟು ಮು
ಕುಂದ ರಥವೀಜಿವನು ಕುಂತೀ
ನಂದನರು ಕಳುಹುತ್ತಬಂದರು ಕಮಲಲೋಚನನ ॥ ೫೩

---

[1] ಸೌಭದ್ರೆಯನು, ಚ [2] ಕಾವುರುಹುವುದು ಕೇಳೆಂದ, ಚ.

ಬೀಳುಕೊಂಡರು ಕೃಷ್ಣನನು ಪಾಂ
ಚಾಲಪತಿಯನು ಪಂಚಕೈಕೆಯ
ಚೋಳಕೇರಳಪಾಂಡ್ಯಕುಂತೀಭೋಜಸೃಂಜಯರ ।
ಬೀಳುಕೊಟ್ಟರು ಧೃಷ್ಟಕೇತುನೃ
ಪಾಲಮೊದಲಾದಖಿಳಧರಣೀ
ಪಾಲಕರು ದುಗುಡದಲಿ ಹೊಕ್ಕರು ತಮ್ಮ ನಗರಿಗಳ ॥ ೩೪

ಎರಡನೆಯ ಸಂಧಿ ಮುಗಿದುದು.

ಮೂರನೆಯ ಸಂಧಿ.

ಸೂಚನೆ.

ಯಜ್ಞಪುರುಷನ ನೇಮದಲಿ ಪಿತೃ
ಯಜ್ಞವನು ಯಮಸೊನು ರಚಿಸಲ
ಭಿಜ್ಞಮುನಿಗಳ ವರಿಸಿ ವಿಧಿವಿಹಿತದಲಿ ಪೂಜಿಸಿದ ॥

ಪಾಂಡವರ ಪ್ರಾರ್ಥನೆಯಂತೆ ಇನ್ನೊಂದು ದಿವಸ ಶ್ರೀಕೃಷ್ಣನು ಇರುವಿಕೆ.

ಕೇಳು ಜನಮೇಜಯ ಧರಿತ್ರೀ
ಪಾಲ ಕುಂತಿಯ ಪತಿಯು ತದ್ದಿನ
ಕಾಲ ಬಂದುದು ಕೃಷ್ಣ ನಿರುತಿರೆ ತದ್ವನಂಗಳಲಿ ।
ಹೇಟಿದರೆ ಶ್ರೀಕೃಷ್ಣನೆಂದನು
ಕೇಳು ಧರ್ಮಜ ಋಷಿಗಳೈವರ
ಕಾಲದಲಿ ಕರೆ ನಾಳತನಕಿಹೆನೆಂದನಸುರಾರಿ ॥ ೧

ಆಗ ಪಾಂಡುರಾಯನ ಶ್ರಾದ್ಧ ನಡೆದಕ್ರಮ.

ಮಾಡು ವಿಶ್ವೇದೇವರಿಬ್ಬರ
ರೂಢರೀದೂರ್ವಾಸಧೌಮ್ಯರ
ನೋಡಿ ಮಾಡೈ ಮುಖ್ಯಹ್ವಣದಲಿ ವ್ಯಾಸಕೌಶಿಕರ ।
ಮಾಡು ಪ್ರಪಿತಾಮಹರ ತಾವಿಗೆ
ಬೇಡಿಕೊಳ್ ಜೈಮಿನಿಯನತಿಥಿಗೆ
ಮಾಡು ನಮ್ಮನು ಶ್ರಾದ್ಧರಕ್ಷೆಗೆ ಭೂಪ ಕೇಳೆಂದ ॥ ೦

ಕೇಳಿ ಧರ್ಮಜ ಹ್ವಣವೆನಿತ್ತನು
ಮೇಲೆ ನಾಲ್ವರಿಗಲ್ಲಿ ಜೈಮಿನಿ
ಯಾಲಯವ ನಾವಳಿಯೆವೆಂದೆನೆ ಕೃಷ್ಣ ನಸುನಗುತ ।
ಲೋಲಮುನಿಯಾಶ್ರಮವು ಹಿಮಗಿರಿ
ಶೈಲದೊತ್ತಿನಲಿರುವುದಲ್ಲಿಗೆ
ನೀಲಗಿರಿಯೆಂಬೊಂದು ನಗವಿದೆ ದಿವ್ಯವನದಲ್ಲಿ ॥ ೧

ಅಲ್ಲಿಗಸಿಲಜ ಪೋಗಿ ಹ್ವಣವನು
ನಿಲ್ಲದಿತ್ತೊಡೆ ಬಟಿಕ ಶ್ರಾದ್ಧವ
ನೊಲ್ಲೆನೆನ್ನನು ದುಃಖ ಬಂದರೆ ಪರರ ಕಾರ್ಯಕ್ಕೆ ।
ಒಲ್ಲೆನೆನ್ನನು ಶವವ ಹೊಱಲಿಕೆ
ಒಲ್ಲೆನೆನ್ನನು ಬಂದ ದುರಿತಕೆ
ಒಲ್ಲೆನೆನ್ನನು ಪರರ ಸುಖಗಳ ರಾಯ ಕೇಳೆಂದ ॥ ೪

ಒಲ್ಲೆನೆನ್ನನು ತೀರ್ಥಯಾತ್ರೆಯ
ನೊಲ್ಲೆನೆನ್ನನು ದೇವಯಾತ್ರೆಯ
ನೊಲ್ಲೆನೆನ್ನನು ಪರರ ವಂದಿಸೆ ವೇದಸಂಹಿತೆಯ ।
ಒಲ್ಲೆನೆನ್ನನು ನಿತ್ಯಕರ್ಮವ
ನೊಲ್ಲೆನೆನ್ನನು ದುಃಖಬಂದರೆ
ಒಲ್ಲೆನೆನ್ನನು ಪುಣ್ಯಕಥನವ ರಾಯ ಕೇಳೆಂದ ॥ ೫

ಭೂಮಿಯಲಿ ಪರರನ್ನ ಪಾನವ
ಸೋಮೇಶ್ವರ ಧರಿಸಲಱಿಯನು
ಕಾಮುಕರು ತಾವೇನನಱಿಯುವರರಸ ಚಿತ್ತೈಸು ।
ಭೂಮಿಸುರನೃಪವೈಶ್ಯಶೂದ್ರ
ಸ್ತ್ರೀಮದಲಿ ನೋಡಲ್ಕೆ ವಿಪ್ರ
ಸ್ತ್ರೀಮವೇ ಸತ್ಪಾತ್ರವೆಂದನು ದಾನವಧ್ವಂಸಿ ॥ ೬

ಅದನು ಧರಿಸಲು ದ್ವಿಜನೆ ಯೋಗ್ಯನು
ಮುದದಿ ಲೋಕವನುಂಡು ರಕ್ಷಿಸೆ
ಸದೆ ಬಡಿವನುಂಡವರ ಪಾಪವನಿದು ನಿರರ್ಥಕವೆ ।
ನದಿಗೆ ವಿಪ್ರಂಗನಲಗಾಗಲು
ವಿಧಿಸಿಹುದೆ ಯನುಚಿತವ ವೈರಿಗೆ
ಮುದದಿ ಸಂದೊಡೆ ನಾಲ್ಕುವರ್ಣದೊಳಾರು ಹೇಳೆಂದ ॥ ೭

ಎಂದ ಮಾತನು ಕೇಳಿ ಧರ್ಮಜ
ನಂದು ಕಳುಹಿದನನಿಲಜನ ನಲ
ವಿಂದಲೈತಂದಂಘ್ರಿಗೆಱಗಿದನೊಲಿದು ಜೈಮಿನಿಗೆ ।
ತಂದೆ ನೀನಾರೆನಲು ಪವನಜ
ಬಂದಕಾರ್ಯವದೇನೆನಲು ತಾ
ಬಂದೆನಗ್ರಜ ಬೆಸಸೆ ನಿಮ್ಮಡಿಗೆಂದನಾಭೀಮ ॥ ೮

ಆವ ಕಾರಿಯ ವಾವ ಕಾರಣ
ವಾವುದಭಿಮತ ಬೆಸಸೆನಲು ಭೂ
ದೇವ ಬಿನ್ನಹ ತದ್ದಿವಸವಿದು ನಮ್ಮ ಜನಕಂಗೆ ।
ನೀವು ಕ್ಷಣವನು ಸ್ವೀಕರಿಸಿ ಯೆನೆ
ಭಾವದಲಿ ಕಡು ನೊಂದು ನಿನಗೀ
ತಾವನಾರಱುಹಿದರು ಯೆನೆ ಕೈಮುಗಿದನಾಭೀಮ ॥ ೯

ಭೀಮಸೇನನ ಮಾತಿಗೆ ಜೈಮಿನಿಯ ಚಿಂತೆ.

ಮುನಿಪನತಿಚಿಂತಿಸಿದನೆನಗೀ
ಘನತರದ ರಾಜಾನ್ನವಿದನಾ
ಹ್ವಣಿಸುವೆನೆ ರಾಜಪ್ರತಿಗ್ರಹ ಕ್ರೂರತರವಿದನು ।
ತನಗೆ ಹರಿವುದೆ ಗಸಣಿ ಬೇಡೆಂ
ದೆನುತ ದೂರಾಶ್ರಮದೊಳಿರುತಿರೆ
ಮುನಿಪ ಮುನಿದನು ಕೃಷ್ಣ ಗಾವಪರಾಧಿ ತಾನೆಂದು ॥ ೧೦

ಒಲ್ಲೆನೆಂದೊಡೆ ಘಾತಕಕೆ ಕಡೆ
ಯಿಲ್ಲ ಧರಿಸಿದೊಡಿದಾ ಲಘುತನ
ವಿಲ್ಲದಿಹುದೇ ದೇಹದಲಿ ಮಾಸಾಂತಸರಿಯಂತ ।
ಎಲ್ಲಜನಮಾಡಿದ ಸುಕೃತಫಲ
ವೆಲ್ಲವಾತಗೆ ಸೇರುವುದು ನಮ
ಗಿಲ್ಲ ಹೋ ಹೊ ಶಿವಾ ಯೆನುತ ತುಂಬಿದನು ಕಂಬನಿಯ ॥ ೧೧

ಆವಪರಿಯಪರಾಧವೋ ನಮ
ಗೀವಿಪತ್ತಡಸಿದುದು ಶಿವ ಶಿವ
ದೇವ ನೀನೇ ಬಲ್ಲೆ ಯೆನುತವೆ ತೂಗಿದನು ಶಿರವ ।
ನಾವು ನೆನೆದಿಹುದೊಂದು ಹರಿ ತಾ
ಭಾವಿಸಿದ ಮತ್ತೊಂದನೆನುತವೆ
ದೇವಋಷಿ ನುಡಿಸಿದನು ಪವನಜ ಹೇಳು ಹೇಪೆಂದ ॥ ೧೨

ಆಗ ಭೀಮಸೇನನು ಶ್ರೀಕೃಷ್ಣನ ಆಜ್ಞೆಯಂತೆ ತಮ್ಮನ್ನು
ಕರೆದುದು ಯೆಂದು ಹೇಳುವಿಕೆ.

ಎಂದ ನಮ್ಮಗ್ರಜನು ದೇವ ಮು
ಕುಂದನನು ಬೆಸಗೊಂಡ ಜೈಮಿನಿ
ಯೊಂದಿದಾಶ್ರಮವಾವುದೆನೆ ಕರುಣಿಸಿದನಿಂದೆಮಗೆ ।

ಎಂದೊಡಬ್ಬಿದ ದೇವನನು ನನೆ
ದಿಂದು ದಂದುಗ ಬಡಿಸಿ ಕೃಪೇಕ್ಷಣ
ದಿಂದ ನಿಜವನು ತೋರ್ಪ ಭರವಿದು ಯೆನುತ ಕೈಕೊಂಡ ॥ ೧೩

ಜೈಮಿನಿಯು ಧರ್ಮರಾಯನನ್ನು ಸ್ತುತಿಸುವಿಕೆ.

ಆವ ಭಾವದಲಿದ್ದೊಡವರನು
ಶ್ರೀವರನು ಕರುಣಿಸಿದ ಬಗೆಯಲಿ
ಭೂವರನ ಹೊರೆಗೈದಿ ಬಂದನು ಕೃಪೆಯಲಾನೃಪನ ।
ನೋವನಾರಣ್ಯದಲಿ ಕಳಿವ್ರದ
ಕಾಯವನು ಸಂತೈಸೆ ಬಂದನ
ದಾವಮುನಿ ಧರ್ಮಜಗೆ ಸರಿ ದೊರೆ ಯೆಂವನಾಮುನಿಪ ॥ ೧೪

ಶ್ರೌತಕರ್ಮಕೆ ಸಿಲುಕನಿವ ಶಾ
ಸ್ತ್ರೋಕ್ತಕರ್ಮಕೆ ಸಿಲುಕನತಿಸಂ
ಪ್ರೀತಿಯಹ ನವವಿಧದ ಬಕುತಿಗೆ ಸಿಲುಕ ಮುನಿವರರ ।
ಭ್ರಾಂತು ಬುಚಿಕಧ್ಯಾತ್ಮನಿಷ್ಠರಿ
ಗಿಂತು ತೋರ್ಪುವನಲ್ಲ ನಿಜವನ
ದೆಂತು ಧನ್ಯನೊ ಧರ್ಮನಂದನನೆಂದನಾಮುನಿಪ ॥ ೧೫

ನಾವು ವೃದ್ಧರು ಪಥವೆಮಗೆ ದು
ರ್ಭಾವ ಕಾಲಕೆ ಹೋಹ ಬೇಹುದಿ
ದಾವ ಪದನೆಂದೆನಲು ಪವನಜ ನಿಂದು ಕೈಮುಗಿದ ।
ನೀವು ಬಿಜಯಂಗೈಯ್ಯಿ ಹೆಗಲ
ಲ್ಲಾವವೇಗದಲೊಯ್ವೆನೆನೆ ನಗು
ತಾವಿಬುಧವರ ಬುಚಲಿದಾಗಳುಹುವೆನು ನಡೆಯೆಂದ ॥ ೧೬

ಹಿಂದೆ ನೋಡದೆ ನಡೆ ಯೆನಲು ಹರಿ
ನಂದನನು ಬೇಗದಲಿ ಬರುತಿರೆ
ಮುಂದೆ ಬಹುವೇಗದಲಿ ಬಂದನು ಮುನಿ ವನಾಂತರಕೆ ।

ಬಂದು ಕುಳಿತು ಧ್ಯಾನದಿಂದಿರೆ
ಬಂದು ಕಂಡನು ಭೀಮ ಪೊಡಮಡ
ಟ್ಟಿಂದನಾಶ್ರಮಕೈದಬೇಹುದೆನುತ್ತ ಬೆಱಗಾದ ॥ ೧೩

ಮುಂದೆ ನಡೆಯೈ ಭೀಮ ದೇವ ಮು
ಕುಂದನೆಲ್ಲಿಹ ಧೌಮ್ಯ ದರ್ಭೆಯ
ತಂದು ಯವತಿಲಶೃಂಗಿಶತಪತ್ರಾದಿತುಳಸಿಗಳ ।
ತಂದು ಶಿಷ್ಯರು ಸಾಧಿಸಿದರೆನೆ
ಬಂದನಾಧರ್ಮಜನು ಸ್ನಾನಗ
ಳಿಂದ ಕರ್ಮವ ವಿಧಿಸಿದನೆ ನೋಡೆಂದನಾಮುನಿಪ ॥ ೧೪

ಭೀಮನ ಆಗಮನ.

ತ್ವರಿತದಿಂದಲಿ ಮತ್ತೆ ಪವನಜ
ಮುರಹರನ ಬಚ್ಚಗೈದಿ ಸುಮ್ಮನೆ
ಯಿರದೆ ವಿಮಲಗುಣಾರಹ ವೇದವ್ಯಾಸಧೌಮ್ಯರಿಗೆ ।
ಪಿರಿದು ಚರಣದಲೆಱಗಿದನು ಶ್ರೀ
ವರನು ಕರುಣದಲಂದು ಬೇಗನೆ
ಶಿರವ ತಡವರಿಸುತ್ತ ಕೇಳಿದನಾಗಮದ ಪರಿಯ ॥ ೧೫

ಶ್ರೀಕೃಷ್ಣನು ಜೈಮಿನಿಯು ಅಭಿಪ್ರಾಯವನ್ನು ಕೇಳಿದುದು.

ಏನ ನಿನ್ನೊಡನೆಂದನೈ ನೀ
ನೇನ ಮುನಿಯೊಡನೆಂದೆ ಯಿದಱ ವಿ
ಧಾನವನು ಪವಮಾನಸುತ ವಿಸ್ತರಿಸಿ ಹೇಱಿನಲು ।
ಭಾನುಸನ್ನಿಭ ಹರುಷದಲಿ ಯಮ
ಸೂನು ಹರಿಧೌಮ್ಯಾದಿಮುಖ್ಯರಿ
ಗಾನು ಭೂಪತಿಯನುಜನೆಱಗಿದೆನಧಿಕಭಕ್ತಿಯಲಿ ॥ ೧೦

ಚಿತ್ತವಿಸು ಮುರವೈರಿ ಯಾಮುನಿ
ಪೋತ್ತಮನ ಪೊರೆಗೈದಿ ಪೊಡಮಡ

ಲೆತ್ತಿದನು ಮನ್ನಿಸಿದ ನೀನಾರೆಂದು ಬೆಸಗೊಂಡ ।
ಇತ್ತ ಬರವೇನಾರು ಹೇಳೈ
ವಿಸ್ತರವನೆನೆ ಪಿತನ ಶ್ರಾದ್ಧನಿ
ಮಿತ್ತಹ್ನಿಣವನು ಸ್ವೀಕರಿಸು ಯೆನೆ ಮುನಿಪ ಖತಿಗೊಂಡ ॥ ೧೧

ಅತ್ತನ್ಯೆ ಮುನಿ ಕಣ್ಣ್ನೀರುಗ
ಳೊತ್ತರವನೇನೆಂಬೆನ್ಯೆ ಯೆನ
ಲೊತ್ತರಿಸಿದುವು ಧರ್ಮಪುತ್ರಗೆ ನಯನವಾರಿಗಳು ।
ಚಿತ್ತ ಮುಱಿದುದು ಹರಿಯ ನೇತ್ರದೊ
ಳೊತ್ತರಿಸಿ ಜಲ ಸುಳಿಯೆ ಮನವನು
ತೆತ್ತು ಸಂದೇಹದಲಿ ವಿಸ್ಮಿತನಾದನಾಭೀಮ ॥ ೧೨

ಮುನಿಯು ಅಸಮಾಧಾನವನ್ನು ಹೇಳಿದುದು.

ಎಂದನೀಪವಮಾನಸುತನು ಮು
ಕುಂದನನ ಬೆಸನೇನು ಮುನಿ ಹ್ನಿಣ
ವೆಂದೆನಲು ಶೋಕಿಸಿದ ಕಾರಣವೇನು ಧರ್ಮಜಗೆ ।
ಬಂದ ವಿವರವ ವಿಸ್ತರಿಸೆ ನೇಱಿ
ಸಂದ ಕಣ್ಣೀರ್ಸುರಿದುದಿಮ್ಮಡಿ
ಬಂದಪುವಿದೇನು ನಯನಾಂಬುಗಳು ಹದನೆಂತೆಂದ । ೧೩

ಕೇಳು ಪವಮಾನಜ ಪರಾನ್ನದೆ
ಕೀಟಹುಧು ರಾಜಾನ್ನವಿದು ನಾ
ನಾಲಿಸಿದೆನೊಲಿದಾಯ್ತಲಾತನಗೀಪ್ರತಿಗ್ರಹವು ।
ಮೇಲೆ ದೂರಾಶ್ರಮದೊಳೀಶ್ವರ
ನೋಲಗವ ನೆನೆದಿರ್ದ ತನಗೀ
ಹೋಲದಿಹ ರಾಜಾನ್ನ ಬರಲಂತದಕೆ ಶೋಕಿಸಿದ ॥ ೧೪

ಮಾನನಿಧಿ ಯಮಸೂನು ಮನದ ವಿ
ತಾನವಳಿ ಕಣ್ಣೀರ ಸುಱಿದನು

ಹೀನವೀದೇಶಾಧಿಪತ್ಯವ ಸುಡಲಿ ಪಾತಕವ ।
ಈನೆಲನ ಹೊಂಬಿಲಾಪುದೇ ನ
ಮ್ಮಾನನಕೆ ಮುನಿಯೋಕರಿಸಿದನು
ಹೀನ ರಾಜಾಧೀಶತನವೆಂದೆನುತ ಬಿಸುಸುಯ್ದ ॥ ೬೫

ಅಸಪುಧಾನಕ್ಕೆ ಕಾರಣವನ್ನು ಹೇಳಿಂದು ಶ್ರೀಕೃಷ್ಣನನ್ನು
ಕುರಿತು ಪ್ರಾರ್ಥನೆ.

ಮುನಿಪತಿಯು ಯಮುಸುತನ ನಯನೋ
ಜ್ಜ್ವಲಿತ ಸಲಿಲವಿದೇಕೆ ತನ್ನಯ
ಮನದ ಸಂದೇಹವನು ಬಿಡಿಸೆಲೆ ದೇವ ಚಿತ್ತೈಸು ।
ಘನತರದ ಹದಿನಾಲ್ಕು ಲೋಕವು
ಕುಣಿಯುತಿಹುದೀನಿನ್ನ ರೋಮದ
ಲಿನಿತಿದೇನೈ ನೀನಿದನು ತಿಳುಹೆಂದನಾಭೀಮ ॥ ೬೬

ಆಗ ಕೃಷ್ಣನ ಧರ್ಮೋಪದೇಶ.

ಭೀಮ ಕೇಳೈ ಯುಗದ ಧರ್ಮದ
ಧಾಮ ನೀನೇ ದ್ವಾಪರಾಂತಶಿ
ರೋಮಣಿಯಲಾ ಧರ್ಮಪುತ್ರನು ಸಕಲಭೂಪರಿಗೆ ।
ಸೋಮವಂಶವನುದ್ಧರಿಸಿದನು
ಕಾಮಿತವ ಭೂಸುರರಿಗಿತ್ತು ಮ
ಹಾಮಹಿಮೆಯಲಿ ಪಾಲಿಸುವನೀಯಖಿಳಭೂತಳವ ॥ ೬೭

ಈಮಹೀಪತಿ ಯುಟ್ಟಿಯೆ ಮುಂದಣ
ಭೂಮಿಪಾಲರದಾವ ವಿಪ್ರರ
ಕಾಮಿಸುವರೈ ಹೇಮವಸ್ತ್ರಾಭರಣದಾನದಲಿ ।
ನಾಮವೊಂದನು ಭೂಸುರರ ನಿ
ರ್ಮಾಮಕಂಗೈಸುವರು ಕೇಳಲೆ
ಕಾಮುಕರು ಕಲಿಯುಗದ ರಾಯರು ಭೀಮ ಕೇಳೆಂದ ॥ ೬೮

ಬಂದ ವಿಪ್ರಂಗನ್ನ ಹೊನ್ನನು
ತಂದು ಕೊಡಲಿಕೆ ಕ್ಲೇಶಗೊಂಬರು
ಮುಂದೆ ಕಲಿಯುಗದಲ್ಲಿ ವಿಪ್ರರ ಬಗೆವರಿಲ್ಲಿಂದ ।
ಇಂದಿದಕೆ ಕ್ಲೇಶವನು ಮಾಡಿದೆ
ತಂದೆ ಕೇಳ್ಕೈ ಭೀಮ ಗೋದ್ವಿಜ
ವೃಂದಭೂಸುರಧರ್ಮವಿದಕಾರ್ ಹಿತವೆರದಱಿಂದ ॥ ೯

ಕಱುಗುವೆನು ಮುಂದಿವರಿಗಹುದೈ
ನೆಱೆ ನಿರೋಧವು ಕಲಿಯ ರಾಜ್ಯದೊ
ಳೂರಸಿ ಹೋಹುದು ಧರ್ಮ ದುರ್ಮಾರ್ಗಪ್ರವೃತ್ತಿಯಲಿ ।
ಧರಣಿಯಮರರು ಜಗದಲಧಮರು
ವರಪತಿವ್ರತೆಯರಿಗೆ ವೆಗ್ಗಳ
ಪಿರಿದು ಜಾರೆಯರಹರು ಗೋವಿಂದಧಿಕಶುನವೆಂದ ॥ ೧೦

ಮಾನಮೆನ್ನಣೆ ಹಿರಿದು ಕೇಳ್ಕೈ
ಹೀನರಹ ಘನನಾಲ್ಕು ವರ್ಣಕೆ
ಮಾನವೆಂಬುದು ಹೀನವಾಯ್ತಾವರ್ಣನಾಲ್ಕಱಿ ।
ಮಾನನೀಯರು ದ್ವಿಜರು ಶಕ್ರಸ
ಮಾನರಾ ಕ್ಷತ್ರಿಯರು ಮನುಜವಿ
ತಾನದಲಿ ವೈಶ್ಯಾದಿಜಾತಿಯೆ ಪೂಜ್ಯತರವೆಂದ ॥ ೧೧

ಭೀಮ ಕೇಳ್ಕೈ ವೇದಮಾರ್ಗ
ಸ್ತೋಮದಲಿ ಭೂಸುರರು ಘನಸಿ
ಸ್ತೋಮರಪ್ಪರು ಬಹಿಕಲಮಳ ಕ್ಷತ್ರಿಯೋತ್ತಮರು ।
ಆಮಹಾವೈಶ್ಯೋತ್ತಮರ ಬಹಿ
ಕಾಮಹಾಶೂದ್ರರು ವಿಧವಿಧದ
ಕಾಮದಿಂದಲೆ ಯುಧಮರಾದರು ಭೀಮ ಕೇಳಂದ ॥ ೧೨

ನಾವಮೊತ್ರದೆ ವಿಪ್ರ ಭುಜಬಲ
ತಾವಸನೆ ಕ್ಷತ್ರಿಯನು ಘನನಿ
ಸ್ಸೀಮಧೆನಿಕನೆ ವೈಶ್ಯ ಕೃಷಿಕನೇ ಶೂದ್ರನೆಂದೆನಿಸಿ ।
ಭೂಮಿಯಲಿ ವರ್ತಿಸುವರವರನು
ಲೋಮಲೋಮಸನಾಮಭೇದವ
ಭೂಮಿಪತಿಗಳು ತಿಳಿವುದಿಲ್ಲಿಲೆ ಭೀಮ ಕೇಳೆಂದ ॥ ೩೩

ಮಾನಿನಿಯರುಪಭೋಗಕಾಲವ
ಮಾನಿಸರು ಘನಕಾಮುಕರು ವರ
ಮಾನಿನಿಯ ಷಣ್ಮಾಸಗರ್ಭದಲಕ್ಕ ಹಾನಿಯೆಲೆ ।
ಹೀನಬುದ್ಧಿಯಲಾಪತಿವ್ರತೆ
ಮಾನಿನಿಯರೊಡನೆಳಸಿದವನೆನು
ಮಾನವಿಲ್ಲವೆ ಕೆಡುವನಿಹಪರಕಲ್ಲದವನೆಂದ ॥ ೩೪

ಈಸಕಲಸನ್ಮಾರ್ಗಕರ್ಮಾ
ಭ್ಯಾಸವೆಳ್ಳನಿತಿಲ್ಲ ಕೌರವ
ಕಾಶ್ಯಪೀಶ್ವರ ನೆನೆಸಿದನು ಷಣ್ಮಾಸಗರ್ಭದಲಿ ।
ಭಾಸುರದ್ಯುತಿಯೆನಿಪ ಸೂಂದ
ರ್ಯಾಸವೃಶಲಾವ್ಯಾಕೇಳಿಗೆ
ವಾಸವೆನಿಸುವ ಭಾನುಮತಿಯನದಾಯ್ತು ಗತಿಯೆಂದ ॥ ೩೫

ಮುನ್ನ ಲಕ್ಷಣೆ ನವೆಸುಲಕ್ಷಣೆ
ಕುನ್ನಿಲಕ್ಷಣಗಾದಳದಱಿಂ
ಮುನ್ನ ಕನ್ನೆಯ ರವಿಸಿದನು ಕುರುರಾಯನುಬ್ಬಿನಲಿ ।
ಮುನ್ನ ದ್ರುಪದಾತ್ಮಜೆಯ ಮೊನಕೆ
ಭಿನ್ನ ಗಂಡನು ಸಕಲದೋಷಕೆ
ಬನ್ನ ಬಡವನು ಯಿವನು ತಾ ಕಲಿಯಂಶ ಕೇಳೆಂದ ॥ ೩೬

ಈಯೆರಡುಕರ್ಮದಿ ಸುಯೋಧನ
ನಾಯುಷವದೈಶ್ವರ್ಯ ಕೆಡುವುದಿ
ದಾಯುವಾದರು ಮೊಡಲಾಗದು ಶಾಸ್ತ್ರನಿಶ್ಚಯಕೆ ।
ರಾಯ ನಿಮ್ಮಯ ಸತಿಯ ಭಾಗ್ಯದ
ದಾಯದಲಿ ನಿಮಗಕ್ಕು ಲೋಕ
ನ್ಯಾಯಸಂಪದ ವೊಲೆ ಕೈವಲ್ಯಾದಿಫಲವೆಂದ ॥ ೩೬

ಇನಿತು ಪೇಳ್ದು ಮುರಾರಿ ಧರ್ಮಜ
ಮುನಿಯ ಕರೆಯೌ ಕುತುಪಕಾಲದ
ನೆನೆಹ ನೋಡಲು ಕಾಲತಪ್ಪಿದೊಡದುವೆ ಫಲವಹುದೆ ।
ಎನಲು ಮುದದಿಂದೆದ್ದು ಕರಯುಗ
ವನು ಶಿರದೊಳಾಂತನು ಹರುಷಮಿಗೆ
ಮುನಿಯ ಹೊರೆಗೈದಿದನು ಮೆಯ್ಯಿಕ್ಕಿದನು ಭಕ್ತಿಯಲಿ ॥ ೩೮

ಧರ್ಮರಾಯನನ್ನು ಕುರಿತು ಜೈಮಿನಿಯ ಸ್ತುತಿ.

ಮುನಿಪನಾಶೀರ್ವದಿಸುತಾಯಮ
ತನಯ ಸರಿಯೇ ನಿನಗೆ ರಾಯರು
ಘನತರದ ಪುಣ್ಯಾತ್ಮ ನೀನುತ್ತಮಚರಿತನೆಲೆ ।
ದನುಜಮರ್ದನ ನಿಮ್ಮ ಸಹಚರ
ನೆನಿಸಿಕೊಂಡೊಡನಾಡಿದನು ಘನ
ಸನಕನಾರದಮುಖ್ಯರಿಂಗಿನಿತಿಲ್ಲ ಸುಖವೆಂದ ॥ ೩೯

ಈಸುದಿನ ನಾನಾತಪದಲಾ
ಯಾಸ ಬಟ್ಟೆವು ಕಾಣೆವಾತನ
ನೇಸು ಧನ್ಯನೊ ನೀನೆನುತ ಮುನಿಯೆದ್ದನಾಹ್ನಿಕಕೆ ।
ಭೂಸುರನು ಕೈವಿಡಿದು ಧರ್ಮನ
ಭೂಷಿಸುತ ನಡೆತಂದು ಕಂಡನು
ವಾಸುದೇವನೆನಂದು ಮೆಯ್ಯಿಕ್ಕಿದನು ಭಕ್ತಿಯಲಿ ॥ ೪೦

ಜೈಮಿನಿಯು ಶ್ರೀಕೃಷ್ಣನನ್ನು ನಮಸ್ಕರಿಸಿದುದು.

ಮುನಿಪ ಚೇತರಿಸಿದನು ಪುಳಕದ
ತನಿಯು ರೋಮದ ಗುಡಿಯು ಕಂಗಳ
ಕೊನೆಯಲಶ್ರ್ಯಾಂಬುವಿನ ಭಕ್ತಿಯ ಭಾವಶುದ್ಧಿಯಲಿ ।
ನೆನೆದು ಕೃಷ್ಣ ಮುರಾರಿ ಗೋಪೀ
ತನಯ ಅನತಬಂಧುಹಿತ ನೀ
ನೆನುತ ಪದಪದ್ಮದಲಿ ಮೆಯ್ಯಿಕ್ಕಿದನು ಶ್ರೀಹರಿಗೆ ॥ ೪೧

ತ್ರಾಹಿ ಮಧುಸೂದನ ಪರಾತ್ಮಕ
ತ್ರಾಹಿ ಮುನಿಹೃತ್ಕಮಲವಾಸನೆ
ತ್ರಾಹಿ ಮನ್ಮಥಪಿತನೆ ಮಾಯಾತೀತ ಜಗದಧಿಪ ।
ತ್ರಾಹಿ ಚೈತನ್ಯಾತ್ಮ ನಿರ್ಮಲ
ತ್ರಾಹಿ ನಾನಾನಾಮರೂಪನೆ
ತ್ರಾಹಿ ದೇವರ ದೇವ ಯೆನುತಲೆ ಮುದದಿ ಪೊಡಮಟ್ಟ ॥ ೪೨

ಆಗ ಜೈಮಿನಿಗೆ ಶ್ರೀಕೃಷ್ಣನ ಆದರ.

ತೆಗೆದು ಹಿಡಿದೆತ್ತಿದನು ಕರದಿಂ
ದಘಹರನು ಬಿಗಿದಪ್ಪಿದನು ಸೋ
ಜಿಗದೆ ಕರದಿಂದೊತ್ತಿ ಜೈಮಿನಿಮುನಿಯ ಕೊಂಡಾಡಿ ।
ನಗುತ ನುಡಿಸಿದನೇನಿವೇನೈ
ಸುಗಮಋಷಿ ನಿನಗೇಕೆ ನಿಟ್ಟಿತ
ನಿಗಮಮತಸುಗುಣಾಬ್ಧಿ ಯೆನುತಾಮುನಿಯನೀಕ್ಷಿಸಿದ ॥ ೪೩

ಪಿತೃಯಾಗವನ್ನಾರಂಭಿಸೆಂದು ಶ್ರೀಕೃಷ್ಣನ ಆಜ್ಞೆ.

ಇಂದೆಮಗೆ ಸಿದ್ಧಿಸಿತು ನಾನಾ
ದಂದುಗಂ ಬಡುವಾತಪಃಫಲ
ವೆಂದೆನುತ ಕೈಮುಗಿದು ದೂರ್ವಾಸನನು ಕೌಶಿಕನ ।

ವೆಂದ್ಯವೇದವ್ಯಾಸಧೌಮ್ಯರ
ನಂದು ಕುಶಲವ ಕೇಳಿ ಧರ್ಮಜ
ಗೆಂದ ನಡೆಸೈ ಕ್ರಿಯೆಯನೆಂದಾಜ್ಞಾಪಿಸಿದನೊಲಿದು ॥ ೪೪

ಯಾಗಕ್ರಮ.

ಎನಲು ಧರ್ಮಜ ಕರವೆ ಮುಗಿದನು
ದಿನಪತಿಯು ಮಧ್ಯಾಹ್ನಕೈದಲು
ಮುನಿಗಳ್ಕವರ ಕಾಲ ತೊಳೆದನು ಕೃಷ್ಣನಾಜ್ಞೆಯಲಿ ।
ಅನಿಲಸಂಭವಮುಖ್ಯನಾಲ್ವರು
ಜನಪತಿಯು ಹೇಟ್ರಿದುದ ಮಾಡುತ
ತನತನಗೆ ರಕ್ಷೋಘ್ನಸೂಕ್ತವನೊಲಿದು ಜಪಿಸಿದರು ॥ ೪೫

ಹರಯ ತಾ ಕೈಕೊಂಡು ಶ್ರಾದ್ಧದ
ನಿರುತರಕ್ಷೆಯ ಬಟ್ಟೆಯ ಪಾಂಡವ
ರರಸಿ ಬಡಿಸಿದಳಂದು ದಿವ್ಯರಸಾನ್ನಪಾನಗಳ ।
ಅರಸ ಕೇಳ್ಯ ಪಾಂಡುಪುತ್ರರು
ಹರಿಸಮರ್ಪಣೆಮಾಡಿ ಪಿತೃಗಳ
ಪೊರೆದರಗ್ನೌಕರಣಬ್ರಾಹ್ಮಣಭೋಜನಾಂತದಲಿ ॥ ೪೬

ಮಾಡಿದರು ಪಿಂಡಪ್ರದಾನವ
ರೂಢಿಗಧಿಪತಿ ಶ್ರಾದ್ಧವೇಕೆನೆ
ನೋಡಿ ಹೇಳೈ ಮುನಿಪ ನೀನೆನೆ ರಾಯ ಕೇಳೆಂದು ।

ಪಿತೃಯಾಗದಿಂದ ಪಿತೃಗಳಿಗೆ ಆಗುವ ತೃಪ್ತಿಕ್ರಮ.

ರೂಢಿಯಲಿ ಜನಿಸಿದರಿಗಹುದೈ
ಮಾಡಿದಗ್ನೌಕರಣ ನಾಕಾ
ರೂಢಗತರಿಂಗಹುದು ಭೂಸುರರುಂಡಫಲವೆಂದ ॥ ೪೭

ಜನಪರಕೆ ಬಿದ್ದವರಿಗಹುದೈ
ಅವಧರಿಸಲಾ ಪಿಂಡಶ್ರಾದ್ಧವು
ಯಿವನು ಮಾಱಲು ಬಾರದಾರಿಗೆ ಕೃಷ್ಣನಾಜ್ಞೆಯಿದು ।
ಭವನಿಪತಿ ಚಿತ್ತೈಸು ಪಾಂಡವ
ರವರು ಮಾಡಿದ ಶ್ರಾದ್ಧಕರ್ಮದ
ಸವನ ಸತ್ಕೃತವಾಯ್ತು ತಾ ನೆಱಿ ಮಂತ್ರತಂತ್ರದಲಿ ॥　೪೯

ಹರಿಯ ಕಾರುಣ್ಯಾವಲೋಕನ
ಸರಣಿಯಲಿ ಸಂಪೂರ್ಣವಾದುವು
ಧರಣಿಪತಿ ನಿಮ್ಮವರು ಮಾಡಿದ ಶ್ರಾದ್ಧಕರ್ಮಗಳು ।
ನಿರುತವಾದುವು ಅಷ್ಟಶುದ್ಧಿಯ
ಕೊಱತೆ ಯಿಲ್ಲದೆ ಪೂರ್ಣವಾದುವು
ಸರಸಿಜಾಕ್ಷನ ಚರಣ ದರುಶನ ಸಫಲವಾಯ್ತೆಂದ ॥　೪೯

ಜೈಮಿನಿಯು ಸಂತೋಷಪಟ್ಟು ಪಾಂಡವರನ್ನು ಆಶೀರ್ವದಿಸುವಿಕೆ.
ಬಱಿಕ ಪಾಂಡುವ ನೃಪನ ಶ್ರಾದ್ಧದೆ
ನಳಿನನಾಭಾದಿಗಳು ಭೋಜಕ
ರೊಲಿದು ಹರಸಿದರಂದು ಪಾಂಡುಕುಮಾರರೈವರನು ।
ಕಳುಹಿದರು ಮುನಿವರರ ತಮ್ಮಯ
ನಿಳಯಕಾಗಲು ಬಱಿಕ ಜೈಮಿನಿ
ಮುಱುಗಿದನು ಪರಿತುಷ್ಟನಾದನು ಹರಿಕೃಪಾಬ್ಧಿಯಲಿ ॥　೫೦

ನಮ್ಮ ಪಾಪದ ರಾಸಿ ಬೆಂದುದು
ಸುಮ್ಮನೀಪಾಂಡವರ ಗೃಹದಲಿ
ಯೊಮ್ಮೆ ಯನ್ನವನುಣಲಿಕೆನುತವೆ ನಡೆದನಾಶ್ರಮಕೆ ।
ಕರ್ಮಕರ್ತೃ ರ್ಪಣದಲನ್ನವ
ಬ್ರಹ್ಮರುದ್ರಾದಿಗಳು ಬಯಸುವ
ರೆಮ್ಮ ಪುಣ್ಯವ ನೋಡಿರೈ ಸಲೆ ಪಾಂಡುನಂದನರ ॥　೫೧

ತಮ್ಮ ತಾವಾಗಲಿಸಿ ಕೃಷ್ಣನೆ
ಯೆಮ್ಮ ಕಾಣಿಸಿಕೊಟ್ಟನೀಗಲು
ನಿಮ್ಮ ನಿಹಪರಕೀರ್ತಿಯಲಿ ರಕ್ಷಿಸಲಿ ಮುರವೈರಿ ।
ಬೊಮ್ಮನಿದರೀಪಾಂಡವರ ಸಲೆ
ಕರ್ಮಪಟವನು ಹರಿಯುತಲೆ ತಾ
ತಮ್ಮ ಪಾಂಡವನಿಳಯವನು ಬಿಡನೆನುತ ಬೀಳ್ಕೊಳಲು ॥ ೫೦

ಆಗ ದ್ರೌಪದಿಯು ಶ್ರೀಕೃಷ್ಣನ ಪಾದದ ಮೇಲೆ ಬಿದ್ದು
ಪ್ರಾರ್ಥಿಸಿದುದು.

ಬಿಟ್ಟಿಕ ಪಾಂಡವರಾಯರನು ಬೀ
ಳ್ಕೊಳಲು ದ್ರೌಪದಿಲಲನೆ ನೆಱೆ ಬಂ
ದಳುರಳಿದಳು ತಾ ಕೃಷ್ಣದೇವನ ಚರಣಕಮಲದಲಿ ।
ಎಲೆ ಮುರಾಂತಕ ಕೃಷ್ಣನಮ್ಮನು
ಹಲುವೆದಲಿ ನೀನಿರಿಸಿ ಹೋದರೆ
ಬಿಲಿವೇ ತಾವೆನಲು ನಗುತಸುರಾರಿ ಯಿಂತೆಂದ ॥ ೫೩

ಸಂತವಿಸಿ ಪಾಂಡವರನಾಮುನಿ
ಸಂತತಿಯ ಮನ್ನಿಸಿ ಮಹೀಭಾ
ರಾಂತರವ ನಿಶ್ಚಲಿಸಿ ಭಾರತಪಾರಿಷೇಷಿಕವ ।
ಅಂತರಾತ್ಮಕನೊಲವಿನಲಿ ಜಗ
ದಂತರಂಗಸ್ಥಾಯಿಲಕ್ಷ್ಮೀ
ಕಾಂತ ಬಿಜಯಂಗೈದು ಹೊಕ್ಕನು ದ್ವಾರಕಾಪುರವ ॥ ೫೪

ಮೂರನೆಯ ಸಂಧಿ ಮುಗಿದುದು.



*

ನಾಲ್ಕನೆಯ ಸಂಧಿ.

ಸೂಚನೆ.

ಬರುತ ಕಂಡನು ಕಣ್ವನಾಶ್ರಮ
ವರದ ಜಂಬೂಫಲವ ಮಾರುತಿ
ತರಲು ಯಮಿಸುತ ಹಲುಬೆ ಮುರರಿಪು ಶಾಖೆಗೇಳಿಸಿದ ॥

ಧರ್ಮರಾಯನು ಮುನಿಜನಗಳೊಡನೆ ವನದಲ್ಲಿ ಸಂಚರಿಸುವಿಕೆ.

ಕೇಳು ಜನಮೇಜಯ ಧರಿತ್ರೀ
ಪಾಲ ಯಮಿಸುತ ಮುನಿಜನಂಗಳ
ಮೇಳದಲಿ ಹೊಱವಂಟು ತನ್ನನುಜಾತರೊಡಗೂಡಿ ।
ತಾಳಿಗೆಯ ತಲ್ಲಣದ ಗಿರಿಗಳ
ಮೇಲೆ ಚರಿಸುತ ಬಂದು ವಿಪಿನ
ವ್ಯಾಳಗಜಶಾರ್ದೂಲಸಿಂಹಾದಿಗಳನೀಕ್ಷಿಸುತ ॥ ೧

ಬರಬರಲು ಮುಂದೊಂದು ವನದಲಿ
ಚರಿಪ ಪಕ್ಷಿಮೃಗಾಳಿ ತಳತಿಹ
ಬಿರಿಮುಗುಳನೀಕ್ಷಿಸುವ ಮಱಿದುಂಬಿಗಳ ಮೇಳವದ ।

ಆವನದ ವರ್ಣನೆ.

ಪರಿಪರಿಯ ಹಣುಹಂಪಲುಗಳು [1]
ಚ್ಚರಿಸೆ [2] ಕೊಡುತಿರೆ ಪಕ್ಷಿಮೃಗಕುಲ
ವೆರಸಿ ಮೆಱೆದುವು ವನದ ಸುತ್ತಲು ರಾಯ ಕೇಳೆಂದ ॥ ೨

ತುಂಬುರರಳಿ ಲವಂಗಪಾದರಿ
ನಿಂಬಚೂತಪಲಾಶಪನಸಸು

---

1 ಮುರಪೂ ಫಲಂಗಳ್, ಚ. ಛ. 2 ನಿರದೆ, ಚ. ಛ.

ಜಂಬುಗುಗ್ಗಳಶೋಕವಟಪ್ರನ್ನಾಗಚಂಪಕದ ।
ಕುಂಭಿನಿಯಲುಳ್ಳಖಿಳವೃಕ್ಷಕ
ದಂಬುದಲಿ ವನ ಮೆಱೆದುದದನೇ
ನೆಂಬೆನೈ ಪರಿವಾರ ತುಂಬಿದುದಾವನಾಂತರವ ॥ ೩

ತಿಳಿಗೊಳನ ಮೆಧ್ಯದಲಿ ಮೆಱೆದಿಹ
ನಳಿನನೃಪನಿದಿರಿನಲಿ ಮಧುಪಾ [1]
ವಳಿ [2] ರವದ ಗಾಯಕರ ಪಿಕಪಾತಕರ ನೃತ್ಯಗಳ ।
ಲಲಿತನವವಿಧ [3] ವಾದ್ಯಗಳ ಘಳು
ಘಳಿಪ ಕೊಳವರ್ಕ್ಕಿಗಳ ಲಕ್ಷ್ಮೀ
ಲಲನೆಯರಮನೆ ಯೆನಲು ಮೆಱೆದುದು ಕೊಳವು [4] ಕೇಳಂದ ॥ ೪

* ಬಂದು ಭೂವರ ಕೊಳನ ತೀರದಿ
ನಿಂದೊಡಾಹ್ನಿಕ ತಳಿರ ತಿರಿತಂ
ದಂದು ಮನೆಮಾಡಿದರು ಭೂಸುರತತಿಗೆ ಋಷಿಜನಕೆ !
ಅಂದದಲಿ ಪಾಳಯವ ಬಿಟ್ಟಾ
ನಂದದಲಿ ನಲಿದಾಡುತಿರೆ ರವಿ
ಯಂದಿಟಿದನಪರಾಂಬುಧಿಗೆ ಭೂಪಾಲ ಕೇಳಂದ ॥ ೫

ದಿನಪನಪರಾರ್ಣವವನೈದಲು
ವನಜ ಮುಗಿದುದು ಚಕ್ರವಾಕದ
ಮನಕೆ ಋತಿ ಕುಮುದಿನಿಗೆ ಮುದ ಯಾಮಿನಿಗೆ ಸಂತೋಷ ।

---

[1] ಮುತ್ತಿಗೆ, ಜ. [2] ಯಳಿ, ಖ. [3] ನವಿಲಿನ, ಚ. ಛ. [4] ಭೂಪ, ಚ.

* ಬಂದು ಭೂಪತಿ ಕೊಳನ ತೀರದಿ
ನಿಂದು ತಮಗಾಶ್ರಮದ ಠಾವಹು
ದೆಂದು ಭೀಮುಂಗಱುಹಲಾಕ್ಷಣವಾತನೈತಂದು ।
ತಂದು ತಳಿರನು ಪರ್ಣಶಾಲೆಗ
ಳಿಂದದಲಿ ರಚಿಸಿದನು ಭೂಸುರ
ವೃಂದ ಬಿಟ್ಟುದು ಧರ್ಮಪುತ್ರನ ಸುತ್ತುವಳಿಯದಲಿ ॥ ಚ. ಛ.

‡ ಕನಕಮಯರಥವೇಱಿ ರವಿ ಬರೆ
ವೆನಜವರಳಿತು ಕುಮುದ ಮುಚ್ಚಿದು
ದನುಪಮಾನಂದದಲಿ ಷಟ್ಪದ ಮೊಱೆಯಿತೊಲವಿಂದ ॥ ೬

ಗಂಗಾತೀರವಲ್ಲಿಯೇ ಪುಳುಮಾಸವನ್ನು ಕಳೆದುದು.

ಋಷಿಗಳೊಳು ಮೇಳವು ವರಾಸನ
ವೆಸೆವ ವೆನದೊಳಗತುಳಗಂಗಾ
ಪ್ರಸರದಲ್ಲಿಯು ಸ್ನಾನ ಭೋಜನ ಕಾಲದಲಿ ಪಾನ ।
ಮಿಸುಪಸುತಿಯು ವಿಲಾಸಗಳ ಸಂ
ತಸದೆ ಕೇಳುತ ಮಥಿಸುತೊನಲುತ
ವಸುಮತೀವರನಿರ್ದನಾಮಧುಮಾಸ ಕಳೆದನಕ [1] ॥ ೭

ಗ್ರೀಷ್ಮರುತುವು ಬರಲು ಜಂಬೂಫಲವನ್ನು ಕೊಡುವ
ಇಚ್ಛೆ ಹುಟ್ಟಿದುದು.

ಕಳಿದುದಾಮಧುಮಾಸ ಪಸರಿಸಿ
ಸುಟ್ಟಿದುದೊಯ್ಯನೆ ಗ್ರೀಷ್ಮ ಋತುವಿನ
ಸುಳಿವು ಜಂಬೂಫಲವ ಬ್ರಾಹ್ಮರಿಗೀವ ಬುದ್ಧಿಯಲಿ ।
ತೊಳಲಿದರು ಹೇರಡವಿಯಲಿ ಕಡು
ಬಳಲಿದರು ಪಾಂಡವರು ದೊರಕದೆ
ಬಟ್ಟಿಕಲ್ಲೆದುಪವಾಸವಾಯಿದು ದ್ರುಪದನಂದನಗೆ ॥ ೮

ಆ ವನದಲ್ಲಿ ಭೀಮಸೇನನು ಬೇಟೆಯಾಡಿದುದು.

ಇರುತಿರಲು ಕಲಿಭೀಮ ಮೃಗಯಾ
ತುರದಲೈದಿದನಾಕಿರಾತರು
ಕರೆಯೆ ಹೊಕ್ಕನು ಬಹಳ ನಿಮಿನಗಿರಿವ್ರಜದ ಗುಹೆಯ ।

---

‡ ಕನಕಮಯವರರಥವನಡರಿಯೆ
ದನುಜರನು ಸಂಹರಿಸೆ ಕಮಲಿನಿ
ಮನದೊಳುತ್ಸಾಹಿಸಲು ರವಿಯುದಯಾಚಲಕೆ ಬಂದ ॥ ಚ. ಛ

[1] ಧರಯಮಜನೆಸೆದನು ಭೂಪ ಕೇಳೆಂದ, ಚ. ಛ.

ವರಹ ಮೆರೆ ಸಾರಂಗ ಹೆಬ್ಬುಲಿ
ಕರಡಿ ವೃಕ ಶಾರ್ದೂಲ ಕೇಸರಿ
ಕರಿಕಳಭ ಮುಖಿಗೆಡೆದು ವ್ಯೋಡಿದುವಖಿಳದೆಸೆದೆಸೆಗೆ [1] ॥ ೯

ಹಾಸದಲಿ ಹಿಡಿದೆಳವನಾಯ್ಳ
ಬೀಸುವಲೆಗಳ ಕಾಲುಕಣ್ಣಿಯ
ಬೀಸುಬಡಿಗೆಯ ಧನುಸರಳ ಪಾರಿವದಕುಪ್ಪಸದ ।
ಕೇಶದಲಿ ತಳಿರುಗಳ ಕಟ್ಟಿ ವಿ
ಲಾಸದಲಿ ಹರಿತಹ ಕಿರಾತರು
ಘಾಸಿಯಾದರು ಪವನಜನ ಬೆಂಬಟಿಯಲೊಡೆದುಟ್ಟಿದು * ॥ ೧೦

ಕೊಡಹಿ ಬಿಸುಟನು ಕೇಸರಿಯ ಕಾ
ಲ್ವಿಡಿದು ಸೀಳಿದ ಕರಿಗಳನು ಬೊ
ಬ್ಬಿಡುತ ಹಿಡಿದಪ್ಪಳಿಸಿದನು ಶಾರ್ದೂಲಪೆರ್ಬುಲಿಯ ।
ಅಡಿಗೆಡಹಿ ಪೆರ್ಮಳ್ಳಿ ವರಾಹನ
ಮಡದಲುಱಿ ಘಟ್ಟಿಸಿ ವಿನೋದದಿ
ನಡೆಯೆ ಧರೆ ಕಂಪಿಸಿತು ಬಸವಳ್ತಿದುದು ಕಿರಾತಚಯ [2] ॥ ೧೧

ತಿರುಗಿ ಕಂಡನು ಭೀಮ ಢಗೆಯಿಂ
ಪರಿತರುವ ಶಬರರನು ಮುಯ್ಯ್ಗಲಿ
ಸುಱಿವ ಬೆಮರಿನ ಚರಣದೆಡಹುಗಳೂತ್ತುಗಲ್ಲುಗಳ ।
ಉಱುವನಾಸಿಕದುಸುರಲೋಡುವ
ಛರದಲೇಱುತ ಬೀಱುತವೆ
ಹರಿಯಿಸುತಲೊಕುವ ಮೃಗಾಳಿಯ ಕೊಂದು ಕೂಗುತ್ತ ॥ ೧೨

---

1 ಓಡಿದುವು ದೆಸೆದೆಸೆಗೈದಿ ತಲ್ಲಣಿಸಿ, ಚ. ಛ. ಝ.

2 ಭೀವ.ನ ಪದದ ಘಲ್ಲಣೆಗೆ, ಚ.

* ಕೇಶದಲಿ ತಳಿರುಗಳ ಬಿಗಿದು ವಿ
ಳಾಸದಲಿ ಹೊಱವಂಟು ಹೆಬ್ಬುಲಿ
ಬೀಸಿದರು ಬೇಂಟಿಗರು ಬಹಳಮೃಗಂಗಳನು ಕೆಡಹಿ ॥ ಚ. ಛ. ಝ.

ಬಂದನೀಪರಿ ಬೇಟೆಯಾಡುತ [1]
ನಿಂದು ಹತವಾದಖಿಳಮೃಗಗಳ
ನಂದು ವ್ಯಾಧಾನೀಕಕಿತ್ತನು ಸೇರವೆಯನಱಿದು [2] ।
ತಂದರನೆದಿರು ತಮತಮಗೆ ಹರಿ
ತಂದು ತರುಶಿಖಿಯಿಂದ ದಹಿಸಿದ
ರಂದು ಮಾಂಸವನೊಲಿದು ಭಕ್ಷಿಸಿದರು ವಿನೋದದಲಿ ॥ ೧೩

ಆಗ ಭೀಮಸೇನನಿಗೆ ದೂರದಲ್ಲಿ ಬಂದುವೃಕ್ಷವು ಕಣ್ಣಿಗೆ ಬೀಳುವಿಕೆ.

ಮುಂದೆ ಕಂಡನು ದೂರದಲ್ಲಿಹ
ನಂದನಕ್ಕೆಣೆಯೆನಿಪ ವನವನು [3]
ಸಂದಣಿಯು ಪೂಗೊಂಚಲಿನ ಪಲ್ಲವದ ಶಾಖೆಗಳ ।
ಗೊಂದಣದ ತರುಮಧ್ಯದಲ್ಲಿಹು
ದೊಂದುಜಂಬೂವೃಕ್ಷ ಮೆಱೆದಿರೆ
ನಿಂದು ನೋಡುತ ಭೀಮ ವಿಸ್ಮಯಗೊಳುತ ನಡೆತಂದ ॥ ೧೪

ಆಜಂಬೂವೃಕ್ಷದಲ್ಲಿ ಫಲವನ್ನು ಕೊಯಿದುದು.

ಇದು ವಿಚಿತ್ರದ ಫಲವು ತಾನೊಂ
ದಿದೆ ಮತಂಗಜ ಗಾತ್ರದಲಿ ನಾ
ನಿದನು ಕೊಂಡೊಯ್ವೆನು ಮಹೀಪಾಲನ ನಿರೀಕ್ಷಣೆಗೆ ।
ಗದೆಯ ಕಕ್ಷದೊಳೌಕಿ ಮಾರುತಿ
ಮುದದಿ ಕೃಷ್ಣನ ನೆನೆಯುತಾನಂ
ದದಲಿ ವೃಕ್ಷವನಡಱಿ ಕೊಯ್ದಿಱಿಹಿದನು ತವಕದಲಿ ॥ ೧೫

ಫಲವ ತಲೆಯಲಿ ಹೊತ್ತು ಬೇಗದಿ
ನಲವು ಮಿಗೆ ನಡೆತಂದು ಭೂಪನ

---

1 ಬಂದಿನದಿ ಬೇಂಟೆಯಲಿ ಚರಿಸುತ, ಛ. ಚ.

2 ಬೇಡರ ನಿಕರಕಿತ್ತನು ಪವನಾತ್ಮಜನು, ಛ. ಚ.

3 ನಂದನದ ಮೊಳೆತರುನಿಕಾಯದ, ಚ.

ಬಿಟ್ಟಿಯಲದ ತಂದಿಟ್ಟಿಹಿದರೆ ಯಮತನುಜ ಬೆಱಗಾಗಿ ।
ಕೆಲದಲಿದ್ದನುಜರಿಗೆ ಋಷಿಜನ
ಗಳಿಗೆ ನೋಡಿರಿ ಯೆನಲು ಶಿವ ಶಿವ
ಜಲಧಿಶಯನನೆ ' ಬಲ್ಲನೆಂದರು ಸಕಲಋಷಿವರರು ॥ ೧೬

ಎನಲು ಸಹದೇವನ ಯುಧಿಷ್ಠಿ ರ
ಜನಪ ಬೆಸಗೊಳ ಜೀಯ ಹರ ಹರ
ದನುಜರಿಪುಹರಕಮಲಭವರಿಗೆ ಕೊಡುವ ಶಾಪವನು ।
ಅನುವೆ ಕಾಣೆನು ಕಣ್ವಮುನಿ ತಾ
ಮುನಿದನಾದೊಡೆ ಶಪಿಸುವನದೆಂ
ದನು ತ್ರಿಕಾಲಜ್ಞಾನಿಮೋದ್ರೀಸುತನು ಭೂಪತಿಗೆ ॥ ೧೭

ವರುಷಕೊಂದೇ ಫಲವಹುದು ಅದ
ನಱಿದು ಯೋಗಧ್ಯಾನದಲಿ ಕ
ಣ್ಣಿ ಱಿಯೆ ಕರಪುಟವನರಳಿಚಲಾಗಲಾಫಲವು ।
ಕರಕೆ ಬರುವುದು ಮುನಿಪ ಕೊಂಬನು
ಹರುಷದಿಂದಾ ಫಲವ ಮೂರುತಿ
ತಱಿದು ಕೆಡಿಸಿದನೆನೆ ತ್ರಿಕಾಲಜ್ಞಾನಿ ಸಹದೇವ ॥ ೧೮

ಕಂದೆಱೆದು ಮುನಿ ನೋಡಿದರೆ ನವ
ಗಿಂದು ಹರವೆಹುದೆನುತ ಧರ್ಮಜ
ನೊಂದು ಫಲುಗುಣಭೀಮಸಹದೇವಾದಿಗಳ ಸಹಿತ ।
ಬಂದನತಿವೇಗದಲಿ ಪವನಜ
ನಂದು ವೈಷ್ಣವ ತೋಱಿಸಿದನೇ
ನೆಂದು ಬಿಣ್ಣಪೆ ಬಹಳಕೊನೆಗಳ ಗಗನಚುಂಬಿತವೆ ॥ ೧೯

ಕಂಡು ಯಮಸುತನತಿಶಯದಲಿದ
ಖಂಡಪರಶುವೆ ಬಲ್ಲ ನಾವ್ ಮುಂ

---

1 ನಳಿನನಾಭನೆ, ಚ.

ಕೊಂಡು ಮೊಡಿದ ದುಷ್ಕೃತದ ಫಲವೆನುತ ಬಿಸುಸುಯ್ದು ।
ಚಂಡವಿಕ್ರಮಭೀಮ ತಾ ಕೈ
ಕೊಂಡು ತಾನವಿವೇಕದಲಿಯು
ದ್ದಂಡತನದಿಂ ತಂದ ಹತ್ತಿ ಸಲರಿದು ನಮಗೆಂದ ॥ ೦೦

ಕೇಳಿರೈ ನೆರೆದಖಿಳಮುನಿಜನ
ಜಾಲವೀವನದೊಳಗೆ ಬೆಳೆದುದು
ಲೀಲೆಯಲಿ ವರಜಂಬುತರುವಿದಕೊಂದು ವೆರುಷದಲಿ ।
ತಾಳುವುದು ವೊಂದೊಂದುಫಲ ದಿಟ
ಜೋಲುತವೆ ಕಂದೆಱೆಯೆ ಕರದಲಿ
ಬೀಱಿಲಿದ ಕೈಕೊಂಡು ತೃಪ್ತಿಯನ್ಯೆದುವನು ಕಣ್ವ ॥ ೦೧

ಭೂಪಗೆಂದನು ಧೌಮ್ಯವುನಿಯಾ
ತಾಪಸಾಗ್ರ್ಯನ ಬಾಯ ತುತ್ತಿದ
ನೀಪವನಸುತ ತಂದನಱಿಯದೆ ಫಲವ ಕೇಳೆನ್ನು ।
ಭೂಪವರನೆ ವಿಷಪ್ರಯೋಗವು
ವ್ಯಾಪಿಸಿದೊಡೊಬ್ಬನನು ಸರ್ವ
ಸ್ವಾಪಹಾರವು ಬ್ರಹ್ಮವಸ್ತುಗಳಿದುವೆ ಬಲುಹೆಂದ ॥ ೦೨

ವಂದನೀಯರ ಮೇಲೆ ನಿಂದೆಯ
ನೆಂದಿಗೂ ತಾ ಕೇಳಲಾಗದು
ಹಿಂದೆ ಚೈದ್ಯನು ಗಾಱುಗೆಡೆದನು ಕೃಷ್ಣನಂಘ್ರಿಯಲಿ ।
ಅಂದದನು ನೀವ್ ಕೇಳಿದಾಫಲ
ದಿಂದ ರಾಜ್ಯವ ಬಿಸುಟರಣ್ಯದ
ದಂದುಗವನನುಭವಿಸಲೊದಗಿದುದೆಂಬನಾಮುನಿಪ ॥ ೦೩

ಎನಲು ಗದ್ಗದರವದ ರೋಮಾಂ
ಚನದಕಾಯದ ಸಲೆಬಿಡದಕಂ
ಬನಿಯ ಬಾಗಿದಸಿರದ ಗಲ್ಲದಕ್ಕೈಯ್ಯ ಭೂಪಾಲ ।

ಮುನಿಪಸಂಘ್ರಿಯಲಿಳಿಗಿ ಯಿಹಪ
ಣ್ಣಿನಲಿ ಹೊಟ್ಟೆಯ ಹೊಱೆಯಲಾರೆನು
ದನುಜಹರನೇ ಶಿವ ಶಿವಾ ಯ ನಮ ಶ್ಶಿವಾ ಯೆಂದ ॥ ೦೪

ಅಕಟ ಬ್ರಹ್ಮಸ್ವದಲಿ ಬಲುಪಾ
ತಕ ನಿಲಲಿ ಮುನಿ ಯೆದ್ದು ರೋಷದ
ಮುಖದಲೆನಗೈತಂದು ಶಾಪವ ಕೊಡುವನೆಂ ಮೋಣು ।
ಯುಕ್ತಿ ಯಿದಕಿನ್ನಾವುದೋ ದೇ
ವಕಿಯ ನಂದನ ಕೃಷ್ಣ ವತ್ಸಾಂ
ತಕ ಮಹಾದೇವೆನುತ ಕಡು ದುರ್ಮ್ಮಾನಮನನಾದ ॥ ೦೫

ತಿರುಗಿತರಗಿನ ಮಾಡದುರಿ ಹೊಡ
ಕರಿಸಿತುರಗಾಲಿಂಗನದ ಪದ
ವೆರಳಿತವೆರೇಶ್ವರನ ಹುಯ್ಯಲು ಮಖಸವೊಪ್ಪಿಯಲಿ ।
ಧರೆಯ ದೂಷಕಚಕ್ರಿದ್ಯನಿಂದವ
ಕರಿಸಿ ಧರ್ಮವಿವೇಕವಚಿಯಿತು
ಶರಣಜನವತ್ಸಲನೆ ಕರುಣಿಸಲೆಂದನಾಭೂಪ ॥ ೦೬

ಹೇಱಿಸೈ ಋಷಿಗಳಿರ ಹಣ್ಣನು
ವೇಲೆ ಪತ್ತುವುಪಾಯವೆನು ಮುನಿ
ಜಾಲದೊಳಗೆಂದೆನಲು ನುಡಿದನು ಧೌಮ್ಯ ನಸುನಗುತ ।
ಹೇಱಿಲರಿದಿದ ನಿಮ್ಮ ಪಾಲಿಪ
ಬಾಲಕೇಳೀಕೃಷ್ಣ ಬಲ್ಲನು
ಕಾಲವೆನು ನೂಕದೆ ಮಹಾತ್ಮನ ಭಜಿಸು ನೀನೆಂದ ॥ ೦೭

ಎನಲು ಭೂಪನು ಕೃಷ್ಣ ರಕ್ಷಿಸು
ದನುಜಹರ ಗೋವಿಂದ ರಕ್ಷಿಸು
ವನಜನಾಭ ಮುಕುಂದ ರಕ್ಷಿಸು ದಾನವಾಂತಕನೆ [1] ।

---

1 ರಾವಣಾಂತಕನೆ, ಚ,

ಮನಸಿಜನ ಪಿತ ರಾವು ರಕ್ಷಿಸು
ಘನಮಹಿಮ ಕೇಶವನೆ ರಕ್ಷಿಸು
ನೆನೆವ ಭಕ್ತರ ಭಾಗ್ಯನಿಧಿ ಮಾಧವನೆ ರಕ್ಷಿಪುದು ॥ ೦೪

ಎಂದು ಸ್ಮರಿಸುತ್ತಿರಲು ನೃಪ ಗೋ
ವಿಂದ ವಿಮಲಜ್ಞಾನದಲಿ ಸಾ
ನಂದದಿಂದವೆ ಸತ್ಯಭಾಮಾದೇವಿಯರ ಕೂಡೆ ।
ಇಂದುಮುಖಿ [1] ಪವಮಾನಜನ ದೆಸೆ
ಯಿಂದ ಪಾಂಡುಕುವರರಿಗೆ ಕೇ
ಡಿಂದು ಬಂದುದು ಋಷಿಯ ಶಾಪದಿ ಶಿವ ಶಿವಾ ಯೆಂದ ॥ ೦೫

ಎನುತ ಮಂಚವನಿಳಿದನಾಗಳ [2]
ದನುಜಹರ ಕಮಲಾಕ್ಷಿ ನೀ ನಿ
ಲ್ಲೆನುತಬಹುವೇಗದಲಿ ಬಂದನು ಕಾಮ್ಯಕಾಟವಿಗೆ [3] ।
* ನೆನೆದವರ ಹೃದಯದಲಿ ತಾನಿಹ
ನೆನಲು ಋಷಿಕುಲಭೂಸುರರು ಮೊದ
ಲಿನಲಿ ಬಂದಂಘ್ರಿಯಲಿಱಗೆ ಗರುಡಧ್ವಜವನಿಟ್ಟಿದ * ॥ ೦೬

---

1 ಮಂದವತಿ, ಚ. 2 ಸಿಂಹಾಸನವನಿಟ್ಟಿದಾ, ಟ. 3 ಧರ್ಮಜನ ಹೊರೆಗೆ, ಚ.

* ನೆನೆಯೆ ಲಕ್ಷ್ಮೀಕಾಂತ ಬಂದನು
ಘನದುರಿತದಾವಾಗ್ನಿ ಬಂದನು
ಯೆನುತ ಮೈಯ್ಯಿಕ್ಕಿದನು ಮುನಿಜನಸಹಿತಯುಮುನೂನು, ಚ. ॥
ತೆಗೆದು ತಕ್ಕೈಸಿದನು ಭೂಪನ
ವಿಗೆ ಹರ್ಷದಲಿ ಭೀಮಪಾರ್ಥರ
ನೆಗಹಿ ವೈದಡವಿದನು ಮಾದ್ರೀಸುತರ ದ್ರೌಪದಿಯ ।
ನಗುತ ಋಷಿಜನವಿಪ್ರಧೌಮ್ಯಾ
ದಿಗಳನುಚಿತೋಕ್ತಿಯಲಿ ಮನ್ನಿಸು
ತಗಧರನು ನೋಡಿದನು ಜಂಭೂಫಲದ ಘನತರುವ ॥

ಈ ಪದ್ಯವು ಚ. ಛ. ಪುಸ್ತಕದಲ್ಲಿ ಸಿಕ್ಕುತ್ತದೆ.

ಮಾನನಿಧಿಗಳು ಕಂಡರಾವರ
ವೈನತೇಯಧ್ವಜನನಾಹ್ವಣ
ಭೂನುತರು ಬಂದೆಱಗಿದರು ಪರಮಾತ್ಮನಂಘ್ರಿಯಲಿ ।
ಮಾನಿನಿಯರಧಿದೈವ ಬಂದು ಮು
ನೋನುರಾಗದ ರಹಿಯ ರಸದಲಿ
ತಾ ನೊಸಲ ಚಾಚಿದಳು ಹರಿಪದಕಮಲದಲಿ ಹೊಗಟೆ । ೩೧

ಮೈದಡವಿದನು ಕೃಷ್ಣ ತನ್ನಯ
ಮೈದುನರ ಕರತಳದಲೆತ್ತಿದ
ನೈದೆಯಾಗೆಂದೆನುತ ವರಪಾಂಚಾಲನಂದಿನಿಯ ।
ವೇದರಾಶಿಗಳಱಿಸಿ ಕಾಣೆವ
ದೈದಲಱಿಯೆವು ಪಾಂಡವರ ಪು
ಣ್ಯೋದಯವೆ ಬಣ್ಣಿಸುವರಾರೆಂದೆಱಗಿದನು ಧೌಮ್ಯ ॥ ೩೨

ಮೋಱೆ ಬಾಡಿದುದಧರಸಂಪುಟ
ವಾಱಿದುದು ಕಣ್ಣಾಲಿಯೆದ್ದುದು
ತಾಱಿತವೆಯವೆ ತಂಗಿ ತನುವಿನುಪದ್ರವೇನೆನಲು ।
ತೋಱುವೀಸಚರಾಚರಂಗಳ
ನೂಱುಕೊಂಡಿರುವಾಮಹಾತ್ಮಗೆ
ಬೇಱೆ ಬಿನ್ನಹವಾವುದೆಂದಳು ದ್ರೌಪದೀದೇವಿ ॥ ೩೩

ಅಸುರರಿಪು ಕೇಳ್ ಹಿಡಿದ ಹಣ್ಣನು
ಬೆಸುವ ಬಿನ್ನಣವೆಂತಿದನ ಸಂ
ಧಿಸಲರಿದೆ ಬಱಿಕೇನು ಸಾಂದೀಪಂಗೆ ತತ್ಸುತನ ।
ಒಸೆದು ತಂದಿತ್ತನುಪಮೆದ ಸಾ
ಹಸದಚಿಂತ್ಯನು ನೀನಲೇ ಪಾ
ಲಿಸಲು ಬೇಹುದು ನಮ್ಮನೆಂದೆಱಗಿದಳು ಪಾಂಚಾಲಿ ॥ ೩೪

ಏಱು ತಾಯೆ ಸರೋಜಮುಖಿ ಮುನಿ
ಯೂಟಿಗವೆ ಪರಿಹರಿಸಿ ನೀವ್ ಬಱಿ

ಕಾಳಲಾಡುವೆವೆಮ್ಮ ಯೆನುತೆತ್ತಿದನು ಮೊನಿನಿಯ ।
ಬಾಲತನವೊದಲಾಗಿ ಬಲ್ಲಿರಿ
ಖೇಳಮೇಳದಲೆಮ್ಮ ನೀವೇ
ಹೇಟಿರೇ ದೇವತ್ವವೆಮಗಿಲ್ಲೆಂದನಸುರಾರಿ ॥ ೫೫

ಕಾಳುಮೊಡಿದಿರಕಟಕಟ ನೀವ್
ಮೇಲಣಾಳಿಯದೆ ಋಷಿಯು ಶಾಪವ
ನಾಲಿಸದೆ ಮೂಢಾತ್ಮರಂದದಿ ನೆನೆದಿರನುಚಿತವ ।
ಏಚಿ ಫಲದಲಿ ತೊಟ್ಟು ವೊಣಗದ
ವೇಳೆಯಲ್ಲಿದಿರಿಟ್ಟು ಹಣ್ಣನು
ಹೇಟಿರೈ ನಿಮ್ಮನುಮತಂಗಳ ನಿಶ್ಚಯದಲೆಂದ ॥ ೫೬

ಎನಲು ತಂದಿರಿಸಿದರು ಫಲವನು
ವನಜನಾಭನನೀಕ್ಷಿಸುತ ತ [1]
ಮ್ಮನುನಯವೆ ಹೇಟಿದರು ಚಿತ್ತೈಸರಸ ಒಗೆಬಗೆಯ [2] ।
ಇನಶಶಿಗಳಂದ್ರಾನಲಾಂತಕ
ದನುಜವರುಣಸಪ್ತಿಾರಹರಸಖ
ಮನಸಿಜಾರಿ ನವೋ ಯೆನುತ ಬಿನ್ನೈಸಿದನು ಭೂಪ ॥ ೫೭

* ಸತ್ಯವೇ ತಾಯೆ ಮತ್ತೆ ಜ್ಞಾನವು
ನಿತ್ಯನಹ ಪಿತ ಧರ್ಮವನುಜನು
ಮಿತ್ರನೇ ಕಡು ದಯೆಯೆ ಶಾಂತಿಯೆ ಸತಿ ಕ್ಷಮೆಯೆ ಪುತ್ರ ।

ಶ್ಲೋಕ ॥ ಸತ್ಯಂ ಮಾತಾ ಪಿತಾ ಜ್ಞಾನಂ ಧರ್ಮೋಭ್ರಾತಾ ದಯಾ ಸಖಾ ।
ಶಾಂತಿಃ ಪತ್ನೀಕ್ಷಮಾ ಪುತ್ರಃ ಷಡೇತೇ ಮಮ ಬಾಂಧವಾಃ ॥

[1] ಹೇಟಿಕೆಯಲಾ, ಚ.ಟಿ.

[2] ಕ್ಷಣಕೆ ಕ್ಷಾಂತೀತನುಜ ಹೇಪೆನೆ ಕೈಗಳನು ಮುಗಿದು, ಚ.

* ಸತ್ಯವೇ ನಿಜಮಾತೆ ಜ್ಞಾನವೇ
ನಿತ್ಯನಹ ಪಿತ ಧರ್ಮವನುಜನು
ಮತ್ತೆ ದಯೆಯೇ ಮಿತ್ರ ಶಾಂತಿಯೆ ಪತ್ನಿ ಕ್ಷಮೆ ಸೂನು ।

ಅತ್ಯಧಿಕರಹವಾಱುಮಂದಿಯು
ವೃತ್ತಹೊಸಬಾಂಧವರು ತನಗೆನೆ
ಸತ್ಯವಾರುತಿ ಯೇಱಿಸಿದನಾಫಲವನೊವ್ಮೊಳನ ॥ ೩೯

* ಅಂತರಿಕ್ಷಕೆ ಫಲ ನೆಗೆದು ಮೊಳ
ದಂತರದಲಿರೆ ಭೂಭುಜನ ಸಮ
ನಂತರದಲಾಭೀಮ ನುಡಿದನು ಪರವಧೂಜನವ ।
ಕುಂತಿಯಂತೆಯು ಪರಧನವ ಮ
ನ್ನಿಂತೆ ಕಾಂಬೆನೆನಲ್ಕೆ ಫಲವೇಱಿದುದು ಯಿವ್ಮೊಳನ ॥ ೪೦

* ವಾಯುಸುತನ ಸುಭಾಷಿತದ ತಱು
ವಾಯಲರ್ಜುನನೆದ್ದು ವಿಪ್ರನಿ
ಕಾಯಕಾಮಂತ್ರಣವು ನವತೃಣ ಗೋಧನಾವಳಿಗೆ ।

ಸತ್ಯವನು ಸಹದೇವ ನುಡಿಯಲಿ
ಕೃತ್ಯಧಿಕಫಲ ವೀಲೆ ಚಿಗಿಯಲು
ಮುತ್ತು ಮುರಿಪು ದ್ರುಪದಸುತೆ ಬಾ ಯೆಂದನುಚಿತದಲಿ ॥ ಚ.

ಶ್ಲೋಕ॥ ಮಾತೃವತ್ಪರದಾರಾಂಶ್ಚ ಪರದ್ರವ್ಯಾಣಿ ಲೋಷ್ಟವತ್ ।
ಆತ್ಮವತ್ಸರ್ವಭೂತಾನಿ ಯಃ ಪಶ್ಯತಿ ಸ ಪಶ್ಯತಿ ॥

* ಪರಸತಿಯೆ ನಿಜಜನನಿ ಪರಧನ
ವಿರದೆ ಲೋಷ್ಟವು ಜೀವರಾಶಿಯು
ಪರರ ನೋವನು ತನ್ನ ನೋವೆಂದೆನುತ ಭಾವಿಸುವೆ ।
ನಿರುತವೆನೆ ಫಲಧರೆಯು ಬಿಟ್ಟ್ಯಾ
ತರದೊಳೊವ್ಮೊಳ ನೆಗೆಯೆ ಮುರಹರ
ಮರುತುಸುತ ಬಾರೆನಲು ನುಡಿದನು ಮುಗಿದು ಕರಯುಗವ ॥ ಚ.

ಶ್ಲೋಕ॥ ನಿಮಂತ್ರಣೋತ್ಸವಾ ವಿಪ್ರಾಃ ಗ್ರಾವೋನವತೃಣೋತ್ಸವಾಃ ।
ಭರ್ತ್ರಾಗಮೋತ್ಸವಾ ನಾರ್ಯಃ ಅಹಂ ಕೃಷ್ಣಾಗಮೋತ್ಸುಕಃ ॥

* ಪರಗೃಹದ ಭೋಜನಕೆ ವಿಪ್ರರು
ಪರಿಣಮಿಸುವೋಲ್ಪಕುಸಮೂಹವು
ಯಿರದೆ ನವತೃಣದಿಂದ ತುಷ್ಟಿಯನೈದುವಂದದಲಿ ।

* ಸ್ತ್ರೀಯರಿಗೆ ನಿಜಪತಿಯ ಬರವಿನ
ಪ್ರೀಯದೊರೆಕೊಂಬಂತೆ ಕಮಲದ
ಳಾಯತಾಂಬಕ ಸತತ ಕದನೋತ್ಸಾಹ ತನಗೆಂದ ॥ ೪೦

ಆವಿಮಲಫಲ ನೆಗೆಯಲಾ ಸಹ
ದೇವನಗ್ರಜ ನುಡಿದ ತಪ್ಪದೆ
ಜೀವವಿತ್ತೀಧರೆಯಲಭಿಮಾನವನು ರಕ್ಷಿಪುದು ।
ಭಾವಿಸುವೊಡಧ್ರುವವು ತಾನೀ
ಜೀವವೆಂಬುಜಮಿತ್ರಶಶಿತಾ
ರಾವಳಿಗಳುಳ್ಳನ್ನ ಬರವಭಿಮಾನವಿರುತಿಹುದು ॥ ೪೧

* ರಾಯ ಕೇಳ್ಯ ಫಲ ನೆಗೆದುದೊಪ್ಪೊಳ
ನಾಯತಕೆ ಸಹದೇವ ನುಡಿದನು

---

* ಪರಗೃಹದ ಭೋಜನಕೆ ವಿಪ್ರರು
ಪರಿಣಮಿಸುವೋಲ್ಪಕುಸಮೂಹವು
ಯಿರದೆ ನವತೃಣದಿಂದ ತುಷ್ಟಿಯನೈದುವಂದದಲಿ ।
ವರಸತಿಯು ನಿಜಪತಿಯ ಕಂಡಾ
ಹರುಷವಹುದೆನಗಾಹವದಲೆಲೆ
ಹರಿಯೆ ಯೆನೆ ಬೀಗದಲಿ ಫಲವಡಚಿತ್ತು ನಿಮಿಷದಲಿ ॥ ಚ. ಛ.

ಶ್ಲೋಕ॥ ಪ್ರಾಣಾನು ಪರಿತ್ಯಜ್ಯ ಮಾನಮೇವಾಭಿರಕ್ಷಯೇತ್ ।
ಅನಿತ್ಯಾಹ್ಯಧ್ರುವಾಃ ಪ್ರಾಣಾಃ ಮಾನಶ್ಚಾ ಚಂದ್ರತಾರಕಂ ॥

* ಜೀವಪೀಕ್ಷಣವಚಿದು ಹೋಗಲಿ
ಕಾವುದಭಿಮಾನವನು ನಿತ್ಯದ
ಭಾವವಾಗಿಹುದಾತ್ಮವಾಚಂದ್ರಾರ್ಕವಭಿಮಾನ ।
ನಾವು ಬೀಜೊಂದಚಿಯೆವಿದ್ದುದ
ದೇವರಂಗೆ ಬಿನ್ನವಿಸಿದೆವು ಯೆನ
ಲಾವ ಬೀಗದಲಡಚಿದುದೊ ಫಲವರಸ ಕೇಳೆಂದ ॥ ಚ. ಛ.

* ಶ್ಲೋಕ॥ ಅನಿತ್ಯಾನಿ ಶರೀರಾಣಿ ವಿಭವೋ ನೈವ ಶಾಶ್ವತಃ ।
ನಿತ್ಯಂ ಸನ್ನಿಹಿತೋ ಮೃತ್ಯುಃ ಕರ್ತವ್ಯೋ ಧರ್ಮಸಂಗ್ರಹಃ ॥

ಕಾಯವೆಂಬುದನಿತ್ಯ ಬೆಂಭಾಗದಲಿ ಬಲುಮೃತ್ಯು ।
ಬಾಯ ಬಿಡುತಿರೆ ನೆಚ್ಚಿ ಕೆಡುವುದ
ಪಾಯದಲಿ ಜಗವೆಲ್ಲಿಯೆ ಧರ್ಮಾ
ಪಾಯವಿಹಪರಪಥ್ಯವೆನೆ ಫಲವೇಳ್ದುದು ಪೊಳನ ॥ ೪೦

* ಅನುಜೆ ನಿನ್ನಿಷ್ಟವೆನು ನುಡಿ ನುಡಿ
ಯನುಸರಣೆ ಬೇಡೆಂದೆನಿಪ ಕೃ
ಷ್ಣನ ಘನವಚನವನು ಕೇಳ್ದು ಲಜ್ಜಾವಿನತಮುಖಿಯಾಗಿ ।
ತನಗೆ ಮಱೆಯೇ ತನುಜರಾಗಲಿ
ಜನಕಸುತರಾರಾದೊಡಾಗಲಿ
ವನಿತೆಯರ ಮನವೆ ಸಲೆ ಭ್ರಮಿಸುವುದೆಂದಳಿಂದುಮುಖಿ ॥ ೪೩

ಹತ್ತದಿರೆ ಫಲ ಬಿಟ್ಟಿಕಲಾದೇ
ವೋತ್ತಮನು ನಸುನಗುತ ನುಡಿದನು
ವೃತ್ತಗುಣಸಂಪನ್ನೆ ಪತಿಭಕ್ತಿಯರಿಗಧಿದೇವಿ ।
ಚಿತ್ತದಲಿ ನೀನಿರಿಸದೇನುವ
ವಿಸ್ತರಿಸು ಯೆಂದೆಂಬ ಕೃಷ್ಣನ
ಮೆತ್ತಕಾಶಿನಿ ನೋಡಿ ಕೈಮುಗಿದೆಂದಳೀನುಡಿಯ ॥ ೪೪

ಶ್ಲೋಕ॥ ಸುಂದರಂ ಪುರುಷಂ ದೃಷ್ಟ್ವಾ ಭ್ರಾತರಂ ಪಿತುಃ ಸುತಂ ।
ಯೋನಿರ್ದ್ರವತಿ ನಾರೀಣಾಂ ತಥ್ಯಂ ಚೈವಾಹ ಕೇಶವ ॥

* ಭಾವವಹ ಪುರುಷರನು ಕಾಣುತ
ಭಾವಿಸಲು ಪಿತಸುತರ ಅನುಜರ
ಭಾವಿನಲಿ ಯಾದರೆಯು ಯೋನಿರ್ದ್ರವಣ ಸತಿಯರಿಗೆ ।
ಭಾವದಲಿ ಮಜ್ಜಿವಿಡಿದು ನುಡಿಯಲಿ
ಕಾವಿಗಡ ಫಲವಡಱಿದಿರುತಿರೆ
ದೇವ ನುಡಿದನು ವಂಚಿಸದೆ ನಿಶ್ಚಯವ ಹೇಟೆಂದು ॥

ಶ್ಲೋಕ ॥ ಪಂಚ ವೇ ಪತಯಸ್ಸಂತಿ ಮಹ್ಯಂ ಪಪ್ಯೋಪ ರೋಚತೇ ।
ಪುರುಷಾಣಾಮಭಾವೇನ ಸರ್ವಾ ನಾರ್ಯಃ ಪತಿವ್ರತಾಃ ॥

ರೂಪಗುಣಪಕ್ರಮವಿರಾಜಿತ
ರೂಪರೈವರು ಪತಿಗಳಿರೆ ಚಿ
ತ್ಕೋಪಚಾರಕೆ ಮಾಣಿ ಬಯಸುವೆನಾಜ್ಞೆಯ ಪತಿಯ ।
ಶ್ರೀಪತಿಯೆ ಚಿತ್ತವಿಸು ಲಲನಾ
ರೂಪಮಾತ್ರಕೆ ಪುರುಷಲೋಭ
ವ್ಯಾಪಿಸದಿರೆ ಪತಿವ್ರತೆಯರಹರೆಂದಳಿಂದುಮುಖಿ ॥ ೪೫

ಆ ಜಂಬೂಫಲವನ್ನು ಸ್ಫಟಿಕಕ್ಕೆ ಸೇರಿಸಿದುದು.

ಪತಿಗಳೀಶ್ವರನಾಜ್ಞೆ ಯಿಂದವೆ
ಯತಿಶಯದಲೈವರು ಮನಸ್ಸಿನ
ಮತದೊಳಾರಾಗಿಹುದು ಮತ್ತೊಂದಿಲ್ಲ ಚಿತ್ತದಲಿ ।
ಪೃಥ್ವಿಯಲಿ ಪರಪುರುಷರನು ದು
ರ್ಮತಿಯಲೊಡಬಡುವವಳು ಸತಿಯೇ
ಸತತಕರುಣಾಕರನೆ ಯೆನೆ ಫಲ ಠಾವಿಗಡಹಿದುದು ॥ ೪೬

* ಕೌತುಕವ ಕೇಳರಸ ಪಣ ವೆ
ನೀತಳಕೆ ಪುಟ ನೆಗೆದು ಮೆನ್ನಿನ
ರೀತಿಯಲಿ ಹರಿದೊಯ್ಯನೆ ಹತ್ತಿದುದು ಬೇಗದಲಿ ।

---

* ಹರುಷ ಮಿಗೆ ಮುನಿಜನಕೆ ಧೌಮ್ಯನು
ಕರಗಳನು ನೆಗಹುತ ಯುಧಿಷ್ಠಿರ
ಧರಣಿಪತಿ ಕೇಳ್ ಕೃಷ್ಣನಿರೆ ನಿನಗಾವುದರಿದೆಂದು ।
ಇರದೆ ದೇವನ ಪಾದಪಂಕಜ
ಕೆಱಗಿದುದು ಮುನಿನಿಕರ ಋಧಜನ
ನಿರತಪರಮಾನಂದದಿಂದೈದಿದರು ತದ್ವನವ ॥
ಮುನಿಪಕಣ್ವನು ಕೆಂದೆಱೆದು ಪರ
ಮನನು ಜಾನಿಸಿ ಕರವನರಳಿಚ
ಲೊನೆದು ಬಿದ್ದುದು ಪಣ್ಣ ಕಂಡನು ನಗುತ ಮನದೊಳಗೆ ।
ವನಜನಾಭನ ತಂತ್ರವಿದು ಪಾ
ವನಸುರೂಪನ ನೋಟ್ಪೆನೆಂದಾ
ಮುನಿಪ ಫಲಸಹ ಋಂದು ಕಂಡನು ಕೃಷ್ಣ ಪಾಂಡವರ ॥ ಚ. ಭ.

ಕಣ್ವರುಷಿಯು ತಪಸ್ಸನಿಂದೇಳುವಿಕೆ.

ಆತಗಳ ಕೈವಿಡಿದು ಯದುಕುಲ
ಜಾತ ನಡೆತಂದೊಂದು ಕೊಳದೆಡೆ
ಗಾತನತ್ತಲು ಮುನಿಪ ಕಂದೆಱೆದೆದ್ದನೆಂದಿನೊಲು ॥ ೪೬

ಲೀಲೆಯಲಿ ಮುನಿ ಬಂದು ನೋಡುತೆ
ಮೇಲುಚಿತ್ತದಲಚ್ಚರಿಯಲುಪ
ಲಾಲಿಸುತ ತಲೆದೂಗಿ ಜಡೆಯೊಲಿದಾಡಲೆಡಬಲಕೆ ।
ಲಾಲಿಸದೆ ಕೊಯ್ದಿಹ್ಲಣದೊಳಿದ
ಕೀಲಿಸಿದೊಡವ ಶಿವನೊ ಬ್ರಹ್ಮನೊ
ನೀಲವೇಷಶ್ಯಾಮನೋ ಯಿವರೊಬ್ಬರಹರೆಂದ ॥ ೪೭

ಎಂದು ಮುನಿ ತರುತಳವ ನೋಡಿದ
ನಂದು ಚರಣಂಗಳನು ಹಲವಿರೆ
ಬಂದವುಹಿಪನದಾವನೋ ತಾನೀಕ್ಷಿಸುವೆನೆನುತ ।
ಬಂದ ಪಾರ್ಥಿವಜನದ ಹೆಜ್ಜೆಯ
ಹಿಂದುಗೊಂಡೈತಂದು ಕಂಡನು
ಮುಂದೆ ರಾಜಮರಾಳನಾದಾಂಬುಜಸರೋವರವ ॥ ೪೮

ಆಗ ಆ ಮುನಿಗೆ ಕೃಷ್ಣದರ್ಶನ.

ನಳನಳಿಸುತಿಹ ಕೊಳನ ತಡಿಯಲಿ
ತಳಿತ ತಣ್ಣೆಳಲೊಳಗೆ ಹಾಸಿದ
ತಳಿರ ಸಿಂಹಾಸನದ ಸುತ್ತಲು ಬಟಿಸಿ ಪಾಂಡವರ ।
ನಳಿನಲೋಚನೆ ಧೌಮ್ಯಮುನಿ
ಗಳು ವೊಲಿದು ಕೈವಾರಿಸಲು ಕೃಷ್ಣೆಗೆ
ಫಲವ ಕಾಣಿಕೆಯಿತ್ತು ಕಂಡನು ಮುನಿ ಮುರಾಂತಕನ ॥ ೪೯

ಇದಿರೊಳಿರಿಸಿದನಾ ಫಲವ ಸಂ
ಮದದಿ ಹೊಂಪ್ರುಟಿಯೋಗಿ ಮುನಿಯಾ
ಪದುಮನಾಭಂಗೆಱಗಿ ತೆಗಸಿರೆ ಫಲವೆನೆಂದೆನಲು ।

ಮದನಪಿತ ನಸುನಗುತ ಮುನಿಪನ
ಹದುಳ ಮಿಗೆ ಸೈವಿಟ್ಟು ನೆಗಹಿದ
ನುದಿತಫಲವನು ಹಂಚಹೇಚಿವನಾನೃಪನ ಸತಿಗೆ [1] ॥ ೫೧

ವರಮುನೀಶ್ವರನಿತ್ತ ಫಲವನು
ಹರಿಣಲೋಚನೆಗೀಯಲಾಪಂ
ಕರುಹಮುಖಿ ಬಾಗಿನವೆನಿತ್ತಳು ಮುನಿಪಗೊಲವಿನಲಿ ।
ಪರಮಹರುಷದಿ ಹತ್ತುಭಾಗಾಂ
ತರವ ಮಾಡಿ ಮುರಾರಿ ಕರೆ ಕರೆ
ಧರಣಿಸುರರನು ಸರ್ವರನು ಬರಹೇಳು ಬೇಗದಲಿ ॥ ೫೨

ಆ ಹಣ್ಣನ್ನು ವಿಪ್ರರಿಗೆ ಕೊಟ್ಟುದು.

ಬರಿಸಿ ಋಷಿಗಳನವರವರ ತರ
ವಱಿದು ಕೊಡಿಸಿದನುಚಿತುದನು ಭೂ
ಸುರಗೆ ಭೂಪರಿಗೆ ಮುನಿಸತಿಯರಿಗೆ ದ್ರೌಪದಿಗೆ ।
ಮುರಹರನು ತಾ ಕೊಂಡು ಕಣ್ವಂ
ಗಿರಿಸಿ ನಾನಾಜನಕೆ ಹಂಚಲು
ಹಿರಿದು ಭುಂಜಿಸಿತಾ ಫಲವನನೀಶ ಕೇಳೆಂದ ॥ ೫೩

ಪಾರಣೆಯ ನೆಱೆ ಮಾಡಿದರು ಮಿಗೆ ತ
ದ್ಧಾರುಣೀಪತಿ ಯಿಳ್ಪಿ ಸಂದುದು
ವಾರಿಜಾಂಬಕನಾನನವ ನೋಡುತ್ತ ಮುನಿ ಮರಳಿ ।
* ಸಾರವಹಸರಸೋಕ್ತಿಯಲಿ ಸಂ
ಪೂರಣಪ್ರೀತಿಯಲಿ ನುಡಿದನು
ದಾರಮುನಿಜನವಿಷ್ಣೀಸಲು ಕೈಮುಗಿದು ಭಕ್ತಿಯಲಿ ॥ ೫೪

---

[1] ನೃಪಾಲಂಗೆ ಚ.ಛ.

* ಸಾರವಹ ಸುಸ್ಥನಕೈದಿದ
ನಾರು ಭಾವಿಸಬಲ್ಲರಾಮುರ
ವೈರಿಯನುಭವಮಹಿಮೆಗಳ ಭೂಪಾಲ ಕೇಳೆಂದ ಚ. ಛ. ।

ಹಣ್ಣ ಹರಕೆಯದೆತ್ತ ನಿಮ್ಮುಗ
ರಣ್ಣ್ಯವನುಭವವೆತ್ತ ಭೀಮನ
ಕಣ್ಣಿಗೀಫಲ ತೋಱಲಾಗಲೆ ಹರಿಯು ಬರವೆತ್ತ ।
ಗಣ್ಯವೇ ಪರವೆನಗೆ ಕಂಡೆನ
ಗಮ್ಯಮೂರ್ತಿಯನಾಂ ಪುರಾಕೃತ
ಪುಣ್ಯತರು ಫಲಿಸಿತು ತನಗೆನುತಾಗ ಮುನಿ ನುಡಿದ ॥ ೪೫

ಮುನಿಪ ಕಳಹಿಸಿಕೊಂಡು ಹೋದನು
ವನಕೆ ಬಟೀಕಾಕೃಷ್ಣನು
ಮನದೊಳಗೆ ಭಾವಿಸುತ ಸಂತೋಷದಲಿ ಮುಟ್ಟುಗುತ್ತ ।
ತೊನಲುತಡಿತಡಿಗೊನೆದು ಹೊಗಱುತ
ದನುಜವೈರಿಯ ಲೀಲೆಯನುಪಮ
ವೆನುತ ನರ್ತ್ತಿಸುತಾಗ ತಾಪಸರೊಡನೆ ನುಡಿವುತ್ತ ॥ ೪೬

ದೇವ ನಿಮ್ಮಡಿಯಂಘ್ರಿಕಮಲವ
ನಾವ ನೆನೆವನವಂಗೆ ಜಗದಲಿ
ಸಂವುಹುಟ್ಟಲ್ಲಿಂಬುವೈ ವರವೇದಶಾಸ್ತ್ರಗಳು ।
ನಾವಲೇ ಕೃತಕೃತ್ಯರಿಂದೀ
ದೇವಸಾಕ್ಷಾತ್ಕರದರುಶನ
ವೀವುದಧಿಕವಮನೋರಥವನೆಂತೆಂದ ಸಹದೇವ ॥ ೪೭

ಹರಿಯೊಲಿದು ಮೈದಡವಿಯೈವರ
ತರುಣಿಯನು ಸಂತೈಸಿಯಾ ಮುನಿ
ವರರನುಪಚರಿಸಿದನು ಪರಮಪ್ರಿಯತರೋಕ್ತಿಯಲಿ [1] ।
ಉರುತರೋತ್ತರಸಿದ್ಧಿ ನಿಮಗಿ
ನ್ನಿರದೆ ಫಲಿಸುವುದೆಂದು ಸೂಚಿಸಿ
ಮರಳಿ ತನ್ನಯ ಪುರಕೆ ಗಮನೋದ್ಯೋಗಯುತನಾದ ॥ ೪೮

[1] ಋದ್ಧಿಯನೊರೆದು ಧರ್ಮಜಗೆ, ಚ.

ಸತ್ಯವನು ಸಲಹುವುದು ಕ್ಷಮೆಯನು
ಹೊತ್ತು ನಡೆಸುವುದಣ್ಣ ನಾಜ್ಞೆಯ
ಚಿತ್ತದಲಿ ನೀವ್ ದಾಂಟಿದಿಹುದಾರಣ್ಯವಾಸದಲಿ ।
ನಿತ್ಯನೇಮವ ನಡಿಸುತಾಮುನಿ
ಪ್ರೋತ್ತಮನ ಧೌಮ್ಯನ ನುಡಿಯ
ಸತ್ಕೃತ್ಯವನು ಪಾಲಿಸುತಲಿಹುದಿನ್ನೆಂದನಸುರಾರಿ ॥ ೪೯

ಭೀಮನೆಂಬವ ದುಡುಕನೀ ಸು
ತ್ರಾಮಸುತ ಸೈರಣೆಯಮನದವ
ನೀಮಹಾಸತಿ ಯಿಂದು ರಿಪುಗಳ ಕೊಲಿಸಲೆಳಸುವಳು ।
ಭೂಮಿಪತಿ ಕೇಳಿಂದು ವರಲ
ಕ್ಷ್ಮಾಮನೋಹರ ಧೌಮ್ಯಮುನಿಯೆನೆ
ಪ್ರೇಮದಲಿ ಮುನಿನಿಕರವನೆ ಹದುಳಿಸಿದನೊಲವಿನಲಿ ॥ ೫೦

ಎಂದು ಬುದ್ಧಿಯ ಹೇಳಿ ಧೌಮ್ಯನ
ವಂದನೆಯ ಕೈಕೊಳುತ ಪಾಂಡುವ
ನಂದನರು ನವಿಸಲ್ಕೆ ತೆಗೆದಪ್ಪಿದನು ಹರುಷದಲಿ ।
ಬಂದನಾಭೂಪತಿ ಮುದಾಂತಕ
ನಂದಣದ ಬಲದೆಸೆಯಲಸಿಲಜ
ಮುಂದೆ ವಾಮದಿ ಪಾರ್ಥಯಮಳರು ಚೌಪದೀದೇವಿ ॥ ೫೧

ಹಿಂದೆ ಬರುತಿರಲೆಡೆಯಲಲ್ಲಿಯೆ
ನಿಂದು ಕಳುಹಿದನುಚಿತದಿಂ ಸಲೆ
ಬಂಧುಗಳನೊಲವಿನಲಿ ಯದುಕುಲದಿನಪ ಕೇಳಂದ ।

ಶ್ರೀಕೃಷ್ಣನು ದ್ವಾರಕೆಗೆ ಹೋದುದು.

ಇಂದುವದನೆಯ ಹರಸಿ ಕಳುಹಿಸ
ಬಂದ ಬಂದರ ಹರಸಿ ಪ್ರೇಮದ
ಲಂದು ದ್ವಾರಾವತಿಯ ಹೊಕ್ಕನು ದಾನವಧ್ವಂಸಿ ॥ ೫೨

ಕಾಲದವಧಿಯ ಕಡೆಯ ಹಾಯ್ದುವ
ಲೀಲತಾಂಗಿಯ ರಮಣನೆಂದು ಸ
ಲೀಲೆಯಲಿ ಮುನಿನಿಕರ ಸಹಿತಾಶ್ರಮಕೆ ನಡೆತಂದು ।
ಮೇಲಣಾಗತದನುವ ಪಂಥದ
ಮೇಲೆ ಮಾಡಲು ಬೇಕೆನುತ ಮುನಿ
ಜಾಲದೊಡನೈತಂದು ನೆನೆದನು ವೀರನಾರಣನ ॥ ೬೩

ನಾಲ್ಕನೆಯ ಸಂಧಿ ಮುಗಿದುದು.

ಐದನೆಯ ಸಂಧಿ.

ಸೂಚನೆ.

ಭಜಿಸಿದನು ನರನಿಂದ್ರಕೀಲದೊ
ಳಜಸುರಾರ್ಚಿತಪಾದಪೀಠನ
ತ್ರಿಜಗದಧಿಪತಿಯನು ಮಹಾನಟರಾಯ ಧೂರ್ಜಟಿಯ ॥

ಕಾಮ್ಯಕವನದ ಸಂಚಾರ.

ಕೇಳು ಜನಮೇಜಯ ಧರಿತ್ರೀ
ಪಾಲ ಪಾಂಡುಕುಮಾರರಟವಿಯ
ಪಾಳಿಯಲಿ ಪರುಠವಿಸಿದರು ಪದಯುಗಪರಿಭ್ರಮವ ।
ಲೋಲಲೋಚನೆ ಸಹಿತ ತತ್ಕುಲ
ಶೈಲದಲಿ ತದ್ವಿಪಿನದಲಿ ತ
ತ್ಕೊಲವರ್ತಿಗಳ ತೀರದಲಿ ತೊಟಿಲಿದರು ಬೇಸಱದೆ ॥ ೧

ಫಲಮೃಗಾವಳಿ ಸವೆದುದಿನ್ನೀ
ಹುಲುವ ಸಾಕಿನ್ನೊಂದರಣ್ಯ
ಸ್ಥಳವ ನೋಡಲಿ ಕಟಕ ನಡೆಯಲಿ ವಿಪ್ರಸಂಕುಲದ ।

ದ್ವೈತವನ ಪ್ರವೇಶ.

ಸುಲಭವೀವನವೆಂದು ತವ್ಕೊಳು
ತಿಳಿದು ಪಾರ್ಥಯುಧಿಷ್ಠಿರರು ಮುನಿ
ಕುಲಸಹಿತ ನಲವಿನಲಿ ಹೊಕ್ಕರು ದ್ವೈತಕಾನನವ ॥ ೦

ಅರಸ ಕಳುಹಿದ ದೂತನಾಗಜ
ಪುರವ ಹೊಕ್ಕು ತದೀಯವಾರ್ತಾ
ಭರದ ವಿವರವನರಿದು ಬಂದನು ಕಂಡನವನಿಪನ ।
ಕುರುನೃಪಾಲನ ಬಲುಹನಾತನ
ಸಿರಿಯನಾತನ ಮದವನಾತನ
ಪರಿಯನಱಿಹಿದನಬುಜಮುಖಿಪವನಜರು ಕಳವಳಿಸೆ ॥ ೩

ದ್ರೌಪದೀಭೀಮಸೇನರ ಕೋಪ.

ಮೂದಲಿಸಿದಳು ದ್ರುಪದತನುಜೆ ವೃ
ಕೋದರನನರ್ಜುನನನವನಿಪ
ನಾದಿಯೂದ್ಯೈವರನು ಕೌರವನೃಪನ ಪರಿಕರಿಸಿ ।
ಆದೊಡೀಕುರುರಾಜವಂಶ
ಚ್ಛೇದಧೀರಕುಠಾರವೆನುತ ವೃ
ಕೋದರನು ತೂಗಿದನು ಗದೆಯನು ಗಾಢಕೋಪದಲಿ ॥ ೪

ಧರ್ಮರಾಯನ ಸಮಾಧಾನ.

ಏಕಿದೇಕೆ ವೃಥಾ ನಿಶಾಟ
ವ್ಯಾಕರಣಪಾಂಡಿತ್ಯವಿಕಟ ವಿ
ವೇಕವಿರಹಿತನೈ ವೃಕೋದರ ದ್ರುಪದಸುತೆಯಂತೆ ।
ಸಾಕು ಸಾಕೈ ತಮ್ಮ ಸತ್ಯವೆ
ಸಾಕು ಸಾಕು [1] ಮದೀಯಪುಣ್ಯ
ಶ್ಲೋಕತೆಯನುಚ್ಚುಹೆಂದು ಗಲ್ಲವ ಪಿಡಿದನಿಲಜನ ॥ ೫

[1] ನಮ್ಮಗೆ, ಚ.

ಅರಸಿ ನಿನ್ನಯ ಶೋಕವಹ್ನಿಯೊ
ಳುರಿವುದರಿನೃಪಜಲಧಿ ಕೇಳಂ
ಬುರುಹಲೋಚನೆ ನಿನ್ನ ಲೋಚನವಾರಿಪೂರದಲಿ ।
ಕುರುನೃಪಾಲನ ಸತಿಯ [1] ಶೋಕ
ಸ್ಫುರದನಲನುಜ್ವಲಿಸುವ್ರದು ರಿಪು
ವಿರಚಿಸಿದ ವಿಪರೀತಕಿದು ವಿಪರೀತವಹುದೆಂದ ॥ ೬

ಆಗ ವೇದವ್ಯಾಸರ ಆಗಮನ.

ಅಸಮಯದಲಿ ಬಂದನಗ್ಗದ
ಭೂಸುರನು ಶ್ರೀಕಂಠನೋ ಪ
ದ್ಮಾಸನನ ಪಲ್ಲಟವೊ ಕಮಲಾಂಬಕನ ಚುಂಬಕವೊ ।
ಭಾಸುರಕ್ರತುಶತದ ರೂಪವಿ
ಲಾಸವೊ ಶ್ರುತಿಕೋಟಿಗಳ ವಿ
ನ್ಯಾಸಭವನವೊ ದೇವ ವೇದವ್ಯಾಸಮುನಿರಾಯ ॥ ೭

ಧರ್ಮರಾಯನ ಆದರ

ಹಾ ಮಹಾದೇವಾ ಇದಾರು ಮ
ಹಾಮುನೀಶ್ವರರೆನುತ ಮುನಿಪ
ಸ್ತೋಮವೆದ್ದುದು ಧರ್ಮನಂದನನವರಿಗಿದಿರಾಗಿ ।
ಪ್ರೇಮಪುಳಕದ ನಯನಸಲಿಲದ
ರೋಮಹರುಷದ ಸತ್ಯಭಾವದ
ಭೂಮಿಪತಿ ಮೈಯ್ಯಿಕ್ಕಿದನು ಮುನಿವರನ ಚರಣದಲಿ ॥ ೮

ಮುನಿಗಳ ಆದರ

ವಿವಿಧಮುನಿಗಳ ಗೋತ್ರನಾಮ
ಪ್ರವರಸಹಿತಭಿವಾದನಾದ್ಯು
ತ್ಸವವ ಕೈಕೊಳುತನಿಬರನು ಮನ್ನಿಸಿದನುಚಿತದಲಿ ।

[1] ಆಱುವುದಿನ್ನರಿಯ, ಕ.

ಯುವತಿ ಪದಕೆಱಗಿದರೆ 'ಭೂಯಾ
ತ್ತವ ಮನೋರಥ' ವೆನುತ ನಸುನಗು
ತವನಿಪಾಲನ ಪರ್ಣಶಾಲೆಗೆ ಮುನಿಪನೈತಂದ ॥
ಇದೆ ಪವಿತ್ರಪಲಾಶಪತ್ರದ
ಲುದಕವಘ್ರ್ಯಾಚಮನಪಾದ್ಯ
ಕ್ಕಿದೆ ವಿಮಲದರ್ಭೋತ್ಪರಚಿತಾಸನವಿಳಾಸದಲಿ ।
ಇದುವೆ ಕಾಂಚನಪಾತ್ರಜಲ ವೆಂ
ದಿದು ವರಾಸನವೆಂದು ಕೈಕೊಂ
ಬುದು ಯಥಾಸಂಭವದೊಳಂದನು ಧರ್ಮಸುತ ನಗುತ [1] ॥ ೦೦

ವೇದವ್ಯಾಸಂಗು ಪಾಂಡವರಿಗು ಸಂವಾದ.

ಈಪಪಿತೋತ್ಪೀದಕವಲೇ ದೋ
ಷಾಪಹರ ದರ್ಭಾಸನದೊಳಿಂ
ದೀಪೃಥಿವಿಸರ್ವಾಧಿಪತ್ಯವು ಸೇರುವುದು ನಿನಗೆ ।
ಭೂಪ ಕೇಳ್ಮೈ ಜೇಸುನೊಣದ ಮ
ಧೂಪಚಯವವಕಿಲ್ಲಿಲೇ ಸ
ರ್ವಾಪಹಾರವು ಪರರಿಗಾಕೌರವನ ಸಿರಿಯೆಂದ ॥ ೦೧

ಒಡಲು ಬೀಱಲಿ ಮೇಣು ತಮ್ಮದಿ
ರಡವಿಯಲಿ ಹಾಯಿಕ್ಕಿ ಹೋಗಲಿ
ಮಡದಿ ಮುಳಿಯಲಿ ಜಱಿದು ಬೀಱಲಿ ಧರಣಿ ಕುರುಪತಿಗೆ ।
ಎಡೆಯಲುಚ್ಚಿದವರಾಗುಹೋಗಿನ
ಗೊಡವೆ ಯೆನಗಿಲ್ಲೆನ್ನ ಸತ್ಯದ
ನುಡಿಗೆ ಬಾಧೆಗಳಿಲ್ಲದಂತಿರೆ ಕರುಣಿಸುವುದೆಂದ ॥ ೦೨

ಬಾಧೆಯುಂಟೇ ನಿನ್ನ ಸತ್ಯಕೆ
ಸಾಧಿಸುವುದವಧಿಯನು ನಿನ್ನ ವಿ
ರೋಧಿಗಳಿಗೆ ನಿವಾಸವೆಹುದು ಕೃತಾಂತಲೋಕದಲಿ ।

---

1 ನಂದನನು, ಚ.

ಆಧಿಪತ್ಯಭ್ರಮಿತರಲಿ ರಾ
ಜ್ಯಾದಿಯಲಿ ಕಡಗೊಂಡಿರಖಿಳನಿ
ರೋಧವನು ಕಡನನು ಸವೃದ್ಧಿಕವಾಗಿ ಕೊಡಿ ಯೆಂದ ॥ ೧೩

ವ್ಯಾಸರನ್ನು ಕುರಿತು ಮುನಿಗಳ ನುಡಿ.

ಆವುದರಿದಿವರಿಗೆ ಭವತ್ಕರು
ಣಾವಲೋಕನವುಂಟು ಪುನರಪಿ
ದೇವಕೀನಂದನನಲೊದಗುವ ಮೇಲುನೋಟದಲಿ ।
ಈವಿಪತ್ತೇಸರದು ಪಾಂಡವ
ಜೀವನಕೆ ನೀವಿಬ್ಬರಿರಲೆಂ
ದಾವಿಭಾಂಡಕಶೌನಕಾದಿಗಳೆಂದರಾಮುನಿಗೆ ॥ ೧೪

ಕರೆಸಿ ದ್ರುಪದಾತ್ಮಜೆಯ ಕಂಬನಿ
ಯೊರತೆಯಾಱಿಲು ನುಡಿದನಾಕೆಯ
ಕರುಣದಲಿ ಕವಿಗೊಂಡಕಳಕಳವನು ವಿಭಾಡಿಸಿದ ।

ವ್ಯಾಸರು ಧರ್ಮರಾಜನಿಗೆ ಮಂತ್ರೋಪದೇಶ ಮಾಡಿದುದು.

ಧರಣಿಪತಿಗೀಕಾಂತಭವನದೊ
ಳೊರೆದನೀಶ್ವರಬೀಜ [1] ಮಂತ್ರಾ
ಕ್ಷರವನಂಗೋಪಾಂಗಮುದ್ರಾಶಕ್ತಿಗಳು ಸಹಿತ ॥ ೧೫

ಇದು ಮಹೀಶರ ಶೋಕಹರವಿಂ
ತಿದು ವಿರೋಧಿಪ್ರಬಲಭಂಜನ
ವಿದು ಸಕಲಪುರುಷಾರ್ಥಸಾಧನವೆಖಿಳದುರಿತಹರ ।
ಇದು ಮಹಾಧಿವ್ಯಾಧಿಹರವಿಂ
ತಿದನು ನೀಕೊಳ್ಳರ್ಜುನಂಗೊರೆ
ವುದು ರಹಸ್ಯದೊಳೆಂದು ಮುನಿ ಕರುಣಿಸಿದನರಸಂಗೆ ॥ ೧೬

1 ವಿಷಯ, ಚ.

ಅರ್ಜುನನು ಇಂದ್ರಕೀಲದಲ್ಲಿ ಈಶ್ವರನನ್ನು ಪ್ರಾರ್ಥಿಸಲೆಂದು ವ್ಯಾಸರ ಆಜ್ಞೆ.

ಪಾರ್ಥನೈದುವುದಿಂದ್ರಕೀಲದೊ
ಳರ್ಥಿಸಲಿ ಶಂಕರನನಖಿಳ
ಸ್ವಾರ್ಥಸಿದ್ಧಿಗೆ ಬೀಜವಿದು ಬೇಱೊಂದ ಬಯಸದಿರು ।
ವ್ಯರ್ಥರವದಿರು ನಿನ್ನ ಹಗೆಯ ಕ
ದರ್ಥನದೊಳಿನ್ನೇನು ಜಗಕೆ ಸ
ಮರ್ಥನೊಬ್ಬನೆ ಶಂಭು ಕೃಪೆ ಮಾಡುವನು ನಿನಗೆಂದ ॥ ೧೫

ವ್ಯಾಸರು ತಮ್ಮಾಶ್ರಮಕ್ಕೆ ಹೋಗುವಿಕೆ.

ಇಂದುಮುಖಿಯನು ಭೀಮನನು ಯಮ
ನಂದನನನರ್ಜುನನು ಯಮಳರ
ನಂದು ಕೊಂಡಾಡಿದನು ಮೈದಡವಿದನು ಹರುಷದಲಿ ।
ಬಂದು ಸಂದಣಿಸಿದ ಮುನಿದ್ವಿಜ
ವೃಂದವನು ಮನ್ನಿಸಿ ನಿಜಾಶ್ರಮ
ಮಂದಿರಕೆ ಮುದದಿಂದ ಬಿಜಯಂಗೈದನಾಮುನಿಪ ॥ ೧೬

ವ್ಯಾಸರ ಅಪ್ಪಣೆಯನ್ನು ಅರ್ಜುನನಿಗೆ ತಿಳಿಸುವಿಕೆ.

ಅರಸ ಕೇಳ್ಮೈ ಮುನಿಪನತ್ತಲು
ಸರಿದನಿತ್ತಲು ಪಾರ್ಥನನು ನೃಪ
ಕರೆದು ವೇದವ್ಯಾಸನಿತ್ತ ಪದೇಶವಿಸ್ತರವ ।
ಅಱುಹಿದನು ಕೈಲಾಸಸೀಮಾ
ವರುಷದಲ್ಲಿಹುದಿಂದ್ರಕೀಲದ
ಗಿರಿ ಮಹೇಶಕ್ಷೇತ್ರವಲ್ಲಿಗೆ ಹೋಗು ನೀನೆಂದ ॥ ೧೭

ಅಲ್ಲಿ ಭಜಿಸುವುದಮಳಗಿರಿಜಾ
ವಲ್ಲಭನ ನಾಮ್ನಾಯನಿಕರಕೆ [1]
ದುರ್ಲಭನನಧಿದೈವವನು ಬ್ರಹ್ಮೇಂದ್ರಭಾಸ್ಕರರ ।

---

[1] ಜಿಹ್ವೆಗೆ, ಚ.

ಬಲ್ಲೆನೆಂಬರ ಬಹಳಗರ್ವವ
ಹೆಲ್ಲಿಸುವ ಗಡ ತನ್ನ ಭಕ್ತರು
ಬಲ್ಲಿದರು ತನಗೆಂಬ ಬೋಳೆಯರರಸನಿಹನೆಂದ ॥ ೭೦

ಏಟು ನಿಷ್ಪ್ರತ್ಯೂಹದಲಿ ಶಶಿ
ಮೌಳಿ ತಲೆದೋಲಿ ತದೀಯಶ
ರಾಳಿಗಳು ಸಿದ್ಧಿಸಲಿ ಸೇರಲಿ ಶಿವನ ಕೃಪೆ ನಿನಗೆ ।
ಸೋಲದಿರು ಸುರಸತಿಯರಿಗೆ ಸ
ಮ್ಮೇಳವಾಗದಿರವರೊಡನೆ ಕೈ
ಮೇಳವಿಸುವ್ರದು ಕಾಮವೈರಿಯ ಚರಣಕಮಲದಲಿ ॥ ೭೧

ಮುಗ್ಗದಿರು ಮಾಯೆಯಲಿ ಮದದಲಿ
ನೆಗ್ಗದಿರು ರೋಷದ ವಿಡಂಬದ
ಲಗ್ಗಳೆಯತನದಿಂದಹಂಕೃತಿಳ್ಗರದಿ ಮೆಜ್ಜೆಯದಿರು ।
ಹಿಗ್ಗಿಸದಿರಾತ್ಮನನು ಲೋಭದೊ
ಳೂಗ್ಗದಿರು ಲಘುವಾಗದಿರು ಮಿಗೆ
ಹಿಗ್ಗದಿರು ಹೊಗಳಿಕೆಗೆ ಮನದಲಿ ಪಾರ್ಥ ಕೇಳೆಂದ ॥ ೭೨

ಆಡದಿರಸತ್ಯವನು ಕಪಟವ
ಮಾಡದಿರು ನಾಸ್ತಿಕರೊಡನೆ ಮಾ
ತಾಡದಿರು ಕೆಳಗೊಳ್ಳದಿರು ವಿಶ್ವಾಸಘಾತುಕರ ।
ಖೋಡಿಗಳೆಯದಿರಾರುವನು ಮೈ
ಗೂಡದಿರು ಪರವಧುವಿನಲಿ ರಣ
ಖೇಡನಾಗದಿರೆಂದು ನುಡಿದನು ನೃಪತಿಯರ್ಜುನಗೆ ॥ ೭೩

ಕ್ರೂರರಿಗೆ ಶಠರಿಗೆ ವೃಥಾಹಂ
ಕಾರಿಗಳಿಗತಿಮೂರ್ಖ [1] ರಿಗೆ ಯುಪ
ಕಾರಿಯಪಘಾತರಿಗೆ ಭೂತದ್ರೋಹಿಜೀವರಿಗೆ ।

---

[1] ಕುಟಿಲ, ಕ.

ಚೋರರಿಗೆ ಜಡರಿಗೆ ನಿಕೃಷ್ಟ
ಚಾರರಿಗೆ ಪಿಸುಣರಿಗೆ ಧರ್ಮವಿ
ದೂರರಿಗೆ ಕಲಿ ಪಾರ್ಥ ಕೇಳ್ಪರಲೋಕವಿಲ್ಲೆಂದ ॥ ೬೪

ಭ್ರಾತೃಮಿತ್ರವಿರೋಧಕಗ ಪಿತೃ
ಮಾತೃಘಾತಿಗೆ ಖಳನಿಗುತ್ತಮ
ಜಾತಿನಾಶಕನಿಂಗೆ ವರ್ಣಾಶ್ರಮವಿದೂಷಕಗೆ ।
ಜಾತಿಸಂಕರಕಾರಿಗಾಕ್ರೋ
ಧಾತಿರೇಕಿಗೆ ಗಾಢಗರ್ವಿಗೆ
ಭೂತವೈರಿಗೆ ಪಾರ್ಥ ಕೇಳ್ಪರಲೋಕವಿಲ್ಲೆಂದ ॥ ೬೫

ಸ್ವಾಮಿಕಾರ್ಯವಿಘಾತುಕಂಗತಿ
ಕಾಮುಕಗೆ ಮಿಥ್ಯಾಪ್ರಲಾಪಿಗೆ
ಭೂಮಿದೇವದ್ವೇಷಿಗತ್ಯಾಶಿಗೆ ಬಕವ್ರತಿಗೆ ।
ಗ್ರಾಮಣಿಗೆ ಪಾಷಂಡಿಗಾತ್ಮವಿ
ರಾಮಕಾರಿಗೆ ಕೂಟಸಾಕ್ಷಿಗೆ
ನಾಮಧಾರಿಗೆ ಪಾರ್ಥ ಕೇಳ್ಪರಲೋಕವಿಲ್ಲೆಂದ ॥ ೬೬

ಅದಱಿನಾವೆಂಗುಮಹಿತಿಯು ಮೂ
ಡಪರು ಸಚರಾಚರದ ಚೈತ
ನ್ಯದಲಿ ನಿನ್ನನೆ ಬೆಱಿಸಿ ಕಾಂಬುದು ನಿನ್ನ ತನುವೆಂದು ।
ಬೆದಱಿದಿರು ಬಲುತಪಕೆ ಶೂಲಿಯು
ಪದಯುಗವ ಮುಱಿಯದಿರು ಹರಿಯನು
ಹೃದಯದಲಿ ಪಲ್ಲಟಿಸದಿರು ಸುಖಿಯಾಗು ಹೋಗೆಂದ ॥ ೬೭

ಕರುಣಿಸಲಿ ಕಾವೊರಿ ಕೃಪೆಯಿಂ
ವರಮಹಾಸ್ತ್ರವನಿಂದ್ರಯಮಭೂ
ಸ್ಕರಪುತಾಕನನಿರುತಿವರುಣಕುಬೇರಮೊರುತರು ।

ಸುರರು ವಸುಗಳು ಸಿದ್ಧ ವಿದ್ಯಾ
ಧರಮಹೋರಗಯಕ್ಷಮನುಕಿಂ
ಪುರುಷರೀಯುಲಿ ನಿನಗೆ ವಿಮಳಸ್ವಸ್ತಿವಾಚನೆಯು ॥ ೨೪

ಎನೆ ಹಸಾದವೆನುತ್ತ ಯಮನಂ
ದನಗೆ ಭೀಮಂಗೆಱಗಿದನು ಮುನಿ
ಜನಕೆ ವೆಯ್ಯಿಕ್ಕಿದನು ಮುಳುಗಿದನಕ್ಷತೌಘದಲಿ ।
ವಿನಯದಲಿ [1] ಮುನಿವಧುಗಳಾಶೀ
ರ್ವಿನುತದಧಿದೂರ್ವಾಕ್ಷತೆಯನು
ಬ್ಬಿನಲಿ ಕೈಕೊಳುತನುಜರನು ಮನ್ನಿಸಿದನುಚಿತದಲಿ ॥ ೨೫

ನೆನೆಯದಿರು ತನುಸುಖವ ಮನದಲಿ
ನೆನೆ ವಿರೋಧಿಯ ಸಿರಿಯನೆನ್ನಯ
ಘನತರದ ಪರಿಭವವ ನೆನೆ ನಿಮ್ಮಗ್ರಜರ ನುಡಿಯ ।
ಮುನಿವರನ ಮಂತ್ರೋಪದೇಶವ
ನೆನೆವುದು ಭವನ ಚರಣಕಮಲವ
ನೆನುತ ದ್ರೌಪದಿ ಯೆಱಗಿದಳು ಪಾರ್ಥನ ಪದಾಬ್ಜದಲಿ ॥ ೨೬

ಹರನ ಚರಣವ ಭಜಿಸುವೆನು ದು
ರ್ಧರತಪೋನಿಷ್ಠೆಯಲಿ ಕೇಳಲೆ
ತರುಣ ಪಾಶುಪತಾಸ್ತ್ರವಾದಿಯ ದಿವ್ಯಮೋರ್ಗಣವ ।
ಪುರಹರನ ಕೃಪೆಯಿಂದ ಪಡೆದಂ
ತರಿಗಳನು ಸಂಹರಿಸಿ ನಿನ್ನಯ
ಪರಿಭವಾಗ್ನಿಯ ನಂದಿಸುವೆನೇಚೆಂದನಾಪಾರ್ಥ ॥ ೨೭

ಬಿಗಿದ ಬತ್ತಳಿಕೆಯನು ಹೊನ್ನಾ
ಯುಗದ ಖಡ್ಗಕಠಾರಿಚಾಪವ
ತೆಗೆದನಳವಡೆಗಟ್ಟಿ ಬದ್ದುಗದಾರಗೊಂಡೆಯವ ।

---

[1] ವನಜಮುಖಿ, ಕ. ಜ. ಟ. ಡ.

ದುಗುಡಹರುಷದ ಹುಗಿಲದಲೆಯೊ
ತ್ತುಗಳಿಗಿಟ್ಟೆಡೆಯಾಗಿ ಗುಣಮೌ
ಳಿಗಳ ಮಣಿ ಕಲಿಪಾರ್ಥ ಬೀಣ್ಕೊಂಡನು ನಿಜಾಗ್ರಜನ ॥ ೫೦

ಆಗ ಆದ ಶುಕಶುನಗಳು.

ಹರಡೆ ವಾಮದಲುಲಿಯೆ ಮಧುರ
ಸ್ವರದಲಪಸವ್ಯದಲಿ ಹಸುಬನ
ಸರಸಮೋಹಿತಮಾಗೆ ಸೂರ್ಯೋದಯದ ಸಮಯದಲಿ ।
ಹರಿಣಭಾರದ್ವಾಜನುಡಿಕೆಯ
ಸರಟನಕುಲನ ತಿರಿದುಗಳ ಕು
ಕ್ಕುರನ ತಾಳಿನ ಶಕುನವೆನು ಕೈಕೊಳುತ ನಡೆತಂದ ॥ ೫೧

ನೀಲಕಂಠನ ಮನದ ಬಯಕೆಗೆ
ನೀಲಕಂಠನೆ ಬಲಕೆ ಒಂದುದು
ಮೇಲುಪೋಗಿನ ಸಿದ್ಧಿ ದೈತ್ಯಾಂತಕನ ಬುದ್ಧಿಯಲಿ ।
ಕಾಲಗತಿಯಲಿ ಬಟ್ಟಿಕ ಪರಿಗ
ಕಾಲಗತಿಯನು ಕಾಂಬೆವೈ ಸಲೆ
ಶೂಲಧರನೇ ಬಲ್ಲನೆನುತೈತಂದನಾಪಾರ್ಥ ॥ ೫೪

ಇಂದ್ರಕೀಲಪರ್ವತದ ಬಳಿಗೆ ಹೋದುದು.

ಅರಸ ಕೇಳ್ ಬಟ್ಟಿಕ ಭಾರತ
ವರುಷವನು ದಾಂಟಿದನು ತಂಪಿನ
ಗಿರಿಯ ತಪ್ಪಲನಿಟ್ಟಿದನಾಹರಿವರುಷಸೀಮೆಯಲಿ ।
ಬೆರಸಿದನು ಬಟ್ಟಿಕುತ್ತರೋತ್ತರ
ಸರಣಿಯಲಿ ಸೈನಡೆದು ಹೊಕ್ಕನು
ಸುರರ ಸೇವ್ಯವನಿಂದ್ರಕೀಲಮಹಾಮಹೀಧರವ ॥ ೫೫

ಅಪರ ಸಮಿಪದ ವನದ ವರ್ಣನೆ.

ಗಿಳಿಯ ಮೈದುವಾತುಗಳ ಮಱುಕೊ
ಗಿಲೆಯ ಮಧುರಧ್ವನಿಯ ಹಂಸೆಯ

ಕಳರವೆದ ಮಱುನವಿಲ ಕೇಕಾರವೆದ ನಯಸರದ ।
ಮೆಲುದನಿಯ ಪಾರುವೆದ ತುಂಬಿಯ
ಲಲಿತಗೀತದ ಬನದ ಸಿರಿ ಬಗೆ
ಗೊಳಿಸಿತ್ತೈ ಪೂರ್ವಾಭಿಭಾಷಿತದಲಿ ಧನಂಜಯನ ॥ ೩೬

ಸೊಂಪೆಸೆವ ಕೋಗಿಲೆಯ ದನಿ ದೆಸೆ
ಕಂಪಿಸುವ ತಂಬೆಲರ ಪೂವಿನ
ಜೊಂಪವನು ಜೊಂಪಿಸುವ ಮಱುದುಂಬಿಗಳ ಮೇಳವೆದ ।
ಪೆಂಪೊಗುವ ದಾವರೆಗೊಳಂಗಳ
ತಂಪಿನೊದವಿನ ಬನದ ಸೊಗಸಿನ
ಸೊಂಪು ಸೆಳೆದುದು ಮನವನೀತನ ನರಪ ಕೇಳೆಂದ ॥ ೩೭

ಚಾರುತರಪರಿಪಕ್ವನವಖ
ರ್ಜೂರರಸಧಾರಾಪ್ರವಾಹವೆ
ನೋರವೆಂಕ್ಷುವಿಭೇದವಿದ್ರುಮರಸದ ದಾಳಿಂಬ ।
ಭೂರಿಜಂಬುಮಧೂಕಪನಸ
ಸ್ಫಾರರಸಪೂರಾನುಕಲಿತವಿ
ಹಾರಸುರಮಹಿಳಾಭಿರಂಜನವಖಿಲವನಭೂಮಿ [1] ॥ ೩೮

ವಿಲಸದಭ್ರಂಲಿಹಮಹಾತರು
ಕುಲದಿನಮರನದೀಸ್ತನಂಧಯ
ಫಲರಸದ ನದಿಗಳಲಿ ದಿಕ್ಕೂಲಂಕಷೋನ್ನತಿಯು [2] ।
ಸುಟಿವ ಪರಿಮಳಪವನನಿಂ ಕಂ
ಗೊಳಿಸಿತರ್ಜುನಕಾಮ್ಯಸಿದ್ಧಿ
ಸ್ಥಳದೊಳಂತರ್ಮಿಳಿತಕಾನನವರಸ ಕೇಳೆಂದ ॥ ೩೯

---

[1] ...ಮಧುರಾಮ್ರಾಳಿಗಳ ಫಲ | ದೋರಣದಿನಂದೆಸೆವುತಿರ್ದುದು ಖಹಳವನ ಭೂಮಿ, ಚ.

[2] ಫಳರಸದ ನದಿಗಳ ಲತಾಸಂ | ಕುಳದ ನಾನಾಕುಸುಮದಿಂದೊಪ್ಪುವ ಕೊಳಂ ಗಳಲಿ, ಚ.

ಇದು ಶಿವನ ಕ್ಷೇತ್ರವೆಂದು ಆಕಾಶವಾಣಿಯಾಗುವಿಕೆ.

ಇಲ್ಲಿ ನಿಲ್ಲರ್ಜುನತಪೋಧನ
ಗಿಲ್ಲಿ ನೆಲೆ ಶ್ರುತಿಯುವತಿ ಸೂಸುವ
ಚಲ್ಲೆಗಂಗಳ ವೊನೆಗೆ ವಿಾಸಲುಗುಡದ ವೈಸಿರಿಯ ।
ದುರ್ಲಲಿತದಷ್ಟಾಂಗಯೋಗದ
ಕೊಲ್ಲಣಿಗೆಗೊಳಗಾಗದಪ್ರತಿ
ಮಲ್ಲಶಿವನ ಕ್ಷೇತ್ರ ವಿದೆ ಯೆಂದುದು ನಭೋವಾನಿನದ ॥ ೪೦

ವನಪ್ರವೇಶ ಮಾಡಿ ಅರ್ಜುನನ ತಪಸ್ಸು.

ಧರಣಿಪನ ಬೀಬ್ಕೊಂಡು ಮಾರ್ಗಾಂ
ತರದೊಳಾರಡಿಗೈದು ಹೊಕ್ಕನು
ಹರನ ಕರಣಾಸಿದ್ಧಿ ಸಾಧನವೆನಿಪ ಗಿರಿವನವ ।
ಮುಂಬುದಿವಸದುದಯದಲಿ ವಿುಂದನು
ಸರಸಿಯಲಿ ಸಂಧ್ಯಾಭಿಮುಖದಲಿ
ತರಣಿಗರ್ಘ್ಯವನಿತ್ತು ದೇವವ್ರಜಕೆ ಕೈವುಗಿದ ॥ ೪೧

ವಿನುತಕಾಂಭವಮಂತ್ರಜಪಸಂ
ಜನಿತನಿರ್ಮಳಭಾವಶುದ್ಧಿಯ
ಮನದೊಳರ್ಜುನನೆತ್ತಿ ನಿಂದನು ದೀರ್ಘಬಾಹುಗಳ ।
ನೆನಹು ನೆವ್ಮಿತು ಶಿವನನಿತರದ
ನನೆಗೊನೆಯ ತೆರಳಿಕೆಯ ಕೊಡಚೆಯ
ಮನದ ಸಂಚಲವೀಚುವೋದುದು ಕಲಿಧನಂಜಯನ ॥ ೪೨

ಮುಗುಳುಗಂಗಳ ವೆೀಲುಗುಡಿದೋ
ಳುಗಳ ವಿಡುಕುವೆತುಟಿಯ ತುದಿಗಾ
ಲುಗಳ ಹೊರಿಗೆಯ ತಪದ ನಿರಿಗೆಯ ನಿಷ್ಪ್ರಕಂಪನದ ।
ಬಿಗಿದ ಬಿಲ್ಲಿನ ಬೆನ್ನ ಬತ್ತಳಿ
ಕೆಗಳ ಕಿಗ್ಗಟ್ಟಿನ ಕಠಾರಿಯ
ಹೆಗಲೆಡಾಯುಧದ ಹೊಸತಪಸಿ ತೊಡಗಿದನು ಬಲುತಪವ ॥ ೪೩

ಇಂದ್ರನ ಆಗಮನ ಮತ್ತು ಸಂವಾದ.

ಅರಸ ಕೇಳ್ಕೈ ವಿಪ್ರವೇಷವ
ಧರಿಸಿ ಧರೆಗಿಟಿದನು ಸುರೇಶ್ವರ
ತರಹರಿಸದೀಮೊತ ನುಡಿದನು ನಿಜಕುಮಾರಂಗೆ ।
ಮರಿಚವೆಂತಿಕ್ಕಿಕಲೋಹಹೇಮಾ
ಭರಣ ಚರ್ಮದುಕೂಲಮಿಳಿಹಾ
ದರಿಯ ಹೂವಿನ ದಂಡೆಗೇಕನಿವಾಸವೇಕೆಂದ ॥ ೪೪

ಆವೆ ಸೇರುವೆ ತಪಕೆ ಚಾಪಶ
ರಾವಳಿಗೆ ಶಮೆ ದವೆಂಗೆ ಖಡ್ಗಕಿ
ದಾವ ಸಂಮೇಳನ ವಿಭೂತಿಗೆ ಕವಚಸೀಸಕಕೆ ।
ಆವುದಿದಭಿಧಾನ ತಪವೋ
ಡಾವರಿಗಪಿದ್ಯಾಸಮಾಧಿಯೊ
ನೀವಿದೆಂಥಾಋಷಿಗಳಂಬುದನಱಿಯೆ ನಾನೆಂದ ॥ ೪೫

ಕಂದೆಱೆದು ನೋಡಿದನು ನೀವೇ
ನೆಂದೊಡೆಯು ಹೃದಯಾಬ್ಜಪೀಠದೊ
ಳಿಂದುಮೌಳಿಯ ನಿಲಿಸಿ ಮೆಚ್ಚಿಸುವೆನು ಸಮಾಧಿಯಲಿ ।
ಇಂದಿನೀಬಹಿರಂಗಚಿಹ್ನದ
ಕುಂದುಹೆಚ್ಚಿ ನಲೇನು ಫಲವೆನ
ಲಂದು ತಲೆದೂಗಿದನು ಸುರಪತಿ ತೋಱಿದನು ನಿಜವ ॥ ೪೬

ಅರ್ಜುನನಿಗೆ ಇಂದ್ರನ ವರದಾನ.

ಮಗನೆ ನಿನ್ನಯ ಮನದ ನಿಷ್ಠೆಗೆ
ಸೊಗಸಿದೆನು ಹಿರಿದಾಗಿ ಹರನಿ
ಲ್ಲಿಗೆ ಬರಲಿ ಪೂಜಿಸಲಿ ನಿನ್ನ ಮನೋಭಿವಾಂಛಿತವ ।

ಹಗೆಗೆ ಹರಿವಹುದೆಂದು ಸುರಮೌ
ಳಿಗಳ ಮಣಿ ಸರಿದನು ವಿಮಾನದೊ
ಳಗಧರನ ಮೈದುನನ ಮಹಿಮೆಯನಿನ್ನು ಕೇಳೆಂದ ॥ ೪೭

ಐದನೆಯ ಸಂಧಿ ಮುಗಿದುದು.

ಆರನೆಯ ಸಂಧಿ.

ಸೂಚನೆ.

ಮುನಿನಿಕರ ಬಿನ್ನವಿಸೆ ಕರುಣಾ
ವನಧಿ ಶಂಭು ಕಿರಾತಮಯರೂ
ಪಿನಲಿ ಹೊಕ್ಕನು ಬನದೊಳಚ್ಚನು ಮೂಕದಾನವನ ॥

ಅರ್ಜುನನು ಧ್ಯಾನವನ್ನು ಮಾಡಿದುದು.

ಮರಳಿದನು ದಿವಿಜೇಂದ್ರನಿತ್ತಲು
ಹರನೊಳಗೆ ಹೊರೆಯೆತ್ತಿದಂತಃ
ಕರಣ ಹಿಗ್ಗಿತು ಹುದುಗಿದುದು ಬಹಿರಂಗಭಾವನೆಯ ।
ಧರಣಿ ಮೊದಲಿನೆ ಭೂತಪಂಚಕ
ಮೆರುತಪಂಚಕವಿಷಯದಿಂದ್ರಿಯ
ಕರಣವಿಪ್ಪತ್ತೈದುತತ್ವಾತ್ಮಕನ ಚಿಂತಿಸಿದ ॥ ೧

ಮೇಲೆ ವಿದ್ಯಾರಾಗನಿಯತಿಯ
ಕಾಲಕಲನಾತ್ಮಕನ ಮಾಯೆಯ
ಮೇಲುಪ್ಪೋಗಿನ ಸಿದ್ಧವಿದ್ಯಾರೂಪನೀಶ್ವರನ ।
ಕೇಳು ನೃಪತಿ ಸದಾಶಿವನನು
ತ್ತಾಳಶಕ್ತ್ಯನಖಿಳತತ್ತ್ವದ
ಮೌಳಿಮಣಿಯನಖಂಡಶಿವನನು ಪಾರ್ಥ ಚಿಂತಿಸಿದ ॥ ೨

ಮೂಱುದಿನಕೊಮ್ಮೆಮ್ಮೆ ಫಲದಾ
ಹಾರದಲಿ ನೂಕಿದನು ತಿಂಗಳ
ನಾಱುದಿವಸಕೆ ಫಲವ ಕೊಂಡನು ತಿಂಗಳರಡಱಲಿ ।
ಮೂಱುತಿಂಳ ಕಳೆದನಿಂತೀ
ಱಾಱುದಿವಸಕೆ ಕಂದಮೂಲಾ
ಹಾರದಲಿ ತಱಗೆಲೆಯಲಿರ್ದನು ನಾಲ್ಕುಮಾಸದಲಿ ॥ ೩

ಬಟ್ಟಿಕ ಪವನಾಹಾರದಲಿ ನಿ
ಶ್ಚಲಿತಶಿವೆಪದಭಕ್ತಿ ಸುಧೆಯಲಿ
ತಳಿತರೋಮಾಂಚನದ ಕಂದದ ಕುಂದದವಯವದ ।
ಥಳಥಳಿಸುವಾನನದ ಸತ್ವೋ
ಜ್ಜ್ವಲಿತಚಿತ್ತದ ಸುಪ್ರಭಾವದ
ಬಳವಿಗೆಯಲುತ್ಕ್ರೀಚವಾದುದು ತಪ ಧನಂಜಯನ ॥ ೪

ಯಮದೊಳುತ್ಸಾದಿಸಿದ ನಿಯಮ
ಶ್ರಮವ ಗೆಲ್ದಿನು ಶಂಭುವಿನ ಪದ
ಕಮಲ ಬೈಸಿಕೆಯಾದುದೆತ್ತಿದ ಜೀವ ಪವನನಲಿ ।
ಭ್ರಮೆಸುವಿಂದ್ರಿಯಗಣವನುಚಿದಾ
ಕ್ರಮಿಸಿ ಶಂಕರಭಾವದಲಿ ಸಂ
ಕ್ರಮಿಸಿ ಧರಿಸಿ ಸಮಾಧಿಯನು ತಳದಾತ್ಮಪರನಾದ ॥ ೫

ವಿಮಳಮತಿ ಕೇಳಿಂದ್ರಿಯಾರ್ಥ
ಭ್ರಮೆಯ ಜಾಗ್ರದವಸ್ಥೆಯಂತ
ಸ್ತಮಿತಕರಣಭ್ರಮೆಯಲುದಿತಸ್ವಪ್ನ ವೀಥಿಯಲಿ ।
ಗಮಿತತದ್ವಾಸನೆಯ ಬೀಜ
ಕ್ರಮಸುಷುಪ್ತಾವಸ್ಥೆಯಲಿ ಸಂ
ಕ್ರಮಿಸದಗ್ಗದ ತುರ್ಯಶಿವನನು ಪಾರ್ಥ ಚಿಂತಿಸಿದ ॥ ೬

ತಾನೆ ಶಿವನೋ ಮೇಣು ಶಿವನ
ಧ್ಯಾನ ತನಗದ್ವೈತದನುಸಂ
ಧಾನಕಿದು ಜವನಿಕೆಯೋ ಜೀವಾತುಮನ ಜಂಜಡವೊ ।
ಧ್ಯಾನವೋ ಮೇಣ್ ದ್ವೈತವೋ ತ
ದ್ಧ್ಯಾನಕರ್ತುವೊ ತ್ರಿಪುಟಿರಹಿತನೊ
ತಾನು ಮೇಣೆನಲಾಯ್ತು ಚಿತ್ತದ ಶುದ್ಧಿಯರ್ಜುನನ ॥ ೬

ಮುನಿಯಿದೇನೈ ಚಿತ್ರವಾಯ್ತು
ರ್ಜುನನ ಚಿತ್ತದಲೇನು ತಾಮಸ
ಜನಿತಕರ್ಮವೋ ಶುದ್ಧತತ್ತ್ವಜ್ಞಾನಜಲಧಿಯಲಿ ।
ಮನಮುಟ್ಟುಗಿ ಮಗುಟದ್ದು ಶಿತಿಕಂ
ಠನಲಿ ಶಸ್ತ್ರಾಸ್ತ್ರವೆನು ಬೇಡಿದ
ನೆನಲು ಜನವೇಜಯಗೆ ವೈಶಂಪಾಯನಮುನಿ ನುಡಿದ [1] ॥ ೭

ಅರಸ ಕೇಳ್ ರಾಜಸಾಂತಃ
ಕರಣವದು ಕಾವ್ಯೈಕಸಿದ್ಧಿ
ಸ್ಫುರಣಗೋಸುಗ ತಪವಲೇ ರಾಜ್ಯಾಭಿಲಾಷೆಯಲಿ ।
ಹರಚರಣನಿಕ್ಷಿಪ್ತಚೇತಃ
ಸ್ಫುರಣೆ ತತ್ಪರಿಯಂತವುಕ್ಕತು
ಪರಮವೆಸ್ತು ನಿಜಸ್ವಭಾವಕೆ ಚಿತ್ರವೇನೆಂದ ॥ ೮

ಮೇಲೆ ಮೇಲೀತನ ತಪೋಗ್ನಿ
ಜ್ವಾಲೆ ಜಡಿದುದು ತಡೆದುದಭ್ರ
ಸ್ಥಳಿಯಲಿ ಸೈವರಿವ ಸೂರ್ಯಾಚಂದ್ರಮಪ್ರಭೆಯ ।
ಢಾಳಿಸುವ ಪರಿಧೌತಮೌನಿಕ
ರಾಳತೇಜೋಗರ್ಭತಮಭೂ
ಮಾಳಯಲಿ ಮೇಭಳಾಳ ಮಸಗಿದುದರಸ ಕೇಳೆಂದ ॥ ೯

---

1 ಮುನಿಯಿಂತೆಂದ ನಸುನಗುತ, ಚ.

ಈತನುಗ್ರತಪಃಪ್ರಭಾವಿ
ಖ್ಯಾತಿ ವಿಗಡಿಸಿತಖಿಳಲೋಕ
ವ್ರಾತವನು ಸೋತವನು ಕೌರವನೋ ಯುಧಿಷ್ಠಿರನೊ ।
ಈತನೀಶ್ವರನಸ್ತ್ರವನು ಕೈ
ಯಾತುಕೊಂಡರೆ ಬಟಿಕ ರಿಪುನೃಪ
ಜಾತರಿದಿರೇ ಕೇಳು ಜನಮೇಜಯ ಮಹೀಪಾಲ ॥ ೧೧

ಏನನೆಂಬೆನು ಸಾರ್ಥನುಗ್ರತ
ಪೋನಿದಾಘಜ್ವಾಲೆಯನುಸಂ
ಧಾನವನು ತತ್ಪರಸರದ ಪಾವನತಪೋಧನರ ।
ಮೌನವಡಗಿದುದು ಜಪವನು
ಷಾ ನ ಬಿಡೆ ಬೀಸಿತ್ತು ಸಮಾಧಿ
ಧ್ಯಾನ ಸೀಕರಿಯಾಯ್ತು ಸಾರವಿಚಾರ ಶಮಸಹಿತ ॥ ೧೨

ಅರ್ಜುನನ ಧ್ಯಾನಕ್ರಮವನ್ನು ತಿಳಿದು ಋಷಿಗಳ ಅಸೂಯೆ.

ಶ್ರುತಿಯಲುಳಿ ತಗ್ಗಿತು ವಿವೇಕ
ಸ್ಥಿತಿಗೆ ಪಲ್ಲಟವಾಯ್ತು ಮತ್ಸರ
ಮತಿಯ ಮೈಲಿಗೆ ಬಿದ್ದುದಾತ್ಮಜ್ಞಾನದೃಷ್ಟಿಯಲಿ ।
ಧೃತಿಯವರ ಬಾಹೆಯಲಸೊಯಾ
ಸತಿಯ ಕಾಹಿಯ ಮನದಲಿರ್ದರು
ಯತಿಗಳೀತನ ತಪದ ತೇಜದ ಹೊದರ ಹೊಯ್ಲಿನಲಿ ॥ ೧೩

ಕೋಪವ ರಟಿಸಿತಾಧಿಭೌತಿಕ
ತಾಪ ತಳಿತುದು ಹೃದಯವೀಶ್ವರ
ರೂಪವನು ಮುಚ್ಚಿದುದು ಮಾಯಾಮೋಹಮುದ್ರೆಯಲಿ ।
ಶಾಪಭೀತರಹಮ್ಮತಿಯ ಕೃ
ತಾಪರಾಧರು ಪ್ರಕೃತಿಗುಣಯ
ಜ್ಞಾಪವೀತರು ಮಿಸಗಿದರು ಮುನಿಗಳು ತಪೋವನವ ॥ ೧೪

ಆಗ ವನದಲ್ಲಿದ್ದ ಮುನಿಗಳು ಅರ್ಜುನನ ತಪಸ್ಸನ್ನು ನೋಡಿ
ಶಿವನನ್ನು ಮರೆಹೋದುದು.

ಹಟಿವ ಹಾವಸೆಮನದಲಿರ್ದರು
ಕೆಲರು ಕೆಲರೆಡೆಯಾಡುತಿರ್ದರು
ತಿಳಿವು ಮರೆವೆಗಳಲ್ಲಿ ಕೆಲರುಪಶಾಂತಿಭಾವದಲಿ ।
ಕೆಲರಿದೇನಿವನಿಲ್ಲಿ ತೊಲಗಿಸಿ
ಕಳೆವುದೀತನನೆಂದು ತವ್ಮೊಳು
ಕಳವಳಿಸುತೊವ್ಮೊತ್ತವಾದುದು ಸಕಲಮುನಿನಿಕರ ॥ ೧೫

ಕೆದಕುದುದು ಜಡೆ ಯಜ್ಞಮಾಲೆಗ
ಳುದುರಿದುವು ಕರದಲಿ ಕಮಂಡಲು
ವೆದುರಿದುದು ಹಟಿವಾಯ್ತು ಹರಿಣಾಜಿನ ಮುನೀಶ್ವರರ ।
ಕದಡಿತಂಗವಿಭೂತಿ ಕಡುಗೋ
ಪದಲಿ ಹರಿದರು ಹರಗಿರಿಯ ಹ
ತ್ತಿದರು ಕಂಡರು ರಾಜಮೌಳಿಯ ರಾಜಮಂದಿರವ । ೧೬

ಶಿವನ ಭವನವ ನೂರದಲಿ ಕಂ
ಡಿವರು ಮೈಯ್ಯಿಕ್ಕಿದರು ವರಮುನಿ
ನಿವಹ ಬಂದುದ ಬಾಗಿಲವದಿರು ಬಿನ್ನಹದ ಹದನ ।
ವಿವರಿಸಲು ಕರೆಸಿದನು ಕರುಣಾ
ರ್ಣವನ ಕಂಡರು ಮೈಯ್ಯ ಚಾಚಿದ
ರವನಿಯಲಿ ಜಯ ಜಯ ಮಹೇಶ ನಮೋಽಸ್ತುವಾ ಯೆನುತ ॥ ೧೭

ಏಟಿರೈ ಸಾಕೇಟಿರೈ ಸಾ
ಕೇಟಿ ಕುಳ್ಳಿರಿ ಬಂದ ಕಾರ್ಯವ
ಹೇಟಿ ಯೆನೆ ಮುನಿನಿಕರ ವೆರ್ದುದು ನೊಸಲ ಕೈಗಳಲಿ ।
ಹೇಟಿ ನೀವ್ ಹೇಟಿನ್ನು ಹಿರಿಯರು
ಹೇಟಿ ಯೆನುತೊಳಗೊಳಗೆ ಸ್ಫೋಟಾ
ಸ್ಫೋಟಿ ಮಸಗಿದುದೊಬ್ಬ ಮುನಿ ನಿಲಿಸಿದನು ಕಳಕಳವ ॥ ೧೮

ನೀಲಲೋಹಿತ ಚಿತ್ತವಿಸು ಶಶಿ
ಮೌಳಿ ಬಿನ್ನಹ ನಿಗಮಮೌಹಿಳಾ
ಮೌಳಿಮಣಿನೀರಾಜಿತಾಂಘ್ರಿಸರೋಜನವಧಾನ ।
ಪಾಲಿಸುವುದಾರ್ತರನು ಪರಮೇಕೃ
ಪಾಳು ನೀನತಿದೀನರಾವು ವಿ
ಟಾಳಸಂಗತಿಯಾದುದಸ್ಮಜ್ಜಪತಪಸ್ಸ್ಥಿತಿಗೆ ೧೯

ಶಾಂತಿಯೇ ಮನೆ ನಿಮ್ಮ ಚರಣದ
ಚಿಂತೆಯೇ ಮನೆವಾರ್ತೆ ವರವೇ
ದಾಂತತತ್ತ್ವರಹಸ್ಯಮನನಾದಿಗಳು ಸರ್ವಸ್ವ ।
ದಾಂತಿಯೇ ಸುಖಭೋಗ ಮಾಯಾ
ಶ್ರಾಂತಿಯೇ ಮಾಹಾತ್ಮ್ಯವಿದು ಮುನಿ
ಸಂತತಿಗೆ ವರ್ತ್ತನವಲೇ ವೈದಿಕವಿಧಾನದಲಿ ॥ ೨೦

ಹೋದ ಹೊಲಬಿಲ್ಲದಱೊಳಗೆ ದು
ರ್ಭೇದತಪವೇ ಹೊತ್ತುತಿದೆ ಜ
ಳ್ಳಾದುವೆಮ್ಮ ಸಮಾಧಿಸೈರಣೆ ಶವದಮೊದಿಗಳು ।
ಕಾದುದಾವನಭೂಮಿ ತರುಗು
ಲ್ಮಾದಿಗಳು ಕಟ್ಟೊಣಗಲಾದುವು
ತೀದುದೆಮ್ಮಯ ಜಪಸಮಾಧಿಯು ಕರ್ಮವಿಧಿಯಿಂದ [1] ॥ ೨೧

ರಾಯನೋ ಮೇಣವನು ರಾವುತ
ನಾ [2] ಯುಕನೊ ಋಷಿಯಲ್ಲ ಋಷಿಗೇ
ಕಾಯುಧಂಗಳ ಗೊಡವೆ ನಮಗೇಕದಱ ಬೂತಾಟ ।
ಸಾಯುಕದ ಬತ್ತಳಿಕೆ ಚಾಪವ
ಡಾಯುಧದ ಕುಶವೆರಳಜಡೆಗಳ
ನಾಯಕದಲನುಚಿತದ ಸಂಗದ ತಪಸಿ ಯಿಹನೆಂದ ॥ ೨೨

---

[1] ನಿತ್ಯ ವಿಧಿಯೊಳ್ಳುನ ದೆಸೆಯಲಿಂದು, ಚ. [2] ಪಾ, ಚ.

ಆಡಿದೊಡೆ ನಾವ್ ಮುನಿಗಸೂಯೆಯ
ಮಾಡಿದವರಿದ ನಿಮ್ಮಡಿಗೆ ನಾ
ವಾಡದಿರ್ದೊಡೆ ಬಿಸಿಲರಾಶಿಯನುರಿಯ ಸೂತಕವೆ ।
ಕೂಡಿತೆಮ್ಮಯ ಕರ್ಮಗತಿ ತಪ
ಗೇಡಿಯುನು ಬಿಡದೆಬ್ಬಿಸೆಮಗೆಡೆ
ಮಾಡಿಕೊಡಬೇಕೆಂದು ಮೆಯ್ಯಿಕ್ಕಿತು ಮುನಿಸ್ತೋಮ ॥ ೭೩

ಮತ್ತೆ ನಮ್ಮನು ಪಿಸುಣರೆಂದೇ
ಚಿತ್ತವಿಸಲಾಗದು ತಪೋವನ
ಹೊತ್ತುತಿದೆ ವಿಪರೀತ ತಪಸಿಯ ತೀವ್ರತೇಜದಲಿ ।
ಇತ್ತಲೊಂದು ತಪೋವನವ ನಮ
ಗಿತ್ತು ಕರುಣಿಸು ಮೇಣ್ವಿಕಾರಿಯ
ನೆತ್ತಿ ಕಳ ಕಾರುಣ್ಯನಿಧಿ ಯೆಂದುದು ಮುನಿಸ್ತೋಮ ॥ ೭೪

ಆಗ ಈಶ್ವರನು ಜ್ಞಾನದೃಷ್ಟಿಯಿಂದ ಅರ್ಜುನನೆಂದು ತಿಳಿದು
ಮುನಿಗಳಿಗೆ ಅಭಯವನ್ನು ಕೊಟ್ಟುದು.

ಕೇಳುತವನಾರೋ ಯೆನುತ ಶಶಿ
ಮೌಳಿ ವಿಮಲಜ್ಞಾನದೃಷ್ಟಿಯೊ
ಳಾಳನರಿದನು ಮನದೊಳಗೆ ನಮ್ಮವನಲಾ ಯೆನುತ ।
ಬಾಲಹಿಮಕರಕಿರಣದೊಡನೆ ಸ
ಮೇಳವಹ ನಗೆ ಮಿನುಗೆ ಮುನಿ
ಜಾಲವನು ನೋಡಿದನು ಸುರಿದನು ಕೃಪೆಯ ತನಿರಸವ ॥ ೭೫

ಅಱಿದೆನಾನಂಜದಿರಿ ಹುಯ್ಯಲ
ಬಱಿದೆ ತಂದಿರಿ ನಿಮ್ಮಗೆಲವಿಂ
ಗೆಱಗುವವನವ [1] ನಲ್ಲ ಬೀಱಿಪುದಾತನಂಘವಣೆ ।

1 ಗೆರಡಬಗೆವವ, ಚ.

ಅಱುಹಲೀಕೆ ಭವತ್ತಪೋವನ
ನೆಱೆ ನಿಮಗೆ ನಾನವನನೆಬ್ಬಿಸಿ
ತೆಱಹ ಮಾಡಿಸಿ ಕೊಡುವೆನೆಂದನು ತ್ರೈಪುರಧ್ವಂಸಿ ॥ ೬೬

ಏಟಿ ನೀವಾಶ್ರಮಕೆ ಹೋಗಿ ಛ
ಡಾಳಿಸಲಿ ಮುನಿವರನ ತಪವಿ
ನ್ನೇಟಿ ಸಾಕೆಂದಭಯವಿತ್ತ ಕರಾಂಬುಜವ ನೆಗಹಿ ।

ಬೇಟೆಗಾಗಿ ಸರ್ವರನ್ನೂ ಸಿದ್ಧಪಡಿಸೆಂದು ನಂದೀಶ್ವರನಿಗೆ
ಶಿವನ ಅಪ್ಪಣೆ ಮತ್ತು ಡಂಗುರ.

ಬೀಟುಗೊಟ್ಟನು ಸಕಲಮುನಿಜನ
ಜಾಲವನು ಕರೆ ಭೂತನಿಕರವ
ಮೇಳವಿಸಹೇಟೆಂದು ನಂದೀಶ್ವರಗೆ ನೇಮಿಸಿದ ॥ ೬೭

ಅರಸ ಕೇಳ್ ಬೇಂಟೆಯೆಂದೀ
ಶ್ವರನ ಕಟಕದಲಾಡಿದುದು ಡಂ
ಗುರದ ದನಿ ಡಾವರದಲೈದಿತು ನಿಖಿಳಭೂತಚಯ [1] ।

ಈಶ್ವರನು ಕಿರಾತವೇಷವನ್ನು ತಾಳಿದುದು.

ಪರಮಕರುಣಾಸಿಂಧು ಭಕ್ತ ರ
ಪ್ಪೊರೆವೆ ಛರದಲಿ ಭೂರಿಮೃಗಯಾ
ಚರಣನೆಗೋಸುಗ ಶಬರವರರೂಪವನು ಕೈಕೊಂಡ ॥ ೬೮

ತೆಗೆದು ತಲೆಮಾಲೆಯನು ಹಸುರಂ
ಗಿಗಳ ತೊಟ್ಟನು ಸುತ್ತುವರೆ ಹೀ
ಲಿಗಳ ಹಂಹಿನ ಪಾರಿವದ ಚಲ್ಲಣವ ವೆಂತಣಿಸಿ ।
ಬಿಗಿಜಡೆಯ ಶಶಿಮುಖಕೆ ಪತ್ರಾ
ಳಿಗಳ ಕಟ್ಟಿ ಕಿರಾತವೇಷದ
ವಿಗಡದೇವರ ದೇವ ಕೊಂಡನು ಚಾಪಮಾರ್ಗಣವ ॥ ೬೯

[1] ಭುವನವನು, ಚ.

ಖಳಿಕ ಈಶ್ವರನ ಪರಿವಾರವೆಲ್ಲ ಕಿರಾತರ ರೂಪವನ್ನು ತಾಳಿದುದು.

ದೇವನನುರೂಪದಲಿ ನಿಂದರು
ದೇವಿಯರು ಗುಹಗಣಪತಿಗಳ
ಲ್ಲಾ ವಿನೋದವ ನೋಡಲಳವಡಿಸಿದರು ಶಬರವ ।
ಆವಿಗಡನಂದೀಶ ವೀರಕ
ದೇವವರರೇಣುಕಮಹೋದರ
ದಾವೆಶಿಖಿವರವೀರಭದ್ರಾದ್ಯಖಿಳದೇವಗಣ [1] ॥ ೫೦

ಅರಸ ಕೇಳ್ಕ ಸಪ್ತಮಾತೃಕೆ
ಯರು ಮಹೋಪನಿಷನ್ನಿತಂಬಿನಿ
ಯರು ದಿಶಾದೇವಿಯರು ಶ್ರುತಿವಿದ್ಯಾದಿಶಕ್ತಿಯರು ।
ಉರಗಿಯರು ವಿದ್ಯಾಧರಿಯರ
ಪ್ಸರಿಯರೌಷಧಮಂತ್ರದೇವತೆ
ಯರು ಪುಳಿಂದಿಯರಾದರು [2] ಮಹೇಶ್ವರಿಯು ಬಟಿಸಿನಲಿ ॥ ೫೧

ಧೃತಿ ಮಹೋನ್ನತಿ ತುಷ್ಟಿ ಪುಷ್ಟಿ
ಸ್ಮೃತಿ ಸರಸ್ವತಿ ಸಂವಿದಾಯತಿ
ಮತಿ ಮನಸ್ವಿನಿ ಸಿದ್ಧಿ ಕೀರ್ತಿ ಖ್ಯಾತಿ ಮಿತಿ ನಿಯತಿ ।
ಗತಿ ಕಳಾಮಾನಿನಿ ಕಳಾವತಿ
ರತಿ ರಸಾವತಿ ಚಂಡಿ ಜಯೆ ಮೇಘ
ಮತಿ ಯೆನಿಪ ದೇವಿಯರು ಶಬರಿಯರಾಯ್ತು ನಿಮಿಷದಲಿ ॥ ೫೨

ಮೋರಿ ಚಾಮುಂಡಾ ಸ್ಮಶಾನಾ
ಗಾರವತಿ ವರಕಾಳರಾತ್ರಿ ಮ
ಹೀರಮಣಿ ಜಯಲಕ್ಷ್ಮಿ ಯೋಗಿನಿ ಯಜ್ಞ ಶಕ್ತಿಗಳು ।
ವೀರಸಿರಿ ವನಲಕ್ಷ್ಮಿ ಡಾಕಿನಿ
ವಾರಿದೇವತೆ ಡಾಕಿನೀಮುಖಿ
ಭೂರಿಶಕ್ತಿಗಳೈದೆ ಶಬರಿಯರಾಯ್ತು ನಿಮಿಷದಲಿ ॥ ೫೩

---

[1] ಭೂತಗಣ, ಟ [2] ರಾಯ್ತುಪರಮೇ, ಚ. ಟ.

ಜಾಳಿಸಿದ ಹದವಿಲ್ಲುಗಳ ಬಡಿ
ಕೋಲುಗಳ ಸಂಕಲೆಯನಾಯ್ಗಳ
ಕೋಲುವಲೆಗಳ ಕಣ್ಣಿ ವಲೆದಡಿವಲೆಯ ನಿಡಿವಲೆಯ ।
ಕಾಲುಕಣ್ಣಿಯ ಹೆಬ್ಬಲೆಯ ಬೆ
ಳ್ಳಿಲಹೊಜ್ಜೆಗಳ ಗಳಗಳಂಟಿನ
ವೇಲುಗೊಂಬಿನ ಬೇಟೆಕಾಱರು ಬಟಿಸಿದರು ಶಿವನ ॥ ೩೪

ಶ್ರುತಿಗಳೂಟಿಗತರ್ಕಶಾಸ್ತ್ರದ
ಗತಿಯ ಸೋಹಿನ ತಂತ್ರಮಯಸಂ
ಗತಿಯ ಸೋಂಪಿನ ವಿವಿಧಜಪಯಜ್ಞಾದಿಗಳ ಬಲೆಯ ।
ವ್ರತದ ಜಂತ್ರದ ಕಣ್ಣಿಗಳ ಸ
ತ್ಕೃತಿಯ ಕೋಲ್ಗಂಡುಗಳ ಯೋಗ
ಸ್ಥಿತಿಯ ಸರಳಿನ ಬೇಟೆಕಾಱರು ಬಟಿಸಿದರು ಹರನ ॥ ೩೫

ಶ್ರವಣಮನನದ ಬೀಸುವಲೆ ಶಾಂ
ಭವಸುವೇದದ ದೀಕ್ಷೆಗಳ ಬಲು
ಗವಣಿಗಳ ಪಶುಪಾಶಬಂಧದ ಬೋಳೆಯಂಬುಗಳ ।
ನವವಿಧಾಮೆಳಭಕ್ತಿಗಳ ರಣ
ದವಕದೀಹದ ಹುಲ್ಲೆಗಳ ಮೃಗ
ಭವವಿದಾರಣಸುಭಟರೈದಿತು ಶಿವನ ನೇಮದಲಿ ॥ ೩೬

ಸೋಹಿದರೆ ದೆಸೆದೆಸೆಗೆ ಹಾಯ್ದುವು
ವ್ಯೋಹತಮದಂಭಾದಿಮೃಗತತಿ
ತೋಹಿನಲಿ ಬಿದ್ದುವು ಮಹಾಪಾತಕಮದೇಭಚಯ ।
ದ್ರೋಹದೀಯದ ಮೃಗವಪಾಯವ
ರಾಹ ಸಂಕೀರ್ಣೋಪಪಾತಕ
ವಾಹರಿಪುಗಳನಂತವೆಟಿದುವು ಹರನ ಬೇಂಟೆಯುಲಿ ॥ ೩೭

ಜಯಜಯೆಂದುದು ನಿಖಿಳಜಗ ಶ್ರುತಿ
ಚಯ ಛಡಾಳಿಸಿ ಹೊಗಬುತಿರ್ದುವು
ನಯನಗೋಚರವಾಯ್ತು ಸಾಕ್ಷಾತ್ಪರಮಶಿವತತ್ತ್ವ ।
ಲಯದ ಜನನದ ಸುಟಿಯ ಸಂಸ್ಮೃತಿ
ಲಯಸವುದ್ರವ ಸುಟಿದು ಕಳೆ ನಿ
ರ್ಭಯವು ಭಕ್ತರಿಗೆಂಬವೋಲ್ ಮಸಗಿತು ಮಹಾಶಬ್ದ ॥ ೩೪

ಕಿರಾತ ವೇಷಿಯಾದ ಈಶ್ವರನು ಸಪರಿವಾರನಾಗಿ ಇಂದ್ರ
ಕೀಲಕ್ಕೆ ಬಂದುದು.

ಹೇಳುವರೆ ರೋಮಾಂಚನವಲಾ
ಕೇಳು ನೃಪ ಕೈಲಾಸವಾಸಿಯ
ಲೀಲೆಯನು ನಿಜಭಕ್ತಜನಸಂದರ್ಶನಾರ್ಥವಲ ।
ಆಳು ನಡೆತಂದಿಂದ್ರಕೀಲದ
ಶೈಲವನು ಬೆಱಸಿತು ಮಹಾದ್ಭುತ
ದೇಜಿಗೆಯನೇನೆಂಬೆನೈ ಕೈರಾತವಿಭ್ರಮವ ॥ ೩೫

ಈ ರಭಸವನ್ನು ಮೂಕದಾನವನು ಕೇಳಿ ಹಂದಿಯ ರೂಪವನ್ನು
ತಾಳಿ ಬಂದುದು.

ಇಂಬಿನಲ್ಲಿಹ ಮೂಕದಾನವ
ನೆಂಬನೊಬ್ಬನ ತನ್ಮಹಾದ್ರಿನಿ
ತಂಬುವನದ ನಿಕುಂಜದಲಿ ನಿರ್ಭಯವಿಹಾರದಲಿ ।
ಚುಂಬಿಸಿತು ಬಲುರಭಸವದು ವಿಲ
ಯಾಂಬುಧಿಯ ಕಳಕಳವೆನೆ ಸುರರ
ತಿಂಬಿನೀಕ್ಷಣವೆನುತ ಖಳನಾಲಿಸಿದನಾಧ್ವನಿಯ ॥ ೪೦

ಹಂದಿಯಾದನು ದನುಜನಾಗಿರಿ
ಕಂದರವ ಹೊಱವಂಟು ಬೇಟೆಯ
ಮಂದಿಯೊಳಗಡಹಾಯ್ವುತೆತ್ತಿದನಡ್ಡಬಿದ್ದವರ ।

ಹಂದಿಯಿದು ಬಿಡು ನಾಯ್ಗಳನು ಬಿಡು
ಹಿಂದಹಿಡಿ ಕೆಡೆ ಕುತ್ತು ಕೈಕೊ
ಳ್ಳೆಂದು ಗಜಬಜಿಸಿತ್ತು ಗಾವಳಿ ಗಹನಮಧ್ಯದಲಿ ॥ ೪೧

ಎಳವೆಜ್ಜೆಯನಡುವಿದ್ದರಾಹುವೊ
ಲಳವಡುವೆ ದಾಡಿಗಳ ದೊಯ್ದು ಮಿಗೆ
ಬಳದನೀಲಾಚಲಕೆ ಸರಿಯೆಂದೆನಿಪ ಹೇರೊಡಲ ।
ಮುಳಿದು ಗರ್ಜಿಸಿ ಕಿಡಿಸುರಿವಕಂ
ಗಳ ಸರೌದ್ರಾಟೋಪದಲಿ ಕೆ
ಕ್ಕಳಿಸಿದೆಕ್ಕಲ ನೋಡುತಿರ್ದುದು ದೇವಸಂತತಿಯ ॥ ೪೨

ಕೂಡೆ ಕಟ್ಟಿತು ಭೂತಗಣ ದನಿ
ಮಾಡಿ ಭರದಬ್ಬರಿಸಿ ವೆೞೆಯ
ನೀಡಿ ನಾಯ್ಗಳು ತುಡುಕಿದುವು ತಿರುಗಿದರೆ ಹಿಮ್ಮಡಿಯ ।
ಝೂಡಿಸುತ ಕವಿದೆಕ್ಕಲಂದೋ
ಡಾಡಿ ಬಿರಿದುದು ನೂಱುಘಾಯದಿ
ನೋಡುತಿರ್ದುದು ಸೇನೆ ಕಂಡನು ಶೂಲಿ ಸೂಕರನ ॥ ೪೩

ಈಶ್ವರನ ಬಾಣದ ಏಟಿನಿಂದ ಧ್ವನಿಮಾಡುತ್ತಾ ಬಂದ ಹಂದಿಯನ್ನು
ಪಾರ್ಥನು ನೋಡಿದುದು.

ಇದುವೆ ಸಮಯವೆಲಾ ಯೆನುತ ಹೂ
ಡಿದನು ಬಾಣವನುಗಿದು ಪೂರಾ
ಯದಲಿ ತೆಗೆದು ಪಿನಾಕಿ ಯೆಚ್ಚನು ಮೂಕದಾನವನ ।
ಒದೆದು ಹಾಯ್ದುದು ಬಾಣಗಱ್ಱೆಯೊ
ಱಿದುದು ಬದಿಯಲಿ ಕೊಡಹಿ ಘೋಟಿಪು
ತದು ಧನಂಜಯನತ್ತ ಹರಿದುದು ಹೊತ್ತಕಣೆಸಹಿತ ॥ ೪೪

ಪಾರ್ಥನ ಬಾಣದಿಂದ ಹಂದಿಯು ಮೃತವಾಗುವಿಕೆ.

ಬಂದು ಗಿರಿಕಂದರದೊಳಿಹ ಮುನಿ
ವೃಂದದೊಳಗಡಹಾಯ್ದು ಕೆಡಹುತ
ಹಂದಿ ಮೋಹರಿಯ ನೆಗಹಿ ಮಲೆವುತ ಗಜಝಳಿ ಗರ್ಜಿಸಿತು ।
ಮಂದಿ ಬೆದಱುತ ಘೋಷಿಡುತಲಾ
ಯಿಂದುಧರನೇ ಬಲ್ಲ ಶಿವ ಶಿವೆ
ಯೆಂದು ಮೊಱೆಯಿಡೆ ಕೇಳಿ ಕಣ್ದೆಱೆದೆದ್ದನಾಪಾರ್ಥ ॥ ೪೫

ಕಂಡನರ್ಜುನನೀವರಾಹನ
ದಂಡಿ ಲೇಸಲ್ಲಿನುತ ಬಾಣವ
ಗಾಂಡಿವದೊಳಳವಡಿಸಿ ಬೊಬ್ಬಿಱಿದೆಚ್ಚನಾಖಳನ ।
ದಿಂಡುಗೆಡೆದುದು ಕಾಲ ಕೊಡಹುತ
ಗಂಡಶೈಲದ ವೋಲು ಭೂತವ
ದಿಂಡುದಱಿದಾಹಂದಿ ಬಿದ್ದುದು ಪಾರ್ಥನಿದಿರಿನಲಿ ॥ ೪೬

ಹಂದಿ ನನ್ನದು ನನ್ನದು ಯೆಂದು ಶಿವಾರ್ಜುನರ ವಿವಾದ.

ಬಂದನೀಶ್ವರ ನಾವ್ ಕೆಡಹಿದ
ಹಂದಿ ನಮ್ಮದು ತೆಗೆ ಯೆನಲು ನರ
ನೆಂದನೆನ್ನಂಬಿನಲಿ ಬಿದ್ದುದು ಸಾಱು ನೀನೆನಲು ।
ಬಂದುದೇಕಾಮಿಷವಿರೋಧದ
ಕಂದು ಪಾರ್ಥನ ಚಿತ್ತದಲಿ ಬಾ
ಲೇಂದುಧರನೆಂದೆತ್ತ ಬಲ್ಲನು ಕೆಣಕಿದನು ಶಿವನ ॥ ೪೭

ಆರನೆಯ ಸಂಧಿ ಮುಗಿದುದು.

ಏಳನೆಯ ಸಂಧಿ.

ಸೂಚನೆ.

ಕದನಮುಖದಲಿ ಖೋಡಿಯಿಲ್ಲದೆ
ಬೆದಱಿದೊದಗಿದ ನರಗೆ ಕಾರು
ಣ್ಯದಲಿ ಕಾಮವಿರೋಧಿ ಕೊಟ್ಟನು ಪಾಶುಪತಶರವ ॥

ಕಿರಾತನನ್ನು ಕುರಿತು ಅರ್ಜುನನು ನಿನ್ನ ಯಜಮಾನನನ್ನು
ಕರೆದು ತಾ ಎಂದು ಹೇಳಿದುದು.

ಎಲೆ ಕಿರಾತ ಮೆದೀಯಬಾಣದ
ಬಲೆಗೆ ನೀ ಮೃಗವಾಗದಿರು ನಿ
ನ್ನಳವ ಮಱೆಯೈ ಬನದ ನರಿವೊಲಹಕ್ಕೆ ಹರಿಣನಲಿ ।
ಗೆಲಿದಗರುವನು ನೀನು ನಿನ್ನ
ಗ್ಗಳಿಕೆಗಾನಂಜುವನೆ ನಿನ್ನಯ
ದಟಿಕೆ ಪತಿಯುಂಟಾದೊಡಾತನ ಕೊಂಡು ಬಾ ಯೆಂದ ॥ ೧

ಈಶ್ವರನು ನಕ್ಕು ಪಾರ್ವತಿಯ ಮುಂದೆ ಈತನ ಪರಾಕ್ರಮ
ವನ್ನು ಹೇಳಿದುದು.

ಎನಲು ನಕ್ಕನು ಶಂಭು ಬಕುತನ
ಮನದ ಧೃತಿಯನು ಭುಜಬಲವನಾ
ತನ ಪರಾಕ್ರಮಲಕ್ಷ್ಮಿಯನು ಪಾರ್ವತಿಗೆ ತೋಱಿಸಿದ ।
ನೆನೆದು ನುಡಿದನಿದೇನು ತಮ್ಮಡಿ
ನಿನಗೆ ತಪದಲಿ ಖಡ್ಗವೇಕೀ
ಧನುಶರಾವಳಿ ಯೇಕೆ ನಿನ್ನಂಘವಣೆ ಯೇನೆಂದ ॥ ೨

ಅರ್ಜುನನ ಉಪೇಕ್ಷಾವಾಕ್ಯಗಳು.

ಏಕೆ ನಿನಗೀತಪದ ಚಿಂತೆ ವಿ
ವೇಕಶಾಸ್ತ್ರವಿಚಾರವಿದು ವಿಪಿ
ನೌಕಸರ ಸಂಹಾರವಿದ್ಯಾವೃದ್ಧಿ ನಿನ್ನದಲೆ ।
ಆಕೆವಾಳರ ಕರೆಸು ನೀನೇ
ಕಾಕಿ ನಿನ್ನಲಿ ಹರಿಯದಾಹವೆ
ವೀಕೆ ನಿನಗೆಂತೆಂದು ಕಪಟಕಿರಾತನನು ಜಖಿದ ॥ ೩

ಈಶ್ವರನ ವಾಕ್ಯ.

ನೀವು ಬಲ್ಲಿರಿ ಶಾಸ್ತ್ರದಲಿ ಕ
ಸ್ತ್ರವಳಿಯಲಾವಿಂದು ಪಕ್ಷಿಮೃ
ಗಾವಳಿಯ ಬೇಂಟೆಯುಲಿ ಬಲ್ಲೆವು ಜಾತಿಧರ್ಮವಿದು ।
ನೀವು ಬಲುಹುಳ್ಳವರು ನಿಮ್ಮೊಡ
ನಾವು ಸೆಣಸುವರಲ್ಲ ನಿಮ್ಮವೊ
ಲಾವ ಋಷಿ ಕಸ್ತ್ರಜ್ಞನಾತನ ಬಿರುದ ತಡೆಯೆಂದ ॥ ೪

ಅರ್ಜುನನು ನಾನು ಈಶ್ವರನ ಶಿಷ್ಯನೆಂದು ಹೇಳಿದುದು.

ಕಟಕಿಯೇಕೆ ಪುಳಿಂದ ನಾವು
ಬ್ಬಟೆಯ ತಪಸಿಗಳೆಂಬುದಿದು ಪರಿ
ಸ್ಫುಟವಲೇ ತಪ್ಪೇನು ನಿನ್ನೊಡನೆಂದು ಫಲವೇನು ।
ಜಟೆಮೃಗಾಜಿನಭಸ್ಮದೊಡನು
ತ್ಕಟಧನುಶ್ಶರಖಡ್ಗದಲಿ ಧೂ
ರ್ಜಟಿ ಯಿಹನು ನಾವವರ ಶಿಷ್ಯರು ಶಬರ ಕೇಳೆಂದ । ೫

ಅದಕ್ಕೆ ಈಶ್ವರನ ನುಡಿ.

ಲೋಕಶಿಕ್ಷಕರಲ್ಲಲೇ ನಮ
ಗೇಕೆ ನಿಮ್ಮಯ ತಪದ ಚಿಂತೆ ವಿ
ನಾಕಧರನಡಹಾಯ್ದರೆಯು ಬಿಡೆವೆಮ್ಮ ವಾಸಿಗಳ ।

ಈಕಳಂಬವಿದೆಮ್ಮದೆನುತ ವ
ನೌಕಹದ ನೆಳಲಿನಲಿ ನಿಂದು ಪಿ
ನಾಕಿ ನುಡಿದನು ಕಡಿವನೀತನ ಮನದ ಸೈರಣೆಯ ॥ ೬

ಪಾರ್ಥನು ಕೋಪದಿಂದ ಬಾಣಗಳನ್ನು ಹಾಕಿದುದು.

ಮಸಗಿದನು ನಿನ್ನಾತನುಗಿದೆ
ಬ್ಬಿಸಿದ ಹುಲಿಯೋ ನೊಂದ ಹಂದಿಯೊ
ಹಸಿದ ಭುಜಗನೊ ಕಾದಕಟ್ಟುಕ್ಕಿನ ಛಡಾಳತೆಯೊ ।
ಉಸುರುಗಳ ಕರ್ಬೊಗೆಗಳಾಲಿಯು
ಬಿಸುಗುದಿಯ ಬಲುಕೆಂಡವೆಂಬಿನ
ಹೊಸಮಸೆಗಳುರಿ ಝೂಡಿ ಝಳಪಿಸಿ ಪಾರ್ಥ ಖತಿಗೊಂಡ ॥ ೭

ಆದೊಡಿದ ಕೊಳ್ಳನುತ ಕೆನ್ನೆಗೆ
ಸೇದಿ ಬಿಟ್ಟನು ಸರಳನದು ಹಿಂ
ದಾದುದಾಬಳಿ ಸರಳನದ ಹಿಂದುಳುಹಿ ಮತ್ತೊಂದು ।
ಹೋದುದದು ಹಿಂದಿಕ್ಕಿ ಮತ್ತೊಂ
ದೈದಿತತಿವೇಗಾಯ್ಲ್ಗತನದನು
ವಾದಸಾಧ್ಯದ ಸರಳು ಕವಿದುವು ಬಿಟ್ಟಸೂಟಿಯಲಿ ॥ ೮

ಏನ ಹೇಳುವೆನರಸ ಶರದಭಿ
ಮಾನದೇವತೆಯುಂಟೆಲಾ ಹರಿ
ಸೂನುವೆಯದೊಡಾಕೆಯಳಿಯಳ ಚಂಡಿಕಾದೇವಿ ।
ಭಾನುಮಂಡಲದಂಧಕಾರದ
ವೈನತೇಯನ ಭುಜಗತತಿಯ ಸ
ಮಾನಧರ್ಮವ ಕಂಡೆನೀಶಸೊಳರ್ಜುನಾಸ್ತ್ರದಲಿ ॥ ೯

ಮಂಜು ಮುಸುಕಿದೊಡೇನು ಪರ್ವತ
ವಂಜುವುದೆ ಹಾಲಾಹಲವ ನೊಣ
ನೆಂಜಲಿಸುವುದೆ ವಡಬಸಿಖಿ ನನೆವುದೆ ತುಷಾರದಲಿ ।

ಕಂಜನಾಳದಿ ಕಟ್ಟುವಡವುದೆ
ಕುಂಜರನು ನರಶರದ ಜೋಡಿನ
ಜುಂಜುವೊಳಯಲಿ ಜಾಹ್ನವೀಧರ ಜಾಹುವನೆ ಯೆಂದ ॥ ೧೦

ಮತ್ತೆ ಸುಳಿದನು ಸರಳ ಮಳೆಗುನ
ದೆತ್ತ ನಭದೆಸೆಯೆತ್ತ ಧಾರುಣಿ
ಯೆತ್ತಲರ್ಜುನನೆತ್ತ ಕಪಟಕಿರಾತ ತಾನೆತ್ತ ।
ಹೊತ್ತಹೊಗರಿನ ಮೊಳೆವ ಗಳಿಗಳ
ಮುತ್ತು ಗಿಡಿಗಳ ಬಾಯೆಧಾರೆಯ
ಮೊತ್ತವಂದಿಕಿದುವು ಮೃತ್ಯುಂಜಯನ ಸಮ್ಮುಖಕೆ ॥ ೧೧

ಕೋಪದಿಂ ಋಂದ ವಿನಾಯಕಾದಿಗಳನ್ನು ಸಮೂಧಾನ ಪಡಿಸಿದುದು.

ಕೆರಳಿದನು ಹೇರಂಬ ಗುಹನ
ಬ್ಬರಿಸಿದನು ರೋಷದಲಿ ಮಸಗಿತು
ತರತರದ ವರವೀರಭದ್ರಾದ್ಯಖಿಳಭೂತಗಣ ।
ಹರನು ಕಂಡನಿದೇಸಿದೇನ
ಚ್ಚರಿ ಧನಂಜಯನೆಮಗೆ ನೂರ್ಮಡಿ
ಪರಮಹಿತ ನಿಮ್ಮಂವ ನೀವ್ ಗಜಬಜಿಸಬೇಡೆಂದ ॥ ೧೨

ಈಶ್ವರಾರ್ಜುನರ ಪರಸ್ಪರಬಾಣವೃಷ್ಟಿ.

ಎನುತ ಕೊಂಡನು ಧನುವನಾಪಾ
ರ್ಥನ ಶರೌಘವನೆಚ್ಚೊಡೀಕನ
ವೊನಿಗಣೆಯಲಿ ಹೊಡಿದುವು ಬಾಡಿದುವು ಬಳಿಸರಳು । ಚ್ಚಿ
ಕನಲಿ ಕಿವಿವರೆಗುಗಿದು ಫಡ ಹೋ
ಗೆನುತ ಮಗುಳೆಚ್ಚನು ಧನಂಜಯ
ನಸಿತುಶರವನು ಕಡಿದು ಮದನವಿರೋಧಿ ಮಗುಳೆಚ್ಚ ॥ ೧೩

ಎಸುಗೆಯೊಳ್ಳಿತು ಶಬರನತಿಸಾ
ಹಸಿಕನೈ ಬಿಲ್ಲಾಳಲಾ ಸಮ
ಪೆಸನನೆಚ್ಚನು ನವೊಡನೆ ಮಯ್ಯುಪೂತ್ತು ಫಾಯ್ಕನುತ ।

ಹೊಸಮೆಸೆಯ ಹೊಗರಲಗುಗಳ ದ
ಳ್ಳಿಸುವ ಧಾರೆಯ ಕೆಂಗರಿಯ ಢಾ
ಳಿಸುವ ಕಣೆಗಳ ಶರಧಿಯನು ಕವಿಸಿದನು ಕಲಿಪಾರ್ಥ ॥ ೧೪

ಅರ್ಜುನನ ಬಾಣಗಳು ಮುಗಿದರೂ ಉತ್ಸಾಹ
ವಿಕ್ರೀತಿಯಾಗಿರುವಿಕೆ.

ಈಡಿರಿದುವೊಂದೊಂದಱಲಿ ಹೊಗೆ
ಝೂಡಿ ಝಳಪಿಸುವುರಿಗಳಲಿ ಸರ
ಳೋಡಿದುವು ಗಾಂಡಿವವನೊದೆದು ಮಹೇಶನಿದಿರಿನಲಿ ।
ಕಾಡಿದರೆ ಕಾರುಣ್ಯನಿಧಿ ಕೊಂ
ಡಾಡುತಿರ್ದನು ಪಾರ್ಥನಂಬಿನ
ಮೊಾಡಿಗೆಯ ಸಂವರಣೆ ಸವೆದುದು ಸವೆಯದಾಟೋಪ ॥ ೧೫

ಎಲೆ ಕಿರಾತ ಕಿರಾತರೊಳಗ
ಗ್ಗಳಯನಹೆಯೋ ದೇವದಾನವ
ರೊಳಗೆ ಸೈರಿಸಿ ನಿಲುವನಾವನು ನಮ್ಮ ವಿಲಗದಲಿ ।
ಅಳುಕದಿರು ಕಲಿಯಾಗೆನುತ ತುದಿ
ಹಿಳುಕ ಮಂತ್ರಿಸಿ ದಿವ್ಯಬಾಣಾ
ವಳಿಗಳಲಿ ಬಾಲೇಂದುಮೌಳಿಯನೆಚ್ಚನಾಪಾರ್ಥ ॥ ೧೬

ಅರ್ಜುನನ ಬಾಣಗಳನ್ನು ಈಶ್ವರನು ನುಂಗಿದುದು.

ಏಸುಮೆಂತಾಸ್ತ್ರದಲಿ ಮುಸುಕಿದೊ
ಡೈಸುವೆನು ಹರ ನುಂಗಿದನು ಮಗು
ಚೇಸುಕೂರಂಬುಗಳಲೆಚೊ ಡೆ ಕಡಿದನಂಬಿನಲಿ ।
ಈಸುವೆಗ್ಗಳರಾರೆನಿಪ ಜೆ
ಜ್ಞಾಸೆ ಬೇಡಾ ಕ್ಷತ್ರತಾಮಸ
ವೇಸು ಬಲುಹೋ ನಿಮ್ಮ ಜಾತಿಗೆ ಭೂಪ ಕೇಳೆಂದ ॥ ೧೭

ಆಗ ಅರ್ಜುನನ ಪರಿತಾಪ.

ಅಂದು ಖಾಂಡವವೆನೆದ ದಹನದಿ
ಬಂದುದಕ್ಷಯಬಾಣ ಬ್ರಾಣದ್ಧಿ
ಯಿಂದು ಬಜಿತುದು ಒಹಳಜಲನಿಧಿ ಬತ್ತುವೆಂದದಲಿ ।
ಇಂದುಮೌಳಿಯ ಸೇವೆಗಿಂದು ಪು
ಳಿಂದ ಕಂಟಕನಾದನೇ ಹಾ .
ಯೆಂದು ಗರ್ಜಿಸಿ ಚಾಪದಿಂದಪ್ಪಳಿಸಿದನು ಶಿವನ ॥ ೧೪

ಕಳಚಿದನು ದಂಡೆಯಲಿ ಫಣಿಯವ
ನಳುಕಿದನಲಾ ಯೆನುತ ಮಗುಚಿ
ಪ್ಪಳಿಸಿದನು ಮೇಲ್ವಾಯ್ದಿ ಕೊಯ್ದನು ಜಜ್ಜಿದು ರ್ಝೋಂಪಿಸುತ।
ಮೆಲುನಗೆಯೆಲರ್ಜುನನ ಚಾಪವ
ಸೆಳದು ಕೊಂಡನು ತನ್ನ ಭಕ್ತನ
ಬಳವಿಗೆಯನೇ ಮಾಡಿ ಫೇಯೆಂದುದು ಸುರಸ್ತೋಮ ॥ ೧೫

ಅರ್ಜುನನು ಭಯಗೊಂಡುದು.

ತಿಳಿವನುಗಿದಡಿಗಿಕ್ಕಿ ಮಿಳಿವೆಯ
ಕಳಕಳವೆ ಮೇಲಾಯ್ತು ತಾಮಸ
ಜಲನಿಧಿಯ ತಳವುಳಲ [1] ಮುಟ್ಟಿತು ಮನ ಧನಂಜಯನ ।
ಸೆಳದನೊರೆಯಲಡಾಯುಧವ ಬೀ
ಟಿಲವೊ ಶಬರಾ ಯೆನುತ ಪೊಯ್ದನು
ತಳರಿಲೆಯ ತಳದೆಳವಿಜಿಯನೆಲೆವನೆಯ ಪಶುಪತಿಯ ॥ ೧೦

ಮರದ ಹೆಗ್ಗೊಂಬುಗಳಲಿಟ್ಟನು
ತಿರುಹಿ ಕಲ್ಲುಂಡುಗಳ ಮಚ್ಚೆಯಲಿ
ಹರನ ಮುಸುಕಿದನೇನನೆಂಬೆನು ಪಾರ್ಥನುರುವಣೆಯ ।

[1] ತಾಯ್ಮಳಲ, ಚ.

ಸರಳಸಾರದಲಿನಿತುವೆನು ಕ
ತ್ತರಿಸಿ ಕರುಣಾಜಲಧಿ ನುಡಿದನು
ಮರುಳ ತಮ್ಮಡಿ ಕೈದುವುಳ್ಳರೆ ಕೊಂಡು ಬಾ ಯೆಂದ ॥ ೧೧

ಬಾಹುಯುದ್ಧಕ್ಕಾಗಿ ಈಶ್ವರನನ್ನು ಕರೆದುದು.

ಕೈದುವೇಕೆ ಪುಳಿಂದ ನಮ್ಮೊಡ
ನೈದಿಸಾ ಭುಜಯುದ್ಧವನು ಬಲು
ಗೈದುವಿದೆಲಾ ಮುಷ್ಠಿ ನಿನಗದು ಪಾಯಚೊಕ್ಕೆಯವ ।
ಕಾದುಕೊಳ್ಳನುವಾಗು ನಿನ್ನವ
ರೈದಿ ನೋಡಲಿ ಯೆನುತ ಭುಜವನು
ಹೊಯ್ದು ನಿಂದನು ಪಾರ್ಥನುಱಿ ಬೆಱಗಾಗೆ ಭೂತಗಣ ॥ ೧೩

ಪಾರ್ವತಿಯು ಮುಂದೆ ಈತನ ತಪಸ್ಸಿನ ಕ್ರಮವನ್ನು
ಹೇಳಿದುದು

ಕಂಡಿರೇ ದೇವಿಯಱರೆ ನರನು
ದ್ದಂಡತನವೆನು ತಱಗೆಲೆಯ ಕೈ
ಕೊಂಡು ತಿಂಗಳು ನಾಲ್ಕ ಪವನಾಹಾರದಲಿ ಬಟ್ಟಿಕ ।
ದಂಡಿಸಿದನೀದೇಹವನು ನಾ
ವೆಂಡಲೆಯಲೊದಗಿದನಲೇ ಸಮೆ
ದಂಡಿಯಲಿ ನಮ್ಮೊಡನೆ ಯೆಂದನು ನಗುತ ಶಶಿಮೌಳಿ ॥ ೧೪

ಹಾಱಿತಾಯುಧವೆಂದು ಭೀತಿಗೆ
ಮಾಱುಹೋದನೆ ವೀರರಸ ಸೊಱೆ
ಯಾಱಿತೇ ನಿಜಬಾಹುಸತ್ವದೊಳುಂಟೆ ಭಯಭರೋಡಿ ।
ವಿಾಱಿ ಹತಕಂತುಕದ ವೋಲು ಪುಟ
ವೇಱುತಿದೆ ವಿಕ್ರಮ ಛಡಾಳಿಸಿ
ಬೀಱುತಿದೆ ಭುಜಭಾರಿಯಂಕವ ದೇವಿ ನೋಡೆಂದ ॥ ೧೫

ಈತ ನರನೆಂಬನು ಕಣಾ ಸಂ
ಗಾತಿ ನಾರಾಯಣಋಷಿಗೆ ತಾ
ನೀತಗಳು ಹರಿಯಂಶಭೂತರು ಭಕ್ತರಿವರೆಮಗೆ ।
ಈತನೆನ್ನಯ ಪಾಶುಪತವಿ
ಖ್ಯಾತಬಾಣವ ಬೀಡಿ ತಪದಲಿ
ವೀತರಾಗದ್ವೇಷನಾದನು ಕಾಂತೆ ಕೇಳೆಂದ ॥ ೬೬

ಪಾರ್ಥ ಮತ್ತು ಈಶ್ವರನ ಬಾಹುಯುದ್ಧ.

ಕೊಡುವೆನೀತಂಗೆಮ್ಮ ಶರವನು
ಮಡದಿ ಮತ್ತೆಯು ನೋಡು ಪಾರ್ಥನ
ಕಡುಹನೆನುತಿದಿರಾಗಿ ಬಾಹುಪ್ಪಳಿಸಿ ಬೊಬ್ಬಿಡುತ ।
ಪಿಡಿವರಿಬ್ಬರು ಕೈಗಳನು ಪೊ
ಕ್ಕೊಡನೆ ಹತ್ತಾಹತ್ತಿಯಲಿ ಮಿಗೆ
ಜಡಿತೆಯಲಿ ಜಾವಡಿಸಿದರು [1] ಬಹುವಿಧದ ಬಿನ್ನಣವೆ ॥ ೬೭

ಬಿಗಿವ ಬಿಡಿಸುವ ಬಿಡಿಸಿದಾಹ್ವಣ
ತ್ರಗೆವ ಕಳಚುವ ಕೊಂಬಲಳೆಯಲಿ
ಹೊಗುವ ಹತ್ತುವ ಲವಣಿಯಲಿ ಲಾಗಿಸುವ ಹೊಲಿವೆಡುವೆ ।
ಚಿಗಿವ ತೊಡಚುವ ಬಿಡುವ ಬೀಸುವ [2]
ಬಗಿವ ಬಳಸುವ ಬಂಧಗತಿಯಲಿ
ಲಗಡಿಸುವ ಲೋಕೈಕವೀರರು ಹೊಕ್ಕು ಹೆಣಗಿದರು ॥ ೬೮

ಕರವಳಯ ಕರಹತಿಯ [3] ಡೊಕ್ಕರ
ಶಿರವೆ ಧಣುಧಣುವೆಟ್ಟತಳ ಭೊ
ಪ್ಪರ ಮುವೆಂಗುಲಕಂದ ಡೊಕ್ಕರ ತೋಳಿಹತ್ತದಲಿ ।
ಸರಿಸಮೆರ್ಕಟಬಂಧಪಟ್ಟಸ
ಉರಗಬಂಧನಬಾಹುದಣುವೆಂ
ತರಲಗಡಿಯುಂಬಿನಿತರಲಿ ತೋಳಿವರು ಕೌಶಲವೆ ॥ ೬೯

---

[1] ಚಾಳ್ಯೆದರು, ಚ. [2] ಚಿಗಿವ ಬಿಡಿಸುವ, ಚ. [3] ತಳಹತ್ತ, ಚ. ಟ

ಮುಖವ ಬಿಡಿಸುವ ಡಗೆಯ ಸೈರಿಸಿ
ತೆರಳಿಚುವ ತಳವೆಮೀಲುಗಳಲು
ತ್ತರಿಸವೇಜುವ ಬೀಪೆ ಚರಿಸುವ [1] ಸುಟಿವ ವಂಚಿಸುವ ।
ಹೊರಳ್ವತನಿಹೋರಟೆಯು ಸತ್ವೋ
ತ್ಕರದ ಶಮವನು ಶಂಭು ಶಿಷ್ಯಗೆ
ಪರಿವಿಡಿಯ ತೋಱಿಸುವೊಲಿರ್ದನು ಭೂಪ ಕೇಳಂದ ॥ ೩೦

ಘಾಯವುಂಟೀ ತೋಱು ನೀ ನಡು
ಪಾಯ ಬಿಡು ಜೊಕ್ಕೆಯವನೆನುತಲ
ಜೇಯನೊಡನಿದಿರೆದ್ದು ತಿವಿದನು ಹರನ ಪೇರುರವ ।
ಘಾಯ ಘಾತಿಗೆ ನಿಮ್ಮ ಮತವೆಮೆ
ಗಾಯ್ತೆನುತ ತ್ರಿಪುರಾರಿ ಕಡು ಪೂ
ರಾಯದಲಿ ಕರವೆತ್ತಿನಸು ತಿವಿದನು ಧನಂಜಯನ ॥ ೩೧

ತರಹರಿಸಿ ನರನಿಕ್ಕಿದನು ಶಂ
ಕರನ ವಕ್ಷಸ್ಸ್ಥಳವನೆಡೆಯಲಿ
ಮುಖದು ಕಳಚಿ ಗಿರೀಶನೆಱಗಿದನಿಂದ್ರನಂದನನ ।
ಮರಳಿ ತಿವಿದನು ಪಾರ್ಥನೀತನ
ಶಿರಕೆ ಕೊಟ್ಟನು ಶಂಭುವಿಂತಿ
ಬ್ಬರ ವಿಷಮಘಾಯದ ಗಡಾವಣೆ ಘಲ್ಲಿಸಿತು ಜಗವ ॥ ೩೨

ಸುಯ್ಲು ಹೊಗೆಗಳ ಹೊದರುದಿವಿಗಳ
ಮೆಯ್ಲುಳಿಯ ಮುಖವಿಗಳ ದೃಢವೇ
ಗಾಯ್ಲರಿಕ್ಕಿದ ಘಾಯಘಾತಿಗೆ ಮುಷ್ಕೃಕಿಡಿಯೇಪೆ ।
ಶಯ್ಲಹತಿಗಳ ಭಾರಣೆಯ ಬಿರು
ವೊಯ್ಲು ಬೆಳ ಸಿರಿವಂತರಿವರೆನ
ಲೈಲಘೈಲದ ಜರಡುಗಳ ನರನಾಥ ಕೇಳಂದ ॥ ೩೩

---

1 ಹತ್ತುವ, ಟ.

ತ್ರಾಣವೆಂತುಟೊ ಶಿವ ಶಿವಾ ಸ
ತ್ರಾಣನಹೆ ಬಹುದಿವಸ ಭುವನ
ಪ್ರಾಣನೇ ಪೋಷಣದಲಾ ಮೆರ್ಚು ಪೂತು ಜಗಜಟ್ಟಿ ।
ಕಾಣೆ ನಿನಗೆ ಸಮೊನನನು ಶಿವ
ನಾಣೆ ಗುಣವಲಸೂಯೆಯೋ ತ
ನ್ನಾಣೆ ನೋಡಾ ಶಬರಿ ಯೆಂದನು ನಗುತ ಶಶಿಮೌಳಿ [1] ॥ ೩೪

ಅರ್ಜುನನು ಈಶ್ವರನ್ನು ಬೇಡಿದುದು.

ನಿನಗೆ ನಾ ಬೆಸಗಾದೆ ನೀನಿಂ
ದೆನಗೆ ಮೆಚ್ಚಿ ದೆ [2] ದೇವದಾನವ
ಜನವೆನಗೆ ಪಾಡಲ್ಲ ನೀ ಪಲ್ಲಣಿಸಿದೈ ನಮ್ಮಾ ।
ಇನನೊ ಮೀಣ್ ದೇವೇಂದ್ರನೋ ಹರಿ
ತನುಜನೋ ಹರಿಯೋ ಮಹಾದೇ
ವನೊ ಕಿರಾತನೊ ಮೀಣೆನುತ ಮತ್ತೆಱಗಿದನು ಶಿವನ ॥ ೩೫

ಅರ್ಜುನನನ್ನು ನೋಡಿ ಶಿವನ ಪಶ್ಚಾತ್ತಾಪ.

ಘಾಯವನು ಮನ್ನಿಸುತ ಶಿವ ಪೂ
ರಾಯದಲಿ ಮೆಟ್ಟಿದನು ಪಾರ್ಥನ
ಬಾಯೊಳೂಕ್ಕುದು ರುಧಿರ ನಾಸಿಕದೆರಡುಬಾಹೆಯಲಿ ।
ನೋಯು ನೊಂದನು ವಿಸ್ಮಯದ ಮುನಿಯಲ
ಪಾಯವಾದುದಕಟಕಟಾ ತ
ಪ್ಪಾಯಿತೈ ತಪ್ಪಾಯ್ತೆನುತ ಮಱುಗಿದನು ಮನನಾಗಿ ॥ ೩೬

ಬಿರಿದುದೀತನ ಗರ್ವಗಿರಿ ಮೆಡ
ಮುಱಿದುದೀತನ ಶಕ್ತಿ ಸಲೆ ಟೆ
ಬ್ಬರಿಸಿತಿಂದ್ರಿಯವರ್ಗ ನೆಗ್ಗಿತು ನೆನಹಿನೊಡ್ಡವಣೆ ।
ಹರಿದುವಂಗಸ್ವೇದಜಲ ಕಾ
ಹುರಕೆ ಕಾಲ್ವೊಳೆಯಾಯ್ತು ಮತಿನಿ
ಬ್ಬರದ ಬೆಱಗಿನ ಬೆದೆಯಲಿ ಜಿಂಡಾದನಾಪಾರ್ಥ ॥ ೩೭

[1] ಮದನಾರಿ, ಚ. ಟ. [2] ವಂಚಿಸದೆ, ಕ.

ಅರ್ಜುನನ ಸಂತಾಪ.

ಆವ ಸುವ್ರತಭಂಗವೋ ಮೇ
ನಾವ ದೈವದ್ರೋಹವೋ ಮೇ .
ನಾವ ಶಿವಭಕ್ತಾಪರಾಧವೊ ಪೂರ್ವಜನ್ಮದಲಿ ।
ಆವ ಹಿರಿಯರ ಹಳಿದೆನೋ ತಾ
ನಾವ ಧರ್ಮವನಳಿದೆನೋ ತನ
ಗೀವಿಧಿಯ [1] ಪರಿಭವವಮಹೀರುಹ ಫಲಿತವಾಯ್ತೆಂದ ॥ ೩೯

ಈತ ದಿಟಕೆ ಪುಳಿಂದನೇ ವಿ
ಖ್ಯಾತನರ ತಾನಲ್ಲಲೇ ದಿಟ
ಜಾತಿಪಾರ್ಥನೆ ತಾ ನಿಧಾನಿಸೆ ಶಬರನಿವನಲ್ಲ ।
ಈತ ಪಲ್ಲಟವಾದನೋ ಮೇಣ್
ಶ್ವೇತತುರಗನ ಪಲ್ಲಟವೊ ಕುಂ
ತೀತನುಜ ತಾನಲ್ಲ ನಿಶ್ಚಯವೆಂದು ಚಿಂತಿಸಿದ ॥ ೪೯

ಅಱಿದನೇ ಶಿವನೆಂದು ದೈವದ
ಸರಿಯ ಬಲುಹನು ಕಂಡೊಡೆಯು ದಿಟ
ವಱಿಯಬಹುದೇ ರಹಸ್ಯ ಮಾಯಾಗೋಪಿಕಾತ್ಮಜನ ।
ಅಱುಹಿಕೊಡವೇ ವೇದಶಿರವೆ
ಚರಿಸಿ ತನ್ನನಖಂಡಚಿನ್ಮಯ
ನಱಿವು ತಾನೆಂದಾವನಱಿವನು ಭೂಪ ಕೇಳೆಂದ ॥ ೪೦

ಹಂದಿಯೈತರಲೀಕೆ [2] ಬನದ ಪು
ಳಿಂದನಲಿ ಸೆಣಸಾಗಲೀತಕೆ ಪು
ಳಿಂದವಮಾನಕರು ತಾವವಮಾನ್ಯ ರಾದೆವೆಲೆ ।
ಇಂದುಮೌಳಿಯುಪೇಕ್ಷೆಯೋ ತಾ
ನಿಂದು ಶಿವಪದಭಕ್ತಿಶೂನ್ಯನೊ
ಮಂದಭಾಗ್ಯನು ತಾನಲಾ ಪಾಯೆನುತ ಚಿಂತಿಸಿದ ॥ ೪೧

---

1 ಗಾಪಪರಿ, ಚ. 2 ಯೀತಕೆತನಗೆ, ಚ.

ತಿರುಗಿ ಶಿವನನ್ನು ಪ್ರಾರ್ಥಿಸಲಾರಂಭಿಸಿದುದು.

ಏಕೆ ಚಿಂತೆ ವೃಥಾ ಮನೋವ್ಯಥೆ
ಕಾಕಲಾ ನಾವಜ್ಞಾ ರಾಗೆ ಪಿ
ನಾಕಿ ಮಾಡುವುದೇನು ಮುಖಿಯೊಗುವೆನು ಮಹೇಶ್ವರನ ।
ಈಕಿರಾತನ ಹರಿಬವೆನು ಬಿ
ಕೇಕೆ ನಿಮಿಷಕೆ ಗೆಲುವೆನೆಂದು ವಿ
ವೇಕಶಿರಿಯು ಕಟಾಹ್ಲ ಚಿತ್ತಕೆ ಮೂರಿದನು ಮನವ ॥ ೪೦

ಮಣಲಲಿಂಗವ ಮಾಡಿದನು ನಿ
ರ್ಗುಣನ ಸಗುಣಾರಾಧನೆಯ ಮ
ನ್ನಣೆಗಳಲಿ ವಿಸ್ತರಿಸಿದನು ವಿವಿಧಾಗಮೋಕ್ತಿಯಲಿ ।
ಕಣಗಿಲೆಯ ಬಂಧುಗೆಯ ಕಕ್ಕೆಯ
ಸಣಬಿರೀಷದ ಕುಸುಮದಲಿ ರಿಪು
ಗಣಭಯಂಕರನನರ್ಚಿಸಿದನಂಧಾಸುರಾಂತಕನ ॥ ೪೧

ಅಮಲಶೈವಸ್ತವವ ಪೇಳುತ
ನಮಿಸಿದನು ಬಲ ಬಂದು ಪುನರಪಿ
ವಿಮಲವೆಂತಿ ವೈಯ್ಯಿಕ್ಕಿದನು ಭಯಭರಿತಭಕ್ತಿಯಲಿ [1] ।
ಕಮಲಸಂಭವವಂದ್ಯ ಗಿರಿಜಾ
ರಮಣ ಭಕ್ತಕುಟುಂಬಿ ದೇವೋ
ತ್ತಮ ತ್ರಿಯಂಬಕ ಪುಷ್ಪವರ್ಧನ ಕರುಣಿಸುವ್ರದೆಂದ ॥ ೪೪

ಗೆಲಿದನೆನ್ನನು ಶಬರನೀತನ
ಗೆಲುವಶಕ್ತಿಯ ಕೊಡು ಕಿರಾತನ
ಬಲುಹ ಭಂಗಿಸಿತೆನ್ನ ಬಿಂಕದ ವೊಡೆಯ ನೀನಿರಲು ।
ಪಲವು ಮಾತೇನಿವನ ಗೆಲುವ
ಗ್ಗಳಿಕೆಯನು ಕೃಪೆಮಾಡೆನುತ ಪರ
ಬಲದಳಾಪಟ ಭುಜವನೊದರಿಸುತಿತ್ತ ಮುಂದಾದ ॥ ೪೫

[1] ನಿಜಭಾವಶುದ್ಧಿಯಲಿ, ಚ.

ತಿರುಗಿ ಯುದ್ಧಕ್ಕೆ ಕರೆಯುವಾಗ ಶಿವನು ಪ್ರತ್ಯಕ್ಷವಾದುದು.

ಕಾಣಬಹುದೋ ಶಬರ ನಿನ್ನಯ
ಪ್ರಾಣವೆನ್ನಾಧೀನ ವಹಿಯಾ
ಸ್ಥಾಣುವಿನ ಬಲುಹುಂಟು ಹಿಂಡುವೆನಿನ್ನು ನಿನ್ನಸುವ ।
ಗೋಣ ಮುರಿವೆನು ತುಡುಕಿದರೆ ಶಿವ
ನಾಣೆ ಬಾ ಸಂಮುಖಕೆ ಹಾಣಾ
ಹಾಣಿಗಿನ್ನನುವಾಗೆನುತಲೆವೆಯಿಕ್ಕದೀಕ್ಷಿಸಿದ ॥ ೪೬

ಕಂಡನರ್ಜುನನೀಕಿರಾತನ
ಮಂಡೆಯಲಿ ತಾ ಮಳಲಲಿಂಗದ
ಮಂಡೆಯಲಿ ಪೂಜಿಸಿದ ಬಹುವಿಧಕುಸುಮಮಂಜರಿಯ ।
ಕಂಡನಿತ್ತಲು ಮುರಿದು ಪುನರಪಿ
ಕಂಡನೀಶಬರಂಗಿದೆತ್ತಣ
ದಂಡಿಯಿದು ತಾನೆನುತ ಬಹುಗಾಗಿದ್ದನಾಪಾರ್ಥ [1] ॥ ೪೭

ಆಗಲಿದನಾರೈವೆನೆನುತವ
ನಾಗವೋಕ್ಕುದಿ ಮತ್ತೆ ಲಿಂಗದ
ಮೇಗರೆಯು ನಿರ್ಮಾಲ್ಯವನು ಬೇಹುರಿಸಿ ಭಕ್ತಿಯಲಿ ।
ಪೂಗಳನು ತಳಿದೊಟ್ಟ ಕರುಣಾ
ಸಾಗರನ ಬಲವೆಂದು ದಹ್ಷನ
ಯಾಗಹರನೆ ನಮೆಶಿವಾಯೆನುತಿತ್ತ ಮುಂದಾವ ॥ ೪೮

ಮತ್ತೆ ಕಂಡನು ಖಂಡಪರಶುವಿ
ನುತ್ತಮಾಂಗದೊಳೀಚೆಯಲಿ ಲಿಂ
ಗೋತ್ತಮಾಂಗದ ಮೇಲೆ ಕಾಣನು ಕುಸುಮಮಂಜರಿಯ ।
ಕುತ್ತಿದುವು ಕೌತುಕವ ಕಂಗಳು
ಹೊತ್ತವದುಭುತವೆನು ಭಯಾನಕ
ವೆತ್ತ ರಸದಲಿ ಮುಳುಗಿದುವು ಕಂಗಳು ಧನಂಜಯನ ॥ ೪೯

---

1 ದಂಡಿಯೋ ಹಾಯೆನುತಸ್ಯೆವೆಹುಗಾದನಾಪಾರ್ಥ, ಚ.

ಶಿವನಲಾ ಸಾಕ್ಷಾಚ್ಛತುರ್ದಶ
ಭುವನಕರ್ತುವಲಾ ಕಿರಾತ
ವ್ಯವಹರಣಿಯಲಿ ಸುಚಿದನಸ್ಮದನುಗ್ರಹಾರ್ಥವೆಲ ।
ಎವಗೆ ನಿರಕನ ತಪದ ಪಿತ್ತದ
ಭವಣೆ ತಲೆಗೇಱಿದುದಲಾ ಶಿವ
ಶಿವ ಮಹಾದೇವಾ ಯೆನುತ ನುಱುಗಿದನು ಕಲಿಪಾರ್ಥ ॥ ೫೦

ಯುದ್ಧವಾಡಿದ್ದಕ್ಕಾಗಿ ಅರ್ಜುನನ ಪಶ್ಚಾತ್ತಾಪ.

ಹೃದಯವಿಬ್ಬಗೆಯಾಯ್ತು ಕಂಗಳು
ಪೆದಱಿದುವು ವೈವರ್ಣ್ಯದಲಿ ತನು
ಗದಗದಿಸಿತಡಿಗಡಿಗೆ ಝಡಿದುದು ರೋಮಪುಳಕದಲಿ ।
ಉದುರಿದುದು ನೇತ್ರಾಂಬು ಬಿಂಕದ
ಬೆದರಿಕೆಯ ಮೂಢತೆಯ ತಿಳುಹಿನ
ಮುದದ ಖೇದದ ಘಾಯಘಾಸಿಗೆ ಪಾರ್ಥನೊಳಗಾದ ॥ ೫೧

ಸ್ವೇದಜಲದಲಿ ಮಿಂದು ಪುನರಪಿ
ಖೇದಪಂಕದೊಳದ್ದು ಬಹಳವಿ
ಷಾದರಜದಲಿ ಹೊರಟಿ ಭಯರಸನದಿಯೊಳೀಸಾಡಿ ।
ಮೈದೆಗೆದು ಮರನಾಗಿ ದೆಸೆಯಲಿ
ಬೀದಿವರಿವುತ ವಿವಿಧಭಾವದ
ಭೇದದಲಿ ಮನ ಮುಂದುಗೆಡುತಿರ್ದುದು ಧನಂಜಯನ ॥ ೫೨

ಏಸು ಬಾಣದೊಳಚ್ಚೊಡೆಯು ಹೊಱ
ಸೂಸಿದುವು ತಾನಱಿದುದಿಲ್ಲ ಮ
ಹಾಶರವೆ ಕಳುಹಿಂದೊಡೆ ನುಂಗಿದನ್ನಡಱಿವೆನೆ ತಾನು ।
ಆಶರಾಸನಖಡ್ಗವನು ಕೊಳ
ಲೈಸರೊಳಗೆಚ್ಚತ್ತೆನೇ ಹಿಂ
ದೇಸುಜನ್ಮದ ಜಾಡ್ಯಜವನಿಕೆಯೋದುದೆನಗೆಂದ ॥ ೫೩

ಆವನನು ಜಪಯಜ್ಞದಲಿ ಸಂ
ಭಾವಿಸುವೆರಾವನ ಪದಾಂಬುಜ
ಸೇವೆಯಲಿ ಸನಕಾದಿಗಳು ಧನ್ಯಾಭಿಮಾನಿಗಳು ।
ಆವನೊಬ್ಬನೆ ನಾದಬಿಂದುಕ
ಳಾವಿಶೇಷಾತೀತನಾತನೊ
ಳಾವು ಸಮರಕೆ ಸೆಣಸಿದೆವಲಾ ಶಿವ ಶಿವಾ ಯೆಂದ ॥ ೫೪

ಆವನನು ಯಜ್ಞಾದಿಕರ್ಮದೊ
ಳಾವನನು ನಿಯಮಾದಿಯೋಗದೊ
ಳಾವನನು ವಿವಿಧಾರ್ಚನಾಂಕಿತಭಕ್ತಿಮಾರ್ಗದಲಿ ।
ಆವನನು ಜೀವಾತ್ಮಚೈತ
ನ್ಯಾವಲಂಬನದಲ್ಲಿಯಾಶ್ವರ
ನಾವನೀತನೊಳಮಗೆ ತೋಟಿಯೆ ಶಿವ ಶಿವಾ ಯೆಂದ ॥ ೫೫

ಲೋಕವಾವನ ಮಾಯೆ ಯಾಜಗ
ದಾಕೆವಾಳರದಾರು ಚಂದ್ರದಿ
ವಾಕರಗ್ರಹರಾಶಿತಾರೆಗಳಾರ ತೇಜದಲಿ ।
ಲೋಕರಚನಾರಕ್ಷೆಸಂಹೃತಿ
ವ್ಯಾಕರಣೆ ತಾನಾರದೀಜಗ
ದೇಕದೈವದ ಕೂಡೆ ದಂಡಿಯೆ [1] ಶಿವ ಶಿವಾಯೆಂದ ॥ ೫೬

ಜೀವರೂಪನು ಸಾಕ್ಷಿ ಕೂಟ
ಸ್ಥಾವಲಂಬನಕರ್ತು ಚೇತನ
ನಾವನೀ ಕ್ಷೇತ್ರಜ್ಞನಂತರ್ಯಾಮಿಸಂಜ್ಞೆಯಲಿ ।
ಆವನಮಳಪ್ರತ್ಯಗಾತುಮ
ನಾವನುರುಪರಮಾತ್ಮನೀಶ್ವರ
ನಾವನಾತನೊಳಮಗೆ ತೋಟಿಯೆ ಶಿವ ಶಿವಾಯೆಂದ ॥ ೫೭

---

1 ತೋಟಿಯೆ, ಚ.

ಸ್ಫುರದಲಿಂಗನು ಲಿಂಗಮೂಲೋ
ತ್ಕರನುದಾರವ್ಯಕ್ತ ಸದಸ
ತ್ಪರದಪರ ಶಿವನಾರು ಶೈವೋತ್ಕರುಷಲಿಂಗದಲಿ ।
ಪರಮಪರರೂಪಾತ್ಪರಾತ್ಪರ
ತರನಿರೂಪನದಾವನಾತನೊ
ಳರರೆ ತಾವೆಚ್ಚಾ ಡಿದೆವಲಾ ಶಿವ ಶಿವಾ ಯೆಂದ ॥ ೪೪

ಆಅಕಾರಉಕಾರವಿಮಲಮ
ಕಾರಯುಕ್ತೇಕಾಕ್ಷರದ ವಿ
ಸ್ತಾರಿಯಾವನು ಮೌತ್ಯಕಾಕ್ಷರರೂಪನಕ್ಷಯನು ।
ಆರು ವಾಙ್ಮಯನಾರು ವಾಚೋ
ದೂರನಾರು ವೆಚೋನಿಯಾಮಕ
ನಾರವನ ಕೂಡೆಮಗೆ ದಂಡಿಯೆ ಶಿವ ಶಿವಾ ಯೆಂದ ॥ ೪೯

ಗಾಹು ಪತ್ತಾಹತ್ತಿ ಗಡ ನಿ
ರ್ದೇಹನೊಡನೆ ಮಹಾಶರೌಘಕೆ
ಮೇಹು ಗಡ ಜೀವನವು ಮೃತ್ಯುಂಜಯನ ಸೀಮೆಯಲಿ ।
ಆಹ ಮೊವಲೆ ಗಡ ಸುನಿಗಮ
ವ್ಯೂಹದೂರನ ಕೂಡೆ ಪರನೊಡ
ನಾಹವಕೆ ಸಮಜೋಳಿ ನಾವ್ ಗಡ ಶಿವ ಶಿವಾ ಯೆಂದ ॥ ೫೦

ಹೂಡಿ ಜಗವೆನು ಜಗದ ಜೀವರ
ಕೂಡೆ ಬೆರಸಿ ಸಮಸ್ತವಿಷಯದೊ
ಳಾಡಿ ಸೊಗಸುವನಾತನುಪಭೋಗಪ್ರಪಂಚದಲಿ ।
ಹೂಡದಟಿಯದೆ ಗಮಿಸಿ ಮರಳದ
ಕೂಡದಗಲದ ನಿತ್ಯತೃಪ್ತನಿ
ರೂಢನೊಡನೆಚ್ಚಾ ಡಿದೆವಲಾ ಶಿವ ಶಿವಾ ಯೆಂದ ॥ ೫೧

ಎವೆಗೆರಡು ಕಣ್ ವಿಶ್ವತಶ್ಚ
ಕ್ಷುವಿನೊಡನೆ ಸಕ್ರೋಧದರುಶನ
ವೆವೆಗೆರಡುಭುಜ ವಿಶ್ವತೋಭುಜನೊಡನೆ ಸಂಗ್ರಾಮ ।
ಭುವನಚರಣನ ವಿಶ್ವತೋಮುಖ
ಶಿವನ ನಮ್ಮಿಷ್ಟಕಾಲು ನಾಲಿಗೆ
ಯವಗಡಿಸಿ ಗೆಲಲಾವ್ ಸಮರ್ಥರೆ ಶಿವ ಶಿವಾ ಯೆಂದ ॥ ೬೦

ಆವನೊಬ್ಬನಣೋರಣೀಯ ನ
ದಾವನುರುಮಹತೋಮಹೀಯನ
ದಾವನುರುತರದೃಷ್ಟಿಸಂಗತವಿಶ್ವಸಮೆಯದಲಿ ।
ಆವನೊಬ್ಬನ ನಾಮರೂಪಗು
ಣಾವಲಂಬನನಲ್ಲದೀಶ್ವರ
ನಾವನಾತನ ಕೂಡೆ ತೋಟಿಯೆ ಶಿವ ಶಿವಾ ಯೆಂದ ॥ ೬೧

ಸೇವ್ಯನನು ಸತ್ಕ್ರಿಯೆ [1] ಗಳಲಿ ದ್ರ
ಷ್ಟವ್ಯನನು ದೃಢಚಿತ್ತದಲಿ ಶ್ರೋ
ತವ್ಯನನು ಮಂತವ್ಯನನು ಸಂಕೀರ್ತಿತವ್ಯನನು ।
ಅವ್ಯಯನನಹ್ನಯನನಭವನ
ನವ್ಯಸನನಜ್ಞಾನದಲಿ ಯೋ
ಧ್ಯವ್ಯನೆಂದೇ [2] ಸೆಣಸಿದೆವಲಾ ಶಿವ ಶಿವಾ ಯೆಂದ ॥ ೬೨

ಸ್ಫುರದಕಾರಾದಿಯಹಕಾರೋ
ತ್ತರದ ಶಬ್ದಬ್ರಹ್ಮಮಯ ವಿ
ಸ್ತರದಹಂತತ್ವದ ಮಹತ್ತತ್ವಾತಿಶಯಪದದ ।
ಪುರುಷಮೂಲಪ್ರಕೃತಿಗಳನು
ತ್ತರಿಸಿ ತೊಳತೊಳತೊಳಗಿ ಬೆಳಗುವ
ಪರಮಶಿವನಲಿ ಸೆಣಸಿದೆವಲಾ ಶಿವ ಶಿವಾ ಯೆಂದ ॥ ೬೩

[1] ಸತ್ಕೃತಿ, ಚ. ಟ [2] ಗವ್ಯಪೇತನ, ಚ

ಸರಸಿಜಾಸನವಿಷ್ಣು ರುದ್ರೇ
ಶ್ವರಸದಾಶಿವರಾವಳೊಬ್ಬಳ
ಚರಣಸೇವಾಸಂಗದಲ್ಲಿಯೆ ಸುಪ್ರತಿಷ್ಠಿತರು ।
ಪರಮಶಕ್ತಿಯದಾವಸಂಘ್ರಿಗೆ
ಶಿರವನೊಡ್ಡುವಳಾಪರಾತ್ಪರ
ಪರಮಶಿವನಲಿ ಸೆಣಸಿದೆವಲಾ ಶಿವ ಶಿವಾ ಯೆಂದ ॥ ೬೬

ಈಪರಿಯಲರ್ಜುನನ ಮನದನು
ತಾಪವನು ಕಾಣುತ್ತ ಶಾಬರ
ರೂಪರಚನೆಯ ತೆಱೆಯ ಮಱೆಯಲಿ ಮಿಱಿವ ಚಿನ್ಮಯನ ।
ರೂಪನವ್ಯಾಪತನಿಜೋನ್ನತ
ರೂಪರಸದಲಿ ನರನ ಚಿತ್ತದ
ತಾಪವಡಗಲು ತಂಪನೆಱೆದನು ತರುಣಶಶಿಮೌಳಿ ॥ ೬೭

ಈಶ್ವರನು ತನ್ನ ರೂಪವನ್ನು ಅರ್ಜುನನಿಗೆ ತೋರಿಸಿದುದು.

ಅರಸ ಕೇಳ್ಮೈ ನಿಮ್ಮ ಪಾರ್ಥನ
ಪರಮಪ್ರಣ್ಯೋದಯವನೀಕ್ಷನ
ಕರುಣವನು ಶುಕಸನಕಸಿದ್ಧಾದ್ಯರಿಗಗೋಚರವೆ ।
ಸಿರುಪಮಿತನಿಜರೂಪವನು ವಿ
ಸ್ತರಿಸಿದನು ವಿವಿಧಪ್ರಭಾವೋ
ತ್ಕರದ ನಿಱುಗೆಯ ತೋಱಿದನು ಶ್ರುತಿಕೋಟಿ ಕೈಮುಗಿಯೆ ॥
ಬಲಿದ ಚಂದ್ರಿಕೆಯೆಱಿಕವೆನೆ ತೊಳ
ತೊಳಗಿ ಬೆಳಗುವ ಕಾಯಕಾಂತಿಯ
ಪುಲಿದೊಗಲ ಕೆಂಜೆಡೆಯ ಕೇವಣದಿಂದು ಫಣಿಪತಿಯ ।
ಹೊಳೆವ ಹರಿಣನನಹ್ಲಮಾಲಾ
ವಲಯದಭಯದ ವರದಕರಪರಿ
ಕಲಿತನೆಸೆದನು ಶಂಭು ಸದ್ಯೋಜಾತರೂಪದಲಿ ॥ ೬೮

ಹೊಳವ ಕುಂಕುಮಕಾಂತಿಯಲಿ ಥಳ
ಥಳಿಪ ಗಜಚರ್ಮದುಡುಗೆಯ
ಲಲಿತದಂತಪ್ರಭೆಯ ದರಹಸಿತಾನನಾಂಬುಜದ ।
ವಿಲಸಿತಾಭಯಕರದ ಪರಿಕರ
ಲುಳಿತಪರಶು ದೃಢಾಹ್ವಮೌಲಾ
ವೆಳಗಳೂಪ್ಪಿರೆ ವಾಮದೇವಾಸನದಿ ರಂಜಿಸಿದ ॥ ೬೦

ಕಾಳವೇಘನಿಭಾಂಗ [1] ದುರುದಂ
ಷ್ಟ್ರಾಳಿಭೀಷಣದಮೆಲಮಣಿಜಪ
ಮಾಲಿಕೆಯ ಶ್ರುತಿಮುಖದ ಪಾಶಾಂಕುಶದ ಡಮರುಗದ ।
ಶೂಲಘನಖಟ್ವಾಂಗದುಜ್ಜ್ವಿಣಕ
ಪಾಲಫಣಿವೆಲಯನ ಕರೋಟಿಯ
ಮಾಲೆಯಿಂದ ಮಹೋಗ್ರನೆಸೆದನು ಘೋರವಕ್ತ್ರದಲಿ ॥ ೬೧

ಪರಶುಡಮರುಗಖಡ್ಗ ಖೇಟಕ
ಶರಧನುಶ್ಶೂಲದ ಕಪಾಲದ
ಕರದ ರಕ್ತಾಂಬರದ ಫಣಿಪನ ಭೋಗಭೂಷಣದ ।
ಸ್ಫುರದಘೋರದ ಭೇದದಭಯದ
ಕರದ ಪಾಶಾಂಕುಶಗಳಲಿ [2] ತ
ತ್ಪುರುಷಮುಖದಲಿ ಮೆಱೆದನೆಱಿಕದ ಮಿಂಚಿನಂದದಲಿ ॥ ೬೨

ಎಳಯ ಮುತ್ತಿನ ಢಾಳವೆನು ಮು
ಕ್ಕುಳಿಸುವಂಗಚ್ಛವಿಯ ಭಯವರ
ಲುಳಿತ ಜಪಮಣಿವೇದಪಾಶಾಂಕುಶದ ಡಮರುಗದ ।
ಲಲಿತಖಟ್ವಾಂಗದ ಕಪಾಲದ
ಹೊಳವ ಶೂಲದ ಕರದ ನಿಗಮೌ
ಘಳಿಶಿರೋಮಣಿ ಮೆಱೆದನಂದೀಶಾನವಕ್ತ್ರದಲಿ ॥ ೬೩

---

1 ಸುವರ್ಣ, ಚ 2 ಪರಶುಮೃಗಂಗಳಲಿ, ಚ,

ಬೀಱಿಬೇಱುರಿಗಣ್ಣು ಗಳ ಘೂ
ತ್ಕಾರದಹಿಬಂಧದ ಜಟಾಕೋ
ಟೀರಭಾರದ ಮುಖಚತುಷ್ಟಯಭುಜಚತುಷ್ಟಯದ ।
ವಾರಿಜಾಸನವಿಷ್ಣುರುದ್ರಾ
ಧಾರನೀಶ್ವರಪಂಚವಕ್ತ್ರಾ
ಕಾರದಲಿ ಶಿವ ಮಿಱಿದ ಪಂಚಬ್ರಹ್ಮರೂಪಿನಲಿ ॥ ೭೪

ಶ್ರುತಿಗಳುಪನಿಷದಾದ್ಯಖಿಳದೇ
ವತೆಯರಾಕಲ್ಪಿತಕಿರಾತಾ
ಕೃತಿಯನುಬಿದರು ಸುಚಿದರೀಶನ ಸುತ್ತುವಳಯದಲಿ ।
ಸ್ಮಿತಮಧುರಮುಖಕಾಂತಿ ಕಲ್ಪೋ
ಲಿತಕಟಾಕ್ಷಚ್ಛವಿಯಲೀಶನ
ಧೃತಿಯಲೀಡಿರಿದೆಡದಲಿಸೆದರು ಗೌರಿದೇವಿಯರು ॥ ೭೫

ಸನಕನಾರದಭೃಗುಪರಾಶರ
ತನುಜಭಾರದ್ವಾಜಗೌತಮ
ಮುನಿವಸಿಷ್ಠಸನತ್ಕುಮಾರನು ಕಣ್ವನುಪಮನ್ಯು ।
ಬನಕೆ ಬಂದರು ಪಾರ್ಥ ತಪವಿದು ।
ನಿನಗೆ ಸಿದ್ಧಿಸಿತೆಮಗೆ ಲೇಸಾ
ಯ್ತೆನುತ ಮೈಯ್ಯಿಕ್ಕಿದುದು ಶಿವನಂಘ್ರಿಯಲಿ ಮುನಿನಿಕರ ॥ ೭೬

ಜಯ ಜಯೆಂದುದು ನಿಖಿಳಜಗವ
ಹ್ಲಯನ ದರುಶನಕೆಂದು ಶ್ರುತಿಕೋ
ಟಿಯು ಗಡಾವಣೆ ಘಾಸಿಯಾದುದು ಹರನ ಘಲ್ಲಣೆಗೆ ।
ನಿಯತವೇನೋ ಜನ್ಮಶತಸಂ
ಚಯದೊಳಾರರೆ ಕೃತಾರ್ಥನರ್ಜುನ
ಜಯವೆನಲು ಮೊಳಗಿದುವು ಭೇರಿಗಳಮರಕಟಕದಲಿ ॥ ೭೭

---

1 ಕೇಳಿದು, ಚ.

ಈಶ್ವರನ ರೂಪವನ್ನು ನೋಡಿ ಅರ್ಜುನನು ವಿರಗಾದುದು

ಬಿಟ್ಟಸೂಟಿಯೊಳದ್ದು ಹರುಷಕೆ
ಕೊಟ್ಟು ಮನವನು ನೋಡುತಿರ್ದನು
ನಟ್ಟದೃಷ್ಟಿಯೊಳೂಗುವ ಜಲಬಿಂದುಗಳ ಪುಳಕದಲಿ ।
ಬಿಟ್ಟು ಹಿಡಿದನು ಹರನ ಕಾಣದೆ
ತೊಟ್ಟ ಝುಗೆಗಳ ರೋಮಹರುಷದ
ಲಿಟ್ಟಿಡೆಯು ಮೈದವಕದರ್ಜುನ ನಿಂದು ಬೆಱಗಾದ ॥ ೭೪

ಹರಹಿನಲಿ ಹೊದರೆದ್ದು ಹರುಷದ
ಹೊರಳಿಯಲಿ ಹೊಡಕರಿಸಿ ಚಿತ್ತವ
ತಿರುಹಿ ಹಿಡಿದನು ಮನಕೆ ಬುದ್ಧಿಯ ಹಮ್ಮು ಹಮ್ಮುಗೆಯ ।
ಕೊರಳುಗೊಳಿಸಿ ಕ್ರಿಲಾಲಚಕ್ರದ
ಪರಿಭವಣಿಗೆಯ ಪಾಡಿನಲಿ ಕಾ
ತರಿಸುತವನಿಗೆ ಮೈಯ್ಯ ಕೊಟ್ಟನು ಚಾಚಿ ಭುಜಯುಗವ ॥ ೭೯

ಈಶ್ವರನನ್ನು ಕುರಿತು ಅರ್ಜುನನ ಪ್ರಾರ್ಥನೆ.

ಕ್ಷಮಿಸುವುದು ಸರ್ವೇಶ ಸರ್ವೋ
ತ್ತಮ ವೃಥಾ ಸುಭಟಾಭಿಮಾನ
ಭ್ರಮಿತನನು ಮೋಹಾಂಧಕೂಪಜಲಾವಗಾಹದಲಿ ।
ಸ್ತಮಿತನನು ದುರ್ಬೋಧಭೇದ
ಭ್ರಮಿತನನು ಕಲ್ಯಾಣಪದನಿ
ರ್ಗಮಿತನನು ಕಾರುಣ್ಯನಿಧಿ ಕೈಗಾಯಬೇಕೆಂದ ॥ ೮೦

ಅಱಿದಱಿದು ಮತಿಗೆಟ್ಟು ಮಾನವ
ಕುಱಿಯೆಯೆಲಾ ನೆಱೆ ಕಂಡು ಕಂಡೀ
ತೆಱದ ಖಳನಲಾ ವಿವೇಕದ ಮೂಗು ಮೊರಿಯೆಲ ।
ಬಱಿಮನದ ಬಾಹಿರನೊಳನ್ನಲಿ
ಮಱೆವುದಪರಾಧವನು ನಿಮ್ಮನು
ಮೆಱೆವುದೈ ಕಾರುಣ್ಯನಿಧಿ ಕೈಗಾಯಬೇಕೆಂದ ॥ ೮೧

ಜಯ ಜಗತ್ತ್ರಯನಾಥ ಭಕ್ತಾ
ಶ್ರಯ ಸದಾಶಿವ ಸಾಧುವತ್ಸಲ
ಲಯವಿಹೀನ ಮಹೇಶ ಮನ್ಮಥಹರ ಮಹಾದೇವ ।
ಭಯರಹಿತ ಭಾಳಾಕ್ಷ ಲೋಕ
ವ್ಯಯಭವನ ದುರ್ಲಕ್ಷ ದೇವ
ತ್ರಯನಮಸ್ಕೃತ ನಿಗಮನಮಸ್ಕೃತ ಕರುಣಿಸುವುದೆಂದ ॥ ೮೦

ದೇವ ದೇವ ಕೃಪಾಂಬುನಿಧಿ ಭ
ಕ್ತಾವಲಂಬನ ಭಕ್ತದೇಹಿಕ
ಸೇವಕಪ್ರಿಯ ಭೂತಭಾವನ ಭಾವನಾತೀತ ।
ದೇವವಂದಿತ ಕಾಲರೂಪ ಮ
ಹಾವಿಭವ ಭಯರಹಿತ ಪಾವನ
ಪಾವಕಾಂಬಕ ಶ್ರುತಿಕುಟುಂಬಿಕ ಕರುಣಿಸುವುದೆಂದ ॥ ೮೧

ಸರ್ವಗತ ಸರ್ವಜ್ಞ ಸರ್ವದ
ಸರ್ವಭಾವನ ಸರ್ವತೋಮುಖ
ಸರ್ವಪೂಜಿತ ಸರ್ವಸಾಧಕ ಸರ್ವಗುಣನಿಳಯ ।
ಸರ್ವ ಸರ್ವಾಶ್ರಯ ಸಮೋಹಿತ
ಸರ್ವಮಯ ಸರ್ವೇಶ್ವರೇಶ್ವರ
ಸರ್ವದುಃಖಾಪಹ ಮಹೇಶ್ವರ ಕರುಣಿಸುವುದೆಂದ ॥ ೮೨

ರೂಪರಹಿತಸರೂಪ ನಿರ್ಮಳ
ರೂಪ ವಿಶ್ವಾಧಾರ ಸದಸ
ದ್ರೂಪ ವಿಮಲವ್ಯೋಮರೂಪಕ ಸರ್ವತೋರೂಪ ।
ರೂಪರಸಗಂಧಾದಿವಿಷಯಸ
ರೂಪ ರೂಪಾತೀತ ಸಂವಿ
ದ್ರೂಪ ವಿಮಲವಿರೂಪಲೋಚನ ಕರುಣಿಸುವುದೆಂದ ॥ ೮೩

ಪರಮಹಂಸ ಪರಾತ್ಮ ಪರಮೇ
ಶ್ವರ ಪರಬ್ರಹ್ಮೈಕವಿಗ್ರಹ
ಪರಮಶಿವ ಪರತತ್ವರೂಪ ಪರಾತ್ಪರಾನಂದ ।
ಪರಮಗುಣಪರಶಕ್ತಿವಾಗೀ
ಶ್ವರ ಪರಾರ್ತಿಹರೇಶ ಪರಶಂ
ಕರ ಪರಂಜ್ಯೋತಿಯೆ ಪರೋತ್ತಮ ಕರುಣಿಸುವ್ರದೆಂದ ॥ ೪

ಲಿಂಗಮಯ ನಿರ್ಲಿಂಗ ತೇಜೋ
ಲಿಂಗ ಲಿಂಗಾತ್ಮಕ ಸದಾಶಿವ
ಲಿಂಗ ನಿರ್ಮಳಲಿಂಗ ಲಿಂಗಸ್ಥಿತ ಮಹಾಲಿಂಗ ।
ಲಿಂಗವಿಲಸಿತಲಿಂಗ ಚಿನುಮಯ
ಲಿಂಗ ಚೇತನಲಿಂಗ ದುರ್ಗಾ
ಲಿಂಗಿತಾಂಗವಿಲಾಸ ಶಂಕರ ಕರುಣಿಸುವ್ರದೆಂದ ॥ ೨

ನಿರವಧಿಕ ನಿರ್ಮಾಯ ನಿರ್ಗುಣ
ನಿರುಪಮಿತ ನಿರ್ದ್ವಂದ್ವ ನಿಸ್ಸ್ಪೃಹ
ನಿರವಯವ ನಿರ್ಲೇಪ ನಿರವಗ್ರಹ ನಿರಾಧಾರ ।
ನಿರುಪಮ ನಿರಾಮಯ ನಿರಂತರ
ನಿರವಶೇಷ ನಿರಂಗ ನಿರ್ಮಳ
ನಿರತಿಶಯ ನಿಷ್ಕಳ ಮಹೇಶ್ವರ ಕರುಣಿಸುವ್ರದೆಂದ ॥ ೪

ವಾಮದೇವ ದುರಂತವಿಭವ
ವ್ಯೋಮಕೇಶ ಕೃತಾಂತಹರ ನಿ
ಸ್ಸೀಮ ಮೃತ್ಯುಂಜಯ ಸಮಂಜಸ ಸರ್ವತೋಭದ್ರ ।
ಭೀಮ ಭರ್ಗ ಕಪರ್ದಿ ಕಲ್ಪಿತ
ನಾಮರೂಪಕ್ರಿಯ ವೃಷಧ್ವಜ
ಕಾಮಹರ ಕರುಣಾಮಹಾರ್ಣವ ಕರುಣಿಸುವ್ರದೆಂದ ॥ ೪

ಈಶ್ವರನನ್ನು ಕುರಿತು ಪರಿಪರಿಯಾಗಿ ಅರ್ಜುನನ ಪ್ರಾರ್ಥನೆ.

ರಚಿತಮಾಯ ಏಮಾಯ ಮಾಯಾ
ನಿಚಿತ ಮಾಯಾಧಾರ ಮಾಯಾ
ರುಚಿತ ಮಾಯಾರೂಪ ಮಾಯಾಮಯ ಜಗನ್ಮಾಯ ।
ರಚಿತತೇಜೋಮುಖ [1] ಹಿರಣ್ಯ
ಪ್ರಚಯತೇಜ ಸುತೇಜ ಗೌರೀ
ಕುಚಯುಗಾಂಕಿತವೆಹ್ಮ ಲಕ್ಷಿಸಿ ಕರುಣಿಸುವುದೆಂದ ॥ ೯೦

ಹರ ಹರಾ ತ್ರೈಮೂರ್ತಿರೂಪವೆ
ಧರಿಸಿ ಯತುಳಮಹಾಪ್ಪಮೂರ್ತಿಯ
ಧರಿಸಿ ಯನುಪಮವಿಶ್ವಮೂರ್ತಿಯ ಧರಿಸಿ ರಂಜಿಸುವ ।
ಪರಿಯನಳಿವವರಾರು ದೇವಾ
ಸುರಮುನೀಶರಿಗರಿದು ವರವನು
ಕರುಣಿಸಲು ಬಂದೈ ಮಹಾದೇವೆಂದನಾರ್ಜುನಾರ್ಥ ॥ ೯೧

ದೇವ ಸುರದನುಜೇಂದ್ರವಂದಿತ
ದೇವ ಮನುಮುನಿನಿಕರಪೂಜಿತ
ದೇವ ತತ್ವಾಕಾರ ಭುವಿಪೊಡೆ ಬಹುಗುಣನಾಮ [2] ।
ದೇವ ಸಾಕಾರದಲಿ ನಿಜಭ
ಕ್ತಾವಳಿಯನುದ್ಧರಿಸುವ ಮಹಾ
ದೇವ ಕರುಣಿಸಿದೈ ಯನಾಥಂಗೆಂದನಾರ್ಜುನಾರ್ಥ ॥ ೯೨

ಹರನೆ ಗಂಗಾಧರನೆ ಗಿರಿಜಾ
ವರನೆ ಶಶಿಶೇಖರನೆ ದಕ್ಷಾ
ಧ್ವರಹರನೆ ಶಂಕರನೆ ನಿಜಭಕ್ತರ ಮನೋಹರನೆ ।

---

[1] ಕುಚಿಸತೇಜೋಮುಖ, ಚ. [2] ಪತಿನಿರಾಕಾರ, ಚ,

ಕರುಣಿಸುವುದುದ್ಧರಿಸುವುದು ಸಂ
ಹರಿಸು ಮತ್ಪರಿಭವವನೆಂದುರು
ತರದ ಭಕ್ತಿಯಲಿಂದು ಸೈಗೆಡದಿದ್ದ ನಾಪಾರ್ಥ ॥ ೯೩

ಧರಣಿಪತಿ ಕೇಳೀಶನೀತನ
ಹೊರೆಗೆ ಬಿಜಯಂಗೈದು ಪಾರ್ಥನ
ಶಿರವ ಹಿಡಿದೆತ್ತಿದನು ಬಿಗಿದಪ್ಪಿದನು ಬರಸೆಳೆದು ।
ಮೆರುಳು ಮಗನೆ ಮಹಾತಪಸ್ಸಂ
ಚರಣಿಯಲಿ ನೊಂದೈ ಯೆನುತ ಕಡು
ಗರ.ಣಿ ಕರುಣಾಮೈತಸಮುದ್ರದೊಳದ್ದಿದನು ನರನ ॥ ೯೪

ಈಶ್ವರನು ಅರ್ಜುನನನ್ನು ಆದರಿಸಿದುದು.

ಕೂಡೆ ವೈದಡವಿದನು ಮಿಗೆ ಮುಂ
ಡಾಡಿದನು ಮನ ನೋಯದಿರು ನೀ
ಮಾಡಿದುಪಹತಿ ಯೆಂಬುದೆನಗರ್ಚನೆ ನಮಸ್ಕಾರ ।
ಕೋಡದಿರು ಕೊಂಕದಿರು ಭಕ್ತಿಗೆ
ನಾಡೆ ಮೆಚ್ಚಿದೆನೆನ್ನ ಚಿತ್ತಕೆ
ಖೋಡಿಯಿಲ್ಲೆಲೆ ಮಗನೆ ಯೀಗುಪಗಣಪರಾಂದ ॥ ೯೫

ನರನು ನೀ ಪೂರ್ವದಲಿ ಪೀತಾಂ
ಬರನೆ ವಿಮಳಾಂಶಪ್ರಸೂತನು
ಪರಮಋಷಿ ನೀನೆಮ್ಮ ಭಕ್ತನು ಚಿಂತೆ ಬೇಡಿನ್ನು ।

ಅರ್ಜುನನಿಗೆ ಈಶ್ವರನು ಒಡ್ಡಾದಿಗಳನ್ನು ಕೊಟ್ಟುದು.

ವರದನಾದೆನು ಮಗನೆ ಶಸ್ತ್ರೋ
ತ್ಕರವನಿದನೀ ಮುನ್ನ ಕೊಳ್ಳಂ
ದುರುತರಪ್ರೇಮದಲಿ ಕೊಟ್ಟನು ಖಡ್ಗ ಶರಧನುವ ॥ ೯೬

ಸಲಿಸುವೆನು ನೀ ಬೇಡಿದುದನ
ಸ್ಖಲಿತವಂಜದಿರಿನ್ನು ಸಾಕೆನೆ
ಸುಲಭ ನೀ ಭಕ್ತರಿಗೆ ಭಯವಿನ್ನೇಕೆ ತನಗೀಗ ।

ಆಗ ಅರ್ಜುನನು ಅಸ್ತ್ರಗಳನ್ನು ಬೇಡಿದುದು.

ಸಲಿಸು ಪಾಶುಪತಾಸ್ತ್ರವೆನು ವೆ
ಗ್ಗಳಯ ಬ್ರಹ್ಮಶಿರೋಸ್ತ್ರವೆನು ಕೈ
ಗೊಳಿಸುವುದು ಕೃಪೆಯುಳ್ಳೊಡೆಂದನು ನಗುತ ಕಲಿಪಾರ್ಥ ॥೯೩

ಸವಡಿನುಡಿಯುಂಟೇ ಚತುರ್ದಶ
ಭುವನದಾಹವದಕ್ಷವೀಚಾ
ಣವನು ಕೊಟ್ಟನು ಮಗನೆ ಬ್ರಹ್ಮಶಿರೋಮಹಾಶರವ ।
ದಿವಿಜದನುಜಭುಜಂಗಮಾದಿಗ
ಳವಗಡಿಸಲುಱಿ ಹೆಚ್ಚುವುದು ಸಂ
ಭವಿಸಿದಾಹುತಿ ಯಿದಕೆ ಶರವುದ್ದಂಡಬಲನೆಂದ ॥ ೯೪

ಈಶ್ವರನು ಅರ್ಜುನನಿಗೆ ಪಾಶುಪತಾಸ್ತ್ರವನ್ನು ಕೊಟ್ಟುದು.

ಸರಸಿಯಲಿ ಮಿಂದಾಚಮನವಿ
ಸ್ತರಣವೆಲ್ಲವ ಮಾಡಿ ಶೂಲಿಯ
ಚರಣದಲಿ ಮೈಯ್ಯಿಕ್ಕಿ ನಿಂದನು ಬಾಗಿ ಕೈಮುಗಿದು ।
ಸರಳಸಾಂಗೋಪಾಂಗಮಂತ್ರೋ
ಚ್ಚರಣಸಂಯುತಿವೋಹ್ಯವನು ವಿ
ಸ್ತರದಿ ರಹಸ್ಯದಲಿ ಕೊಟ್ಟನು ಪಾಶುಪತಶರವ ॥ ೯೫

ಆಗ ದೇವತೆಗಳ ಸಂತೋಷ.

ಜಗವು ಘೇ ಯೆಂದುದು ಜಯಧ್ವನಿ
ಗಗನದಲಿ ಗಾಢಿಸಿತು ಪೂವಿನ
ಮುಗುಳ ತನಿಮಳೆ ಸುಱಿದುದೀಶ್ವರನಂಘ್ರಿಕಮಲದಲಿ ।

ಥಗೆಯ ತಳಿ ಮುಚ್ಚಿದುದು ಮನೋರಥ
ದಗಳು ತುಂಬಿತು ನರನ ಮನಬು
ದ್ದಿಗಳು ನೆಚ್ಚಿ ಸಿಲುಕಿದುವು ಹರುಷೋತ್ಸವದ ದಾಚೆಯಲಿ ॥ ೧೦೦

ಹರನ ಕೋಮಲಪಾಣಿಕಮಲ
ಸ್ಪರುಶಪೀಯೂಷದಲಿ ಮುಚ್ಚುಗಿದ
ನರನ ತನು ನಿರ್ಮೋಕಮುಕ್ತ ಭುಜಂಗದಂದದಲಿ ।
ಕಿರಣಲಹರಿಯ ಲಳಿಯ ದಿವ್ಯೋ
ತ್ಕರದ ಚಪಳಚ್ಛವಿಯ ಚಾರು
ಸ್ಫುರಣದಲಿ ಬೋಳ್ಕೈಸಿದುದು ಸುರನರರ ಕಣ್ಮನವ ॥ ೧೦೧

ಸುರಮುನೀಶ್ವರವೇದಮಂತ್ರೋ
ಚ್ಚರಣನಾದದ ಗರುಡಗಂಧ
ರ್ವರ ಮಹಾಸ್ತುತಿರವದ ತುಂಬುರುನಾರದಾದಿಗಳ ।
ವರರಸಾನ್ವಿತಗೀತದೂರ್ವಶಿ
ಯರ ಸುನೃತ್ಯದ ದಿವ್ಯವಾದ್ಯದ
ಹರನ ಕರುಣಾಂಬುಧಿಯಲೋಲಾಡಿದನು ಕಲಿಪಾರ್ಥ ॥ ೧೦೨

ಧರೆಗೆಸವೆ ಧರ್ಮಾರ್ಥಕಾಮೋ
ತ್ಕರವನನುಪಮವೋಹ್ಯಪದವನು
ಧುರದೊಳಹಿತರ ಗೆಲುವಶೌರ್ಯೋನ್ನತಿಯ ಸಾಹಸವ ।
ಕರುಣಿಸಿದನಪ್ಪಿದನು ಕರೆದನು
ಗಿರಿತನುಜೆ ನೀನುದ್ಧರಿಪುದೀ
ಪರಮಭಕ್ತನನೆನಲು ಕರುಣದೊಳೀಕ್ಷಿಸಿದಳಗಜೆ ॥ ೧೦೩

ಸ್ತುತಿಯಿಂದ ಸಂತುಷ್ಟಳಾದ ಗಿರಿಜೆಯು ಅರ್ಜುನನಿಗೆ
ವರವನ್ನು ಕೊಡುವಿಕೆ.

ಗಿರಿಜೆ ತ್ರಿಜಗನ್ಮಾತೆ ರಕ್ಷಿಸು
ಪರಮಕರುಣಾಮೂರ್ತಿಯಂಬಿಕೆ

ಶಿರಿ ಸರಸ್ವತಿ ದುರ್ಗೆ ಚಂಡಿಯರೆಂಬನಾಮದಲಿ ।
ಚರಿಸುತಿಹ ನಿನ್ನೀಕಶಕ್ತಿಯ
ಪರಿಯನಱಿವವರಾರೆನುತ ತ
ಚ ರಣಕಮಲಕ್ಕೆ ಱಗಿ ಪುಳಕಿತನಾದನಾಪಾರ್ಥ ॥ ೧೦೪
ಚ

ಕಂಜನಾಭನ ಮೈದುನನೆ ಬಾ
ಅಂಜದಿರು ನಿನಗಾಂತರಿಪುಗಳ
ಭಂಜಿಸುವ ಸಾಮರ್ಥ್ಯ ದನುವನು ತಳದು ರಂಜಿಸುವ ।
ಅಂಜನಾಸ್ತ್ರವನಿತ್ತೆ ಮಗನೆ ಧ
ನಂಜಯನೆ ನಿನಗೆಂದು ಕರುಣದಿ
ಮೆಂಜಱಳಾರವದಿಂದ ತಚ್ಛಸ್ತ್ರವನು ಬೆಸಸಿದಳು ॥ ೧೦೫

ಬಂದುದಶಶತಸಾವಿರದ ಹೆಸ
ರಿಂದ ಲಕ್ಷವು ಕೋಟಿಯಗಣಿತ
ದಿಂದ ನಿನಗಾಂತಧಟರಿಪುಗಳು ತಿಂದು ತೇಗುವುದು ।
ಬಂದು ಬಿಸನನು ಬೇಡುವುದು ತಾ
ನೊಂದು ಶರರೂಪಾಗೆನುತ ಮುದ
ದಿಂದ ವರಮಂತ್ರೋಪದೇಶವನಿತ್ತಳರ್ಜುನಗೆ ॥ ೧೦೬

ದೇವಿಯರು ಕೃಪೆಯಿಂದ ಪಾರ್ಥಂ
ಗೋವಿ ಕೊಟ್ಟರು ದಿವ್ಯಬಾಣವ
ನೋವಿ ಗಣಪತಿ ತಾನು ಕೊಟ್ಟನು ಜಯಮಹಾಶರವ ।
ಆವಜನ್ಮದ ಸುಕೃತಫಲವಿದು
ತೀವಿತೋ ಪಲುಗುಣಗೆನುತ್ತವೆ
ದೇವತತಿ ಕೊಂಡಾಡುತಿರ್ದುದು ಭೂಪ ಕೇಳೆಂದ ॥ ೧೦೭

ಆಗ ಗಣೇಶ ಷಣ್ಮುಖರಿಂದ ಅಸ್ತ್ರಲಾಭ.

ಕರಿಮುಖನ ಷಣ್ಮುಖನ ಚರಣ
ಕ್ಕೆ ಱಗಿ ನುತಿಸುತ್ತಿರಲು ಪಾರ್ಥನ

ಪರಮಭಕ್ತಿಗೆ ಮೆಚ್ಚಿ ಬಿಗಿದಪ್ಪಿದರು ಕರುಣದಲಿ ।
ವರಮಹಾಸ್ತ್ರಂಗಳನು ಮಂತ್ರೋ
ತ್ಕರವನವರೊಲಿದಿತ್ತು ಗೆಲು ನೀ
ಧುರದೊಳಹಿತರನೆಂದು ಹರಸಿದರಾಧನಂಜಯನ ॥ ೧೦೪

ನಿನ್ನ ಕಾರ್ಯಗಳಿಗೋಸ್ಕರ ಹೋಗೆಂದು ಶಿವನ ಆಜ್ಞೆ

ಸರಳ ಸಾಂಗೋಪಾಂಗವನು ನಿನ
ಗಱುಹಿದೆನು ನೀನಿನ್ನು ಶಕ್ರನ
ಪುರಿಗೆ ನಡೆ ನಿನ್ನುತ್ತರೋತ್ತರಕಾರ್ಯಗತಿಗಳಿಗೆ ।
ಹರಿ ಸಹಾಯನು ನಮ್ಮ ಸತ್ವದ
ಪರಮರೂಪಾತ್ಮಕನು ಕಣಾ ನೀ
ನಱಿದಿರೆಂದು ಮಹೇಶ ಬೀಣ್ಕೊಟ್ಟನು ಧನಂಜಯನ ॥ ೧೦೫

ಅರ್ಜುನನಿಗೆ ಈಶ್ವರನು ವರವನ್ನು ಕೊಟ್ಟುದು

ನಿಮ್ಮ ಕಥೆ ವೇದೋಕ್ತವಾಗಲಿ
ನಿಮ್ಮ ಚರಿತ ಸುಚರಿತವಾಗಲಿ
ನಿಮ್ಮ ಕಥನಾಮೃತವನಾಲಿಸಿ ಕೇಳ್ದ ರಘಕೆಡಲಿ ।
ನಿಮ್ಮ ನಿಂದಿಸಿದವರುಗಳು ದು
ಷ್ಕರ್ಮಿಗಳು ಪಾತಕರು ತಾನಿದು
ನಮ್ಮ ಮತವೆಂದು ಭವ ಹರಸಿದನಾಧನಂಜಯನ ॥ ೧೧೦

ದೇವಿಯರು ಗುಹಗಣಪಮುಖ್ಯಗ
ಣಾವಳಿಗೆ ಪೊಡಮಟ್ಟನವರ ಕೃ
ಪಾವಲೋಕನದಿಂದ ಹೊಂಪುಳಿಯೋದನಡಿಗಡಿಗೆ ।
ದೇವ ರಜತಾಚಲಗಮನಸಂ
ಭಾವನೋದ್ಯೋಗದಲಿ ವಿಗೆ ಗಾಂ
ಡೀವಿಯನು ನೆಱಿ ನೋಡಿ ಕೃಪೆಯಿಂದ-ಭವನಿಂತೆಂದ ॥ ೧೧೧

ಮಳಿಕ ಈಶ್ವರನು ಕೈರಾತವನ್ನು ಕುರಿತು ತೆರಳಿದುದು.

ಪುರಹರನು ಕರೆದರ್ಜುನನ ಸುರ
ಪುರಕೆ ಪ್ರೋಗುತೆ ನೀನು ಬಚಿಕಾ
ಸುರಸಮಿತಿಗಳ ವೈರಿಗಳ ವಧಿಸೆಂದು ಬೆಸಸುತ್ತ ।
ಹರಿಯಜರುಸಹಿತ ಭವ ರಜತಾ
ಚಲಕೆ ಬಿಜಯಂಗೈದನಿತ್ತಲು
ನರನು ಸೈವೆಱುಗಾಗಿ ಚಿಂತಾಚಿತ್ರದಂತಿರ್ದ ॥ ೧೧೦

ಆಗ ಅರ್ಜುನನ ಪಶ್ಚಾತ್ತಾಪ.

ಹರನ ಕೃಪೆಯುಂ ಪಡೆವುದರಿದಾ
ದರಿಸುವರೆ ಶಸ್ತ್ರಾಭಿಲಾಷೆಯೆ
ಮರುಳತನದಲಿ ವ್ಯರ್ಥನಾದೆನಲಾ ಮಹಾದೇವ ।
ಧರೆಯು ಕಾಮಿತವೆಂದು ಸುಖವನು
ಮೆಱೆದನಕಟಕಟಾ ದುರಾಗ್ರಹ
ಪರಿವೃತಂಗೆ ಸುಬುದ್ಧಿಯೇಕಹುದೆಂದನಾಪಾರ್ಥ ॥ ೧೧೩

ಹರನು ಮಾಡುವುದೇನು ಕರ್ಮದ
ತರವು ನಮಗರಿಯಾಗಿ ತಾಗಲು
ಪರನು ಪಾಪದ ಪುಣ್ಯದೊಡಲಿಗೆ ಸಾಕ್ಷಿರೂಪನಲೆ ।
ಧರೆಯೊಳಗೆ ಶತಕೋಟಿಜನ್ಮಾಂ
ತರವು ಮಾಡಿದ ಪಾಪಪುಣ್ಯವು
ನರರ ಬೆನ್ನಲಿ ಬಹುದು ಹುಸಿಯಲ್ಲೆಂದನಾಪಾರ್ಥ ॥ ೧೧೪

ಎತ್ತಿದೀಬಲುಚಲವು ನೆಱೆ ತಾನೇ
ನುತ್ತರಿಪುದೀಕ್ಷತ್ರಧರ್ಮವೆ
ದುತ್ತರೋತ್ತರವಹುದು ಮತ್ತಾಚಲದ ಬಲುಹಿಂದ ।
ಮೆತ್ತೆ ಬಹುಮಾತೇಕೆ ಯಗ್ರಜ
ನಿತ್ತ ಬೆಸದಿಂ ನಡೆದೆನೆಂಬ ಸು
ವೃತ್ತವದೆ ಸತ್ಕೀರ್ತಿಸಾಧನವೆಂದನಾಪಾರ್ಥ ॥ ೧೧೫

ಮುರಹರನು ತಾನೆಮಗೆ ಗುರುವರ
ಗುರುಪದಕಮಲಯುಗದ ಭಕ್ತಿಯ
ಲಳಿದ ನಿಜಮೂರ್ತಿಯನು ಕಂಡು ಕೃತಾರ್ಥನಾದೆನೆಲ ।
ಹರಿದುದಘಕುಲವೆನುತ ಪುಳಕೋ
ತ್ಕರದ ಹರುಷದಲಾಧನಂಜಯ
ಪರಮಗದುಗಿನ ವೀರನಾರಾಯಣನ ಕರುಣದಲಿ ॥ ೧೧೬

ಏಳನೆಯ ಸಂಧಿ ಮುಗಿದುದು.

ಸೂಚನೆ.

ಎಂಟನೆಯ ಸಂಧಿ.

ಹರನ ಪಾಶುಪತಾಸ್ತ್ರಲಾಭೋ
ತ್ಕರುಷಹರುಷೋತ್ಸವದಲಿಂದ್ರನ
ಪುರವೆ ಹೊಕ್ಕನು ಪಾರ್ಥನೆಸೆದನು ಶಕ್ರತೇಜದಲಿ ॥

ಅರ್ಜುನನ ಯೋಚನೆ.

ಕೇಳು ಜನಮೇಜಯ ಧರಿತ್ರೀ
ಪಾಲ ವರಕೈಲಾಸವಾಸಿಯ
ಬೀಳುಕೊಂಡನು ತದ್ವಿಯೋಗದಲಿಂದ್ರಕೀಲದಲಿ ।
ಮೇಲುದುಗುಡದಲಸ್ತ್ರಲಾಭವೆ
ನಾಲಿಸದೆ ಶಂಕರಪದಾಂಬುಜ
ದೋಲಗದ ಶಿರಿ ತಪ್ಪಿತೆನುತುಮ್ಮಳಿಸಿದನು ಪಾರ್ಥ ॥ ೧

ಮರುಳದೇವಾರ್ಚನೆಯೊ ಕನಸಿನ [1]
ಶಿರಿಯೊ ಶಿಖಿವಿನ ಕೈಯ್ಯ ರತ್ನವೊ
ಹರಿಕರದ ಮಾಲೆಯೊ ಮದೀಯವಿವೇಕವಿಭ್ರಮವೊ।
ಹರನನೀಚರ್ಮಾಕ್ಷಿಯಲಿ ಗೋ
ಚರಿಸಿ ಬೇಡಿದುದಂಬು ಮತ್ಸ್ಯರೊ
ಳರವು ಮರ್ಯುಭಾಪೆನ್ನ ಪುಣ್ಯವೆನುತ್ತ ಬೆಜ್ಜಗಾದ ॥ ೬

ಆಗ ವರುಣನ ಆಗಮನ.

ಅರಸ ಕೇಳದ್ಭುತವನಿತ್ತಲು
ಚರಮದಿಗ್ಭಾಗದಲಖಿಳಜಲ
ಚರನಿಕಾಯದ ಮುಂಗುಡಿಯಲಿಕ್ಕೆಲದ ಫಣಿಕುಲದ।
ಸುರನದೀನದಕೋಟಿಗಳ ಸಾ
ಗರದ ಪರಿವಾರದಲಿ ಬಂದನು
ವರುಣನಮರೇಂದ್ರನ ಕುಮಾರನ ಕಾಂಬ ತವಕದಲಿ ॥ ೭

ವಿಕಟರಾಕ್ಷಸಯಕ್ಷಜನಗು
ಹ್ಯಕರು ಕಿನ್ನರಗಣಸಹಿತ ಪು
ಷ್ಪಕದಲೈತಂದನು ಧನೇಶ್ವರನಾತಪೋವನಕೆ।
ಸಕಲಪಿತೃಗಣಸಹಿತ ದೂತ
ಪ್ರಕರಥರ್ಮಾಧ್ಯಕ್ಷರೊಡನಂ
ತಕನು ಬೆಱಿಸಿದನಿಂದ್ರಕೀಲಮಹಾಮಹೀಧರವ [2] ॥ ೮

ಆಗ ಇಂದ್ರನು ಭೂಲೋಕಕ್ಕೆ ಬರುವಿಕೆ.

ಹಿಡಿದ ಸಾಲಿನ ಸತ್ತಿಗೆಯ ಬಲ
ಕೆಡಕೆ ಕೆದಱುವ ಸೀಗುರಿಯ ಮುಂ
ಗುಡಿಯ ವಿದ್ಯಾಧರಮಹೋರಗಯಕ್ಷಕಿನ್ನರರ [3]।

---

[1] ಕಳ್ಳನ, ಡ, [2] ವನಾಂತರವ, ಡ. [3] ರಾಕ್ಷಸರ, ಡ.

ಜಡಿವಕಹಳಾರವದ ನೆಲದು
ಗ್ಗಡಣೆಗಳ ಕೈವಾರಿಗಳ ಗಡ
ಬಡೆಯ ಗರುವಾಯಿಯಲಿ ಗಗನದಿನಿಟಿದನಮರೇಂದ್ರ ॥ ೫

ದಿಕ್ಪಾಲಕರು ಅರ್ಜುನನನ್ನು ಉಪಚರಿಸಿದುದು

ಕಂಡನನಿಬರ ಬರವನೊಲಿದಿದಿ
ಗೊಂಡನವರವರುಚಿತದಲಿ ಮುಂ
ಕೊಂಡು ಮನ್ನಿಸಿ ಮನವೆ ಹಿಡಿದನು ಲೋಕಪಾಲಕರ ।

ಇಂದ್ರಾದಿಗಳು ಬಾಣಗಳನ್ನು ಕೊಟ್ಟುದು.

ಖಂಡಪರಶುವಿನಸ್ತ್ರವನು ಕೈ
ಕೊಂಡೆ ನಿನಗೇನರಿದು ನೀನು
ದ್ದಂಡಬಲನೆಂದನಿಬರುಪಚರಿಸಿದರು ಫಲುಗುಣನ ॥ ೬

ಅರ್ಜುನನಿಗೆ ಇಂದ್ರನ ಆದರ.

ಆಮಹಾಸ್ತ್ರಕೆ ಬಳುವಳಿಯ ಕೊ
ಳ್ಳ ಮದೀಯಾಸ್ತ್ರವನೆನುತ ಸು
ತಾ,ಮನಿತ್ತನು ದಿವ್ಯಬಾಣವನೈಂದ್ರಸಂಜ್ಞಕವ ।
ಸಾಮವೆರ್ತಿಕದಂಡವಾರುಣ
ತಾಮಸದ ಸವೊ್ಮೀಹನವನೆಂ
ದಾಮಹಾಂತಕವರುಣಧನಪರು ಕೊಟ್ಟರಂಬುಗಳ ॥ ೭

ಎಲೆ ಧನಂಜಯ ನಿನಗಿದೇನ
ಗ್ಗಳದ ಶರವೇ ನಿನ್ನ ಭಕ್ತಿಗೆ
ಸಿಲುಕಿದನು ಶಿವನಾತನಂಬಿದೆ ನಿನ್ನ ಸೀಮೆಯಲಿ ।
ಸುಲಭ ನಿನಗಿಂದಮೆಲಲಕ್ಷ್ಮೀ
ನಿಳಯ ನೀನೇ ಪೂರ್ವದಲಿ ನಿ
ರ್ಮಲಿನನರಋಷಿ ಯೆನುತ ಹರಿ ತೆಗೆದಪ್ಪಿದನು ಮಗನ ॥ ೮

ಕೃತತಪಸ್ಸಂಭಿನ್ನ ಖೇದ
ಹ್ಲತಶರೀರವ್ಯಥೆಯನಮರಾ
ವತಿಯೊಳಗೆ ಕಳ ರಥಸಹಿತ ಕಳುಹುವೆನು ಮಾತಲಿಯ ।
ಕ್ರತುಶತದ ಕೈಗಾಣಿಕೆಯ ದೀ
ಹ್ಲಿತರ ಶಿರಿಯೆಂತವರ ಮನವಾ
ರತೆಯದೆಂತುಟೊ ನೋಡಬೇಹುದು ಪಾರ್ಥ ನೀನೆಂದ ॥ ೯

ಹೈ ಹಸಾದವು ನೂಱುಯಜ್ಞದ
ಮೇಹು ಗಾಡನು ಮೆಟ್ಟಲಿಮ್ಮಾ
ಹೂಹೆಗಳಿಗಳವಡುವದೊಲ್ಲೆವೆ ನಿಮ್ಮ ಕರುಣದಲಿ ।
ಐಹಿಕದಲಾಮುಷ್ಮಿಕದ ಸ
ನ್ನಾಹ ಸಂಭವಿಸುವೊಡೆ ನಿಷ್ಪ್ರ
ಶ್ಯೂಹವೆಂದೆಱಗಿದನು ಫಲುಗುಣನಿಂದ್ರನಂಘ್ರಿಯಲಿ ॥ ೧೦

ದಿಕ್ಪಾಲಕರು ಹೊರಟು ಹೋಗಲು ಮಾತಲಿಯು ಸರಥನಾಗಿ ಬಂದುದು.

ಬೀೞ್ಕೊಗೊಟ್ಟರು ನರನನೀದಿ
ಕ್ಪಾಲರಂತರ್ಧಾನದೊಡನೆ ಸ
ಮೇಳರಾದರು ಶಕ್ರಸಾರಥಿ ಸುಳಿದನಭ್ರದಲಿ ।
ಜಾಳಿಗೆಯ ಮಣಿವೆಳಗುಗಳ ವೈ
ಹಾಳಿಗಳ ವೈಡೂರ್ಯದೀಪ್ತಿನಿ
ನಾಳಿಗಳ ಸುಪತಾಕೆಬೆಳಗುವ ಹೇಮರಥಸಹಿತ ॥ ೧೧

ಅರಸ ಕೇೞ್ ಪತ್ತುಸಾವಿರ
ತುರಗನಿಕರದ ಳಿಯ ದಿವ್ಯಾಂ
ಬರದ ಸಿಂದದ ಸಾಲುಸತ್ತಿಗೆಗಳ ಪತಾಕೆಗಳ ।
ಖರರುಚಿಯ ಮಾರಾಂಕವೋ ಸುರ
ಗಿರಿಯ ಸೋದರವೋ ಮೃಗಾಂಕನ
ಮೆಱುದಲೆಯೊ ವೇಣಿನಲು ರಥ ಹೊಳದಿಱಿದುದಂಬರದಿ ॥ ೧೨

ರಥವನ್ನು ನೋಡಿ ಅರ್ಜುನನು ವಿಸ್ಮಿತನಾದುದು.

ಏನಿದಚ್ಚರಿ ಮೇಲೆ ಮೇಲೆ ನ
ವೀನದರುಶನವೆನ್ನ ಪುಣ್ಯವೆ
ನೂನವೈ ಸಲೆ ಯೆನುತ ನರನಿದಿಗೊಂಡನಾರಥವ [1] ।
ನೀನಹೈ ಕಲಿಪಾರ್ಥನೆಂಬ ಮ
ಹಾನರೇಶ್ವರನೆನುತ ಮಿಗೆ ಸ
ಮ್ಮಾನಿಸುತ ಸುರಪತಿಯು ಸಾರಥಿ ನಿಲಿಸಿದನು ರಥವ ॥ ೧೩

ಲಲಿತಹೇಷಾಧ್ವನಿಯು ಹಯಮಂ
ಡಲಿಯು ಮೌಳಿಯು ಮೇಲುದಾಯದ
ಲುಳಿಯು ಚಿತ್ಕೃತಿರವದ ಪಲಪಲತೆಱುವ ಪಟವಿಗೆಯು ।
ಚಲತುರಗಖುರಹತಿಯು ರಭಸೋ
ಚ್ಛಳಿತಧೂಳೀಧೂಸರದ ರಥ
ದೊಳಗೆ ನಿಂದನು ಶಕ್ರಸಾರಥಿ ನುಡಿಸಿದನು ನರನ ॥ ೧೪

ಮಾತಲಿಯು ಅರ್ಜುನನನ್ನು ಸ್ತುತಿಸುವಿಕೆ.

ಏಱು ಫಲುಗುಣ ಹರಿವರೂಥದ
ಮೇಲೆ ಬಿಜಯಂಗ್ಯೈದೆ ಬಹಳಫ
ಲಾಳಿಯಿದೆಲಾ ನಿನ್ನ ಪುಣ್ಯೋದ್ರೇಕದ ಬೇಱೊಡೆಯೆ !
ಸಾಲಕುಖಿವಱುಹಿಂಗಳ ಕರ್ಮದ
ಕೂಲಿಗರ ಜಡಜಂಜಪೂಗರ
ಜಾಲದಾಶೆಯನಿಮಿಷರ ಪುರ ವಶವಾಯ್ತು ನಿನಗೆಂದ ॥ ೧೫

ಬಲ್ಲರಾರದನಶ್ವಮೇಧದ
ಮೆಲ್ಲರನುಕೃತರಾಜಸೂಯರು
ಬಲ್ಲರೇ ಕಡೆಬೀಡಕೋಟೆಯ ಗುಡಿಯ ಬೊಡ್ಡಿಯರ ।

[1] ನಿದಿದಾದರಾರಥಕೆ, ಖ.

ಎಲ್ಲಿಯಮೆರಾವತಿ ನರಾಥಮ
ರೆಲ್ಲಿ ನಾವೀಶ್ವರನ ಕರುಣದ
ಭುಲ್ಲವಣೆಯಲಿ ಭಾಗ್ಯರೈಸಲೆ ಯೆಂದನಾಪಾರ್ಥ ॥ ೧೬

ಅರ್ಜುನನು ಹೊರಡುವಾಗ ವನದಲ್ಲಿದ್ದ ವರನ್ನು ಆಜ್ಞೆ ಕೇಳಿದುದು.

ಎನುತ ತೇರಿನೊಳೊಂದು ಕಾಲಿ
ಟ್ಟನು ಧನಂಜಯನಿಂದ್ರಕೀಲದ
ಬನಕೆ ಕೈಮುಗಿದೆಱಗಿ ನುಡಿದನು ಮಧುರವಚನದಲಿ ;
ಮುನಿಜನವೆ ಪರ್ವತವೆ ಪಂಕಜ
ವನನೆ ತರುಲತೆ ಗುಲ್ಮಖಗಮೃಗ
ವನಚರರೆ ತಾ ಹೋಗಿ ಬಹೆನೈ ನಿಮ್ಮನುಜ್ಞೆಯಲಿ ॥ ೧೭

ಅರ್ಜುನನು ರಥದಲ್ಲಿ ಕುಳಿತ ಬಳಿಕ ರಥವನ್ನು ವೇಗದಿಂದ ಬಿಡುವಿಕೆ.

ಎಂದು ರಥವೇಱಿದನು ಪಾರ್ಥ ಪು
ರಂದರನ ಸಾರಥಿ ಗುಣೌಘವ
ನೊಂದುನಾಲಿಗೆಯಿಂದ ಹೊಗಳಿದನಾಧನಂಜಯನ ।
ಗೊಂದಣದ ವಾಘೆಗಳನೆಲ್ಲವ
ನೊಂದುಗೂಡಿ ಕಿರೀಟ ದೃಢವಾ
ಗೆಂದು ಮಾತಳಿ ಚಪ್ಪರಿಸಿದನು ಚಪಲವಾಜಿಗಳ ॥ ೧೮

ಆವ ಜವವೇನೆಂಬ ಗತಿ ನೋ
ಡಾವವೈಭವ ವೇಗವಾಯ್ಲತನ ತಾ
ನಾವ ಸೂಟಿಯದಾರು ಬಲ್ಲರು ವಹಿಲವಿವರಣವ ।
ತೀವಿತಾಕಾಶವನು ಹೇಷಾ
ರಾವವೀತನ ಹುಂಕೃತಧ್ವನಿ
ನಾವಿಗಡರಥಚಕ್ರಚೀತ್ಕೃತಿಚಪಳನಿರ್ಘೋಷ ॥ ೧೯

ಆಗ ಅರ್ಜುನನು ಭೂಗೋಳ ಖಗೋಳಗಳನ್ನು ಹೇಳೆಂದು ಕೇಳಿದುದು.

ತೇರು ಮೇಲಕ್ಕಡಿಸಿ ನುಡಿದನು
ಸಾರಥಿಗೆ ಕಲಿಪಾರ್ಥ ವಿವರಿಸು
ಧಾರುಣಿಯ ಪರ್ವತಸಮುದ್ರದ್ವೀಪನದನದಿಯ ।
ತೋಱುವೀಲೋಕಂಗಳಳತೆಯ
ಚಾರುಸಪ್ತದ್ವೀಪಗಣನೆಯ
ಸೂರ್ಯವೊದಲಾದವರ ಗತಿಯನು ತಿಳಿಯಹೇಳೆಂದ ॥ ೮೦

ಧರೆಯನಾಂತವರಾರು ಧಾರುಣಿ
ಯಿರವದೇತಱ ಮೇಲೆ ದಿಕ್ಪಾ
ಲರ ಪುರಂಗಳವೆಲ್ಲಿಹುವು ಬ್ರಹ್ಮಾಂಡವೆನಿತಗಲ ।
ಉರುತರಗ್ರಹರಾಶಿಗಳ * ವಿ
ಸ್ತರವು ತಾನೆನಿತೆನಿತುಯೋಜನ
ವಱುಹೆನಲು ಮಾತಲಿ ನಗುತ ಕಲಿಪಾರ್ಥಗಿಂತೆಂದ ॥ ೮೧

ಅವನಿಪತಿ ಕೇಳಿಂದ್ರಸಾರಥಿ
ವಿವರಿಸಿದನಾತಂಗೆ ಭೂಮಿ
ಭುವನಕೋಶದ ಸಂನಿವೇಶವನದ್ರಿಜಾಲಗಳ ।
ಇವು ಕುಲಾದ್ರಿಗಳಿವು ಪಯೋನಿಧಿ
ಯಿವು ಮಹಾದ್ವೀಪಂಗಳಿವು ಮಾ
ನವರ ಧರಣಿ ಸ್ವರ್ಗಮಿಲ್ಲಿನ್ನಿತ್ತ ನೋಡೆಂದ ॥ ೮೨

ಕೇಳು ನೀನೆಲೆ ಪಾರ್ಥ ತಾರಾ
ಮೂಲೆಗಳ ವಿವರವನು ರವಿರಥ
ಕಾಲಚಕ್ರವನೈದಿ ಗಗನಾಂಗಣದಿ ಚರಿಯಿಪುದ ।

---

* ಯಾಧ್ರುವನಿರವು ಮೇಲೆನಿತೆನಿತು ಯೋಜನವಱುಹೆನಲು ಪಾರ್ಥಂಗೆ ಮಾತಲಿ ನಗುತ ವಿವರಿಸಿದ, ಱ.

ಲೀಲೆಯಿಂದಬುಜೋದರನು ಸಲೆ
ಪಾಲಿಸುವೆ ಲೋಕಗಳನೆಂದವ
ಕೂಲಿಯಂಭ್ಯಯ ನೆನೆದು ಪೇಟ್ಟಿದ ಭುವನಕೋಶವನು ॥ ೭೩

ಧರೆಯ ವಿಸ್ತಾರವನು ಮಿಗೆ ಭಾ
ಸ್ಕರನ ದಿವ್ಯವರೂಥದಂದವ
ಪರಮಲೀಲೆಗಳಿಂದ ಮಾತಲಿ ತಿಳುಹಿದನು ನರಗೆ।
ವರಸುಮೇರುವೆ ಬಳಸಿದದ್ರಿಗ
ಳಿರವೆ ಕೀಲಕಪರ್ವತಂಗಳ
ನಱುಹಿದನು ಸುರಪತಿಯ ಸಾರಥಿ ಕಲಿಧನಂಜಯಗೆ ॥ ೭೪

ಮಾತಲಿಯು ಭೂವಿಸ್ತಾರವನ್ನು ಹೇಳಿದುದು.

ಕೆಳಗಣಂಡಕಟಾಹ ತೊಡಗಿಯೆ
ಜಲವು ತುಂಬಿಹುದದಱ ಘಾತವು
ತಿಳಿಯಲಿಪ್ಪತ್ತೈದುಕೋಟಿಯ ಪವಣ ಪಡೆದಿಹುದು ।
ಇಳೆಯದಱ ಮೇಲೊಂದುಕೋಟಿಯ
ವಳದಲಿಹುದಲ್ಲಿಂದ ಮೇಲಣ
ದಳತೆಯದು ಚೌಷಷ್ಟಿ[1] ಕೋಟಿಯಜಾಂಡ ಪರಿಯಂತ ॥ ೭೫

ಧಾರಿಣಿಯನಹಿ ತಾಳ್ದನಾತನ
ವೀರಕಮಠನು ಪೊತ್ತನಿಬ್ಬರ
ಭಾರವನು ನಿಜಶಕ್ತಿ ಧರಿಸಿದಳೊಂದುಲೀಲೆಯಲಿ ।
ತೋರಗಿರಿಗಳು ವೆರಸಿದಿಳ ತಾ
ನೀರೊಳದ್ದುವುದೆಂದು ಸಲೆಮದ
ವಾರಣಂಗಳು ಧರಿಸಿ ಕೊಂಡಿಹುವೆಂಟುದಿಕ್ಕಿನಲಿ ॥ ೭೬

ಹತ್ತಿರೆಯಲಿಹುದತಳವಲ್ಲಿಂ
ದತ್ತ ವಿತಳ ಸುತಳ ತಳಾತಳ
ದೊತ್ತಿನ ಮಹಾತಳರಸಾತಳ ಕೆಳಗೆ ಪಾತಾಳ ।

[1] ಚತ್ವಿಂಸ, ಟ.

ಬಿತ್ತರದ ಲೋಕಂಗಳೀರು ಧ
ರಿತ್ರಿಯೊಳಗೊಂದೊಂದಱಿಂತರ
ಹತ್ತು ಹತ್ತು ಸಹಸ್ರಯೋಜನ ಪಾರ್ಥ ಕೇಳೆಂದ ॥ ೬೩

ಉತ್ತಮವು ಭೂಲೋಕವೆಲ್ಲಿಂ
ದತ್ತ ಭುವಸುವಲೋಕವಲ್ಲಿಂ
ದತ್ತ ಮಹಜನಲೋಕ ವಲ್ಲಿಂದತ್ತ ತಪಲೋಕ ।
ಉತ್ತಮೋತ್ತಮವಿವಕೆ ಮೇಲಣ
ಸತ್ಯಲೋಕಾದಿಗಳ ನೋಡಿ ಧ
ರಿತ್ರಿಯಲಿ ಬಲುಗಾಱುಕೊಟ್ಟನು ಲೋಕಪಾಲಕರ ॥ ೬೪

ಥರವಿಡಿದ ಮೇಲಣ ಜಗಂಗಳು
ತರಣಿಮಂಡಲ ತೊಡಗಿಯತಿವಿ
ಸ್ತರವೆನಿಪ ಬ್ರಹ್ಮಾಂಡ ಪರಿಯಂತಡಕಿಲಾಗಿಹುವು ।
ಮರುತನಾಧಾರದಲಿ ಲಕ್ಷ್ಮೀ
ಕರವೆನಿಸಿ ದೇವರುಗಳಿಂದವೆ
ಭರಿತವಾಗಿಹುವೆವರ ಮಹಿಮೆಯು ಹೇಱಲರಿದೆಂದ ॥ ೬೫

ಧರಣಿ ತಾನೈವತ್ತುಕೋಟಿಯ
ಹರಹು ಸಪ್ತ ಸಮುದ್ರಹೊಱಿಗಾ
ವರಿಸಿ ಜಂಬೂದ್ವೀಪ ನಡುವಿಹುದಲ್ಲಿ ಭದ್ರಾಶ್ವ ।
ವರುಷ ಭಾರತಕೇತುಮಾಲವು
ಕುರುವರುಷವಿವು ಪತ್ರವಾಸುರ
ಗಿರಿಯ ಹೊಱಿಗಾಗಿಹುವು ಕರ್ಣಿಕೆಯಂತೆ ಕನಕಾದ್ರಿ ॥ ೬೬

ಲಕ್ಷದೊಳು ಹದಿನಾಱುಸಾವಿರ
ಸಿಕ್ಕ ತವನಿಯೊಳಾಳುಗೊಂಬುದು
ಲೆಕ್ಕ ಚೌರಾಶೀತಿಸಾವಿರಯೋಜನದ ನಿಲವು ।

ಲೆಕ್ಕಿಸಲು ಗಿರಿಶಿಖರದಗಲವ
ದಕ್ಕು ಮೂವತ್ತೆರಡುಸಾವಿರ
ದಿಕ್ಕಿನೊಡೆಯರಿಗೆಂಟುಪಟ್ಟಣವೆದಱ ಮೇಲಿಹುವು ॥ ೩೧

ಚತುರ್ಮುಖಬ್ರಹ್ಮನ ಪುರದ ವರ್ಣನೆ.

ನಡುವೆ ಚತುರಾನನನ ಪಟ್ಟಣ
ದೆಡೆ ದೆರಹು ಹದಿನಾಱುಸಾವಿರ
ಕಡು ಚಲುವಿನಿಂದೆಸೆವ ಮಿಸುನಿಯ ಕೋಟೆ ನವರತುನ ।
ಎಡೆಗೆಡೆಗೆ ಕೇವಣಿಸಿದಂಗಡಿ
ಗಡಣೆಯಿಲ್ಲದ ಹರ್ಮ್ಯ್ಯ ನಿಚಯಕೆ
ಪಡಿ ಚತುರ್ದಶಭುವನದೊಳಗಿಲ್ಲೆನಿಸಿ ಮೆಱೆದಿಹುದು ॥ ೩೨

ಅಲ್ಲಿದ್ದ ಜನಗಳ ವರ್ಣನೆ.

ಹರಳುಗಳ ಕೇವಣದ ಮಂಗಳ
ತರವೆನಿಪ ತೊಡಿಗೆಗಳ ದಿವ್ಯಾಂ
ಬರದಿ ಬೆಳಗುವ ತನುಲತೆಯ ನವಮಣಿಯ ಮೌಳಿಗಳ ।
ತರಳಲೋಚನದಿಂದುವದನದ
ಪರಮಸೌಭಾಗ್ಯದ ವಿಳಾಸದ
ಪರಿಜನಂಗಳು ಕಮಲಭವಪುರದಲ್ಲಿ ನೆಲಸಿಹರು ॥ ೩೩

ಅಲ್ಲಿ ಮೇಲಿಂದಿಳಿದು ಬರುವ ಗಂಗೆಯನ್ನು ವರ್ಣಿಸುವಿಕೆ.

ಹಲವುನೆಲೆ ಚಲುವಿಕೆಗೆ ಸಲೆ ಹೊಂ
ಗಳಶ ಲೋಕಕೆ ವಿಮಲಹೇಮದ
ಕೆಲಸಗತಿಯಲಿ ಚೆಲುವೆನಿಸಿದುಪ್ಪರಿಗೆ ನೋಱ್ಪರಿಗೆ ।
ಹೊಳಹಿನಲಿ ಥಳಥಳಿಸುತಿಹುದದು
ನಳಿನಪೀಠನ ಭವನ [1] ನಭದಿಂ
ದಿಳಿದ ಗಂಗೆಯ ಧಾರೆ ಮೆಱೆದುದು ಪುರದ ಬಾಹಯಲಿ ॥ ೩೪

[1] ಭವಪಟ್ಟಣದಿ, ಕ.

ಮೇರೆಯಿಲ್ಲದ ದೇವತತಿಗಳ
ಭಾರದಿಂ [1] ಜಗ ಜಱುವುದೆಂದಾ
ಮೇರುವಿಂಗಣೆಯಿಟ್ಟ ರಜತಸ್ತಂಭವೋ ಮೇಣು ।
ಸಾರತರಸುಕೃತವನು ಸಂಚಿಸಿ
ಧೀರರೈದುವ ಸತ್ಯಲೋಕದ
ದಾರಿ ಯೆಂಬಂದದಲಿ ಗಂಗೆಯು ಧಾರೆ ಮೆಱೆದಿಹುದು ॥ ೩೫

ನರಸುರರು ಮೊದಲಾದ ಸಚರಾ
ಚರದ ಜೀವರಘಂಗಳನು ಸಂ
ಹರಿಸಲೋಸುಗ ಸತ್ಯಲೋಕದಿನಿಱಿದು ಬಹ ಗಂಗೆ ।
ಧರೆ ಧರಿಸಲರಿದೆನುತ ಕನಕದ
ಗಿರಿಯ ಶಿಖರದ ನಡುವೆ ನಿಂದಾ
ಪರಮಪಾವನೆ ತಿರುಗಿ ಹರಿದಳು ನಾಲ್ಕು ಮುಖವಾಗಿ ॥ ೩೬

ಅಳಕನಂದೆ ಸುಚಕ್ಷು ನಿರ್ಮಳ
ಜಲದ ಭದ್ರೆಯು ಸೀತೆ ಯೆಂಬಿವು
ಬಟಿಕ [2] ದಕ್ಷಿಣವಾದಿಯಾಗಿ ಪ್ರದಕ್ಷಿಣಾಭ್ಯದಲಿ [3] ।
ಇಟ್ಟಿದು [4] ಮೇರುವಿನಿಂದ ಕುಲಗಿರಿ
ಗಿಟ್ಟಿದು ಜಾಹ್ನವಿ ನಾಲ್ಕು ದಿಕ್ಕಿನ
ಜಲಧಿಯನು ಬೆರೆಸಿದಳಘಹರೆ ಪಾರ್ಥ ಕೇಳೆಂದ [5] ॥ ೩೭

ನಾನಾದಿಕ್ಕುಗಳಲ್ಲಿರುವ ಪರ್ವತ ವೃಕ್ಷನದನದೀವರ್ಣನೆ.

ಸುರಪತಿಯ ದಿಕ್ಕಿನಲಿ ಬೆಳೆದಿಹು
ದರಳಿ ಜಂಬೂವೃಕ್ಷ ತೆಂಕಲು
ಪಿರಿದೆನಿಸಿ ತನಿವಣ್ಣು ರಸ ನದಿಯಾಗಿ ಹರಿದಿಹುದು ।

---

1 ಭವನ ಜಱಿದಿಹ, ಕ. ಖು. 2 ತಿಳಿಯೆ, ಚ. 3 ಪದಕ್ಷಿಣಾರ್ಧದಲಿ, ಚ
4 ನಟ್ಟಿದ, ಚ. 5 ಳಘಹರೆ ಪಾರ್ಥಕೇಳೆಂದ, ಚ.

ವರುಣನಿಹ ದೆಸೆಯಲಿ ಕದಂಬವು
ಹರಸಖನ ಕಕುಭದಲಿ ವಟವೀ
ಸುರರಿಗಾಶ್ರಯವೆನಿಸಿ ಕೀಲಕಗಿರಿಯ ಮೇಲಿಹುವು ॥ ೩೪

ಸುರಗಿರಿಯ ಮೊದಲಲ್ಲಿ ಕೀಲಕ
ಗಿರಿಯು ನಾಲ್ಕವೆರಲ್ಲಿ ಕೇಸರ
ಸರಸಿ ನಾಲ್ಕರುಣೋದೆ ಭದ್ರೆ ಸಿತೋದೆ ಮಾನಸದ ।
ಹೊಱಗೆ ನಾಲ್ಕುದ್ಯಾನ ಕೀಲಕ
ಗಿರಿಯುದಯವೈವತ್ತುಯೋಜನ
ಹರಪು ತಾನೆ ಸಹಸ್ರಯೋಜನವದಱ ದಿಕ್ಕಿನಲಿ [1] ॥ ೩೫

ಮಂದರಾಚಲ ಮೂಡ ತೆಂಕಲು
ಗಂಧಮಾದನಗಿರಿಯು ಪಶ್ಚಿಮ
ದಿಂದ ಬಡಗಣಪಾರ್ಶ್ವವೆಂಬಿವು ಕೀಲಕಾದ್ರಿಗಳು ।
ನಂದನವು ಬಡಗಣದು ಪಡುವಣ
ಚಂದವಹ ವೈಭ್ರಾಜ ತೆಂಕಲು
ಗಂಧಮಾದನ ಚೈತ್ರರಥ ಮೂಡಣದು ಕೇಳಂದ ॥ ೪೦

* ವರಸಿತಾಂತರಬಿಂದುಮಂದರ
ಕುರುರುರುಚಕಗಳಿಂದ್ರದಿಕ್ಕಿನ
ಲುರುಕಳಿಂಗಸತಂಗನಿಷಧನಿಷಾದ ತಾನಿಂತು [2] ।

---

[1] ಶಿಖರದಲಿ, ಚ. ಝ. [2] ತಾಮ್ರೇಭ. ಖ.

* ಸೀತಳಾಂತಕ ಕುಂಡಮುಳಯ ಕು
ರಾತಿವೈರಂತಕವು ವೂಡಲು
ನೀತಿವಿದನೆ ತ್ರಿಕೂಟ ಶಿಖರಪತಂಗರುಚಿ ನಿಷಧ ।
ಖ್ಯಾತವಿವು ತೆಂಕಣದು ಕಪಿಲನ
ಜಾತವಾಂಧಿ ಗಂಧಮಾದನ
ತಾತವಿವು ಸುಖವಾಸ ಮಿಗೆ ವೈಡೂರ್ಯ ಪಶ್ಚಿಮದಿ * ॥ ಚ.

ತಿರುಗಿ ದಕ್ಷಿಣದಲ್ಲಿ ಮೆಧುಮಾ
ನ್ಯರಸಕುಮುದಸುಪಾರ್ಶ್ವವಾಪಿಂ
ಜರಗಳಿವು ವಾರುಣದಿಶಾಭಾಗದೊಳು ರಂಜಿಪುವು ॥ ೪೧

ನಾಗ ಕಾಲಾಂಜನವು ಹಂಸನು
ಮೇಘಪುಷ್ಪಕ [1] ಶಂಕಕೂಟವ
ನೀಗಲೀಕ್ಷಿಸು ಬಡಗದಿಕ್ಕಿನೊಳಿಹ ಕುಲಾದ್ರಿಗಳು [2] ।
* ಮೇಗೆ ಕೇಳ್ಕೈದೈದು ದೆಸೆಗಳ
ಗಿರಿಯಲಾಹೊಱಗಹರು ಸುರಜನ
ಯೋಗಿಸಿದ್ಧನಿಷೇವಿತರು ತಾವಾಗಿ ವಿಭವದಲಿ ॥ ೪೨

ಧಾರುಣಿಯ ನಡುವೆಳಸಿ ಬೆಳೆದಿಹ
ಮೇರುಗಿರಿಯನು ಬಳಸಿ ವೈತ್ತಾ
ಕಾರವಾಗೆಸೆದಿಹುದು ಜಂಬೂದ್ವೀಪ ನವಖಂಡ ।
ಮೇರೆಯಾಗಿಹ ಗಿರಿಕುಲಂಗಳ
ತೋರದಗಲವನೆನ್ನ ತಂಗಳ
ಸಾರಹೃದಯನೆ ನಿನಗೆ ಕಲಿಮೆಲದೂರ ತಿಳುಹುವೆನು [3] ॥ ೪೩

ಕುರು ಹಿರಣ್ಮಯ ರಮ್ಯಕವು ಸುರ
ಗಿರಿಯನೊಳಕೊಂಡಿಪ್ಪಿಳಾವೃತ
ಹರಿವರುಷಕಿಂಪುರುಷಭಾರತಕೇತುಮಾಲಗಳು [4] ।

---

1 ಮೇಗೆ ವೃಷಭನು, ಚ 2 ಬಡಗ ಲೆಖ್ಖಕ್ಕ ನಾಲ್ಕುವನು ಖಳಿಕ, ಚ.
4 ಯಾಪಕ್ಷಿ ನಾಶಾ ಕರಧಿ ಪರಿಯಂತಿಪ್ಪವರುಷವು ಕೇತುಮಾಲವದ', ಚ
3 ಸಾರಹೃದಯ-ರು ಖಲ್ಲರೈಕಲಿವಾರ್ಥ ಕೇಳಿಂದ, ಝು.

* ವೆ ೀಗೆ ಕೇಳೀರೈವು ಕೇಸರ
ವಾಗಿ ದಿಕ್ಕುಗಳಲಿ ಸುರಾಲಯ
ವಾಗಿರಿಯು ಬಳಸಿಹವು ದೇವವ್ರಾತಸೇವಿತವು, ಕ. ಖ.

ಪಿರಿಯಶೃಂಗ ಶ್ವೇತ ವಿಂಧ್ಯದ
ಗಿರಿ ನಿಷಧನಗ ಹೇಮಕೂಟದ
ಗಿರಿ ಹಿಮಾಲಯವಾಗಪರಜಲಧಿಯನು ಮುಟ್ಟಿಹುವು ॥ ೪೪

ಸುರಗಿರಿಯ ಬಳಸಿಪ್ಪಿಳಾವೃತ
ವರುಷದಿಂದವೆ ಮೂಡಲೊಪ್ಪುವ
ಪಿರಿಯಗಿರಿ ಮೌಲ್ಯವತ ಜಲನಿಧಿ ಕನಕಭದ್ರಾಶ್ವ ।
ವರುಷ ಪಡುವಣ ಗಂಧಮಾದನ
ಗಿರಿ ತೊಡಗಿ ಪಶ್ಚಿಮದ ಜಲನಿಧಿ
ಪರಿಗಣಿತವರುಷವನು ತಿಳಿವೊಡೆ ಕೇಳು ಮೂಲವದು ॥ ೪೫

ವರುಷಮಧ್ಯದ ಪರ್ವತಂಗಳ
ಹರಹು ತಾನೆರಡೆರಡುಸಾಸಿರ
ವರುಷ ನವನವನವಸಹಸ್ರವದಾ ಯಮಧ್ಯದಲಿ ।
ವರುಷವೆರಡೈವತ್ತನಾಲ್ಕಱ [1]
ಪರಿಗಣಿತಮೂಡಣದು ಪಡುವಣ
ದೆರಡುಸಾಸಿರವೆನಿಸಿ ಪೆಱವಿವುದು ಹೊಱಗೆ ಲವಣಾಬ್ಧಿ ॥ ೪೬

ದೇವಕೂಟದ ಜಠರವೆಂಬಿವು
ಭಾವಿಸಲು ಮೌಲ್ಯವತದಿಕ್ಕೆಲ
ನಾವಿಧದಿ ಕೈಲಾಸಪರ್ವತ ಗಂಧಮಾದನವು ।
ಭೂವಳಯದಲಿ ಪುಣ್ಯವಂತರು
ಭಾವಿಸುವೊಡಾಯಿಾಶದಿಕ್ಕಿನ
ದೇವಕೂಟದ ನಿಕರ ಪಡುವಣಗಿರಿಯ ಪ್ರಾಂತ್ಯದಲಿ [2] ॥ ೪೭

---

1 ವರುಷನದು ಮೂವತ್ತನಾಲ್ಕಱ, ಚ.

2 ಕೋವಿದನೆ ಕೇಳ್ಮಿವಿನಲಯದೊ
ಳಾಶಾಲದ ಪಾರಿಯಾತ್ರದ
ದೇವಯೋಗ್ಯದ ಗಿರಿಗಳಿಕ್ಕೆಲ ನಿಷಧ ಪರ್ವತಕೆ, ಚ.

ನೀಲಗಿರಿ ಯಿಕ್ಕೆಲಕೆ ವಾರಿಧಿ
ಮೇಲೆನಿಪ್ಪ ತ್ರಿಶೃಂಗವಿವು ಮೈ
ನೀಳದಲಿ ಪೂರ್ವಾಪರದ ಜಲನಿಧಿಯ ಮುಟ್ಟಿಹುವು ।
ಹೇಃಬೆಂಟುಪಪರ್ವ-ತಾಗ್ರವಿ
ಶಾಲ ತಾನೆಂಬತ್ತುಯೋಜನ
ಕೇಳಿಳಾವೃತ ಮೇರೆಯಾಗಿಹ ಗಿರಿಯ ಲಿಕ್ಕವನು ॥ ೪೪

ವರ್ಷಾಧಿಪತಿಗಳು.

ವರುಷದೊಡೆಯನಿಳಾವೃತಕೆ ಸಂ
ಕರುಷಣನು ಭದ್ರಾಶ್ವದೊಳು ಹಯ
ಶಿರನು ಹರಿವರುಷಕ್ಕೆ ನರಹರಿ ಕೇತುಮೂಲದಲಿ ।
ಸಿರಿಯ ಮಗ ರಮ್ಯಕಕೆ ಮತ್ಸ್ಯನು
ಪಿರಿಯಕಮಠ ಹಿರಣ್ಮಯಕೆ ಯವ
ಧರಿಸು ಕುರುವರುಷದಲಿ ವರಹನು ಪಾರ್ಥ ಕೇಳೆಂದ ॥ ೪೫

ರಾಮ ಕಿಂಪುರುಷಕ್ಕೆ ಭಾರತ
ಭೂಮಿಯಲಿ ನಾರಾಯಣರು ತಿಳಿ
ನಾಮಧಾರಕ ಹನುಮ ವಸುಧಾದೇವಿಯುಲಿ ಯುವನು[1] ।
ಆಮನು ಜಗಚ್ಚಹ್ಲುಲಹ್ಲಿಕ್ಕೀ
ಪ್ರೇಮದಿಂ ಪ್ರಹ್ಲಾದನಿಜನಿ
ಸ್ಸೀಮ ಭದ್ರಾಶ್ವಕೆ ಸದಾಶಿವರಿವರು ಪಾಲಕರು ॥ ೪೬

ವರುಷವನು ಗಿರಿಗಳನು ಬಳಸಿಹ
ಪಿರಿಯಲವಣಸಮುದ್ರವದಱಿಂ
ತರದಿ ಪ್ಲಕ್ಷದ್ವೀಪ ಯಿಕ್ಷುಸಮುದ್ರವೆಲ್ಲಿಂದ ।
ಇರಲು ಶಾಲ್ಮಲಿಯದಱ ಹೊಱಗಣ
ಸುರೆಯ ಶರಸಿಧಿಯೊಂದನೊಂದಾ
ವರಿಸಿ ಪರಿಭಾವಿಸಲು ತದ್ದ್ವೀಪಗುಣಂಗಳಾಗಿಹುವು ॥ ೪೭

[1] ನಾರದನು, ಚ.

ತಿಳಿವೊಡಾಸುರೆಯಿಂದ ಕುಶ ಘೃತ
ಜಲಧಿ ಕ್ರೌಂಚದ್ವೀಪವೆಂಬಿವ
ರಳತೆಗಿಮ್ಮಡಿಯಾದುದಾದಧಿಕರಧಿ ತದ್ದ್ವಿಗುಣ ।
ಇಳೆಯ ವೇಲೆಸೆದಿಪ್ಪ ಶಾಕದ
ಬಳಿಯ ದುಗ್ಧವದೊಂದನೊಂದನು
ಬಳಸಿಕೊಂಡಿಹುದಬುಜನಾಭನ ನಿಳಯ ತಾನಲ್ಲಿ ॥ ೪೦

ಶ್ರೀಪತಿಯ ನಗರ ಮತ್ತು ಅದರ ವರ್ಣನೆ

ಚೆಲುವಿಕೆಗೆ ನೆಲೆಯೆನಿಸಿ ಮೆಱೆವುದು
ಪ್ರಳಯ ಯೆಂದೂ ಯಿಲ್ಲ ಲಕ್ಷ್ಮೀ
ನಿಳಯನಿಹನನವರತ ಸುಳಿಯವು ಮೃತ್ಯುಮೋಯೆಗಳು ।
ಬಳಕೆ ಸಲ್ಲದು ಕಲಿಯು ಕಾಲದ
ಹೊಲಬು ಹೊದ್ದದು ಹರಿಯ ರೂಪನು
ತಳೆದ ಪುರವನು ಕ್ಷೀರವಾರಿಧಿ ಬಳಸಿ ಕೊಂಡಿಹುದು ॥ ೪೨

ಯೋಗಿಗಳ ನೆಲೆವೀಡು ಬೊಮ್ಮದ
ಸಾಗರವು ಸನಕಾದಿಮುನಿಗಳ
ಭೋಗಭೂಮಿ ಯನಂತನಿಗಮೆಗಳುಗನಿಷತ್ತುಗಳ ।
ಆಗರವು ಮೂಲೋಕದರ್ಪಣ
ವಾಗಿ ದುಗ್ಧೋದಧಿಯೊಳಸೆವುದು
ಶ್ರೀಗಧೀಶನ ನಗರ ನೋಡಿಲೆ ಪಾರ್ಥ ನೀನೆಂದ ॥ ೪೪

ಜಲಜನಾಭನ ದುಗ್ಧಜಲಧಿಯ
ಬಳಸಿಕೊಂಡಿಹ ಪುಷ್ಕರದ ಹೊಱ
ವಳಯದಲಿ ಮೆಱೆದಿಹುದು ಸ್ವಾದೂದಕದ ಜಲರಾಶಿ ।
ಇಳೆಗೆ ಕೋಟೆಯನಿಕ್ಕಿದಂತಿರೆ
ಬಳೆದ ಲೋಕಾಲೋಕಪರ್ವತ
ತಿಳಿವೊಡಲ್ಲಿಂದತ್ತ ತಿಮಿರವಜಾಂಡಪರಿಯಂತ ॥ ೪೫

ಲಕ್ಷ ಜಂಬೂದ್ವೀಪವಾಪರಿ
ಲಕ್ಷ ಲವಣಸಮುದ್ರ ನಾಲುಕು
ಲಕ್ಷ ಪ್ಲಕ್ಷದ್ವೀಪ ಇಕ್ಷುಸಮುದ್ರಪರಿಯಂತ ।
ಲಕ್ಷವೆಂಟು ಸುಶಾಲ್ಮಲಿಯು ಸುರೆ
ಲಕ್ಷ ಷೋಡಶ ಘೃತಸಮುದ್ರವು
ಲಕ್ಷ ಮೂವತ್ತೈರಡು ಕ್ರೌಂಚದ್ವೀಪ ದಧಿಗೂಡಿ ॥ ೫೬

ಲಕ್ಷ ತಾನಱುವತ್ತು ನಾಲ್ಕಾ
ಗಿಕ್ಷು ಸಾಗರ ಕ್ಷೀರಕೋಟಿಯ
ಲಕ್ಷ ಯಿಪ್ಪತ್ತೆಂಟು ಪುಷ್ಕರ ಸುಜಲ ವೊಂದಾಗಿ ।
ಮಿಕ್ಕಕೋಟಿದ್ವಯದ ಮೇಲಣ
ಲಕ್ಷದೈವತ್ತಾಱು ಯೋಜನ
ವಕ್ಕು ಹೇವುದ ಭೂಮಿ ಲೋಕಾಲೋಕಪರಿಯಂತ [1] ॥ ೫೭

ಹತ್ತುಲಕ್ಷವು ಹೀನವಾಗಿ
ಪ್ಪತ್ತು ಕೋಟಿಯ ಹರಹು ಪೂರ್ವದ
ಸುತ್ತು ಮೇಲಾಗಿಹುದು ಗರ್ಭೋದಕದ ಪರಿಯಂತ ।
ಇತ್ತ ಸುರಗಿರಿಯಿಂದ ಹಿಂದಿ
ಪ್ಪತ್ತು ಕೋಟಿಯು ಕೂಡೆ ನೋಡೆ ಧ
ರಿತ್ರಿ ತಾನೈವತ್ತುಕೋಟಿಯ ಲೆಕ್ಕ ಕೇಳಂದ ॥ ೫೮

ವೆರುಪ ವೊಂಬತ್ತಾಗಿಹುದು ವಿ
ಸ್ತರದ ಜಂಬೂದ್ವೀಪ ವೊಂದೇ
ವೆರುಪ ವೇಟಾಗಿಹುದು ಶತಸಂಖ್ಯಾತವಾದ್ವೀಪ ।
ನಿರುತಕಡೆಯ ದ್ವೀಪವೆಂಬುದು
ವೆರುಪವೆರಡಾಗಿಹುದು ಮಾನಸ
ಗಿರಿಯದಱ ನಡುವಿಹುದು ಚಕ್ರದ ಕಂಬಿಯಂದದಲಿ ॥ ೫೯

---

[1] ಗಿರಿಸಹಿತ, ಚ.

ವರುಷವೆರಡಾಗೊಪ್ಪುತಿಹ ಪು
ಷ್ಕರದ ನಡುವಣ ಮಾನಸೋತ್ತರ
ಗಿರಿಯುದಯವೈವತ್ತುಸಾವಿರಹರಹು ಲಕ್ಷವಲೆ [1] ।
ಹರಿಕುಮೊರಕ ಕೇಳಲ್ಯೆ ಯೂ [2]
ಗಿರಿಯ ಶಿಖರದ ಮೇಲೆ ದಿಗ್ದೇ
ವರ ಪುರಂಗಳು ಶಿರಿಗೆ ನೆಲೆವನೆಯಾಗಿ ಮೆಱೆದಿಹುವು ॥ ೬೦

ಅಷ್ಟದಿಕ್ಪಾಲಕರ ಪುರಗಳು.

ಸುರಪನದುವೇ ಸ್ವರ್ಗಸಾರವು
ನಿರುತದಲಿ ಸಂಯಮನಿಯೆಂಬಾ
ಪುರವು ಕಾಲನ ನಗರಿ ತೆಂಕಲು ಪಶ್ಚಿಮಾದ್ರಿಯಲಿ ।
ವರುಣನದು ಶುದ್ಧಿಮತಿ ಯಕ್ಷೇ
ಶ್ವರಗೆಸೆವುದಾಕಾಂತಿಮತಿ ಶಿವಿ
ನಿರುತಿಮೆರುದೀಕಾನ್ಯರಿಗೆಯವರವರ ನಾಮದಲಿ ॥ ೬೧

ಉರಗನಾಳಾಂಬುಜಕುಸುಮವೀ
ಧರಣಿ ಕರ್ಣಿಕೆ ಮೇರುಗಿರಿ ಕುಲ
ಗಿರಿನಗಂಗಳು ಬಳಸಿ ಕೇಸರದಂತೆ ಮೆಱೆದಿಹುವು ।
ಸರಸಿರುಹಭವನೆದಱ ಮಧ್ಯದೊ
ಳಿರಲು ಭೂತಳವೈದೆ ಮೆಱೆವುದು
ಶಿರಿಮಹಾವಿಷ್ಣುವಿನ ನಾಭೀಕಮಲದಂದದಲಿ ॥ ೬೨

ಧರೆಯು ವರುಷದ್ವೀಪಗಿರಿಗಳ
ಕರಧಿಗಳ ಸುರಶೈಲದಗ್ರದ
ಹರನ ಚತುರಾನನನ ಪಟ್ಟಣದಿರವ ತಿಳುಹಿಂದೆನು ।

[1] ತದ್ದ್ವಿಗುಣ, ಚ. [2] ಬಿರುದು ಪುಣ್ಯಶ್ಲೋಕ ಕೇಳಾ, ಚ.

ಸೂರ್ಯ ರಥ ಮತ್ತು ನಕ್ಷತ್ರಗಳ ಸ್ಥಿತಿ.

ಸರಸಿರುಹಬಂಧುವಿನ ರಥವಿಹ
ಪರಿಯು ಚರಿಸುವ ಪಥದ ತಾರೆಗ
ಳಿರವೆ ನೀ ಕೇಳೆಂದು ಮಾತಲಿ ನುಡಿದನರ್ಜುನಗೆ ॥ ೬೩

ಗಾಲಿ ಮಾನಸಗಿರಿಯ ಶಿಖರದ
ಮೇಲೆ ತಿರುಗುವುದೊಂದು ಕಡೆ ಸುರ
ಶೈಲದಲಿ ಬಿಗಿದಿಹುದು ಕೋಟಿಯ ಮೇಲೆ ಯೈವತ್ತ ।
ಏಳಿಲಹ್ಷದ ನೀಳ ರಥದ ವಿ
ಶಾಲವದು ಮೂವತ್ತು ಸಾವಿರ
ನೇಲೆ ಧ್ರುವಮೆಂಡಲವ ಬಿಗಿದಿಹುದನಿಲಪಾಶದಲಿ ॥ ೬೪

ಹರಿವ ಗಾಲಿಯ ನಾಭಿಮೂಲ [1]
ಕ್ಕುಳಿವ [2] ಚಾತುರ್ಮಾಸಗಳು ಘನ
ತರದ ಷಡೃತುವಯನ ಚಕ್ರವು ಚಾರುಚತುರಯುಗ ।
ತರವಿಡಿದ ಸಂವತ್ಸರವು ಘನ
ತರದ ಪರಿವತ್ಸರವಿಡಾವ
ತ್ಸರವು ವಿದ್ವತ್ಸರವು ವತ್ಸರವೆಂದು ಮೊಳಯಾಯ್ತು ॥ ೬೫

ಉರಗನಾಳದ ಹೊರಜೆ ನವಸಾ
ಸಿರದ ಕುಱುಗುಣಿ ಯಿಾಚುಗಳ ತಾ
ವೆರಡು ಮಡಿ ತೊಂಬತ್ತು ಬಂದುಸಹಸ್ರದರ್ಧವದು ।
ಪರಿಯನೊಗನದಱಿರ್ಧ-ಸಂಖ್ಯೆಗೆ
ಸರಿಯೆನಿಪ ಮೇಲಚ್ಚು ಮಂಗಳ
ತರವೆನಿಪ ನವರತ್ನರಚನೆಯ ಚಿತ್ರರಥವೆಂದ ॥ ೬೬

---

1 ವ. ಱಿ, ಚ. 2 ಚ್ಚ ರಿಯ, ಚ.

ಕರಸಹಸ್ರನ ರಥಕೆ ಹೂಡಿದ
ತುರಗ ಛಂದೋಮಯವು ಸಾರಥಿ
ಯರುಣ ಕಾಲವೆ ಗಾಲಿ ನವಕೋಟಿಯನು ಚರಿಯಿಸುಗು ।
ವರವರೂಥದ ಮಧ್ಯದೊಳು ವಿ
ಸ್ತರದ ಮಣಿಪೀಠದಲಿ ಮಿಗೆ ದಿನ
ಕರನು ಗ್ರಹಭವನಕ್ಕೆ ತಾನಾಧಾರನಾಗಿಹನು ॥ ೬೫

ಸೂರ್ಯಮೊದಲಾದಗಳ ಗ್ರಹಸ್ಥಾನವು.

ಹರಿ ತರಣಿಗಿಂದುವಿಗೆ ಕರ್ಕಟ
ಧರಣಿಜಂಗಜ ವೃಶ್ಚಿಕವು ಹಿಮ
ಕರನ ತನಯಗೆ ಮಿಥುನ ಕನ್ಯೆ ಬೃಹಸ್ಪತಿಗೆ ಚಾಪ ।
ಪಿರಿಯರುಷತುಲೆ ವೃಷಭದಾನವ
ಗುರುವಿನವು ಮೃಗಕುಂಭ ಮಂದಂ
ಗಿರವು ನಿಜಗೃಹ ರಾಹುಕೇತುಗಳವರ ಕೂಡಿಹುವು ॥ ೬೮

ಲಕ್ಷವುರ್ವಿಗೆ ರವಿಯ ರಥ ಶಶಿ
ಲಕ್ಷವೆರಡು ತ್ರಿಲಕ್ಷಯೋಜನ
ಮಿಕ್ಕಿಹುವು ನಕ್ಷತ್ರ ಬುಧನಿಹನೈದುಲಕ್ಷದಲಿ ।
ಲಕ್ಷವೀಹಾ ಶುಕ್ರ ಕುಜ ನವ
ಲಕ್ಷ ಗುರು ಹನ್ನೊಂದುಲಕ್ಷವು
ಲಕ್ಷ ವಸುಧಾತಳಕೆ ಶನಿ ಹದಿಮೂಱುವರೆಲಕ್ಷ ॥ ೬೯

ವಿದಿತವಿಂತಿದು ಸಪ್ತ ಋಷಿಯರ
ಸದನವದು ಹದಿನಾಲ್ಕುಲಕ್ಷವು
ಮುದದಿ ನೆಲಸಿಹನಾ ಧ್ರುವನು ತಾ ಹದಿನೈದುಲಕ್ಷದಲಿ ।
ಅದಱ ಮೇಲಿಹ ವಿಷ್ಣು ಪದದಲಿ
ಸದಮಳಾತ್ಮಕ ಶಿಂಶುಮಾರನು
ಪದುಳದಲಿ ಲೋಕಕ್ಕೆ ಸಲೆಯಾಧಾರವಾಗಿಹನು ॥ ೭೦

ಮಂದೇಹರೆಂಬ ದೈತ್ಯರ ವೃತ್ತಾಂತ.

ವರಕುಮಾರಕ ನೀನು ಕೇಳ್ಕ
ಪಿರಿಯಲೋಕಾಲೋಕವೆಂಬಾ
ಗಿರಿಯ ಬಳಸಿದ ಕಾಞ್ಚನಗತ್ತಲೆಯೊಳಗೆ ಮೆಱೆದಿಹರು ।
ಧರೆಯೊಳರುಣದ್ವೀಪವೆದಱೊಳು
ನೆರೆದ ಮಂದೇಹರುಗಳಂದಾ
ಶರಿಯದಲಿ ಸರಸಿರುಹಸಂಭವನಿಂದಲುದಿಸಿದರು ॥ ೩೧

ಹರಿಹರವಿರಿಂಚಿಗಳು[1] ಮೊದಲಾ
ದುಱುವೆ ದೇವರುಗಳೊಳು ಮತ್ತಾ
ತ್ಥರವಿಡಿದು ಹದಿನಾಲ್ಕುಲೋಕದೊಳುಳ್ಳ ದೇವರೊಳು ।
ತರಣಿ ಯತಿಬಲವಂತನೆಂಬುದ
ನಱಿದು ಪೂರ್ವದಸುರರು ಸಾಸಿರ
ಕರದ ದಿನನಾಥನೊಳು ಸಲೆ ಕಾಳಗವೆ ಬಯಸುವರು ॥ ೩೨

ಪರಿಕಿಸಲು ಪರಮೊತ್ಮ ದಿನಕರ
ಹರವಿರಿಂಚಾದಿಗಳು ಸೂರ್ಯನ
ನೆರೆದು ಸುತಿ ಕೈವಾರಿಸುತ್ತಿರೆ ಘನಮಹಾಮಹಿಮ ।
ಕಿರಣದುರಿಯುಮೆಹಾಪ್ರತಾಪನು
ತರಣಿಯೆಂದಾತನೊಳು ಕಾದಲು
ಸರಸಿರುಹಸಂಭವನ ಮೆಚ್ಚಿಸಿ ವರವ ಪಡೆದಿಹರು ॥ ೩೩

ಕಾಲವೆಂಬುದು ರವಿಯ ಗಾಲಿಯ
ಕಾಲಗತಿಯೈ ಸಲೆ ಕೃತಾಂತಗೆ
ಲೀಲೆ ಸೃಷ್ಟಿಸ್ಥಿತಿಲಯವು ಸಚರಾಚರಂಗಳಲಿ ।
ಕಾಲಚಕ್ರದ ಖಚರಗತಿಯಲಿ
ಕಾಲಗತ್ತಲೆಯನು ವಿದಾರಿಸಿ
ಪಾಲಿಸುವ ಲೋಕಂಗಳಿನಿತುವ ಪಾರ್ಥ ನೋಡೆಂದ ॥ ೩೪

---

1 ಹರವಿರಿಂಚಾದಿಗಳು, ಕ. ಖ.

ಧರಣಿ ತಾನೈವತ್ತು ಕೋಟಿಯ
ಹರಹು ಭೂಮಿಗೆ ಹತ್ತುಮಡಿ ಪ
ರ್ವರಕಟಾಹವದಕ್ಕೆ ದಶಗುಣ ದಶಗುಣೋತ್ತರದ ।
ಪರಿವಿಡಿಯಲುದಕಾಗ್ನಿ ಹರಿಪ್ರ
ಷ್ಕರವಿಹುದು ಮಹದಾದಿಪರಿವಿ
ಸ್ತರಣವೀಬ್ರಹ್ಮಾಂಡವೀಪರಿ ಯಡಕಿಲಾಗಿಹುವು ॥ ೭೫

ಅವನಿಪತಿ ಕೇಳಿಂದ್ರಸಾರಥಿ
ವಿವರಿಸಿದನೀತಂಗೆ ಭೂಮಿಯ
ಭುವನಕೋಶದ ಸಂನಿವೇಶವನದ್ರಿಜಲಧಿಗಳ ।
ಇವು ಕುಲಾದ್ರಿಗಳಿವು ಪಯೋಧಿಗ
ಳಿವು ಮಹಾದ್ವೀಪಂಗಳಿವು ಮಾ
ನವರ ಧರಣಿ ಸ್ವರ್ಗ ಮೇಲಿನ್ನಿತ್ತ ನೋಡೆಂದ ॥ ೭೬

ಭೂಲೋಕದಲ್ಲಿ ಪುಣ್ಯವನ್ನು ಮಾಡಿ ಸ್ವರ್ಗಕ್ಕೆ ಹೋದವರನ್ನು ತೋರಿಸಿದುದು.

ಈವಿಮಾನದ ಸಾಲ ಸಂದಣಿ
ತೀವಿಕೊಂಡಿದೆ ಗಗನತಳದಲಿ
ದೇವಕನ್ಯಾ ಶತಸಹಸ್ರದ ಖೇಳವೇಳದಲಿ ।
ಭೂವಳಯದಲಿ ಸುಕೃತಿಗಳು ನಾ
ನಾವಿಧದ ಜಪದಾನಯಜ್ಞಾ ತ
ಪೋವಿಧಾನದಲೊದಗಿದವರನು ಪಾರ್ಥ ನೋಡೆಂದ ॥ ೭೭

ಭೂತದಯೆಯಲಿ ನಡೆದನೀತೋ
ರ್ವಾತ ನಿರ್ಮಳ ಸತ್ಯಭಾಷಿತ
ನೀತ ತೀರ್ಥವಿಹಾರಿ ಸಜ್ಜನನೀತ ಶುಚಿ ಯೀತ ।
ಈತ ನಿರ್ಮತ್ಸರನಸೂಯಾ
ತೀತನಿವನತಿವಿಪ್ರಪೂಜಕ
ನೀತ ಮಾತಾಪಿತರ ಭಕ್ತನು ಪಾರ್ಥ ನೋಡೆಂದ ॥ ೭೮

ಈತನಿಂದ್ರಿಯವಿಜಯಿ ದುಷ್ಕೃತ[1]
ಭೀತ[2] ನಿವ ವೇದಾಧ್ಯಯನಪರ
ನೀತ ಪರಹಿತನಿವ ಯಥಾಲಾಭೈಕಸಂತೋಷಿ ।
ಈತ ಶುಚಿರುಚಿ ಯಿತ ನಿರ್ಮಳ
ನೀತ ನಿರ್ಭಯನೀತ ನಿಸ್ಸ್ಪೃಹ
ನೀತ ರಾಗದ್ವೇಷರಹಿತನು ಪಾರ್ಥ ನೋಡೆಂದ ॥ ೭೯

ಇತ್ತ ನೋಡೈ ಸ್ವಾಮಿಕಾರ್ಯಕೆ
ತೆತ್ತ ತನ್ನೊಡಲನು ರಣಾಗ್ರದೊ
ಳತ್ತಲೈದನೆ ಭೂಮಿಕನ್ಯಾಗೋಧನಾವಳಿಯ ।
ಇತ್ತವನು ಸತ್ಪುತ್ರರನು ತಾ
ಹೆತ್ತವನು ಗೋವಿಪ್ರಬಾಧೆಗೆ
ಸತ್ತವನಲೇ ಪಾರ್ಥ ನೋಡುತ್ತಮೆವಿಮಾನದಲಿ ॥ ೮೦

ಮೇಲೆಮೇಲೈದರೆ ಸುತಾರಾ
ಮೊಲೆಗಳವೋಲ್ ರಾಜಸೂಯದ
ಮೇಲು ಯಜ್ಞದ ವಾಜಿಮೇಧದ ಭೂರಿಸುಕೃತಿಗಳು ।
ಕಾಳಗದೊಳರಿಸುಭಟಶಿತಕರ
ವಾಳಧಾರಾತೀರ್ಥಸೇವ್ಯನೃ
ಪಾಲರೈದರೆ ದೀಪ್ಯಮಾನವಿಮಾನಮಧ್ಯದಲಿ ॥ ೮೧

ಪುರಾತನ ಚಕ್ರವರ್ತಿಗಳನ್ನು ತೋರಿಸಿದುದು.

ಈತ ಭರತನು ದೂರದಲಿ ತೋ
ರ್ಪಾತನವ ಹರಿಶ್ಚಂದ್ರ ನಳನೃಗ
ರೀತಗಳು ಪುರುಕುತ್ಸನೀತ ಮರುತ್ತನೃಪನೀತ ।
ಈತ ಹೈಹಯ ದುಂದುಮಾರಕ
ನೀತ ನಹುಷದಿಳೀಪದಶರಥ
ನೀತ ರಘು ತಾನೀತ ಶಂತನು ಪಾರ್ಥ ನೋಡೆಂದ ॥ ೮೨

---

[1] ಸತ್ಕೃತ, ಚ. [2] ನೀತ, ಚ.

ಇದೆ ಯಸಂಖ್ಯಾತಕ್ಷಿತೀಶ್ವರ
ರುದಿತಬಹುಪುಣ್ಯೋಪಕೃತಭೋ
ಗದಲಿ ಭಾರತವರುಷ ನಿಮ್ಮೆದು ಪುಣ್ಯಭೂಮಿ ಕಣ ।
ಇದಱೊಳಗೆ ಜಪಯಜ್ಞದಾನಾ
ಭ್ಯುದಯವೈದಿಕಕರ್ಮನಿಷ್ಠರ
ಪದವಿಗಳ ಪರುಠವಣೆಯನು ಕಲಿಪಾರ್ಥ ನೋಡೆಂದ ॥ ೪೩

ಅಮರಾವತಿಯನ್ನು ನೋಡೆಂದು ಮಾತಲಿ ಹೇಳಿದುದು

ಹೊಳವುತಿದೆ ದೂರದಲಿ ರಜತಾ
ಚಲವ ಕಡೆದಂದದಲಿ ಕೆಲದಲಿ
ಬಲವಿರೋಧಿಯ ಪಟ್ಟದಾನೆ ಸುರೇಂದ್ರನಂದನನೆ ।
ನಿಳಯವೆದೆನಸು ದೂರದಲಿ ಥಳ
ಥಳಿಸುವೆಮಳಮಣಿಪ್ರಭಾಪರಿ
ವಳಯರಶ್ಮಿನಿಬದ್ಧದಮರಾವತಿಯ ನೋಡೆಂದ ॥ ೪೪

ಅರ್ಜುನನು ಅಮರಾವತಿಯನ್ನು ಪ್ರವೇಶಿಸಿದುದು.

ಪೊಕ್ಕನಮರಾವತಿಯನರ್ಜುನ
ನೆಕ್ಕತುಳದಲುಪಾರ್ಜಿಸಿದ ಪು
ಣ್ಯಕ್ಕೆ ಸರಿಯೇ ನಹುಷನಳಭರತಾದಿಭೂಮಿಪರು ।
ಉಕ್ಕುವತಿಪರಿಮಳದ ಪವನನ [1]
ತೆಕ್ಕೆಗಳ ಲಾವಣ್ಯಲಹರಿಯ
ಸೊಕ್ಕುಗಳ ಸುರಸೂಳಗೇರಿಗಳೊಳಗೆ ಬರುತಿರ್ದ ॥ ೪೫

ಆಗ ಅರ್ಜುನನನ್ನು ಕಂಡು ಇಂದ್ರನು ತನ್ನ ಅರ್ಧಾಸನದಲ್ಲಿ
ಕುಳಿಸಿದುದು.

ಇತ್ತಿದು ರಥವನು ದಿವಿಜರಾಯನ
ನಿಳಯವನು ಹೊಕ್ಕನು ಕಿರೀಟಿಯ
ನಳವಿಯಲಿ ಕಂಡಿದಿರುವಂದನು ನಗುತ ಶತಮನ್ಯು ।

---

[1] ಉಕ್ಕಿದವು ಪರಿಮಳದ ತೇಜದ, ಚ.

ಸೆಳದು ಬಿಗಿದಪ್ಪಿದನು ಕರದಲಿ
ಕಳುಕಿ ಕರವೆನು ತಂದು ತನ್ನಯ
ಕೆಲದೊಳಗೆ ಕುಳ್ಳಿರಿಸಿದನು ಸಿಂಹಾಸನಾರ್ಧದಲಿ ॥ ೪೬

ನೂಱುಪಶುಗೆಡಹಿಗೆ ಸುರೇಂದ್ರನು
ಮಾಱುವನು ಗದ್ದುಗೆಯ ಬಱುದೇ
ಸೂಱೆಗೊಂಡನು ಸುರಪತಿಯ ಸಿಂಹಾಸನದ ಸಿರಿಯ ।
ಮೂಱುಯುಗದರಸುಗಳೂಳೀತಗೆ
ತೋಱಲೆಣೆಯಿಲ್ಲರಸ ಶಕ್ರನ
ನೂಱುಮಡಿ ತೇಜದಲಿ ತೊಳತೊಳಗಿದನು ಕಲಿಪಾರ್ಥ ॥ ೪೭

ಆಗ ಅರ್ಜುನನನ್ನು ನೋಡಲು ಸರ್ವರು ಬಂದುದು.

ನುಸಿಗಳವೆದಿರು ಮರ್ತ್ಯರೆಂಬವೆ
ರೊಸಗೆಯಮರಾವತಿಯೊಳೀನಿದು
ಹೊಸತಲಾ ಬಂದಾತನಾರೋ ಪೂತು ಮೆಱ್ಚು ಯೆನುತ ।
ವಸುಗಳಾದಿತ್ಯರು ಭುಜಂಗಮ
ರಸುರಗಂಧರ್ವಾದಿದೇವ
ಪ್ರಸರ ಬಂದುದು ಕಾಣಿಕೆಗೆ ಪುರುಹೂತನಂದನನ ॥ ೪೮

ಅಂದಿನುತ್ಸವವೆಮರನಿಕರದ
ಸಂದಣಿಯನೇನೆಂಬೆನಿಂದ್ರನ
ಮುಂದಿರದೊಳೂತೊತ್ತಿ ಜಡಿದುದು ಝಳದ ಝೂಡಿಯಲಿ ।
ಮುಂದಿ ತೊಲಗಲಿ ತೆರಹ ಕೊಡಿಸಾ
ನಿಂದವರ ಹೊಯ್ ಗಜಬಜವೆ ಮಾ
ಣೆಂದು ಗರ್ಜಿಸಿತಿಂದ್ರನಾಸ್ಥಾನದಲಿ ಸುರನಿಕರ ॥ ೪೯

ನೂಕು ಬಾಗಿಲ ಚಾಚು ಬಣಗು ದಿ
ವೌಕಸರ ನಿಲಿಸಲ್ಪಪುಣ್ಯರ
ನೇಕೆ ಹೊಗಿಸಿದೆ ಬಹಳದಾನತಪೋಪವರ್ಜಿತರ ।

ಓಕುಳಿಯ ನೆವದಿಂದ ತೆಕ್ಕೆಯ
ಬಾಕುಳಿಗಳುರುವಣಿಸಿತೇ ತಮ್ಮ
ಗೇಕೆ ರಂಭಾದಿಗಳ ಸೋಂಕೆಂದುದು ಸುರಸ್ತ್ರೀಮ್ ॥ ೮೦

ಆಗ ಆಸಭೆಯಲ್ಲಿ ಸ್ವೇಚ್ಛೆಯಾಗಿ ಬಂದವರನ್ನು ತಡೆದುದು.

ತೊಲಗಿಸಾ ಮಂದಿಯನು ತೆಗೆ ಬಾ
ಗಿಲನೆನಲು ಕವಿದುದು ಸುರೇಂದ್ರನ
ಲಲನೆಯರು ಲಾವಣ್ಯಲಹರಿಯ ಲಲಿತವಿಭ್ರಮದ ।
ಸುಟಿಗುರುಳ ನಿಟ್ಟೈಸಳುಗಂಗಳ
ಹೊಳವಕದಪಿನ ನುಣ್ಗೊರಳ ಬಲು
ವೊಲೆಯ ವೋಹರ ನೂಕಿತಾ ಪರಿವಾರನಾರಿಯರ [1] ॥ ೮೧

ಆಗ ಊರ್ವಶಿ ಮೊದಲಾದವರು ಇಂದ್ರನ ಸಭೆಗೆ ಬಂದುದು.

ಉಗಿದರೋ ಕತ್ತುರಿಯು ತವೆಲಾ
ಯಿಗಳ ಮುಚ್ಚಳವೆನೆ ಕವಾಟವ
ತೆಗೆಯೆ ಕವಿದರು ದಿವ್ಯಪರಿಮಳಸಾರ ಪೂರವಿಸೆ ।
ಪೊಗರಲಗು ಹೊಳಪುಗಳ ಕಡೆಗ
ಣ್ಣುಗಳ ಬಲುಗರುವಾಯ ಮುಸುಕಿನ
ಬಿಗುಹುಗಳ ಬಿರುದಂಕಕಾತಿಯರಿಂದ್ರನೋಲಗದ ॥ ೮೨

ನೇವುರದ ನುಣ್ಪಿನಿಯ ಕಾಂಚಿಯ
ಕೇವಣದ ಕಿಂಕಿಣಿಯ ರಭಸದ
ನೇವಣಗಳೂಲವುಗಳ ಮೌಳಿಯ ಮುಖದಮುಸುಕುಗಳ ।
ಭಾವದುಬ್ಬಿನ ಚಲ್ಲಿಗಂಗಳ
ಡಾವರದ ಡೊಂಕಾಳಸಕಾತಿಯ
ರಾವಿಬುಧಪತಿಯೋಲಗವ ಹೊಕ್ಕರು ನವಾಯಿಯಲಿ ॥ ೮೩

---

[1] ನೂಕಿತಮರೀವಾರನಾರಿಯರು, ಝ.

ವರತಿಲೋತ್ತಮೆ ರಂಭೆ ಮಧುರ
ಸ್ವರೆ ಘೃತಾಚಿ ಸುಕೇಶಿ ಗೌರೀ
ಶ್ವರಿ ವರೂಥಿನಿ ಚಿತ್ರಲೇಖೆ ಸುರೇಖೆ ಚೈತ್ರರಥಿ [1] ।
ಸುರಭಿ ಗಂಧಿನಿ ಚಾರುಮುಖಿ ಸೌಂ
ದರಿಯನಿಧಿ ಯೂರ್ವಶಿ ಸುಲೋಚನೆ
ಸುರಸೆಯೆನಿಪಂಗನೆಯರೈದಿತು ಕೋಟಿಸಂಖ್ಯೆಯಲಿ ॥ ೯೪

ಆಗ ಅಲ್ಲಿ ನಡೆದ ಗಾನನರ್ತನಾದಿಗಳ ವರ್ಣನೆ.

ಏನನೆಂಬೆನು ಜೀಯ ಶಕ್ರಾ
ಸ್ಥಾನವೆಲ್ಲಾದಿವ್ಯವಾದ್ಯಸು
ಗಾನನರ್ತನವಿಮಳತೂರ್ಯತ್ರಯದ ಮೇಳವದ ।
ಆನಿತಂಬಿನಿಯರ ಸುರೇಖಾ
ಸ್ಥಾನಕದ ನಿಜ್ಜುಗೆಯ ಸುಪ್ತಾಳದ
ನೂನಸಮ್ಮೋಹನದ ತೂಕದ ಭಾವಭಂಗಿಗಳ ॥ ೯೫

ರಸದ ಸಂಸ್ಥಾಪನೆಯ ಭಾವದ
ಬೆಸುಗೆಗಳ ಹಸ್ತಾಭಿನಯದೃ
ಕ್ಪ್ರಸರಣದ ಗತಿ ಸಾತ್ವಿಕಾಂಗಿಕಸುಗತಿವಿಭ್ರಮದ ।
ವಿಷಮಸಮಕರಣದ ಕಳಾಪದ
ಕುಸುರಿಗಳ ವರಲಾಸ್ಯತಾಂಡವ
ವೆಸೆದುದೈ ರಂಭಾದಿನರ್ತಕಿಯರಲಿ ಪ್ರೊಸತೆನಿಸಿ ॥ ೯೬

ಗಾನರಸದಲಿ ಮುಚ್ಚುಗಿತಮರಾ [2]
ಸ್ಥಾನವೆತ್ತಣ ವಾದ್ಯನರ್ತನ
ವೇನೆನಲು ಘನವಾದ್ಯ ಗತಿ ಸಮ್ಮೋಹಿಸಿತು ಸಭೆಯ ।
ಗಾನವಾದ್ಯವೆದೆತ್ತ ನೃತ್ಯರ
ಸಾನುಭವ ಭಾರವಿಸಿತನ್ಯೋ
ನ್ಯಾನುರಂಜಕವಾಯ್ತು ತೂರ್ಯತ್ರಯದ ಮೇಳಾಪ ॥ ೯೭

---

[1] ಪೂರ್ವಚಿತ್ತಿ,ಸುಲೇಖೆ ಚಿತ್ರರಥಿ, ಚ. [2] ತಿಂದ್ರಾ, ಜ.

ಆಸಭೆಯಲ್ಲಿ ಊರ್ವಶಿಯನ್ನು ಅರ್ಜುನನು ನೋಡಿದುದು.

ಈಯವಮಾನುಷನೃತ್ಯವಾದ್ಯಸು
ಗೇಯರಸದಲಿ ಮುಚ್ಚುಗಿ ಕರಣದ
ಲಾಯತೊಡಕದೆ ಪಾರ್ಥನಿದ್ದನು ಧೈರ್ಯಶಿಖರಿಯಲಿ ।
ಈಯುವತಿ ತಾನಾವಳೋ ಕುಸು
ಮಾಯುಧನ ಖಂಡೆಯವೆಲಾ ಮೆಯ್ಯು
ಮಾಯೆ ಯೆನುತೂರ್ವಶಿಯನೆವೆ ಯಿಕ್ಕದೆ ನಿರೀಕ್ಷಿಸಿದ ॥ ೯೪

ಸಭೆಯು ಸಮಾಪ್ತ.

ಪಾರುಖಾಣೆಯನಿತ್ತ ನಾಜಂ
ಭಾರಿ ಯೂರ್ವಶಿರಂಭೆಮೇನಕಿ
ಗೌರಿವೊದಲಾದಖಿಳಪಾತ್ರಕೆ ಸಾನುರಾಗದಲಿ [1] ।
ನಾರಿಯರು ನಿಖಿಳಾಮರರು ಬೀ
ಡಾರಕೈದಿತು ಹರದುದೋಲಗ
ವಾರತಿಯು ಹರಿವಾಣ ಸುತ್ತಿದುದು ಸಾಲು ಸೊಡರುಗಳ ॥ ೯೯

ಅರ್ಜುನನ ಖಳಿಗೆ ಊರ್ವಶಿಯನ್ನು ಕಳುಹಿಸೆಂದು ಇಂದ್ರನ ಅಪ್ಪಣೆ.

ಅರಸ ಕೇಳಾರೋಗಿಸಿದರಿ
ಬ್ಬರು ಸಮೇಳದಲಿದ್ದು ಬೇಱೊಂ
ದರಮನೆಗೆ ಕಳುಹಿದನು ಪವಡಿಸುವೊಡೆ ಕುಮಾರಕನ [2] ।
ಸುರಪನಿತ್ತಲು ಚಿತ್ರಸೇನನ
ಕರೆಸಿದನು ಫಲುಗುಣನ ಭಾವವೆ
ನಱಿಹಿದನು ನಮ್ಮೂರ್ವಶಿಯ ಕಳುಹೆಂದು ನೇಮಿಸಿದ ॥ ೧೦೦

ಊರ್ವಶಿ ಮನೆಗೆ ಚಿತ್ರಸೇನನು ಬಂದುದು.

ಇನಿಬರಿರೆ ರಂಭಾದಿಸೀಮೆಯಂ
ತಿನಿಯರೊಳಗೂರ್ವಶಿಯೊಳಾದುದು
ಮನ ಧನಂಜಯನೀಕ್ಷಿಸಿದನನಿಮೇಷದೃಷ್ಟಿಯಲಿ ।

---

[1] ನಿಜಾತ್ಮಜನ, ಖ. [2] ಸರಮಹರುಷದಲಿ, ಚ.

ವನಿತೆಯನು ಕಳುಹೋಗು ನೀನೆಂ
ದೆನೆ ಹಸಾದವೆನುತ್ತ ದೇವಾಂ
ಗನೆಯು ನಿಳಯಕೆ ಬಂದನಾತನು ಹರಿಯು ನೇಮದಲಿ ॥ ೧೦೧

ತಾಯೆ ಚಿತ್ತೈಸರಮನೆಯ ಸೂ
ಚಾಯತನು ಬಂದೈದನೆನೆ ಕಮು
ಲಾಯತಾಂಬಕಿ ಚಿತ್ರಸೇನನ ಕರೆಸಿದಳು ಬಟಿಕ ।
ತಾ ಯೆನುತ ವಸುತ್ರಾಭರಣದ ಪ
ಸಾಯವಿತ್ತಳು ಪರಿಮಳದ ತವ
ಲಾಯಿಗಳ ನೂಕಿದಳು ವರಕತ್ತುರಿಯ ಕರ್ಪೂರದ ॥ ೧೦೨

ಅಣಕವೆಲ್ಲಿದು ರಾಯನಟ್ಟಿದ
ಮಣಿಹವೋ ನಿಜಕಾರ್ಯಗತಿಗಳ
ಕುಣಿಕೆಯೋ ಕರ್ತವ್ಯವಾವುದು ನಿಮಗೆ ನಮ್ಮಲ್ಲಿ ।
ಗುಣಭರಿತ ಹೇಳೆನಲು ನಸುನಗೆ [1]
ಕುಣಿಯೆ ಮುಖದಲಿ ಮಾನಿನಿಗೆ ವೆಂ
ಠಣಿಸಿ ಲಜ್ಜಾಭರದಿ ನುಡಿದನು ದೂತನೀಮಾತ ॥ ೧೦೩

ಚಿತ್ರಸೇನನು ಇಂದ್ರನ ಅಪ್ಪಣೆಯನ್ನು ಹೇಳಿದುದು

ಎಮಗೆ ಮಗನರ್ಜುನನು ನೀನಿಂ
ದೆಮಗೆ ಸೊಸೆಯಹುದಾತನಂತ
ಸ್ತಿಮಿರವನು ತೊಳೆ ನಿನ್ನ ಕುಚಯುಗಕಾಂತಿಲಹರಿಯಲಿ ।
ಕಮಲಮುಖಿ ನೀ ಕಮಲವಾತನು
ಭ್ರಮರ ನೀ ಸುರವನದ ಸಿರಿ ಮಧು
ಸಮಯ ವರ್ಜುನನೆಂದು ಬೆಸಸಿದನಮರಪತಿಯೆಂದ ॥ ೧೦೪

ಕೇಳುತಿರೆ ರೋಮಾಂಚ ಲಜ್ಜೆ ಯ
ಜೋಳಿ ಯೆದ್ದುದು ರೋಮಪಿಸಿತು ಪುಳ
ಕಾಳಿ ಭಯವ ಪರುಠವಿಸಿದುದನುರಾಗದಭಿಮಾನ [2] ।

---

1 ಮುಗುಳ್ನಗೆ, ಕ, ಖ. 2 ಕಾಳಿಗಳು ಪಂಥಣಿಸಿದುದಭಿಮಾನದನುರಾಗ, ಖ.

ಮೇಲೆ ಮೇಲಭಿಲಾಷೆ ಧೈರ್ಯವ
ಟಾಳವಿಸೆ ಪರಿತೋಷಪೂರಣ
ದೇಜಮುಬ್ಬುಗಾಯುತ್ತ್ತರಕೆ ನಸುಬಾಗಿದಳು ಶಿರವ ॥ ೧೦೫

ಆತನುತ್ತಮನಾಯಕನು ವಿ
ಖ್ಯಾತೆ ನೀ ಸುರಲೋಕದಲಿ ಲ
ಜ್ಜಾತಿಶಯವೇಕಿಲ್ಲಿ ನಾವೇ ನಿನ್ಗೆ ಪರಿವಾರ ।
ಸೋತರೆಯು ದಿಟ ಭಂಗವಿಲ್ಲ ಪು
ರಾತನದ ನಳನಹುಷಭರತಯ
ಯಾತಿನೃಪರೊಳಗೀತನಗ್ಗಳನಬಲೆ ಕೇಳೆಂದ ॥ ೧೦೬

ರಾಯನಟ್ಟಿದ ನೇಮ ಗಡ ಕಮ
ನೀಯವೆಲ್ಲಾ ನಿನ್ನ ನುಡಿ ರಮ
ಣೀಯಕರವಿದು ನಿನ್ನ ರಚನೆ ಮಹಾನುಭಾವವಲೆ ।
ಆಯಿತಿದು ನೀ ಹೋಗೆನುತಬು
ಜಾಯತಾಕ್ಷಿ ಮನೋತ್ಸವದಿ ನಾ
ರಾಯಣನ ಮೈದುನನ ಬರೆವಳು ಚಿತ್ತಭಿತ್ತಿಯಲಿ ॥ ೧೦೭

ಎಂಟನೆಯ ಸಂಧಿ. ಮುಗಿದುದು.

ಸೂಚನೆ.

ಬಂಭತ್ತನೆಯ ಸಂಧಿ.

ಭಯಭರಿತಭಕ್ತಿಯಲಿ ಕಾಮೊ
ರಿಯನು ಗೆಲಿದರ್ಜುನನು ಹರವೈ
ರಿಯನು ಗೆಲಿದನು ಧೈರ್ಯದಿಂದೂರ್ವಶಿಯ ಶಾಪದಲಿ ॥

ಊರ್ವಶಿಯು ಸಾವಿರಾರು ನರ್ತಕಿಯರನ್ನು ಕರೆಸಿದ್ದುದು.

ಕೇಳು ಜನಮೇಜಯ ಧರಿತ್ರೀ
ಪಾಲ ಪಾರ್ಥನ ಮೈಯ್ಯ ಹುಲುರೋ
ಮಾಳಿ ಹರಿಯದು ಮನುಮಥನ ಖಂಡೆಯದ ಗಾಯದಲಿ ।
ಬೀಱುಕೊಟ್ಟಳು ಚಿತ್ರಸೇನನ
ನಾಲತಾಂಗಿ ಸಹಸ್ರಸಂಖ್ಯೆಯ
ಕೇಳಮೇಳದ ಸತಿಯರನು ಕರೆಸಿದಳು ಹರುಷದಲಿ ॥ ೧

ವನಜಲೋಚನೆ ಮಾಡಿದಳು ಮ
ಜ್ಜನವನಮೆಲದುಕೂಲಪರಿಮಂ
ಡನದಲಿಸೆದಳು ವಿವಿಧರತ್ನಾಭರಣಶೋಭೆಯಲಿ ।
ತನತನಗೆ ಭರಣಿಗಳನುಲೇ
ಪನವ ತಂದರು ವಿಲಸದಧಿವಾ
ಸನೆಯ ಕುಸುಮದ ಮೊಗ್ಗೆಯಲಿ ರಚಿಸಿದರು ಶಿರಮುಡಿಯ ॥ ೨

ತಿಗುರ ಗೆಲಿದಳು ತಿಲಕವನು ತೆ
ತ್ತಿಗರಲಂಕರಿಸಿದರು ಹೊಳಹಿನ
ಹೊಗರ ಹೊಸಜವ್ವನದ ಜೋಡಿಯ ಝೂಡಿ ಯಿಮ್ಮಡಿಸೆ ।
ಉಗಿದೊರೆಯ ಕೂರಲಗೊ ಧಾರೆಯ
ನೊಗೆದ ಬಲುಖಂಡೆಯವೊ ಕಾಮನ
ಹಗೆಗೆ ಹುಟ್ಟಿದ ಧೂಮಕೇತುವೊ ರೂಪೊ ಸುರಸತಿಯ ॥ ೩

ಪರಿಮಳದ ಪುತ್ತಳಿಯೊ ಚಲುವಿನ
ಕರುವಿನೆಱಕವೊ ವಿಟರ ಪುಣ್ಯದ
ಪರಿಣತಿಯೊ ಕಾಮುಕರ ಭಾಗ್ಯದ ಕಲ್ಪತರುಫಲವೊ [1] ।
ಸ್ಮರನ ವಿಜಯಧ್ವಜವೊ ಮನ್ಮಥ
ಪರಮಶಾಸ್ತ್ರದ ಮೂಲಸೂತ್ರವೊ
ಸುರಸತಿಯರಧಿದೇವತೆಯೊ ವರ್ಣಿಸುವೊಡರಿದೆಂದ ॥ ೪

1 ಸಪಕ್ವಫಲರಸವೊ, ಖ.

ಲೋಕವೆಶ್ಯದ ತಿಲಕವೋ ಜಗ
ದೇಕರತುನವೊ ವಿಗಡಮುನಿಚಿ
ತ್ತಾಕರುಷಣದ ಮಂತ್ರವಾದವೊ ಮುನಿತಪಃಫಲವೊ ।
ಲೋಕಸಾಂದಯ್ಯೆಕಸರ್ಗವೊ
ನಾಕಸುಖ ಸಾಕಾರವೋ ರೂ
ಪೈಕತಾನವೊ ಚಿತ್ರವಾಯ್ತೂರ್ವಶಿಯ ರೂಪಿನಲಿ ॥ ೫

ನೆರದರಬಲೆಯರಂಗವಟ್ಟಣ
ಪರಿಮಳದ ಮುತ್ತಿಗೆಯ ತುಂಬಿಯ
ತೆರಳಿಕೆಯ ಕತ್ತಲೆಯ ಬೆದಱಿಪ ಕಣ್ಣ ಬೆಳಗುಗಳ ।
ಪರಿಪರಿಯ ಪೊಂದೊಡಿಗೆಗಳ ಪರಿ
ಪರಿಯಲುಡಿಗೆಯ ದೇಶಿ ಮಿಗೆ ಪರಿ
ಪರಿಯ ಮುಡಿಗಳ ಮುಗುದೆಯರು ಬಳಸಿದರು ಬಾಲಕೆಯ ॥ ೬

ಹೆಗಲ ಪಡಪದ ಹಿಡಿದ ಮುಕುರಾ
ಳಿಗಳ ಚಿಮ್ಮುವ ಚಾಮರದ ಹಾ [1]
ವ್ರಗೆಯ ಪೇಮನಿತಂಬಕಳಶದ ತಾಳವೃಂತಕದ ।
ಮುಗುದೆಯರು ಮನುಮಥನ ಮನೆಯಾ
ಳುಗಳು ಮುಸುಕಿತು ಮಾನಿನಿಯ ದಂ
ಡಿಗೆಯ ಮೈಗಾತಿಗಳ ದುವ್ವಾಳಿಗಳ ಲಹರಿಯಲಿ ॥ ೭

ತುರಗಮೇಧದ ರಾಜಸೂಯದ
ವರಮಹಾಕ್ರತುಕಾಖರೀಕೆಯ
ಚರಣದಂಗುಟದುದಿಯ ಕಾಂಬರೆ ಪೂತು ಫಲುಗುಣನ ।
ಪರಮಪುಣ್ಯವೆದೇನೊ ತಾನಿ
ದ್ದರಮನೆಗೆ ಸತಿ ಬಂದಳೀನ
ಚರ ಯೆನುತ ಹೊಗಳಿದರು ಮಾಗಧರಿಂದ್ರನಂದನನ ॥ ೮
ಚ

[1] ಸೀಗುರಿಯ, ಚ:

ಧರಣಿಪತಿ ಕೇಳಿವಳ ತೊತ್ತಿರ
ಹೊಱಗೆಲಸದವದಿರ ಪಸಾಯತಿ
ಯರಿಗೆ ಪಡಿಗವನಿಡಲು ಸಲ್ಲರು ಸೋಮಯಾಜಿಗಳು ।
ವರುಣಸೂನು ಜಯಂತನಳಕೂ
ಬರರು ಸಮಯುವನೊಮ್ಮೆ ಪಡೆ
ಯರು ವರುಷವೋಲೈಸುವರು ಸಾಧದ ದಾರವಟ್ಟದಲಿ ॥ ೯

ಊರ್ವಶಿಯು ಅರ್ಜುನನ ಮನೆಗೆ ಬಂದುದು.

ಜನಮನದ ಸಂಕಲೆವನೆಯೊ ಲೋ
ಚನನೃಗದ ತಡೆವೇಂಟೆಕಾತಿಯೊ
ಮನುಮಥನ ಸಂಜೀವನೌಷಧಿಯೋ ಮಹಾದೇವ ।
ಮನಸಿಜನ ಮೂರಾಂಕ ಕಾಮುಕ
ಜನದ ಜೀವಾರ್ಥಕ್ಕೆ ವಿಭುವೆಂ
ದೆನಿಸಿದೂರ್ವಶಿ ಬಂದಳರ್ಜುನದೇವನರಮನೆಗೆ ॥ ೧೦

ಊರ್ವಶಿಯ ಸಂಗಡ ಬಂದ ತರುಣಿಯರ ವರ್ಣನೆ.

ಮೆಲುನುಡಿಗೆ ಗಿಳಿ ಹೊದ್ದಿದುವು ಸರ
ದುಲಿಗೆ ಕೋಗಿಲೆಯೌಕಿದುವು ಪರಿ
ಮಳದ ಪೂರಕೆ ತುಂಬಿದುವು ತುಂಬಿಗಳು ಡೊಂಬಿನಲಿ ।
ಹೊಳವ ಮುಖಕೆ ಚಕೋರಚಯ ವಿ
ಟ್ಟಳಿಸಿದುವು ನೇವುರದ ಬೊಬ್ಬೆಗೆ
ಸಿಲುಕಿದುವು ಹಂಸೆಗಳು ಕಮಲಾನನೆಯ ಕೆಳದಿಯರ ॥ ೧೧

ಅಲರ್ದ ಕೆಂದಾವರೆಯ ಪಂತಿಯೊ
ತಳಿತಮೊವಿನ ಬನವೊ ಮಿಗೆ ಕ
ತ್ತಲಿಪ ಬಹಳತಮಾಲಕಾನನವೋ ದಿಗಂತದಲಿ ।

ಹೊಳವ ವಿದ್ರುಮವೆನವೊ ಕುಸುಮೋ
ಚ್ಚಳಿತಕೇತಕಿದಳವೊ ರಂಭಾ
ವಳಿಯೊ ಕಾಂತಾಜನವೊ ಕಮಲಾನನೆಯು ಮುಂಗಡಿಯೊ ॥೧೦

ಊರ್ವಶಿಯು ಅರ್ಜುನನಿದ್ದ ಮನೆಗೆ ಬಂದುದು.

ಬಂದಳೂರ್ವಶಿ ಬಳ್ಳಿ ಮಿಂಚಿನ
ಮಂದಿಯಲಿ ಮುಖವಿದಿವ ಮಖಮುಗಿ
ಲಂದದಲಿ ದಂಡಿಗೆಯನಿಳಿದಳು ರಾಜಭವನದಲಿ ।
ಮುಂದೆ ಪಾಯುವಧಾರು ಸಖಿಯರ
ಸಂದಣಿಯ ಸಿಂಜಾರವದ ಸೊಗ
ಸಿಂದ ಶಬ್ದಬ್ರಹ್ಮ ಸೋತುದು ಸೊರಹಲೇನೆಂಪ ॥ ೧೩

ಬಾಗಿಲಲಿ ಬಾಗಿಲಲಿ ನಿಂದರು
ಸೋಗೆಗಣ್ಣ ಬಲೆಯರು ಸಜ್ಜೆಯ
ಬಾಗಿಲಲಿ ಚಾಮರದ ಪಡಪದ ಚಪಳೆಯರು ಸಹಿತ ।
ಆಗರುವೆ ಹೊಕ್ಕಳು ಮಹಾಹಿಯ
ಭೋಗತಲ್ಪದ ಹರಿಯೊಲಿಹ ಕತ
ಯಾಗಸುತನನು ಕಂಡಳಂಗನೆ ಮಣಿಯು ಮಂಚದಲಿ ॥ ೧೪

ಹೊಳವ ಮಣಿದೀಪಾಂಶುಗಳ ಮು
ಕ್ಕುಳಿಸಿದುವು ಕಡೆಗಂಗಳಿಂದೂ
ಪಲದ ಭಿತ್ತಿಯ ಬೆಳಗನಣಿದುದು ಖಹಳತನುಕಾಂತಿ ।
ಕೆಳದಿಯರ ಕಂತದಲಿ ಕೈಗಳ
ಸಿಲುಹಿ ನಿಂದಳು ತರುಣಿ ನೃಪ
ಕುಲತಿಲಕನಂಗೋಪಾಂಗದಲಿ ಹರಹಿದಳು ಕಣ್ಮನವ ॥ ೧೫

ಎಳೆಯಬೆಳುದಿಂಗಳವೊಲೀಕೆಯ
ಥಳಥಳಿಪ ಮುಖಚಂದ್ರಮನ ತಂ
ಬೆಲರು ಸುಟ್ಟಿದುದು ಸಾರತರಪರಿಮಳದ ಹರಹಿನಲಿ ।

ತಿಳಿದುದೀತನ ನಿದ್ರೆ ಕರಣಾ
ವಳಯ ಪರಮಪ್ರೀತಿರಸದಲಿ
ಮುಳುಗಿ ಸುಖಭಾರದಲಿ ಭುಲ್ಲೈಸಿದನು ಕಲಿಪಾರ್ಥ ॥ ೧೬

ಹರ ಮಹಾದೇವೀಯಘಟದ
ಪರಿಮಳವಿದೆತ್ತಣದೆನುತ ಮೈ
ಮುರಿದು ಕಂಡನಪೂರ್ವಪರಿಮಳಸಾರದಲಿ ಪಾರ್ಥ ।
ಕಿರಣಲಹರಿಯ ದಿವ್ಯರತ್ನಾ
ಭರಣರುಚಿರತರಪ್ರಭಾಪಂ
ಜರದೊಳಗೆ ಹೊಳಹೊಳವಮೆದನಾಲಸೆಯನೂರ್ವಶಿಯು ॥ ೧೭

ಆಗ ಅರ್ಜುನನು ಊರ್ವಶಿಗೆ ಮರ್ಯಾದೆ ಮಾಡಿದುದು.

ಹಾ ಮಹಾದೇವಿ ಯಿವಳಾ ಸು
ತ್ರಾಮನೋಲಗದೊಳಗೆ ನರ್ತನ
ರಾಮಣೀಯಕರಚನೆಯಲಿ ರಂಜಿಸಿದಳಾಸಭೆಯ ।
ಈ ಮಹಿಳೆಯಭಿವಂದನೀಯೆ ನಿ
ರಾಮಯದ ಶಶಿವಂಶಜನನಿಸ
ನಾಮೆಯಲ್ಲಾ ಶಿವೆಯೆನುತ ಮೌಳಿಮಂಚದಿಂದಿಳಿದ ॥ ೧೮

ಅರ್ಜುನನು ಊರ್ವಶಿಯನ್ನು ಕುರಿತು ಬಂದಕಾರಣವನ್ನು ಕೇಳಿದುದು.

ಏನು ಬಿಜಯಂಗ್ಯೆದಿರಿತ್ತಲು
ಮಾನನಿನ್ನ ಕುಳ್ಳಿರಿ ಸುರೇಂದ್ರನ
ಮಾನಿನಿಯರಭಿವಂದನೀಯರು ನಾವು ಕೃತಾರ್ಥರಲೆ ।
ಏನು ಬೆಸಸೆನಗೇನು ಹದ ನಿಮ
ಗಾನು ಮಗನು ವಿಚಾರವೇಕೆ ಮ
ನೋನುರಾಗದಲಱುಹಿ ಯೆಂದನು ಪಾರ್ಥನೂರ್ವಶಿಗೆ ॥ ೧೯

ನುಡಿಗೆ ಬೆಱಗಾದಳು ಮನೋಜನ
ಸಡಗರಕೆ ತಗ್ಗಿದಳು ಪಾರ್ಥನ
ನಡವಳಿಗೆ ಮೆಚ್ಚಿದಳು ಬೆಚ್ಚಿದಳಂಗಜಾಸ್ತ್ರದಲಿ ।

ಕಡುಗಿದಳು ಖಾತಿಯಲಿ ಬೋಟಿಯು [1]
ಬಿಡೆಯದಲಿ ಭಯಗೊಂಡಳೂರ್ವಶಿ
ಮಿಡುಕಿದಳು ವಿವಿಧಾನುಭಾವದ ರಸದ ಭಂಗಿಯಲಿ ॥ ೮೦

ಆಗ ಊರ್ವಶಿಯ ಚಿಂತೆ.

ಏಕೆ ನುಡಿದನೊ ಚಿತ್ರಸೇನನ
ದೇಕೆ ತಾ ಕೈಕೊಂಡೆನೆತ್ತಣ
ಕಾಕುವಾತಿಗೆ [2] ಕೋಳುವೋದೆನು ಕಾಮನೆಂಬವಗೆ ।
ಲೋಕವರ್ತಕನಲ್ಲದಿವನನ
ದೇಕೆ ವಿಧಿ ನಿರ್ಮಿಸಿದನೋ ತಾ
ನೇಕೆ ಯಿವನೀಕೆಂದು ಸುಯ್ದಳು ಬೈದು ಕಮಲಜನ ॥ ೮೧

ವಿಕಳಮತಿಯೋ ಮೋಹಿವೆ ನಪುಂ
ಸಕನೊ ಜಡನೋ ಶ್ರೋತ್ರಿಯನೊ ಬಾ
ಧಕನೊ ಖಳನೋ ಖೂಳನೋ ಮಾನವವಿಕಾರವಿದು ।
ವಿಕಟತಪಸಿನ ದೇವದೈತ್ಯರ
ಮೆಕ್ಕುಟವಾಂತುದು ವಾಮಚರಣವ
ನಕಟ ಕೆಟ್ಟೆನಲಾ ಯೆನುತ ಕರಗಿದಳು ಕಮಲಾಕ್ಷಿ ॥ ೮೨

ಅರ್ಜುನೋರ್ವಶಿಯರ ಸಂವಾದ.

ಎಲವೊ ರಾಯನ ಹೇಟಿಗೆಯಲಂ
ಡಲೆದನೆನ್ನನು ಚಿತ್ರಸೇನಕ
ನಲುಗಿ ನಟ್ಟುವು ಕಾಮಶರವೆನ್ನಂತರಂಗದಲಿ ।
ಒಲಿದು ಬಂದಬಲೆಯನು ಟಿಕ್ಕರಿ
ಗಳಿವುದೇ ವಿಟಧರ್ಮವಕಟಾ
ತಿಳಿಯಲಾ ತಾನಾವಳಂಬುದನೆಂದಳಿಂದುಮುಖಿ ॥ ೮೩

---

[1] ಲಜ್ಜೆಯು, ಚ. [2] ಕಾಕುಮೊಳಗೆ, ಕ, ಖ,

ಶಿವೆ ಶಿವೀಮಾತೇಕೆ ಕಾಮನ
ಭವಣಿಯಲಿ ನೀನಳಿಯದಿರೆ ವಾ
ಸವನ ನೇನುವು ಚಿತ್ರಸೇನನ ನುಡಿಗಳಂತಿರಲಿ ।
ಎವೆಗಕರ್ತವ್ಯದಲಿ ಮನ ಸಂ
ಭವಿಸುವುದೆ ನೀವೆಮ್ಮ ವಂಶೋ
ದ್ಭವನಕೆ ಜನನಿಯುಲಾ ಯೆನುತ ಕೈಮುಗಿದು ಪೊಡಮಟ್ಟ [1] ॥ ೦೪

ನಾರಿ ನೀ ಪೂರ್ವದಲಿ ನಮ್ಮ ಪು
ರೂರವನ ಸತಿ ನಿನಗೆ ಬಟಿಕ ಕು
ಮಾರ ಜನಿಸಿದನಾಯು ನಾತನೊಳುದಿಸಿದನು ನಹುಷ ।
ವೀರರಾಜಪರಂಪರೆಯು ಬರ
ಲಾರಿಗಾವುದಿಸಿದೆವು ನೀವು ವಿ
ಚಾರಿಸಿಮದಿಲ್ಲ ಯೆನುತ ವಿನಯದಲಿ ನರ ನುಡಿವ ॥ ೦೫

ಪ್ರಣವದರ್ಥವಿಚಾರವೆತ್ತಲು
ಗಣಿಕೆಯರ ಮನೆಯಲಿ ಸ್ವರಾಹ್ವರ
ಗಣಿತಲಕ್ಷಣವೇಕೆ ರತಿಕೂಟದ ವಿಳಾಸದಲಿ [2] ।
ಬಣಗುಭಾರತವರುಷದವರಿದ
ಭಣಿತೆ ಯೆವಿಮ್ಮಾ ದೇವಲೋಕಕೆ
ಸಣಬಿನಾರವೆ ಚೈತ್ರರಥದೊಳಗೆಂದಳಿಂದುಮುಖಿ ॥ ೦೬

ಅಯ್ಯನೈಯ್ಯನು ನಿಮ್ಮವರ ಮು
ತ್ತೈಯ್ಯನಾತನ ಭಾವ ಮೈದುನ
ನಯ್ಯನಗ್ರಜರನುಜರೆಂಬೀಜ್ಞಾತಿಬಾಂಧವರ ।
ಕಯ್ಯಲರಿಗಳ ಹೊಯ್ದು ಸಿರನರಿ
ದುಯ್ಯಲಾಡಿದವರ್ಗೆ ಮೇಣ್ಮಖ
ದೈಯ್ಯಗಳಿಗಾನೊಬ್ಬಳೆಂದಳು ನಗುತ ನಳಿನಾಕ್ಷಿ ॥ ೦೭

---

[1] ನಿನಿಯುಧಲಿ ನರ ನುಡಿದ, ಚ. [2] ಕೇಳಿ ವಿಧಾನದಲಿ, ಚ.

ಮೆಱೆಯ ಮಾತಂತಿರಲಿ ನೀನಿದ
ಮೆಱೆದು ಕಳೆ ಮಾನಿನಿಯರಿಚ್ಛೆಯ
ನಱಿಯದವನು ಸುರೇಂದ್ರನಾಗಲಿ ಚಂದ್ರನಾಗಿರಲಿ ।
ಕುಱುಹು ಕಣಾ ಫಡ ಖೂಳ ನೀನೆಂ
ತಱಿವೆ ಯೆನೆ ನಡುನಡುಗಿ ಕೈಮುಗಿ
ದೆಱಗಿ ಮಗುಳೀಮಾತನೆಂದನು ಪಾರ್ಥನೂರ್ವಶಿಗೆ ॥ ೮೪

ಇದು ಮನುಷ್ಯಶರೀರ ಸದ್ಧ
ರ್ಮದಲಿ ತನ್ನವಸಾನಪರಿಯಂ
ತಿದಱೊಳವ್ಯಭಿಚಾರದಲಿ ವರ್ತಿಸಿದ ಬುಚಿಕಿನಲಿ ।
ತ್ರಿದಶರಲ್ಲಿಗೆ ಬಂದೊಡಾಮೂ
ರ್ಗದಲಿ ನಡೆವುದು ದೇವತಾದೇ [1]
ಪದಲಿ ಬಲವತ್ತರವು ದೇಹವಿಶೇಷವಿಧಿ ಯೆಂದ [2] ॥ ೮೫

ಅಹುವಹುವಲೇ ಶಾಸ್ತ್ರ [3] ಪಥದಲಿ
ಬಹಿರಿ ನೀವೇ ಶಾಸ್ತ್ರ [4] ವಿಧಿಸಂ
ನಿಹಿತರೆಂಬುದನಱಿಯದೇ ಮೂಜಗದ ಜನವೆಲ್ಲ ।
ಮಹಿಳೆಯೊಬ್ಬಳೂಳ್ಗೆರೊಡಗೂ
ಡಿಪರು ನೀವೇ ನಲ್ಲಲೇ ನಿ
ಸ್ಪೃಪರು ನೀವ್ ನಿಮ್ಮೆಲ್ಲಿ ಹರ ಹರ ಯೆಂದಳಿಂದುಮುಖಿ ॥ ೮೬

ತಾಯು ನೇಮದಲಂದು ಕಮಲವ
ಳಾಯತಾಕ್ಷಿಯಸಂಗವೈವರಿ
ಗಾಯಿತದು ತಪ್ಪೀನು ಜನನಿಯ ನುಡಿಯಲಂಘ್ಯವಲೆ ।

---

1 ದೇವವಿಧಿನಾ, ಖ.

2 ನಿದಕೆ ತಪ್ಪುವನಲ್ಲ ವಿಷಯವ ಸುಡು ಶಿವಾ ಯೆಂದ, ಖ.

3 ಶ್ರೌತ, ಜ. 4 ಸ್ಮಾರ್ತ, ಚ.

ಕಾಯಸಾಖ್ಯಕೆ ಕಾಮತತ್ವವಿ
ಡಾಯಿತಪ್ಪದೆ ವೇಡೆಗೊಂಡ ನ
ವಾಯಿಯಲಿ ದುರ್ಗತಿಗೆ ದುರ್ವ್ಯಾಳಿಸುವನೆಲ್ಲಿಂದ ॥ ೩೧

ತಾಯು ನೇಮದಲೈವರಿಗೆ ಕಮ
ಲಾಯತಾಕ್ಷಿಯ ಕೂಟವೇ ಸುರ
ರಾಯ ನಿಮ್ಮಯ್ಯ ನುಡಿಯೆ ಲಂಘ್ಯವೆ ನಿನಗೆ ಪಿತೃವಚನ ।
ರಾಯನಟ್ಟಲು ಬಂದೆ ನಾಕುಸು
ಮಾಯುಧನ ಕಗ್ಗೊಲೆಯ ಕಳಚುವು
ಪಾಯವೆನು ನೀ ಒಲ್ಲೆ ಯೆಂದಳು ವನಿತೆ ವಿನಯದಲಿ ॥ ೩೨

ಸರಸಿಜದ ಮೆಧು ಮಧುಕರನನನು
ಕರಿಸಿದೊಡೆ ಚಂದ್ರಿಕೆ ಚಕೋರನ
ವರಿಸಿದೊಡೆ ನಿಧಿ ಲಕ್ಷ್ಮಿ ಮೆಚ್ಚಿದೊಡೆ ನಯನವೀಥಿಯಲಿ ।
ಗರುವೆಯರು ಮೇಲಿಕ್ಕಿ ಪುರುಷನ
ನರಸಿದೊಡೆ ಜಾರುವರೆ ಸುಡಲಾ
ಸರಸಿಜವೆನಾಚಂದ್ರಿಕೆಯನಾನಿಧಿಯನಾವೆಧುವೆ ॥ ೩೩

ತಿಳುಹಿದರೆ ಸುರಲೋಕದವರತಿ
ಗಳಹಿಯರಲಾ ಯೆಂಬೆ ಮನ್ಮಥ
ಖಳ ಕಣಾ ನಿಷ್ಕರುಣಿ ನೀ ಸಾಭಾಗ್ಯಗರ್ವ [1] ದಲಿ ।
ಒಲುಮೆ ಬಿದ್ದುದು ವಾಸಿಯಲಿ ಕಂ
ದೊಳಸುಗೊಂಡುದು ಕಾಮ ಕಣುಮೆನ
ಮುಟ್ಟುಗಿದುವು ಜೋಡಿಯಲಿ ಯೆಂದಳು ಖ್ಯಾತಿಯಲಿ ತರಳ ॥ ೩೪

ಕಾಡಲಾಗದು ನಿಮ್ಮೊಡನೆ ಮುಂ
ದಾಡಲಮ್ಮೆನು ಮನಕೆ ಧೈರ್ಯದ
ಜೋಡ ತೊಟ್ಟದಿರಾಗಿ ನಿಲೆ ನನೆಯುಂಬು ನಾಂಟುವುವೆ ।

[1] ವರ್ಗ, ಕ,

ಖೋಡಿಯೇಕಿದಕವ್ವೆ ಮಕ್ಕಳು
ನೋಡ ಬಂದರೆ ಬೇಱೆ ಕಷ್ಟವ
ನಾಡುವೆರೆ ಬಲ್ಲವರು ಬಿಜಯಂಗೈಯ್ಯಿ ನೀನೆಂದ ॥ ೫೫

ಆಗ ಊರ್ವಶಿಯು ಕೋಪದಿಂದ ಅರ್ಜುನನಿಗೆ ಶಾಪವನ್ನು ಕೊಟ್ಟುದು.

ರೋಷ ವೆರಡೆಲೆಯಾಯ್ತು ಲಜ್ಜೆಯ
ವಿಸಲಟ್ಟಿದುದು ಬಹುವಿಧದ ಬಲು
ವಾಸಿಗಳು ಪಲ್ಲವಿಸಿದುವು ಕೆಲ್ಲವಿಸಿತನುತಾಪ ।
ಆಸೆ ಪೈಸರವೋಯ್ತು ಕಡು ಝಳ
ಸೂಸಿದುದು ವೈಯ್ಯೊಳಗೆ ಕಂಗಳು
ಕೇಸುರಿಯ ಮುಕ್ಕುಳಿಸಿದುವು ಹೆಕ್ಕಳಿಸಿ ಕಾಮಿನಿಗೆ ॥ ೫೬

ಸೊಂಪಡಗಿತು ಮುಖವೆಂದು ತನುಲತೆ
ಕಂಪಿಸಿದುದಡಿಗಡಿಗೆ ಮೈ ತನು
ಗಂಪಿನಲಿ ಮಳೆಮಳಿಸಿತಮಳಸ್ವೇದಸಲಿಲದಲಿ ।
ತಂಪಿನಲಿ ಶಿಖಿ ಮಧುರದಲಿ ಕಡು
ನುಂಪಿನಲಿ ಬಿರಿಸಮೃತದಲಿ ವಿಷ
ಗುಂಪಿನಲಿ ನೆಲೆಯಾದವೋಲ್ ಸತಿಗಾಯ್ತು ಘನರೋಷ ॥ ೫೭

ಕೆತ್ತಿದುವು ತುಟಿ ಕದಪಿನಲಿ ಕೈ
ಹತ್ತಿದುದು ತೂಗಿದಳು ಶಿರವೆನು
ತತ್ತಕೋಪಾಯುಧವೆ ಮುಸಿದಳು ಧಾರೆ ಗಂಗಳಲಿ ।
ಎತ್ತಿದುಬ್ಬೆಗದ ವಿಕಾರದ
ಚಿತ್ತಬುದ್ಧಿಮನಂಗಳಾತ್ಮನ
ಜೊತ್ತಿಸಿದುವದ್ಭುತದಹಂಕಾರದಲಿ ಭಾಮಿನಿಯ ॥ ೫೮

ಎಲವೊ ಭಂಡರ ಭಾವೆ ಖೂಳರ
ನಿಳಯ ಖಳರಧಿದೈವ [1] ವಂಚಕ

[1] ನಾಥ, ಚ.

ತಿಲಕ ಗಾವಿಲರೊಡೆಯ ಬಂಧುವೆ ದುಷ್ಟ ನಾಯಕರ ।
ಎಲೆ ಮರುಳ ತಾನಾವಳಂಬುದ
ತಿಳಿಯಲಾನೀನಾವನೆಂಬುದ
ನಿಳಯಲಱಿಯರೆ ಭಂಡ ಫಡ ಹೋಗೆಂದಳಿಂದುಮುಖಿ ॥ ೩೯

ಒಲಿದು ಬಂದವರಾವು ಸೊಬಗಿನೊ
ಳೂಲಿಸಿ ಮೆಱುಗಿಪ ವಿಟನು [1] ನೀನತಿ
ಸುಲಭರಾವ್ ದುರ್ಲಭನು ನೀ ದೇವೇಂದ್ರಕಟಕದಲಿ ।
ಎಲೆ ನಪುಂಸಕ ಗಂಡು ವೇಷದ [2]
ಸುಟಿವು ನಿನಗೇಕೆನುತ ಸತಿ ಕಳ
ವಳಿಸಿ ಕೈಯೆತ್ತಿದಳು ಹಿಡಿ ಹಿಡಿ ಶಾಪವಿದೆ ಯೆನುತ ॥ ೪೦

ತುಳುಕಿತದ್ಭುತಕೋಪ ಸುಯ್ಲಿನ
ರ್ಝಳಹೊಡೆದು ಮೂಗುತಿಯ ಮುತ್ತಿನ
ಬೆಳಕು ಕಂದಿತು ಕುಂದಿತಮಲಚ್ಛವಿ ಮುಖಾಂಬುಜದ ।
ಹೊಳಹೊಳವೆ ಕೆಂದಳದ ಸೆಳ್ಳುಗು
ರ್ಗಳ ಮಯೂಖದೆ ಮಣಿಯ ಮುದ್ರಿಕೆ
ಗಳ ಮರೀಚಿಯಲೆಸೆದುದೆತ್ತಿದ ಹಸ್ತ ಪೂರ್ವಶಿಯ ॥ ೪೧

ರಾಹು ತುಡುಕಿದ ಶಶಿಯೊ ಮೇಣ್ಪೌ
ದ್ರಾಹಿಮಸ್ತಕದ ಮಣಿಯೋ ಕಡು
ಗಾಹಿನಮೃತವೊ ಕುಪಿತಸಿಂಹದ ಗುಹೆಯೊ ಮೃಗಮದವೊ ।
ಲೋಹಧಾರೆಯ ಮಧುವೊ ಕಲಿತಹ
ಲಾಹಲದ ಕಜ್ಜಾಯವೆನಿಸಿತು
ರೂಹು ಸುಮನೋಹರಭಯಂಕರವಾಯ್ತು ಸುರಸತಿಯ ॥ ೪೨

ನರಮೃಗಾಧಮ ನಿಮ್ಮ ಭಾರತ
ವರುಷಭೂಮಿಯೊಳೊಂದು ವರುಷಾಂ

---

[1] ವಿಾಡ, ಚ. [2] ಜೋಹದ, ಕ. ಖ.

ತರ ನಪುಂಸಕನಾಗಿ ಚರಿಸು ನಿರಂತರಾಯದಲಿ ।
ಹರಿಯು ಮೆಚ್ಚಿಹೊಗು ಹರನನೀನನು
ಸರಿಸು ನಿಮ್ಮಯ್ಯಂಗೆ ಹೇಟದು
ನಿರುತ ತಪ್ಪದು ಹೋಗೆನುತ ಮುಖದಿರುಹಿದಳು ತರಳೆ ॥ ೪೩

ಆಗ ಅರ್ಜುನನು ಸುಮ್ಮನೆ ಚಿಂತೆ ಮಾಡಿದುದು.

ಮೊಗನಾವನು ಬಹಳ ಧೈರ್ಯದ
ಬೇಗಡೆಯ ಬಿಡೆ ಬಿಗಿದಬೆಚ್ಚಿಗಿನ
ಮೊಗಿನಂಗುಲಿಗಳಲಿ ಧನಂಜಯನೊಲಿದೊಲಿದು ಶಿರವೆ ।
ಆಗಡಿಗರಿವರಮರವಧುಗಳು
ನಾಗರಿಗರಿವರೆತ್ತ ಭಾರತ
ಭೂಗತರು ನಾವೆತ್ತಲಿದು ಘಟಿಸಿದುದು ವಿಧಿಯೆಂದ ॥ ೪೪

ಸುರಪತಿಗೆ ಸೂಚಿಸಿದೆನೇ ಮೇಣ್
ಕರೆಸಿದೆನೆ ಕಮಲಾನನೆಯ ನಿ
ಷ್ಠುರದ ನುಡಿಗಪರಾಧವುಂಟೇ ನಾನು ಮಾಡಿದುದು ।
ವರುಷತನಕ ನಪುಂಸಕದಲಾ
ಚರಿಸಬಲ್ಲನೆ ಸಾಕು ದೇಸಾಂ
ತರವನಂಗೀಕರಿಸುವೆನಲಾ ತನ್ನ ಸುಡಲೆಂದ ॥ ೪೫

ಎಲೆ ನಿಧಾತ್ರ ಕೃತಾಪರಾಧ
ಸ್ಥಳಕೆ ದಂಡಪ್ರಾಪ್ತಿಯಲ್ಲದೆ
ವಿಲಸಿತದ ವೇದಾರ್ಥದಲಿ ಮನ್ವಾದಿಮಾರ್ಗದಲಿ ।
ಚಲಿಸದಾಚರಿಸಿದರೆ ಪುಣ್ಯ
ಸ್ಥಲನೆಗೇನು ನಿಮಿತ್ತ ವಕ್ಷಾ
ಗಳಿತಪಾರುಷನಾಗಿ ಬದುಕುವನಲ್ಲ ತಾನೆಂದ ॥ ೪೬

ತಪವನಾಚರಿಸಿದರೆ ವರಪಾ
ಶುಪತಕರವೆನಗಾಯ್ತು ಸತ್ಯವೆ
ತಪವಲಾ ಯೆಂದಳಿದು ನಡೆದರೆ ಷಂಡತನವಾಯ್ತು ।

ತಪವೆರಡು ಸರಿಫಲದೊಳಾದುದು
ವಿಪರೀಯಾಸದ ಗತಿ ಗಹನವೇ
ವಿಪುಳಕರ್ಮಸ್ಥಿತಿ ಯೆನುತ ತೂಗಿದನು ನಿಜಶಿರವ ॥ ೪೬

ಶಿವನ ಶರವೆನಗಾಯ್ತು ರಿಪುಕೌ
ರವರ ರಕುತದ ರಾಟಿಳವನೆ
ತ್ತುವೆನು ಕಟ್ಟಾ ಮುಡಿಯನೆಂಬೆನೆ ದ್ರೌಪದೀಸತಿಗೆ ।
ಇವಳು ಭಂಗಿಸಿ ಬೂತುಗೆಡದೀ
ಹವಣನಾರಿಗೆ ಹೇಚುವೆನು ವರ
ಯುವತಿಗೀನುಡಿಯೊಸಗೆಯೇ ಹಾ ಯೆನುತ ಚಿಂತಿಸಿದ ॥ ೪೭

ಅರ್ಜುನನಿದ್ದ ಮನೆಗೆ ಇಂದ್ರನು ಬಂದು ಮಾತನಾಡಿದುದು.

ಅರಸ ಕೇಳ್ಳ ಚಿತ್ರಸೇನನ
ಕರೆಸಿ ಯೂರ್ವಶಿ ಪಾರ್ಥ ಮೊಡಿದ
ಸುರುಳತನವನು ದೂಷಿದರೆ ಸುರಸತಿಯ ಸಂತೈಸಿ ।
ಸುರಪತಿಗೆ ಗಂಧರ್ವನಿವರಿ
ಬ್ಬರ ವಿರೋಧನಿಬಂಧನವನೆ
ಚರಿಸಲರ್ಜುನನಮನೆಗೆ ಬಂದನು ಬಲಧ್ವಂಸಿ ॥ ೪೮

ಮಗನನಪ್ಪಿದನೆನ್ನ ತಂದೆಗೆ
ದುಗುಡವೇಕೆಂನಾನೆಗೆತ್ತಣ
ಬೆಗಡಿವೆಂನರಸಂಗಿದೆತ್ತಣದೆಸೆಯ ದುರ್ಮ್ಮಾನ ।
ಮೊಗದ ತನಿ ಹಳಹಳಿಕೆ ನೇತ್ರಾಂ
ಬುಗಳೊಳದ್ದುದು ನಿಜವೆನೋವೈ
ತ್ತಿಗಳೊಳಗೆ ನುಡಿ ಮುಚ್ಚಿಗಿತೇನಿದು ಚಿತ್ರವಾಯ್ತೆಂದ ॥ ೪೯

ಆಗ ಅರ್ಜುನನು ಸುಮ್ಮನೆ ಇರಲು ಇಂದ್ರನು ಸನ್ಮಾನವನ್ನು ಹೇಳಿದುದು.

ನುಡಿಗೆ ತಲೆವಾಗಿದನು ಲಜ್ಜೆಯ
ಬಿಡೆಯದಲಿ ಜೋವೇರಿದಂತೆವೆ

ಮಿಡುಕದಿರೆ ಮಗುಳಪ್ಪಿ ಹರಿ ಮೊಗ ನೆಗಹಿ ಮುಂಡಾಡಿ ।
ಬಿಡು ಮನೋಗ್ಲಾನಿಯನು ಸತಿ ಕೆಡೆ
ನುಡಿದುದೆಲ್ಲವನೆನಗೆ ಸೈರಿಸು
ಮಡದಿಯರಲೀನುಂಟು ಫಲವೆನ್ನಾಣೆ ಹೇಳೆಂದ ॥ ೫೧

ಎಲೆ ಕಿರೀಟಿ ವೃಥಾ ಮನೋವ್ಯಥೆ
ತಳೆದುದೇ ಯೂರ್ವಶಿಯ ಶಾಪದ
ಲಳುಕಿದೈ ತತ್ಕ್ರೋಧ ನಿನಗುಪಕಾರವಾಯಿತಲ ।
ಹಲುವದಲಿ ಹನ್ನೆರಡುವರುಷದ
ಕಳಹಿನಜ್ಞಾತದಲಿ ವರುಷವ
ಕಳಿವೊಡಿವು ಸಾಧನವೆ ಯಾಯ್ತು ಶಿವಂಡಿತನವೆಂದ ॥ ೫೨

ಖೋಡಿಯಿಲ್ಲೆಲೆ ಮಗನೆ ಚಿಂತಿಸ
ಬೇಡ ನಿಮ್ಮಜ್ಞಾತಕಿದು ನೆಱೆ
ಜೋಡಲಾ ಜಾಣಾಯ್ದು ರಿಪ್ರಜನದೃಷ್ಟಿ ಶರಹತಿಗೆ ।
ಕೂಡಿತಿದು ಪುಣ್ಯೋದಲಿ ಸುರವೆಧು
ಮಾಡಿಮುಪಕೃತಿ ನಿನ್ನ ಭಾಷೆಯ
ಬೇಡ ಸಲಹಿದುವಱೆಯೆ ನೀ ಸಾಹಿತ್ಯನಲ್ಲೆಂದ ॥ ೫೩

ಇಂದ್ರನು ತನ್ನ ಮನೆಗೆ ಅರ್ಜುನನನ್ನು ಕರೆತಂದುದು.

ಎಂದು ಪಾರ್ಥನ ಸಂತವಿಟ್ಟು ಪು
ರಂದರನು ತನ್ನ ರಮನೆಗೆ ನಡೆ
ತಂದನರ್ಜುನಸಹಿತ ವಿವಿಧವಿನೋದವಿಭವದಲಿ ।
ಅಂದು ಶಿಖಿಪವನಾದಿಗಳು ನಲ
ವಿಂದ ಕೊಟ್ಟರು ಶರವನಮರೀ
ನ್ದಂ ಸೂಸಿತು ಸೇಸೆಯನು ಜಯರವದ ರಭಸದಲಿ ॥ ೫೪

ಅಲ್ಲಿ ಅರ್ಜುನನಿಗೆ ಋಷುವಿಧಾಸ್ತ್ರಶಸ್ತ್ರಲಾಭ.

ಸುರಪ ಕಳಿಸಿದನಸ್ತ್ರಶಸ್ತ್ರೌ
ತ್ಕರರಹಸ್ಯವನಮರಭುವನದ

ಭರತನಿದ್ಯೆಯನಳುಹಿಸಿದನಾಶಾಸ್ತ್ರವಿಧಿಯಿಂದ ।
ಸುರರಿಗಲಗಣಸಾದದೈತ್ಯರ
ನೊರಸಿದನು ಸತ್ಕೀರ್ತಿಲತೆ ಕುಡಿ
ವರಿದು ಬೆಳದುದು ವೀರನಾರಾಯಣನ ವೈಭವನ ॥ ೫೫

ಒಂಭತ್ತನೆಯ ಸಂಧಿ ಮುಗಿದುದು.

ಹತ್ತನೆಯ ಸಂಧಿ.

ಸೂಚನೆ.

ಸಕಲಮುನಿಜನಸಹಿತ ಗಿರಿವನ
ನಿಕರದಲಿ ತೊಳಲಿದನು ರಾಜ
ನ್ಯಕಶಿರೋಮಣಿ ಧರ್ಮನಂದನ ತೀರ್ಥಯಾತ್ರೆಯಲಿ ॥

ಅರ್ಜುನನ ವಿಷಯದಲ್ಲಿ ಧರ್ಮರಾಯನ ಚಿಂತೆ.

ಅರಸ ಕೇಳ್ ಪಾರ್ಥನಿದ್ದನು
ವರುಷವೈದಱೊಳಿಂದ್ರಭವನದ
ಸಿರಿಯ ಸಂಮೇಳದ ಸಗಾಡದ ಸಾರಸಾಖ್ಯದಲಿ [1] ।
ನರನ ಹದನೇನೋ ಧನಂಜಯ
ನಿರವದೆಲ್ಲಿ ಕಿರೀಟಿ ನಮ್ಮನು
ಮಱೆದು ಕಳೆದನಲಾ ಯೆನುತ ಯಮಸೂನು ಚಿಂತಿಸಿದ ॥ ೧

ಇಂದ್ರನ ಮಾತಿನಂತೆ ಬಂದ ಲೋಮಶರಂಷಿಗಳನ್ನು
ಧರ್ಮರಾಯ ಉಪಚರಿಸಿದುದು.

ಕಳುಹಿದನು ಲೋಮಶನನವನೀ
ತಳಕೆ ಸುರಪತಿ ಸಿತಹಯನ ಕೌ
ಶಲವನೊಡಹುಟ್ಟಿದರಿಗಱುಹಲಿಕಭ್ರವೀರ್ಗದಲಿ ।

[1] ಸಾವಾನಸ್ಯದಲಿ, ಚ.

ಇಚ್ಛಿದನಾಮುನಿಪತಿ ಧರಿತ್ರೀ
ತಳಕೆ ಕಾವ್ಯೇಕನಾಮವನೆದಲಿ
ತಳಿರ ಗೂಡಾರದಲಿ ಕಂಡನು ಧರ್ಮನಂದನನ ॥ ೨

ಈತನಿದಿರೆದ್ದರ್ಘ್ಯಪಾದ್ಯವ
ನಾತಪೋನಿಧಿಗಿತ್ತು ಬಹಳ
ಪ್ರೀತಿಯಲಿ ಬೆಸಗೊಂಡನವರಾಗಮನಸಂಗತಿಯ ।
ಆತನಮಳಸ್ವರ್ಗಸದನನು
ಖ್ಯಾತಿಶಯವನು ಹೇಳಿದನು ಪುರ
ಹೂತಭವನದಲರ್ಜುನನ ವಾರ್ತೆಯನು ವಿವರಿಸಿದ ॥ ೩

ಅರ್ಜುನನ ವಾರ್ತೆಯನ್ನು ಕೇಳಿ ಸಂತೋಷಿಸಿ ತೀರ್ಥ
ಯಾತ್ರೆಗೆ ಹೊರಡುವಿಕೆ.

ನುಡಿನುಡಿಗೆ ಸುಕ್ಷ್ಮೇಮೆಕುಶಲವ
ನಡಿಗಡಿಗೆ ಬೆಸಗೊಂಡ ಪುಳಕದ
ಗುಡಿಯ ಬೀಡಿನ ರೋಮಪುಳಕದ ಪೂರ್ಣಹರುಷದಲಿ ।
ಪೊಡವಿಯಧಿಪತಿ ಬಳಿಕ ತೊಳಲಿದ
ನಪಗಿಯಡವಿಯ ತೀರ್ಥಯಾತ್ರೆಗೆ
ಮಡದಿನಿಜಪರಿವಾರವವನೀದೇವಕುಲಸಹಿತ ॥ ೪

ವರಪುಲಸ್ತ್ಯಮುನೀಂದ್ರ ಭೀಷ್ಮಕ
ಗರುಹಿದುತ್ತಮತೀರ್ಥವನು ವಿ
ಸ್ತರಿಸಿದನು ಲೋಮಶಮುನೀಶ್ವರನವನಿಪಾಲಂಗೆ ।
ಧರಣಿಪತಿ ಬೃಹದಶ್ವನನು ಸ
ತ್ಕರಿಸಿ ನಿಜರಾಜ್ಯಾಪಹಾರವ
ಪರಮದುಃಖಪರಂಪರೆಯನಱುಹಿದನು ಖೇದದಲಿ ॥ ೫

ಆಗ ಲೋಮಶನು ಮಹಾತ್ಮರ ಕಥೆಗಳನ್ನು ಹೇಳಿದುದು.

ಆತನೀತನ ಸಂತವಿಟ್ಟ್ಯ
ದ್ಯೋತದಲಿ ನಳಚಕ್ರವರ್ತಿಯ

ಹೀತಳವ ಸೋತನು ಕಣಾ ಕಲಿಯಿಂದ ಪುಷ್ಕರಗೆ ।
ಭೂತಳವ ಬಿಟ್ಟಡವಿಗೈದಿದ
ನಾತ ನಿಜವಧುಸಹಿತ ಬನದಲಿ
ಕಾತರಿಸಿ ನಿಜಸತಿಯ ಬಿಸುಟನು ಹಾಯ್ದನಡವಿಯಲಿ ॥ ೬

ಬೀಕ ಕರ್ಕೋಟಕನ ದೆಸೆಯಿಂ
ದಟೆಯೆ ನಿಜಋತುಪರ್ಣಭೂಪನ
ನಿಳಯವನು ಸಾಱಿದನು ಬಾಹುಕನೆಂಬ ನಾಮದಲಿ ।
ಲಲನೆ ತೊಳಲುತ ಬರುತ ತಂದೆಯ
ನಿಳಯವನು ಸಾಱಿದಳು ಬೞಿಕಾ
ನಳನಮುಖಿಯಿಂದಾಯ್ತು ನಳಭೂಪತಿಗೆ ನಿಜಧರಣಿ [1] ॥ ೭

ಆತನಾಪತ್ತದು ಮಹೀಪತಿ
ಗೀತಳೋದರಿಸಹಿತ ತನ್ನೀ
ಭ್ರಾತೃಜನಸಹಿತೀಮಹಾಮುನಿಮುಖ್ಯಜನಸಹಿತ ।
ಕಾತರಿಸುತಿಹೆ ನಿನ್ನ ವೋಲ್ ವಿ
ಖ್ಯಾತರಾರೈ ಲೋಕದೊಳಗೆಂ
ದಾತಪೋನಿಧಿ ಸಂತವಿಟ್ಟನು ಧರ್ಮನಂದನನ ॥ ೮

* ನಳಮಹೀಪತಿ ಯಶ್ವಹೃದಯವ
ತಿಳಿದು ಋತುಪರ್ಣನಲಿ ಮೆರಳಿಯೆ
ಗೆಲಿದನಾಪುಷ್ಕರನ ವಿದ್ಯಾಬಲದ ಮಹಿಮೆಯಲಿ ।
ಗೆಲಿದು ಕೌರವಶಕುನಿಗಳು ನಿ
ನ್ನಿಳಯ ಕೊಂಡರು ಮರಳಿ ಜೂಜಿಂ
ಗಳುಕಬೇಡೆಂದಹ್ಷಹೃದಯವ ಮೊನಿಪ ಕರುಣಿಸಿದ ॥ ೯

---

[1] ರಾಜ್ಯ, ಚ.

* ನಳಮಹೀಪತಿ ಯಹ್ಷಹೃದಯವ
ತಿಳಿದು ಋತಪರ್ಣನಲಿ ಕಾಲವ
ಕಳಿದು ಗೆಲಿದನು ಪುಷ್ಕಳನ ವಿದ್ಯಾತಿಮಹಿಮೆಯಲಿ, ಚ. ।

ಬಟ್ಟಿಕ ರೋಮೆಶಸಹಿತನೃಪಕುಲ
ತಿಲಕ ಬಂದನಗಸ್ತ್ಯನಾಶ್ರಮ
ದೊಳಗೆ ಬಿಟ್ಟನು ಪಾಳಯವನಾಮುನಿಯು ಚರಿತವನು ।
ತಿಳುಹಿದನು ರೋಮಶನು ವೃತ್ರನ
ಕಲಹಕೆಂದು ದಧೀಚಿ ಮುನಿಪತಿ
ಯೆಲುವೆಸಮರರು ಬೇಡಿದುದನುಸುಹಿದನು ಜನಪತಿಗೆ ॥ ೧೦

ಆಮುನಿಯು ಕಂಕಾಳದಲಿ ಸು
ತ್ರಾಮ ಕೊಂದನು ವೃತ್ರನನು ಬಟ
ಕಾಮೆಹಾದಾನವರು ರಕ್ಕಸಕೋಟಿಜಲಧಿಯಲಿ ।
ಭೀಮಬಲರಡಗಿದರು ಬಂದೀ
ಭೂಮಿಯಲ್ಲಿ ವಸಿಷ್ಠನಾಶ್ರಮ
ದಾಮುನೀಂದ್ರರ ತಿಂದರವರು ಸಹಸ್ರಸಂಖ್ಯೆಯಲಿ ॥ ೧೧

ಚ್ಯವನನಾಶ್ರಮದಲ್ಲಿ ಮೂಜಿನು
ತಿವಿದು ಭಾರದ್ವಾಜನಾಶ್ರಮ
ಕವರು ಮುನಿದೆಪ್ಪತ್ತನುಂಗಿದರೇನನುಸುರುವೆನು !
ದಿವಿಜರಿತ್ತಲಗಸ್ತ್ಯನನು ಪರು
ತಪಿಸಿದರು ಸಾಗರವನಾಮುನಿ
ಹವಣಿಸಿದ ಜಠರದಲಿ ಕೊಂದರು ಸುರರು ದಾನವರ ॥ ೧೨

ಸಗರಸುತಚರಿತವನು ಕಪಿಲನ
ದೃಗುಶಿಖಿಯಲುರಿದುದನು ಬಟ್ಟಿಕವೆ
ರಿಗೆ ಭಗೀರಥನಿಟ್ಟುಹಿದಮರನದೀಕಥಾಂತರವ ।
ವಿಗಡಮುನಿ ಯಿಲ್ವಲನ ವಾತಾ
ಪಿಗಳ ಮರ್ದಿಸಿ ವಿಂಧ್ಯಗಿರಿಪ
ಬ್ಬುಗುಳು ನಿಲಿಸಿದಗಸ್ತ್ಯಚರಿತವ ಮುನಿಪ ವಿವರಿಸಿದ ॥ ೧೩

ಕೇಳಿದನು ನೃಪ ಋಶ್ಯಶೃಂಗವಿ
ಶಾಲಕಥೆಯ ಕಳಿಂಗದೇಶದ
ಕೂಲವತಿಗಳ ಮಿಂದು ಗಂಗಾಜಲಧಿ ಸಂಗಮವ ।
ಮೇಲೆ ವೈತರಣಿಯವರೋತ್ತರ
ಕೂಲವನು ದಾಂಟಿದನು ನೃಪಕುಲ
ಕಾಲ ಯಮನಾಶ್ರಮಕೆ ಬಂದನು ರೇಣುಕಾಸುತನ ॥ ೧೪

ಪರಶುರಾಮನ ಕಾರ್ತವೀರ್ಯನ
ಧುರದೊಳಿಪ್ಪತ್ತೊಂದುಸೂಟಿನೊ
ಳರಿದರಾಯರ ಕಂಠನಾಳದ ನೆತ್ತರಿನ ನದಿಯು ।
ಪರಮಪಿತೃತರ್ಪಣವನಾತನ
ಪರಶುವಿನ ನೆಣವಸೆಯ ತೊಳಹದ
ವರನದಿಯ ವಿಸ್ತರಣವನು ಕೇಳಿದನು ಯಮಸೂನು ॥ ೧೫

ಬಂದನವನಿಪನಾಪ್ರಭಾಸದ
ವೆಂದನೆಗೆ ಬಟಿಕಲ್ಲಿ ಯಾದವ
ವೃಂದದರುಶನವಾಯ್ತು ಬಹುವಿಧತೀರ್ಥಯಾತ್ರೆಯಲಿ [1] ।
ಮಿಂದನಾತಗೆ ಗಯನ ಚರಿತವ
ನಂದು ರೋಮಶ ಹೇಳಿದನು ನಲ
ವಿಂದ ಶರ್ಯಾತಿ [2] ಚ್ಯವನಸಂವಾದಸಂಗತಿಯ ॥ ೧೬

ಚ್ಯವನಮುನಿಯ ವಿವಾಹವನು ರೂ
ಪವನು ಮುನಿಗಶ್ವಿನಿಗಳಿತ್ತುದ
ನವರಿಗಾ ಮುನಿಮುಖದಲಿ ಹವಿರ್ಭಾಗಸಂಗತಿಯ ।
ಅವರಿಗಿಂದ್ರನ ಮತ್ಸರವ ದಾ
ನವರ ನಿರ್ಮಾಣವನು [3] ಬಟಿಕಿನೊ
ಳವನಿಪಗೆ ಮೊಂಧಾತಚರಿತವ ಹೇಳಿದನು ಮುನಿಪ ॥ ೧೭

---

[1] ತೀರದಲಿ, ಚ. [2] ಸಂಯಾಂತಿ, ಚ. [3] ನಿರ್ಮೂಲನವ, ಖ

ಸೋಮಕನ ಚರಿತವ ಮರುತ್ತಮ
ಹಾಮಹಿಮನಾಚಾರಧರ್ಮ
ಸ್ತೋಮವನು ವಿವರಿಸಿ ಯಯಾತಿಯ ಸತ್ಕಥಾಂತರವ ।
ಭೂಮಿಪತಿ ಕೇಳಿದನು [1] ಶಿಬಿಯು
ದ್ದಾಮತನವನು ತನ್ನ ಮಾಂಸವ
ನಾಮಹೇಂದ್ರಾದಿಗಳಿಗಿತ್ತ ವಿಚಿತ್ರವಿಸ್ತರವ ॥ ೮೯

ಕೇಳಲಷ್ಟಾವಕ್ರಚರಿತವ
ಹೇಳಿದನು ಲೋಮಶಮುನೀಂದ್ರ ನೃ
ಪಾಲಕಂಗಱುಹಿದನು ಪೂರ್ವಾಪರದ ಸಂಗತಿಯ [2] ।
ಬಾಳಡವಿ ಬಯಲಾಯ್ತು ಖಗಮೃಗ
ಜಾಲ ಸವೆದುದು ಗಂಧಮಾದನ
ಶೈಲವನದಲಿ ವಾಸವೆಂದವನೀಶ ಹೊಱುವೆಂಟ ॥ ೯೯

ಆಗ ಯುಧಿಷ್ಠಿರನು ಗಂಧಮಾದನದ ಕೆಳಿಗೆ ಸಪರಿವಾರನಾಗಿ ಬಂದುದು.

ಅರಸ ಬಂದನು ಗಂಧಮಾದನ
ಗಿರಿಯ ತಪ್ಪಲಿಗಗ್ನಿಹೋತ್ರದ
ಪರಮಋಷಿಗಳು ಮೆಡದಿಸಕಲನಿಯೋಗಿಜನಸಹಿತ ।
ಸರಸಿ ನೆರೆಯಲು ಸ್ನಾನಪಾನಕೆ
ತರುಲತಾವೆಳಿಗಳು ಯುಧಿಷ್ಠಿರ
ನರಮನೆಯ ಸೀವಟಕೆ ಸಾಲವು ನೃಪತಿ ಕೇಳೆಂದ ॥ ೧೦೦

ಅಲ್ಲಿಂದ ಹೊರಡಲಾಗಿ ದಾರಿಯಲ್ಲಿ ಮಳೆಯಿಂದ ಆದ ತೊಂದರೆ.

ಮಱುದಿವಸವಲ್ಲಿಂದ ಬೆಟ್ಟದ
ಹೊಱಗೆ ನಡೆತರಲಭ್ರದಲಿ ಗುಡಿ
ಯಿಱಿದು ಮೆಱಿದುದು ಮೇಘ ಮಿಂಚಿದುದಖಿಳದೆಸೆದೆಸೆಗೆ ।

---

1 ಭೂಮಿಪಗೆ ಹೇಳಿದನು, ಖ.

2 ಯಾವಕ್ಕೀತಚರಿತ್ರವನು, ಖ. ಯಾವದೃಷಿಯ ಸತ್ಕಥೆಯು, ಚ.

ಬಿಸಿಡಿಲ ಬೊಬ್ಬೆಯಲಿ ಪರ್ವತ
ಬಿಳಿಯೆ ಬಲುಗತ್ತಲೆಯ ಬಿಂಕಕೆ
ನರರ ಕಣ್ಮನ ಹೂಳ ತೂಳಿತು ಮಟೆ ಮಹೀತಳವ ॥ ೦೧

ಮರನ ಮರ ತಕ್ಕೈಸಿದುವು ಕುಲ
ಗಿರಿಯ ಗಿರಿ ಮುಂಡಾಡಿದುವುತೆರೆ
ತೆರೆಗಳಲಿ ತೆರೆ ತಿವಿದಾಡಿದುವು ಸಾಗರದ ಸಾಗರದ ।
ಧರಣಿ ಕದಡಲು ಸವೆಡಿಯಡಿಕಿಲು [1]
ಜರಿಯದಿಹುದೇ ಜಗದ ಜೋಕೆಗೆ [2]
ಹರಿಗೆ ಹೇಟೆನೆ ಬೀಸಿದುದು ಬಿಲುಗಾಳಿ ಬಿಸಿಸಿನಲಿ ॥ ೦೦

ಕೆದಱುತಲ್ಲಿಯದಲ್ಲಿ ಮಟೆಯೊಳು
ಹುದುಗಿತಲ್ಲಿಯದಲ್ಲಿ ಕಣಗಿಲು
ಕದಳಿಗಳ ಮಱೆಗೊಂಡುದಲ್ಲಿಯದಲ್ಲಿ ಹರಿಹರಿದು ।
ಬೆದಱುತಲ್ಲಿಯದಲ್ಲಿ ಕರಕರ
ದೊದಱುತಲ್ಲಿಯದಲ್ಲಿ ಬಲು ಮಟೆ
ಸದೆದುದಿವರನು ಸೇಡಿಗೊಂಡುದು ಜನದ ಸುಮ್ಮಾನ [3] ॥ ೦೫

ಬಗೆದು ಹೊಕ್ಕರು ಮೆಳಗಳನು ಮಿಂ
ಚುಗಳ ಕಣ್ಬೆಳಗಿನಲಿ ದಾರಿಯ
ತೆಗೆತೆಗೆದು ಸಾಱುದರು ಸಂದಣಿ ನರನ ಹೆಮ್ಮರನ ।
ಬಿಗಿದ ರೋಮದ ಹುದಿದ ಕೈಗೊ
ಪ್ಪಿಗಳ ನಡುಕದ ಮೈಯ್ಯ ಕಡು ಸೇ
ಡುಗಳ ಶೀತದ ಸಕಲಜನ ಹುದುಗಿದುದರಣ್ಯದಲಿ ॥ ೦೪

---

[1] ಧರಣಿಗಿಕ್ಕಿದಿಳಿಂಪನಡಕಿಲು, ಚ. [2] ಬೋನಕೆ, ಚ,
[3] ಸಕಲಜನನಿಕರ, ಖ.

ಹೊಳವ ಕಂಗಳ ಕಾಂತಿ ಬಲುಗ
ತ್ತಲೆಯ ಝಳಪಿಸೆ ಘೋರವಿಪಿನ
ದೊಳಳಿಕುಲಾಳಕಿ ಬಂದಳೊಬ್ಬಳ ಮಟೆಗೆ ಕೈಯೊಡ್ಡಿ ।
ಬಲಿದು ಮೈ ನಡುನಡುಗಿ ಹಲುಹಲು
ಹಳಚಿ ನನೆದಳು ವಾರಿಯಲಿ ತನು
ಹಳಹಳಿಸಿ ಬಬಿಲಿದಳು ಚರಣದ ಹೊನಲ ಹೋರಟೆಗೆ ॥ ೮೫

ಆಗ ಮಳೆಯಲ್ಲಿ ತೊಂದರೆಪಟ್ಟು ಹಿಂದೆ ನಿಂತ ದ್ರೌಪದಿಯನ್ನು
ಹುಡಕಿ ಆದರಿಸಿದುದು.

ಎಡಹುವೆರಳಿನ ಕಾಲಮುಳುಗಳ
ಕಡುವೆಟೆಯ ಘಾಟಳಿಪಗಾಳಿಯ
ಸಿಡಿಲುಮಿಂಚಿನ ಫಲ್ಲಣೆಯ ಘೋರಾಂಧಕಾರದಲಿ ।
ಒಡನೆ ಮಾನಿಸರಿಲ್ಲ ಕರೆದರೆ
ನುಡಿವರಿಲ್ಲ ಕರದ್ವಯದಿ ತಡ
ವಿಡುತ ಪೈಸರದೊಳಗೆ ಸೂಸಿತು ಮೈ ಮಹಾಸತಿಯ ॥ ೮೬

ಗಾಳಿಗೊಱಗಿದ ಕದಳಿಯಂತಿರೆ
ಲೋಲಲೋಚನೆ ಥಟ್ಟುಗೆಡೆದಳು
ಮೇಲುಸುರ ಬಲುಮೂರ್ಛೆಯಲಿ ಮುದ್ರಿಸಿದಚೇತನವೆ ।
ಬಾಲೆ ಯಿರೆ ಬೆಳಗಾಯ್ತು ತೆಗೆದುದು
ಗಾಳಿ ಬಿಱುವಟೆ ಭೀಮನಕುಲನ
ಪಾಲರಱಸಿದರೀಕೆಯನು ಕಂಡವರ ಬೆಸಗೊಳುತ ॥ ೮೭

ಬರುತ ಕಂಡರು ಬಟ್ಟೆಯಲಿ [1] ನಿ
ರ್ಭರದ ಮೂರ್ಛಾಮೋಹಿತಾಂತಃ
ಕರಣೆಯನು ಹಾ ಯೆನುತ ಬಿದ್ದರು ಪವನಜಾದಿಗಳು ।

---

1 ಹೊದೆಯೊಳಗೆ, ಕ. ಖ.

ಧರಣಿಪತಿ ತೆಗೆದೀಕೆಯನು ಕು
ಳ್ಳಿರಿಸಿ ತನ್ನಯ ತೊಡೆಯ ಮೇಲಾ
ದರಿಸಿ ಮಂತ್ರಿಸಿ ನೀರ ತಳದನು ರಕ್ಷೆಗಳ ರಚಿಸಿ [1] ॥ ೮೪

ಉಪಚರಿಸಿ ರಕ್ಷೋಘ್ನ ಸೂಕ್ತದ
ಜಪವ ಮಾಡಿಸಿ ವಚನಮಾತ್ರದ
ರಪಣದಲಿ ಹರಸಿದನು ಗೋಧನಭೂಮಿದಾನವನು ।
ನೃಪತಿ ಕೇಳೊಂದೆರಡುಘಳಿಗೆಯೊ
ಳಪಹರಿಸಿದುದು ಮೊರ್ಛೆ ಸತ್ಯ
ವ್ಯಪಗತೈಶ್ವರ್ಯರನು ಕಂಡಳು ಕಾಂತೆ ಕಂದೆಳಿದು ॥ ೮೫

ದ್ರೌಪದಿಯು ಆಗಿನ ಸ್ಥಿತಿಯನ್ನು ನೋಡಿ ಧರ್ಮರಾಯನ ವ್ಯಸನ.

ನೆಲೆವನೆಯ ಮಾಡದಲಿ ರತುನಾ
ವಳಿಯ ನುಂಬೆಳಗಿನಲಿ ಹಂಸೆಯ
ತುಳಿಯ ಮೇಲ್ವಾಸಿನಲಿ ಪವಡಿಸವೀಕೆಯಿಂದೀಗ ।
ಹಬ್ಬುವದಲಿ ಘೋರಾಂಧಕಾರದ
ಮಬ್ಬೆಯೊಳಗೊಬ್ಬಳ ನನೆದು ನಡೆದೀ
ಕಲುನೆಲದೊಳೂರಗಿದಳನುತ ಮಿಳುಗಿದನು ಧರಣೀಶ ॥ ೮೬

ಹರದುದುಬ್ಬಿದ ಮೊರ್ಛೆ ಕರಣೋ
ತ್ಕರದ ಕಳವಳ ವಡಗಿತರಸನ
ನರಸಿ ಸಂತೈಸಿದಳು ತಪ್ಪೀನಿದು ಪ್ರರಾಕೃತದ ।
ಪರುಠವಣೆಗೇಕಳಲು ಮುಂದಣ
ಗಿರಿಯ ಗಮನೋಪಾಯವನು ಗೋ
ಚರಿಸಿರೇ ಸಾಕೆಂದು ಬಿನ್ನೈಸಿದಳು ಭೂಪತಿಗೆ ॥ ೮೭

ಇದೆ ಮುನಿವ್ರಜ ವಗ್ನಿಹೋತ್ರಿಗ
ಳಿದೆ ಕುಟುಂಬಿಗಳಾಪ್ತಜನ

---

[1] ನಯನವದನದಲಿ, ಖ.

ವಿದೆ ವರಸ್ತ್ರೀಬಾಲವೃದ್ಧನಿಯೋಗಿಜನಸಹಿತ ।
ಇದು ಮಹಾಕಾಂತಾರವಿನಿಬರ
ಪದಕೆ ವನಮೊರ್ಗದಲಿ ಸೇರುವ
ಹದನ ಕಾಣೆನು ಶಿವಶಿವೆಂದಳು ಕಾಂತೆ ಭೂಪತಿಗೆ [1] ॥ ೩೦

ಆಗ ಜನಗಳು ಶ್ರಾಂತರಾಗಿರುವುರನ್ನು ತಿಳಿದು ಘಟೋತ್ಕಚನನ್ನು
ಸ್ಮರಿಸಲು ಆತನ ಆಗಮನ.

ಆಯುತಾಕ್ಷಿಯ ನುಡಿಗೆ ಪಾಂಡವ
ರಾಯ ಮೊಚ್ಚಿದನಿನ್ನು ಗಮನೋ
ಪಾಯವೆಂತುಟೊ ಯೆನುತ ನೆನೆದನು ಕಲಿಘಟೋತ್ಕಚನ ।
ರಾಯ ಕೇಳ್ ಕಮಲನಾಭನ
ಮಾಯೆಯೋ ತಾನಹಿಯೆನಾಹ್ವಣ
ವಾಯುವಿನ ವಹಿಲದಲಿ ರಾಹ್ವಸನಿಟಿದನಭ್ರದಲಿ ॥ ೩೧

ವೀರದೈತ್ಯನ ಬಹಳದುಷ್ಪರಿ
ವಾರವದನಾರೆಣಿಸುವರು ಮುಂ
ಗಾರಿರುಳ ತನಿಯರಕ ನೀಲಾಚಲದ ಖಂಡವೆನೆ ।
ಘೋರರಾಹುವ್ಯೂಹವೆನೆ ಸುರ
ವೈರಿಗಳ ವೈಗಾಂತಿಲಹರಿಯ
ಪೂರದಲಿ ಜಗ ಮುಚ್ಚುಗೆ ಬಂದುದು ಕೋಟಿಸಂಖ್ಯೆಯಲಿ ॥ ೩೪

ದೇವ ಬೆಸಸಾ ತನ್ನ ಬರಿಸಿದು
ದಾವಹದನು ನವೀನಭಟರಿದೆ
ದೇವರಿಪುಗಳು ಹೇಟು ನೆನೆಹಿನ ರಾಜಕಾರಿಯವ ।
ಆವುದೆನಗುದ್ಯೋಗವನೆ ಸಂ
ಭಾವಿಸಿದನಸುರನನು ಜಾಱುವ
ಜೀವಮಾರುತನ ಮರಳಿ ನಿಲಿಸಿತು ನಿನ್ನ ನುಡಿಯೆಂದ ॥ ೩೫

---

1 ಜೀವು ಯೆಂದಳು ಕಾಂತೆ ಕೈಮುಗಿದು, ಚ.

ದುರ್ಗವಿದೆ ನಮ್ಮಂಘ್ರಿಶಕ್ತಿಯು
ನುಗ್ಗಿ ಬೀತುದು ಸಾಹಸಿಗ ನೀ
ನಗ್ಗಳಯರಿದೆ ನಿನ್ನವರು ಪಡಿಗಿ [1] ರಿಗಳಾಗಿರಿಗೆ ।
ಹುಗ್ಗಿಗರ ಹೆಗಲೇಱಿಸೊಂದೇ
ಲಗ್ಗೆಯಲಿ ಹಾಯ್ಸನೆ [2] ಹಸಾದದ
ವೊಗ್ಗಿಗೈಗಳ ದನುಜ ತಗ್ಗಿದನರಸನಿದಿರಿನಲಿ ॥ ೩೬

ಆಗ ಘಟೋತ್ಕಚನು ಸರ್ವರನ್ನು ಬದರಿಕಾಶ್ರಮಕ್ಕೆ
ಕರೆತಂದುದು.

ಹೊತ್ತನರಸನನರಸನನುಜರ
ನೆತ್ತಿದನು ನೃಪನರಸಿಯನು ಬಟ
ಕೆತ್ತಿ ಕೈವೀಸಿದನು ಭಟರಿಗೆ ತೋಱಿ ಪರಿಜನವ ।
ಹೊತ್ತರನಿಬರನಸುರಭಟರೊ
ತ್ತೊತ್ತೆಯಾದುದು ಬೆನ್ನಿನಲಿ ಬಿಗಿ
ದೆತ್ತಿ ಹಾಯ್ದರು ಮುಗಿಲಧಟ್ಟಿನ ಪರಿಯ ಜೋಡಿಯಲಿ ॥ ೩೭

ಅಸುರದೇಹಸ್ಪರ್ಶವಸಮಂ
ಜಸವಲಾ ತನಗೆನುತ ಮುನಿರೋ
ಮಶನು ಗಗನೇಚರರ ಗತಿಯಲಿ ಬಂದನಿವರೊಡನೆ ।
ವಿಷಮಗಿರಿಕಾನನಕದಧ್ವ
ಪ್ರಸರವನು ಹಿಂದಿಕ್ಕಿ ಹೊದ್ದಿದ
ರೆಸೆವನರನಾರಾಯಣಾಶ್ರಮವರತಪೋವನವ ॥ ೩೮

ಅಲ್ಲಿ ಯಖಿಳರುಷಿವ್ರಜವು ಭೂ
ವಲ್ಲಭನನಾತಿಥ್ಯಪೂಜಾ
ಸಲ್ಲಲಿತಸಂಭಾವನಾಮಧುರೋಕ್ತಿರಚನೆಯಲಿ ।

---

[1] ಲಹ್ಮ, ಚ. [2] ನಡಸನೆ, ಚ.

ಅಲ್ಲಿಗಲ್ಲಿಗೆ ಸಕಲಮುನಿಜನ
ವೆಲ್ಲವನು ಮನ್ನಿಸಿದನಾವನ
ದಲ್ಲಿ ನೂಕಿದನೆಂಟುದಿನವನು ನೃಪತಿ ಕೇಳೆಂದ ॥ ೩೯

* ಶ್ರೀಲತಾಂಗಿಯ ರಮಣನೆಂದು ಸ
ಲೀಲೆಯಲಿ ಮುನಿನಿಕರಸಹಿತಾ
ಕಾಲದವಧಿಯ ಕಡೆಯ ಹಾಯ್ದುತ ಭೂಪನಿಂತಿರ್ದ ।
ಮೇಲೆ ಮೇಲ್ಮೈತರುವ ಶುಭಕರ
ಕಾಲನೋಡುತ ಮುದಿತಸದ್ದ್ವಿಜ
ಜಾಲ ನೈತಂದಂದು ನೆನೆದನು ವೀರನಾರಣನ ॥ ೪೦

ಹತ್ತನೆಯ ಸಂಧಿ ಮುಗಿದುದು.

ಹನ್ನೊಂದನೆಯ ಸಂಧಿ.

ಸೂಚನೆ.

ಕಂಡನಡವಿಯೊಳ ನಿಲಜನನಾ
ಖಂಡಲನ ತನುಜನ ಪತಾಕಾ
ದಂಡದಲಿ ನಿಲುವಂತೆ ವರವನು ಪಡೆದನಾ ಭೀಮ ॥

ಆಗ ದ್ರೌಪದಿಯು ಸೌಗಂಧಿಕ ಪುಷ್ಪದ ವಾಸನೆಯನ್ನು
ಅನುಭವಿಸಿ ವಿಸ್ಮಿತಳಾದುದು.

ಕೇಳು ಜನಮೇಜಯ ಧರಿತ್ರೀ
ಪಾಲ ನರನಾರಾಯಣಾಶ್ರಮ
ಕೂಲವತಿಗಳ ನಂದನದ ನಿರ್ಮಲಸರೋವರದ ।

---

* ೪೦ನೆಯ ಶ್ಲೋಕವು ಅನೇಕ ಪುಸ್ತಕಗಳಲ್ಲಿ ಇರುವುದಿಲ್ಲ.

ಕೇಳಿಕೆಯ ನವಿಲುಗಳ ತುಂಬಿಯ
ಮೇಳವೆದ ಗೀತದ ವಿನೋದದ
ಲಾಳಿದರು ವೆನವಾಸಸಾಮ್ರಾಜ್ಯವೆನು ಸೊಗಸಿನಲಿ ॥ ೧

ಪರಮೆಧರ್ಮಶ್ರವಣಸಾಖ್ಯದೊ
ಳರಸನಿರೆ ಬದರಿಯಲಿ ಪೂರ್ವೋ
ತ್ತರದ ದೆಸೆವಿಡಿದೆಸೆದತಿಶಯಗಂಧಬಂಧುರದ ।
ಭರಣಿ ಮನ್ಮಥ ಪ್ರೋತವೆಣಿಜನ
ತರಣಿ ತರುಣಶ್ರಮರಸೇವಾ
ಸರಣಿಯೆನೆ ಸುಖಿದುದು ಸವಿಸ್ತಾರಣನಾಮಹಾದ್ರಿಯಲಿ ॥ ೨

ಸರಸಸಾಗಂಧಿಕದ ಪರಿಮಳ
ಭರದ ಭಾರವಣೆಯಲಿ ತಿಳಿಗೊಳ
ನುಬುದೆಱೆಗಳ ತಿವಿಗುಳಿನ ತುಂತುರುತುಷಾರದಲಿ ।
ಮೊಱೆದುಲಿವ [1] ಮಱಿದುಂಬಿಗಳ ಮೋ
ಹರದ ಮೋಡಾಮೋಡಿಯಲಿ ಡಾ
ವರಿಸಿತೈದಿಂದ್ರಿಯದಲೊಂದಿರೆ ಸಕಲಮುನಿಜನವ ॥ ೩

ಮೇಲುತರದತಿಪರಿಮಳದ ವೈ
ಹಾಳಿಯಲಿ ಸಲೆ ಬೀದಿವರಿದು ಚ
ಡಾಳಿಸುವ ಸೊಗಸಿನಲಿ ಸೊಂಪಾದಳು ಸರೋಜಮುಖಿ ।
ಸೋಲಿಸಿತಲಾ ಚೂಣಿಯಲಿ ಸಂ
ಪಾಳಿಸಿದ ಸಾಗಂಧವಿನ್ನು ವಿ
ಶಾಲಪದ್ಮವೆದೆಂತುಟೆನುತವೆ ತೂಗಿದಳು ಶಿರವ ॥ ೪

ಆಪುಷ್ಪವನ್ನು ಭೀಮಸೇನನನ್ನು ಪ್ರಾರ್ಥಿಸಿದುದು.

ಅರಸನಲಿ ಮೇಣ್ ನಕುಲಸಹದೇ
ವರಲಿ ತನ್ನ ಮನೋರಥಕೆ ವಿ
ಸ್ತರಣವಾಗದು ನುಡಿವೊಡಿಲ್ಲರ್ಜುನ ಸವಿಸ್ತಾರದಲಿ ।

---

[1] ಮೊರೆದೊಗುವ, ಚ.

ಅರಿಭಯಂಕರ ಭೀವ ನೇ ಗೋ
ಚರಿಸುವನಲಾ ಯೆನುತಲಾತನ
ಹೊರೆಗೆ ಬಂದಳು ನಗುತ ನುಡಿದಳು ಮಧುರವಚನದಲಿ ॥ ೫

ಹಿರಿದು ಸೊಗಸಾಯ್ತಿನಗಪೂರ್ವದ
ಪರಿಮಳದ ಕೇಳಿಯಲಿ ನೀವಾ
ಸರಸಿಜವ ತಂದಿತ್ತು ತನ್ನ ಮನೋಗತವ್ಯಥೆಯ ।
ಪರಿಹರಿಪುದೆನಲಬುಜವದನೆಯ
ಕುರುಳನುಗುರಲಿ ತಿದ್ದಿದನು ತ
ತ್ಸರಸಿಜವ ತಹೆನೆನುತ ಕೊಂಡನು ನಿಜಗದಾಯುಧವ ॥ ೬

ಭೀಮಸೇನನು ಹೊರಟಾಗ ದಾರಿಯಲ್ಲಾದ ಚಿತ್ರಕಾರ್ಯಗಳು.

ಬಿಗಿದ ಬತ್ತಳಿಕೆಯನು ಹೊನ್ನಾ
ಯುಗದ ಖಡ್ಗಶರಾಸನವ ಕೊಂ
ಡಗಧರನ ನೆನೆದನಿಲಸುತ ಹೊಱವೆಂಟನಾಶ್ರಮವ ।
ಬಿಗಿದು ಹೊಕ್ಕನರಣ್ಯವನು ಬೊ
ಬ್ಬಿಗಳ ಬಿರುದಿನ ಬಾಹುಸತ್ವದ
ವಿಗಡಭೀಮನ ಕಾಲ್ದುಟಿಗೆ ಕಂಪಿಸಿತು ವನನಿವಹ ॥ ೭

ಒದಱಿದರೆ ಪರ್ವತದ ಶಿಖರದ
ಲುದುರಿದುವು ಹೆಗ್ಗಂಡುಗಳು ಮುಱಿ
ದೊದೆಯೆ ಬಿದ್ದುವು ಬೇಱುಸಹಿತ ಮಹಾದ್ರುಮಾಳಿಗಳು ।
ಗದೆಯ ಹೊಯ್ಲಿನ ಗಂಡಶೈಲವೊ
ಕದಳಿಗಳೊ ತಾವಱಿಯೆವುಬ್ಬಿದ
ಮದಮುಖನ ಹುರಿಮೆಸಕ ಮುಱಿಸುದು ಗಿರಿತರುವ್ರಜವ ॥ ೮

ಮುಡುಹು ಸೋಂಕಿದೊಡಾಮಹಾದ್ರಿಗ
ಳೂಡನೆ ತೋರಹತರು ಕೆಡೆದುವಡಿ
ಯಿಡಲು ಹೆಜ್ಜೆಗೆ ತಗ್ಗಿದುದು ನೆಲಸಹಿತ ಹೆದ್ದವರು ।

ಒಡೆದುದಿಳ ಬೊಬ್ಬಿ ಋತಕೀತನ
ತೊಡೆಯ ಗಾಳಿಗೆ ಹಾಱಿದುವು ಕಿಱು
ಗಿಡುಮರಂಗಳು ಮಾಱಿ ನಡೆದನು ಭೀಮನಡವಿಯಲಿ ॥ ೯

ಹುಲಿ ಕರಡಿ ಕಾಡಾನೆ ಸಿಂಹಾ
ವಳಿಗಳೀತನ ದನಿಗೆ ಯೋಜನ
ದಳವಿನಲಿ ಹಾಯ್ದೊಡ್ಡಿದುವು ನೋಡುತ್ತ ಮುಱಿಮುಱಿದು ।
ಹಱುವು ತಳಪಟವಾಯ್ತು ದಿಗ್ಗಜ
ತುಟಿದ ಬಾಳೆಯ ಬನದವೊಲು ವೆ
ಗ್ಗಳೆಯನೈ ಕಲಿಭೀಮ ನಡೆದನು ಬನದ ಮೆಧ್ಯದಲಿ ॥ ೧೦

ಬಿರಿದುವೆದ್ರಿಗಳನಿಲಸುತನು
ಬ್ಬರಿದ ಬೊಬ್ಬೆಗೆ ಮಿಕ್ಕ ಮೃಗತತಿ
ಶರಭಶಾರ್ದೂಲಂಗಳಿಲ್ಲ ವಿಲೋಚನಾಂತ್ಯದಲಿ ।
ಮೆರಗಿರನ ಮೃಗಗಿಗನ ಪಾಡೇ
ನರಸ ಭೀಮನ ದನಿಗೆ ಬೆಚ್ಚದೆ
ಗಿರಿಗುಹೆಗಳೇ ಮೆಲೆತು ನಿಂದುವು ದನಿಗೆ ದನಿಗೊಡುತ ॥ ೧೧

ಆಗ ಭೀಮಸೇನನ ಧ್ವನಿಯಿಂದ ಹನುಮಂತನು ಆಲೋಚಿಸಿದುದು.

ಆಮೆಹಾದ್ರಿಯು ತಪ್ಪಲಲಿ ನಿ
ಸ್ಸೀಮಕದಳೀಷಂಡದಲಿ ರಘು
ರಾಮನಾಮಸುಧಾಭಿಷೇಕಸಮಗ್ರ ಸೌಖ್ಯದಲಿ ।
ಭೀಮವಿಕ್ರಮನಿದ್ದ ನೀಯು
ದ್ದಾಮಸಿಂಹಧ್ವನಿಗೆ ನಿದ್ರಾ
ತಾಮಸದ ತನಿಮದವಡಗೆ ಕಣ್ದೆಱೆದನಾಹನುಮ ॥ ೧೨

ಏನಿದೆತ್ತಣ ರಭಸ ವೀಗಿರಿ
ಸಾನುವಿದಮಾನುಷವಿಹಾರ
ಸ್ಥಾನವಿವನಾರೋ ಮಹಾದೇವಪ್ರಚಂಡನಲ ।

ಈನಿನದ ನಮ್ಮಂದಿನಗ್ಗದ
ವಾನರರ ಗರ್ಜನೆಗೆ ಗುರುವಾ
ಯ್ತೋನನೆಂಬೆನೆನುತ್ತ ಮೆಲ್ಲನೆ ಮಿಡುಕಿದನು ಹನುಮೆ ॥ ೧೩

ಆಗ ಹನುಮಂತನು ತನ್ನ ಬಾಲವನ್ನು ದೊಡ್ಡದಾಗಿ ಮಾಡಿ ದಾರಿಯಲ್ಲಿಟ್ಟುದು.

ನಿಱಿನಿಱಿಲುನಿಱಿಲೆನುತ ಪೆಮ್ಮರ
ಮುಱಿದುದಾತನ ರೋಮ ಸೋಂಕಿನ
ಲಿಱುಕಿಲಾದುದು ಧರಣಿಯನಿಲಜ ಮುಱಿದ ಮಗ್ಗಲಲಿ ।
ಉಱುವೆಬಾಲವ ಬೆಳಸಿ ದಾರಿಯ
ತೆಱಹುಗೊಡದೆಡೆಯೊಡ್ಡಿ ಮನುಜನ
ಮುಱುಕವನು ತಾ ಕಾಂಬೆನಿನ್ನೆನುತಿರ್ದನಾಹನುಮ ॥ ೧೪

ಭೀಮಸೇನನ್ನು ಕುರಿತು ಹನುಮಂತನು ನೀನಾರೆಂದು ಕೇಳಿದುದು.

ಮುಱಿಯದಂತಿರೆ ಲಘುವಿನಲಿ ಪೆ
ಮ್ಮರನನೊಯ್ಯನೆ ನೆಮ್ಮ ಕುಳ್ಳ
ರ್ದರಿದಿಶಾಪಟನು ನುಡಿಸಿದನು ಪವಮಾನನಂದನನ ।
ಬರವಿದೆಲ್ಲಿಗೆ ಮರ್ತ್ಯನೋ ಖೇ
ಚರನೊ ದೈತ್ಯನೊ ದಿವಿಜನೋ ಕಿ
ನ್ನರನೊ ನೀನಾರೆಂದು ಭೀಮನ ನುಡಿಸಿದನು ಹನುಮೆ ॥ ೧೫

ಅದಕ್ಕೆ ಭೀಮಸೇನನ ಉತ್ತರ.

ನಾವು ಮರ್ತ್ಯರು ದೂರದಲಿ ರಾ
ಜೀವಗಂಧಸಖಿಯಾರಣನ ಸಂ
ಭಾವನೆಗೆ ಸೊಗಸಿದಳು ಸತಿಯಾಕೆಯು ಮನೋರಥದೆ [1] ।
ತಾವರೆಯ ತಹೆನೆನುತ ಸಿಂಹಾ
ರಾವದಲಿ ವಿಕ್ರಮಿಸೆ ವಿಗಡನ
ಡಾವರವೆ ಬಲುಬಾಲ ತಡೆದುದು ಪವನಜನ ಪಥವ ॥ ೧೬

---

1 ಮಚಕಸ್ಸಿನಲಿ, ಚೆ.

ದಾರಿಯಲ್ಲಿಟ್ಟ ಬಾಲವನ್ನು ತೆಗೆಯೆಂದು ಹನುಮಂತನನ್ನು ಕೇಳಿದುದು.

ಗದೆಯ ಮೊನೆಯಲಿ ನೂಕಿದನು ರೋ
ಷದಲಿ ಚಲಿಸದ ಬಾಲ ನೋಡಿದ
ನಿದು ವಿಚಿತ್ರವಲಾ ಯೆನುತ ನುಡಿಸಿದನು ಕಪಿವರನ ।
ಒಡೆದುವದ್ರಿಗಳಟವಿವೆನ್ನಂ
ಗದಲಿ ತಾ ಬಲ್ಲಿದನು ಬಾಲದ
ಕದವ ತೆಗೆ ಬಟ್ಟೆಯಲಿನುತ ಗರ್ಜಿಸಿದನಾಭೀಮ ॥ ೧೫

ನೀವು ನೂಕಿಕೊಂಡು ಹೋಗಿರೆಂದು ಹನುಮಂತನ ಉತ್ತರ.

ನೀವು ಬಲ್ಲಿದರಿದಕೆ ಸಂಶಯ
ವಾವುದಲ್ಲದೊಡೀಮದದ್ವಿಭ
ವೀವಿಹಗಕುಲವೀನೃಗವ್ರಜವೆಂಜುವುವೆ ನಿಮಗೆ ।
ನಾವು ವೃದ್ಧರು ನಮ್ಮ ಬಾಲವೆ
ನಾವು ಹದುಳಿಸಲಾರೆವೀಗಳು
ನೀವು ತೊಲಗಿಸಿ ಬಿಜಯ ಮಾಡುವುದೆಂದನಾಪವನಸುತ ॥ ೧೬

ಐಸಲೇ ತಪ್ಪೆನೆನುತ ತನೆ
ಗೇಸು ಬಲುಹುಂಟೈಸರಲಿ ಕ
ಟ್ಟಾಸುರದಲೊಕಿದನು ಬಾಲವನೊದಱಿ ಬೊಬ್ಬಿಱಿದು ।
ಗಾಸಿಯಾದನು ಪವನಸುತನೆ
ಳ್ಳಸು ಮಿಡುಕದು ಬಾಲವೂರ್ಧ್ವ
ಶ್ವಾಸಲಹರಿಯು ಲಡಿಗಡಿಗೆ ಲಟಕಟಿಸಿದನು ಭೀಮ ॥ ೧೭

ತೆಗೆದು ನಿಂದನು ಭೀಮ ಹೊಯ್ವ
ಳ್ಳಗಳ ತಲ್ಲಣವೆಡಗಲೊಳತಾ
ಳಿಗೆಗೆ ಕವಳವ ನೂಕಿದನು ಕರ್ಪುರದ ಹಳುಕುಗಳ ।

ಡಗೆ ಮರಳ ಮರುವಲಗೆಗೌಡೊ
ತ್ತುಗಳ ಬಲಿದವಯವದ ಸತ್ವಾ
ಣಿಗಳ ದೇವನು ತಾವುರಿಯಲೊದಗಿದನು ಬಾಲದಲಿ ॥ ೦೦

ಎಷ್ಟು ಪ್ರಯತ್ನ ಮಾಡಿದರೂ ಬಾಲವು ಹಾಗೆ ಇರಲು ಭೀಮನ ಚಿಂತೆ.

ಮಿಡುಕಿದುದು ಮಹಿಯಿಂದ ಭೀಮನ
ಮಿಡುಕು ನಿಂದುದು ಬಾಲದಲಿ ತುದಿ
ನಡುಗದನಿಲಜನಂಗವಟ್ಟಿದ ಕಡುಹು ಕಂಪಿಸದು ।
ತೊಡಕಿ ಕೆಟ್ಟುದು ಕಾರ್ಯದುರ್ಲಭ
ನೊಡನೆ ಭಂಗವ್ಯಾಪ್ತಿ ತನ್ನನು
ಸುಡಲೆನುತ ಹಿವ್ಮೆಟ್ಟಿ ಮಮ್ಮಲ ಮಱುಗಿದನು ಭೀಮ ॥ ೦೧

ಈತ ಕಪಿರೂಪಿನಸುರೇಂದ್ರನೊ
ಭೂತನಾಥನೊ ವೀಣು ವಿಮಲ
ತ್ರೇತೆಯಲಿ ದಶಮುಖನ ಹಾಣಾಹಾಣಿಗಳ ಕಪಿಯೊ ।
ಏತರವೊ ನಮ್ಮಬ್ಬಟಿಗಳಿಂ
ದೀತ ಗೆಲಿದನು ಬಾಲದಲಿ ಸ
ತ್ವಾತಿಶಯವಿನ್ನೀತಗೆಂತುಟೊ ಶಿವ ಶಿವಾ ಯೆಂದ ॥ ೦೨

ಆಗ ಹನುಮಂತನನ್ನು ನೀನಾರೆಂದು ಕೇಳಿದುದು.

ಭೀಮ ಗಡ ತಾನೌಕಿ ನಿರಲು
ದ್ದಾಮಬಾಲದ ನಿದ್ರೆ ತಿಳಿಯದು
ರೋಮತತಿ ಮಸೆಗಾಣಿಸಿದುವೆನ್ನುತ್ತಮಾಂಗದಲಿ ।
ಈಮನುಷ್ಯಶರೀರವಪಜಯ
ಧಾಮವಲ್ಲಾ ಹರ ಹರಾ ನಿ
ಸ್ಸೀಮಕಪಿ ನೀನಾರೆನುತ ಪವನಜನ ಬೆಸಗೊಂಡ ॥ ೦೩

ನಾವು ವಾನರರಟವಿಯಲಿ ಫಲ
ಜೀವಿಗಳು ನಿಸ್ಸತ್ವರಿಲ್ಲಿಯ
ಠಾವ ಬಿಡಲನ್ಯತ್ರಗಮನತ್ರಾಣವಿಲ್ಲೆಮಗೆ ।

ಹಾಗೆಯೇ ಹನುಮಂತನು ಕೇಳಿದುದು.

ನೀವು ದಿಟವಾರೈ ಮಹಾಸಂ
ಭಾವಿತರು ಸುರನರಭುಜಂಗರ
ಲಾವೆಕುಲ ನಿಮಗೆಂದು ಭೀಮನ ನುಡಿಸಿದನು ಹನುಮ ॥ ೮೪

ಭೀಮಸೇನನ ಉತ್ತರ.

ಮನುಜರಾವ್ ಸೋಮವಂಶಿಕುಲದಲಿ
ಜನಿಸಿದನು ವರಪಾಂಡುವಾತನ
ತನುಜರಾವ್ ಯುಧಿಷ್ಠಿರಾರ್ಜುನಭೀಮಯಮಳರಲೆ ।
ಬನಕೆ ಬಂದೆವು ನಮ್ಮ ದಾಯಾ
ದ್ಯನ ವಿಕಾರದ್ಯೂತಕೇಳೀ
ಜನಿತಕಿಲ್ಬಿಷದಿಂದ ರಾಜ್ಯಭ್ರಂಶವಾಯ್ತೆಂದ ॥ ೮೫

ಬಟಿಕ ಸೌಗಂಧಿಕನ ಪವನನ
ಬಟವಿಡಿದು ನಾ ಬಂದೆನೆಮ್ಮಯ
ಲಲನೆ ಕಾಮಿಸಿದಳು ಸಹಸ್ರದಳಾಬ್ಜದರುಶನವೆ ।
ತಿಳಿಯಲಿದು ವೃತ್ತಾಂತ ನೀನ
ಸ್ಖಲಿತಬಲ ನೀನಾರು ನಿನ್ನನು
ತಿಳುಹಬೇಕು ಮಹಾತ್ಮ ಕಪಿ ನೀನೆನುತ ಕೈಮುಗಿದ ॥ ೮೬

ಹನುಮಂತನ ಉತ್ತರ.

ನಾವು ಹಿಂದಣ ಯುಗದ ರಾಘವೆ
ದೇವನೋಲೆಯಕಾಱರಾಸು
ಗ್ರೀವಮಿತ್ರರು ಪವನನಿಂದಂಜನೆಗೆ ಜನಿಸಿದೆವು ।

ನಾವು ನಿಮ್ಮೊಡಹುಟ್ಟಿದರು ಸಂ
ಭಾವಿಸಿತು ನಮ್ಮಿಷ್ಟವೆನೆ ನಗು
ತಾವೈಕೋದರನೆಂಬಿಗಿದನು ಕಲಿಹನುಮನಂಘ್ರಿಯುಲಿ ॥ ೮೬

ಆಗ ಹನುಮಂತನನ್ನು ಸ್ತುತಿಸಿದುದು.

ಜರುಗಿನಲಿ ಜಾಂಬೂನದದ ಸಂ
ವರಣಿಕಾಖಿಂಗೆಡೆಯೊಳಿರ್ದುದು
ಪರಮನಿಧಿ ಮರ್ಕುಪೂತು ಪುಣ್ಯೋದಯದ ಫಲವೆನಗೆ ।
ಸರಸಿ ಯೆತ್ತಲು ಗಂಧವೆತ್ತಲು
ಬರವಿದೆತ್ತಣದೆತ್ತ ಘಟಿಸಿದು
ದರರೆ ಮಾರುತಿ ತಂದೆ ನೀನೆಂದೆನುತ ಬಣ್ಣಿಸಿದ ॥ ೮೭

ಹಿರಿಯರೆನಗಿಬ್ಬರು ಯುಧಿಷ್ಠಿರ
ಧರಣಿಪತಿ ನೀನೊಬ್ಬ ರೈಯ್ಯಂ
ದಿರುಗಳಿಬ್ಬರು ಮಾರುತನು ನೀನೊಬ್ಬ ನಿಂದೆನಗೆ ।
ಗುರಗಳಿಬ್ಬರು ಬಾದರಾಯಣ
ಪರಮಋಷಿ ನೀನೊಬ್ಬನೆಂದುಪ
ಚರಿಸಿದನು ಪವಮಾನನಂದನನಂಜನಾಸುತನ ॥ ೮೮

ತೀದುದೆಮಗೆ ವನಪ್ರವಾಸದ
ಖೇದವರ್ಜುನನಗಲಿಕೆಯ ದು
ರ್ಭೇದವಿಷದಿಂದಿತ್ತಿದು ಹೋದುದು ಹರ ಮಹಾದೇವ ।
ಹೋದರಾಜ್ಯಭ್ರಂಶ ಬಹಳವಿ
ಷಾದ ಬೀತುದು ನಿಮ್ಮ ಕಾರು
ಣ್ಯೋದಯವು ನಮಗಾಯ್ತಲಾ ಚರಿತಾರ್ಥರಾವೆಂದ ॥ ೮೯

ಭೀಮನನ್ನು ಸ್ತುತಿ.

ಲಲಿತವಚನಕೆ ನಿನ್ನ ಭುಜದ
ಗ್ಗಳಿಕೆಗಾ ಮೆಚ್ಚಿದೆನು ಹಿಮೆಕರ
ಕುಲಪವಿತ್ರರು ಜನಿಸಿದರಲಾ ಪಾಂಡುಜಠರದಲಿ ।

ಗೆಲವು ನಿಮಗಹಿತರಲಿ ಪಾರ್ಥನ
ಕೆಲವುದಿವಸಕೆ ಕಾಂಬಿರೆಮಗೆಯು
ಫಲಿಸಿತೀದಿನವೆಂದು ಕೊಂಡಾಡಿದನು ಹನುಮಂತ ॥ ೩೧

ಸಮುದ್ರತರಣದ ರೂಪವನ್ನು ತೋರಿಸೆಂದು ಭೀಮನ ಪ್ರಶ್ನೆ.

ಅಂಜುವೆನು ಬಿನ್ನಹಕೆ ಬಾಂಧವ
ವಂಜಿಕೆಯು ನಭಕೊತ್ತುತಿದೆ ಕೇ
ಳಂಜನಾಸುತ ತನ್ನ ಸಲಿಗೆಯ ಮಾತ ಸಲಿಸುವೊಡೆ ।
ಅಂಜದೆಂಬೆನು ದನುಜಪುರಕೆ ಧ
ನಂಜಯನ ಹೊತ್ತಿಸಿದ ಖಳರನು
ಭಂಜಿಸಿದ ಸಾಗರವ ದಾಂಟಿದ ರೂಪು ತೋಱುಂದ ॥ ೩೨

ಈಯುಗದ ಗುಣಧರ್ಮವಾತ್ರೇ
ತಾಯುಗದವೆರಿಗೈದದಾತ್ರೇ
ತಾಯುಗವು ಸರಿಯಲ್ಲ ಕೃತಯುಗದೇಕದೇಶದಲಿ ।
ಆಯುಗದಲಾವನುಜರಾಸ
ತ್ಯಾಯುವಾ ಸಾಮರ್ಥ್ಯವಾತರು
ವಾಯಯುಗದಲಿ ಸಲ್ಲದೆಂದನು ನಗುತ ಹನುಮಂತ ॥ ೩೩

ಕೃತಯುಗದವರು ತ್ರೇತೆಯವರಿಂ
ದತಿಪರಾಕ್ರಮಯುಕ್ತರವರದು
ಭುತಬಲರು ತ್ರೇತೆಯವರಿಂ ದ್ವಾಪರಸ್ಥಿತಿಗೆ ।
ವಿತತಸತ್ವರು ಕಲಿಯುಗದ ದು
ರ್ಮತಿಮನುಷ್ಯರಿಗವರು ಕ್ಷೀಣಾ
ಕೃತಿ ಕಣಾ ಯುಗಧರ್ಮ ಕೃತವೊದಲಾಗಿ ಕಲಿಯುಗಕೆ ॥ ೩೪

ಹೀನಸತ್ವರು ಸತ್ಯಧರ್ಮ ವಿ
ಹೀನರರ್ಥ ಪರಾಯಣರು ಕುಜ
ನಾನುರಕ್ತರು ವಿಮಲವರ್ಣಾಶ್ರಮವಿದೂಷಕರು ।

ದಾನಿಗಳು ದುಷ್ಪಾತ್ರದಲಿ ಗುಣ
ಮೌನಿಗಳು ಗರ್ವಿತರು ವಿಃಥ್ಯಾ
ಜ್ಞಾನಿಗಳು ಕಲಿಯುಗದ ಮನುಜರು ಭೀಮ ಕೇಳೆಂದ ॥ ೩೫

ಅದಱಿನೀದ್ವಾಪರದ ಕಡೆಯ
ಲ್ಲುದಿತಮಾನುಷ ಧರ್ಮಸಂಶಯ
ವಿದಱೊಳಮ್ಮಯ ರೂಪು ಗೋಚರವಲ್ಲ ಮರ್ತ್ಯರಿಗೆ ।
ಇದು ನಿಧಾನವು ಭೀಮ ಯೆನೆ ತ
ತ್ಪದಯುಗಕೆ ಮಗುಳೆಱಗಿ ನಿರ್ಜಂ
ಧದಲಿ ಬಿನ್ನಹಮಾಡಲಮ್ಮನು ತೋಱಬೇಕೆಂದ [1] ॥ ೩೬

ಆರೂಪನನ್ನು ಭೀಮಸೇನನಿಗೆ ಹನುಮಂತನು ತೋರಿಸಿದುದು.

ಆದೊಡಿನ್ನು ನಿರೀಕ್ಷಿಸೆನುತ ನಿ
ನಾದದಲಿ ನೆಲ ಬಿಱಿಯೆ ಬಾಲದ
ವೀದಿವೆರಿ ಬಾಸಳಿಸೆ ಘನನಹ್ಷತ್ರಮಂಡಲವೆ ।
ಮೇದಿನಿಯ ಹೊಱಿಕಾಱರಳ್ಳೆದೆ
ಯಾದರಳುಕಿದುವದ್ರಿಗಳು ಸ
ಪ್ತೋದಧಿಗಳುಕ್ಕಿದುವೆನಲು ಹೆಚ್ಚಿದನು ಹನುಮೆಂತ ॥ ೩೭

ಮೇರುವಿನ ತಪ್ಪಲಲಿ ಬಳೆದ ಬ
ಲಾರಿಚಾಪವೊ ಮೇಣ್ ತ್ರಿವಿಕ್ರಮ
ನಾರುಭಟೆಯಲಿ ಜಡಿವ ಜ್ಯೋತಿರ್ಗಣದ ಬಲುಮಿಣಿಯೊ ।
ಬಾರಿಸುವ ಬಲುಬಾಲವಾ ಜಂ
ಭಾರಿಭವನವನಳ್ಳಿಱಿಯೆ ತ್ರಿಪು
ರಾರಿ ಯೊಡ್ಡಿನ ಹೊಳಹಿನಲಿ ಹೊಳಹೊಳೆದನಾಹನುಮ ॥ ೩೮

---

[1] ರೂಪತೋಱಿಂವ, ಚ

ಆರೂಪವನ್ನು ನೋಡಿ ಭೀಮಸೇನನು ಭೀತನಾದುದು.

ನೋಡಿದನು ನಡುಗಿದನು ಕಂಗಳ
ಕೋಡಿಯಲಿ ನೀರೊಱೆಯ ಹರುಷದ
ರೂಡಿಯಲಿ ರೂಪ್ಮೆದ್ದು ಮನ ಡೆಂಡೆಣಿಸಿ ಭೀತಿಯಲಿ ।
ಬಾಡಿ ಮೋಱೆಯನೆತ್ತಿ ಕೈಗಳ
ನೀಡಿ ಕೈಯಲಿ ಮುಚ್ಚಿ ಮರಳಿಯೆ
ನೋಡಿ ಶಿವ ಶಿವ ಯೆನುತ ಬೆಚ್ಚಿದನಂದು ಕಲಿಭೀಮ ॥ ೩೯

ಸಾಕುಸಾ ಕಂಜಿದೆನು ಮನುಜರು
ಕಾಕುಬಲರು ನಿಜಸ್ವಭಾವವ
ನೇಕೆ ಬಿಡುವೆವು ತಿಳಿದು ತಿಳಿಯೆವು ಕಂಡೊಡಂಜುವೆವು ।

ಹನುಮಂತನು ಪೂರ್ವರೂಪವನ್ನು ತಾಳಿದುದು.

ಸಾಕು ಪೂರ್ವದ ರೂಪಿನಲಿ ನಿ
ವ್ಯಾಕುಲನ ಮಾಡೆನಲು ಭೀಮನ
ನಾಕಪೀಶ್ವರ ನಗುತ ಮುನ್ನಿನ ರೂಪ ಕೈಕೊಂಡ ॥ ೪೦

ಅಂಜದಿರು ನೀನಿನ್ನು ಮೆಚ್ಚಿದೆ
ನಂಜಲಿಸು ನಾ ಸಲಿಸುವೆನು ನ
ಮ್ಮಂಜನಾದೇವಿಯರು ಕುಂತೀದೇವಿಯಾದರೆಲೆ ।
ರಂಜಕರು ನಾವೆಲ್ಲ ಹೇಳು ಸ
ಮಂಜಸದಲೆನೆ ಭೀಮ ನಗುತ ಧ
ನಂಜಯನ ಟೆಕ್ಕೆಯಕ ಬಿಜಯಂಗೆಯ್ಯಬೇಕೆಂದ ॥ ೪೧

ಐಸಲೇ ಸಲಿಸಿದೆನೆನುತ ಕಪಿ
ಯಾಸಮಯದಲದೃಶ್ಯವಾಗೆ ವಿ
ಕಾಸವಾದುದು ವಿಸ್ಮಯಕೆ ಪವಮಾನನಂದನನ ।
ಆಸುಗಂಧಿಕಕಮಲವನ ತಾ
ನೇಸುದೂರವೊ ದ್ರುಪದಸುತೆ ತನ
ಗೇಸು ಮುನಿವೆಳೂ ಯೆನುತ ಮಿಗೆ ಹರಿದನು ವನಾಂತದಲಿ ॥ ೪೨

ಸರೋವರದರ್ಶನ.

ಧರಣಿಪತಿ ಕೇಳ್ ಬಟ್ಟಿಕ ವಿಪಿನಾಂ
ತರವನೆಂತವ ಕಳಿದು ಬರೆ ಬರೆ
ಸರಸಿಜದ ವೋಪರದ ಮುಂದೈತಪ್ಪ ಪರಿಮಳದ ।
ವೊಜೆವೆ ತುಂಬಿಯು ಥಟ್ಟುಗಳ ತನಿ
ವರಿವೆ ತಂಪಿನ ತುಱಗಲಿನ ತ
ತ್ಸರಸಿಯನು ದೂರದಲಿ ಕಂಡುಱಿಬಿದನು ಕಲಿಭೀಮ ॥ ೪೩

ಬಗುಪಿಗೆಯ ಪರಿಮಳದ ಕಂಪಿನ
ತಗಡತೆಕ್ಕೆಯ ಬೀದಿವರಿಗಳ
ಮೆಗುಳವೊಗ್ಗೆಯ ತಗೆವ ತುಂಬಿಯ ಲಳಿಯ ಲಗ್ಗೆಗಳ ।
ಹೊಗರ ಹೊರಳಿಯ ಕಿಱಿದೆಱೆಯ ನೂ
ಕುಗಳ ತಳಿತ ತುಷಾರಭಾರದ
ಸೊಗಸ ಸೇರಿಸಿ ಮಂದಮಾರುತನಪ್ಪಿದನು ಮಗನ ॥ ೪೪

ಝಳದ ಲಳಿ ಲಟಕಟಿಸೆ ಮೋರ್ಗ
ಸ್ಖಲಿತಖೇದಸ್ವೇದಬಿಂದುಗ
ಳೂಳಸರಿಯೆ ರೋಮಾಳಿ ಕಾಣಿಸೆ ತೃಷೆಯ ದೆಸೆ ಮುಱಿಯೆ ।
ತಳಿತುದಾಪ್ಯಾಯನವನೋರಥ
ಫಲಿಸಿತರಸಿಯ ಹರುಷದರ್ಪಣ
ಬೆಳಗುವುದು ಮೆಱ್ಚುಭಾಪೆನುತ ಭುಲ್ಲವಿಸಿದನು ಭೀಮ ॥ ೪೫

ಅಲ್ಲಿ ಕುಬೇರಪರಿವಾರಕ್ಕು ಭೀಮಸೇನನಿಗೂ ಸಂವಾದ.

ಸಾರೆ ಬರೆ ಬರೆ ಕಂಡನಲ್ಲಿ ಕು
ಬೇರನಾಳಿದ್ದುದು ತದೀಯಸ
ರೋರುಹದ ಕಾಹಿನಲಿ ಯಕ್ಷರು ಲಕ್ಷಸಂಖ್ಯೆಯಲಿ ।
ಸಾರೆ ಚಾಚಿದ ಹರಿಗೆಗಳ ಒಲು
ಕೂರಲಗು ಹೊದೆಯಂಬುಚಾಪಕ
ತಾವಿ ಸಲ್ಲಿಯು ಸಬಳಗಳ ಸೋಪಾನಸಚ್ಛ್ಕ್ತಿಯಲಿ ॥ ೪೬

ಯೆದ್ದರವರಿದಿರಾಗಿ ಭೀಮನ
ಹೊದ್ದಿದರು ನೀನಾರು ಹದ್ದಿಗೆ
ಬಿದ್ದಿನನೊ ಮೇಣ್ ಮಿತ್ರಭಾವದಲೆಮಗೆ ಬಿದ್ದಿನನೊ ।
ಉದ್ದುರುಟುತನ ನಿನ್ನ ವೋಜೆಯು
ಲಿದ್ದುದೈ ನೀನಾರು ನಿನಗೇ
ನಿದ್ದುದಿಲ್ಲಿ ಯೆನುತ್ತ ನುಡಿದರು ಯಕ್ಷರನಿಲಜನ ॥ ೪೬

ನಾವಲೇ ಕುಂತೀಕುಮಾರರು
ಭೂವಧೂವಲ್ಲಭರು ನಮ್ಮಯ
ದೇವಿಗಾದುದು ಬಯಕೆ ಸೌಗಂಧಿಕಸರೋರುಹದ ।
ತಾವ ಗಾಣಿಸಿ ಕೊಂಡು ತಹುದೀ
ತಾವರೆಯನೆನೆ ಬಂದೆವಿಲ್ಲಿಗೆ
ನೀವು ಕಾಹಿನ ಭಂಟರೆಮ್ಮನು ತಡೆಯಲರಿದೆಂದ ॥ ೪೭

ಆಭಟರು ಕುಬೇರನಲ್ಲಿಗೆ ಹೊಗಬಹುದೆಂದು ಭೀಮಸೇನನನ್ನು
ಕಂಡು ಹೇಳಿದುದು

ಐಸಲೇ ತಪ್ಪೀನು ನೀ ಯ
ಕ್ಷೇಶನಲ್ಲಿಗೆ ಪೋಗಿ ಬೇಡುವು
ದೀಸರೋರುಹವಾವ ಘನ ಧನಪತಿಯುದ್ಯಾನದೆಲೆ ।
ವಿಾಸಲಿನ ಸರಸಿಯಲಿ ದೃಷ್ಟಿಯ
ಸೂಸಬಹುದೇ ರಾಯ ನಾಜ್ಞೆ ಯ
ಭಾಷೆ ಯಿಲ್ಲದೆ ಬಗೆಯಲರಿದೆಂದುದು ಭಟಸ್ತೋಮ ॥ ೪೮

ಬೇಡಲಱಿಯೆವು ಬೇಡುವರು ಕೂ
ಡಾಡುವವರಾವಲ್ಲ ಕದನವ
ಬೇಡಬಲ್ಲೆವು ಕರೆಯಿಕೊಡಲಾಪರೆ ಧನೇಶ್ವರನ ।
ಬೇಡುವುದು ಗದೆ ನಿಮ್ಮ ವಕ್ಷವ
ತೋಡಿ ನೆತ್ತರುಗೊಳದೊಳೋಕುಳಿ
ಯಾಡುವುದನೆಂದನಿಲಸುತ ತೂಗಿದನು ನಿಜಗದೆಯ । ೪೯

ಭೀಮಸೇನನಿಗೂ ಕುಬೇರಭಟರಿಗೂ ಯುದ್ಧ.

ಎಲೆಲೆ ಕವಿ ಕವಿ ಯಕ್ಷರಾಕ್ಷಸ
ದಳವ ತಾನೊಟ್ಟೈಸುವನು ಹೆ
ಬ್ಬುಲಿಯೆಡೆಗೆ ಹೋತು ಹೊಡಕರೆಸಿತು ಮಹಾದೇವ ।
ತಲೆಯು ಹೊಯ್ ಚಂಡಾಡುತಿನ್ನಿವ
ನೆಲುವನೆನುತೀಟಿಯಲಿ ಸಬಳದ
ಲಲಗಿನಲಿ ಖಡ್ಗದಲಿ ಹೊಯ್ದರು ಪವನನಂದನನ ॥ ೪೧

ತಾಗಿದೆಳಮುಳ್ಳಿನಲಿ ಮೆದಗಜ
ಸೀಗುರಿಸುವ್ರದೆ ಭಟರ ಕೈದುಗ
ಳೀಗುವ್ರದು ಪವಮಾನಸುತ ಕೈಕೊಂಡ ಖಾತಿಯಲಿ ।
ತಾಗಿದವರಿನಿಕ್ಕಿದನು ರಣ
ದಾಗಡಿಗರನು ಸೆಕ್ಕಿದನು ಕೈ
ದಾಗಿಸಿದನನಿಬರಲಿ ಗಂಡುಗತನದ ಗಾಡಿಯಲಿ ॥ ೪೨

ಗಾಢಿಸಿತು ಗಜಬಜ ಕುಬೇರನ
ಬೀಡಿನಗ್ಗದ ಸುಭಟರೇ ಕೈ
ಮಾಡಿರೈ ಕೊಳಗಾಹಿಗಳು ಫಡ ಹೋಗದಿರಿ ಯೆನುತ ।
ಝಾಡಿಸಿದ ಮಣಿಮೆಯದ ಗದೆಯಲಿ
ತೋಡು ವೈಲಿನ ತುಡುಕುಘಾಯದ
ನೀಡುಮೊನೆಗಳ ವಿಗಡನಿಕ್ಕಿದ ನಿಖಿಳರಾಕ್ಷಸರ ॥ ೪೩

ಹಾಯ್ದುವು ಹಂಸೆಗಳು ತುದಿವೆರ
ನೇಯ್ದುವು ನವಿಲುಗಳು ತುಂಡವ
ನೂಯ್ದು ನೀರೊಳು ಮುಚ್ಚುಗಿ ಮರಳ್ದವು ಜಕ್ಕವಕ್ಕಿಗಳು ।
ಚೀಯ್ದುವು ಕೊಳರ್ವಕ್ಕಿ ದಳದಲಿ
ಜಾಯ್ದು ತಾವರೆಯೆಲೆಯ ಮಱೆಗಳ
ಲಾರಡಿಗಳಡಗಿದುವು ಕೋಳಾಹಳಕೆ ಪವನಜನ ॥ ೪೪

ಚೆಲ್ಲಿದರು ರಕ್ಕಸರು ಯಕ್ಷರು
ಬಿಲ್ಲ ಬಿಸುಟರು ಗುಹ್ಯಕರು ನಿಂ
ದಲ್ಲಿ ನಿಲ್ಲರು ಕಿನ್ನರರನಿನ್ನೇನ ಹೇಳುವೆನು ।
ಗೆಲ್ಲವಿದು ಲೇಸಾಯ್ತು ಮಾನವ
ನಲ್ಲ ನಮಗೀಭಂಗ ಭಯರಸ
ವೆಲ್ಲಿ ಭಾಪುರೆ ವಿಧಿಯೆನುತ ಚಿಂತಿಸಿತು ಭಟನಿಕರ ॥ ೫೫

ಆಗ ಭೀಮಸೇನನ ದಯೆ.

ಗಾಯವೆಡೆದರು ಕೆಲರು ಕೆಲರಸು
ಬೀಯವಾದುದು ಬಿಡುದಲೆಯ ಬಲು
ನಾಯಕರು ಸಂತೈಸಿದರು ಕೌಬೇರಭವನೆದಲಿ ।
ವಾಯುಸುತ ನಿಜವಿಜಯ ಶಿರಿಯ ಪ
ಸಾಯಿತಂಗಭಿಷೇಕವೆಂದು ಗ
ದಾಯುಧವನೆಲುಗಿದನು ನೀರಲಿ ಚಾಚಿದನು ತಡಿಗೆ ॥ ೫೬

ತೊಳೆದು ಚರಣಾನನವನಾನಡು
ಗೊಳದೊಳಗೆ ಹೊಕ್ಕಡಿಗಡಿಗೆ ಮು
ಕ್ಕುಳಿಸಿ ತೀರದಲುಗುಳಿ ದಿವ್ಯಾಂಭೋಜಪರಿಮಳದ ॥
ತಳುವದಲೆ [1] ತನಿಹೊರದ ಶೀತಳ
ಜಲವ ಕೊಂಡಾಪ್ಯಾಯಿತಾಂತ
ರ್ಮಲಿತಹೃದಯನು ನಿಮಿರ್ದು ಹಿಡಿದನು ಮೇಲಪಚ್ಚೆಗಳ ॥

ಚಾಚಿದನು ಬಲುಕೈಯ್ಯನಬುಜಕೆ
ಚಾಚುವಿಭಪತಿಯಂತೆ ತುಂಬಿಗ
ಳಾಚಡಾಳಧ್ವನಿಯ ಧಟ್ಟಣೆ ಮಿಗಲು ಚಿಮ್ಮಿದುವು ।
ವೀಚಿ ಮೆಸಗಿದ ಕೊಳನೊ ಜನರುಷಿ
ಯಾಚರಣೆಯೋ ಕಮಲವನವನು
ಲೋಚನದಿ ಲಾವಣೆಗೆಗೊಂಡನು ನಿಮಿಷದಲಿ ಭೀಮ ॥ ೫೭

---

1 ವಿಲಸದಲೆ, ಚ.

ತಿಳಿದು ತಾವರೆವನವ ಕಹ್ಲದೂ
ಳಿಜುಳಿ ಗದೆಯನು ಕೊಂಡು ಸರಸಿಯ
ಹೊಱವಳಯದಲಿ ನಿಂದು ಕಾಹಿನ ಯಹ್ಲರಾಹ್ಲಸರ ।
ಒಱಲಿ ಕರೆದನು ನಿಮ್ಮ ಕೊಳನಿದೆ
ಬಱಿದೆ ದೂರದಿರೆಮ್ಮನೆನುತಾ
ಸರಿನಮೊತಿನ ನಲವಿನಲಿ ಮೆರಳಿದನು ಕಲಿಭೀಮ ॥ ೫೯

ಹನ್ನೊಂದನೆಯ ಸಂಧಿ ಮುಗಿದುದು.

ಹ ನ್ನೆ ರ ಡ ನೆ ಯ ಸ ಂ ಧಿ.

ಸೂಚನೆ.

ಭೀಮನು ಕೊಂದನು ಕಲಿಜಟಾಸುರ
ನಾಮಸಾಮೆಣಿಮಂತನನು ಬಚಿ
ಕೀಮಹೀತಳಕಿಟಿದು ಕಂಡನು ಪಾರ್ಥನಗ್ರಜನ ।

ಧರ್ಮರಾಯನ ಚಿಂತೆ.

ಕೇಳು ಜನಮೇಜಯ ಯುಧಿಷ್ಠಿರ
ನೋಲಗದಲುತ್ಪಾತಶತವಿವ
ರಾಲಿಗಳನಂಜಿಸಿದುವತಿರಂಜಿಸಿದುವೆದ್ಭುತವ ।
ಕೇಳಿದನಿದೇನೆಂದು ವರವಿ
ಪ್ರಾಳಯೆನು ಧೌಮ್ಯಾದಿಋಷಿಗಳು
ಹೇಳಿದರು ತಚ್ಛಕುನಸಂಗತಿಗಳ ಫಲೋತ್ತರವ ॥ ೧

ಸರಸಸಾಗಂಧಿಕದ ಪ್ರಫ್ಫೋ
ತ್ಕರಕೆ ಪವನಜ ಹೋದನೆಂಬುದ
ನರಸಿಯಿಂದಱಿದವನಿಪನು ಪೂರಾಯದುಗುಡದಲಿ ।

ನರನ ಹದನೇನೋ ವೃಕೋದರ
ನಿರಲು ತಾನೆಂತೆನುತ ಚಿಂತಾ
ಭರದಲಿದ್ದನು ಭೀಮಸೇನನ ಕಾಂಬ ತವಕದಲಿ ॥ ೨

ಅಸಕಲಪರಿವಾರರಾಣೀ
ವಾಸಸಹಿತಾರಣ್ಯಭವನಾ
ಭ್ಯಾಸಿ ಬಂದನು ಭೀಮಸೇನನ ಗಮನಪಥವಿಡಿದು ।
ಆಸುಗಂಧಿಕಕಮಲಪರಿಮಳ
ಬಾಸಣಿಸಿತೀಜನಮನೋವಿ
ನ್ಯಾಸವೆನು ಇದೆ ಬಂದನನಿಲಜನೆಂದುದಖಿಳಜನ ॥ ೩

ಧರ್ಮರಾಯನು ಭೀಮಸೇನನನ್ನು ನೋಡಿದುದು.

ಎನಲು ಬಂದನು ಭೀಮನಂಬುಜ
ವನವಿದಿರು ಬಂದಂತೆ ಕಂಪಿನ
ತನಿರಸದ ತಾವರೆಯ ತೆಕ್ಕೆಯ ಕೊಳನ ತೋಟಿಕೆಯ ।
ಜಿನುಗುತುಂಬೆಯ ಜಾಳಿಗೆಯ ತನಿ
ಮಿನುಗು ವೋಜೆಯ ಕಣ್ಣ ಕೆಂಪಿನ
ಘನಭಯಂಕರಭೀಮನಿರವನು ಕಂಡನವನೀಶ ॥ ೪

ಸೆಳದು ತಕ್ಕೈಸಿದನು ತಾವರೆ
ಗೊಳನ ತೋಟಿಯ ಹದಕೆ ಕಂಪಿಸಿ
ಬಿಟಿಕ ಕಪಿದರುಶನದ ಕೌತೂಹಲಕೆ ಭುಲ್ಲವಿಸಿ ।
ನಳಿನಗಂಧದ ಗಾಢತರಸುಖ
ದೊಳಗೆ ಪ್ರೊಂಪ್ರಳಿಯೋಗಿ ಭೂಪತಿ
ತಿಲಕನಿರ್ದನು ಗಂಧಮಾದನಗಿರಿಯ ತಪ್ಪಲಲಿ ॥ ೫

ಗಿರಿಯ ತುದಿಗೇಳುವ ಮಹೀಶನ
ಭರವಸವನಶರೀರರವ ಪರಿ
ಹರಿಸಲಿತ್ತಿದನು ಮರಳಿ ಬಂದನು ಒದರಿಕಾಶ್ರಮಕೆ ।

ಅರಸ ಕೇಳ್ಕ ಮತ್ತೆ ಮೋರಿಯ
ಪರುಷವನೆನಿಲಜನು ಬೇಂಟೆಗೆ
ಹರಿದನಿತ್ತಲು ಬಂದು ಮುಸುಕಿತು ದಾನವರ ಧಾಟಿ ॥ ೬

ಖಳಜಟಾಸುರನೆಂಬನಾದ್ವಿಜ
ಕುಲವ ಬೆದಱಿಸಿ ಯೆಮೆಳರೊಡನಿ
ಟ್ಟಣಿಸಿ ಕಾದಿ ಕಠೋರದಲಿ ಹಿಡಿದನು ಮಹಾಸತಿಯ ।
ಬಲುಗಡಿಯನಿವನೊಡನೆ ಹೋರಿಯೆ
ಬಲಿದರು ಬೆಂಬತ್ತಿದರು ಗಾ
ವಳಿಯ ಗಜಬಜ ತಿರುಗಿತತ್ತಲು ಪವನಜನ ಹೊರೆಗೆ ॥ ೭

ತಳಿರಕ್ಕೈಗಳ ಮೊಱೆವೆಬಾಯ್ಗಳ
ಜಲದ ಕಂಗಳ ತಾಪದಿಂ ಗಳ
ದೊಳಥಗೆಯ ಹೊಮ್ಮುಳ್ಳಿಗಳ ಬಲುಭಯದ ಕೊಳ್ಳಿಗಳ ।
ಕಳಕಳದ ಕಾಲುವೆಯ ಭಂಗದ
ಹೊಳಹುಗಳ ಹೋಲುವೆಯ ಸವ್ಯಾ
ಕುಳರ ಕಂಡನು ಭೀಮನೇನೆಂದುಬೆಸಗೊಂಡ ॥ ೮

ಹಿಡಿದನರಸಿಯನವನಿಸುತೆ ಹಿಡಿ
ವಡೆದನನುಜರು ಸಹಿತ ಪಾರುವೆ
ರಡವಿಯಲಿ ಹಾಯಿದರು ಚೆಲ್ಲಿತು ನಮ್ಮ ಪರಿವಾರ ।
ಕಡುಹು ಘನವಿದೆ ದಾನವರ ವಂ
ಗಡವೆನಲು ಘಸಣಿಂಹನಾದದ
ಸಿಡಿಲ ಶಿಕ್ಷಾಗುರುವೆನಲು ಮೆಸಗಿದನು ಕಲಿಭೀಮ ॥ ೯

ಧಾಟಿ ಯಿಟ್ಟನು ದಾನವರ ದೆ
ಕ್ಕಾಳದಲ್ಲಿಗೆ ಘಲ್ಲಿಸಿದನು
ಬ್ಬಾಳುಗಳು ಹೊಯ್ದೊಱಸಿ ಬಿಡಿಸಿದ ತನ್ನವರ ಸೆಱೆಯ ।

ಸೀಳಿ ನಾಯ್ಗಳ ನೆತ್ತರಿನ ತನಿ
ಗಾಲುವೆಯಲೇ ಬೆಳಸುವೆನು ದಿವ
ಜಾಳಿಗಳ ಸಂತೋಷಸಲಿಯನೆನುತ್ತ ಗರ್ಜಿಸಿದ ॥ ೧೦

ಮಿಸಗಿತದ್ಭುತಯುದ್ಧ ವಿಬ್ಬರಿ
ಗಸಮಧಾಳಾಧೂಳಿಯಲಿ ಘೆ
ಲ್ಲಿಸಿದನವನನು ದಂಡೆಯಲಿ ತಡೆಗಾಲಲೊಡೆ ಹೊಯ್ದು ।
ಬಿಸುಗುದಿಯ ನವೆರುಧಿರಜಲ ಜಾ
ಳಿಸೆ ನವದ್ವಾರದಲಿ ದೈತ್ಯನ
ಕುಸುಕಿಱಿದು ತಿವಿತಿವಿದು ಕೊಂದನು ಕಲಿಜಟಾಸುರನ ॥ ೧೧

ಅರಸ ಕೇಳಾದಾನವನ ತನು
ಬಿರಿದು ಬಿದ್ದುದು ಬಾತ ಹೆಣನು
ಬ್ಬರದ ಹೊಲಸ್ಸಿನ ಗವಲು ಕವಿದುದು ಕೂಡೆ ನೆನದೊಳಗೆ ।
ಧರಣಿಪತಿ ತದ್ಭರಿಕಾಶ್ರಮ
ವರತಪೋವನದಿಂದ ತೆಂಕಲು
ತಿರಿಗಿ ಬಂದನು ಸಾಱಿದನು ವೃಷಪರ್ವನಾ [1] ಶ್ರಮಕೆ ॥ ೧೨

ಆತಪೋವನವಿವರ ಘಲ್ಲಣೆ
ಗಾತುದಿಲ್ಲ ವಿನೋದದಲಿ ವಿ
ಖ್ಯಾತಶೈಲದ ಮೇಖಲೆಯ ತುದಿಗಡಱಿದನು ಕಲಿ ಭೀಮ ।
ಆತ ನಸು ಹಳಚಿದನು ದೈತ್ಯನ
ಭೀತ ಮಣಿಮಾನೆಂಬವನು ಪದ
ಘಾತಿಯಲಿ ಲಟಕಟಿಸೆ ಗಿರಿಯಲಿ ಕಾದಿದರು ಭಟರು ॥ ೧೩

ಕೊಂದನವನನು ವಿಗತಶಾಪನು
ನಿಂದನಿದಿರಲಿ ಯಕ್ಷರೂಪಿನೊ
ಳಂದಗಸ್ತ್ಯನ ಶಾಪವೃತ್ತಾಂತವನು ವಿವರಿಸಲು ।

---

1 ಪರ್ವತಾ, ಜ.

ಬಂದನಲ್ಲಿಗೆ ಯಜ್ಞಪತಿ ನಲ
ವಿಂದಲಿವರನು ವಿವಿಧವಸ್ತ್ರಾಭ
ಳಿಂದ ಸಂತಸಬಡಿಸಿ ಕೊಂಡಾಡಿದನು ಪಾಂಡವರ ॥ ೧೪

ಅರಸನತಿಸಂತೋಷಮಯನಾ
ಗರದಿ ಮುಚ್ಚುಗುವನೊಮ್ಮೆ ನಿಮಿಷಕೆ
ನರನ ವಿರಹದ ದುಃಖಸಾಗರದೊಳಗೆ ಸೈಗೆಡವ ।
ಪರಮೆಋಷಿಗಳ ಮಧುರವಚನೋ
ತ್ಕರದಿ ತಿಳಿವನದೊಮ್ಮೆ ಪುನರಪಿ
ಮರುಳಹನು ಫಲುಗುಣನ ನೆನೆನೆನೆದರಸ ಕೇಳೆಂದ ॥ ೧೫

ಅರಸನಲಿ ಬೇಱೂಱು ಬಟ್ಟಿಕಂ
ಕುರಿಸಿದುದು ಭೀಮನಲಿ ನಕುಲನ
ಲಿರಡು ಮೂರೆಲೆಯಾಯ್ತು ಸಹದೇವನಲಿ ಕವಲೊಡೆದು ।
ಅರಸಿಯಲಿ ಸಲೆ ಹೂತು ಕಾತ
ಬ್ಬರಿಸುತಿರ್ದುದು ಶೋಕಲತೆ ತ
ತ್ಪರಿಕರದ ಕರುಣಾವಳಿಯ ಪಬ್ಬುಗೆಯ ಪರಹಿನಲಿ ॥ ೧೬

ಮಱೆದನೋ ನಮ್ಮ ನಿಬರನು ಧಿಟ
ಮುಖಿಯಲುಚಿತವಲೇ ಸುರೇಂದ್ರನ
ಸೆಱಗು ಸೋಂಕುವ ಸಲುಗೆ ಸಲುವುದೆ ಮರ್ತ್ಯಜಾತಿಯಲಿ ।
ಉಱುವೆಸುರಪನ ಸಾರಸಾಖ್ಯದೊ
ಳಱಿಯನೋ ನಮ್ಮ ನಿಬರಲಿ ಬಲು [1]
ಸೆಱೆಗೆ ನರನಂಗೈಸೆನೆಂದವನೀಶ ಚಿಂತಿಸಿದ ॥ ೧೭

ವಾಮನಯನಸ್ಫುರಣಪರಿಗತ
ವಾಮಬಾಹುಸ್ಪಂದವಾದುದು
ಭೂಮಿನಿಗೆ ಭೂಪತಿಗೆ ಜನಿಸಿತು ದಕ್ಷಿಣಾಂಗದಲಿ ।

---

[1] ನಮ್ಮಾಪ್ತವ ಸಪ, ಚ,

ವೈಮನಸ್ಯವ್ಯಸನನಿರಶನ
ಕೇಮಹಾಶಕುನಂಗಳಿವೆ ಯೆಂ
ದಾಮಹೀಪತಿ ನೆನೆಯುತಿರ್ದನು ಫಲುಗುಣನ ಬರವ ॥ ೧೯

ಅರಸ ಕೇಳ್ಕೈ ಹಿಮದ ಹೊಯ್ಲಿನ
ಸರಸಿಜಕೆ ರವಿಯಂತೆ ಶಿಶಿರದ
ಸರಿದೆಲೆಯ ಬನದಲಿ ವಸಂತನ ಬರವಿನಂದದಲಿ ।
ಸುರವಿಮಾನಶ್ರೇಣಿಗಳ ನವೆ
ಪರಿಮಳದ ಪೂರದಲಿ ಭಾರತ
ವರುಷಕಿಚ್ಚಿದನು ಪಾರ್ಥ ಬಂದನು ಧರ್ಮಜನ ಹೊರೆಗೆ ॥ ೨೯

ಏನನೆಂಬೆನು ಜೀಯ ಕುಂತೀ
ಸೂನು ಕಂಡನು ದೂರದಲಿ ಸುರ
ಮೌನಿನೀಜನದಂಗವಟ್ಟದಪೂರ್ವಪರಿಮಳದ ।
ಆನನೇಂದುಗಳಾಭರಣವೆಂ
ಕಾತ್ಮನುಕೃತತಾರಾಮೇಯಯೂಥ ವಿ
ತಾನದಲಿ ಹೊಳಹೊಳವ ದಿವ್ಯಸುರೇಂದ್ರಮಣಿರಥವ ॥ ೩೦

ಆರದೀರಥವೆನುತ ತಿರುಗಿ ಮ
ಹೀರಮಣನಾಲಿಗಳು ಹರಿದುವು
ಭಾರಣಿಯ ಜನನಯನಕೋಟಿಯ ಕೊಲ್ಲಣಿಗೆ ಮಿಗಿಲು ।
ಭೂರಿಮಣಿರಶ್ಮಿಗಳ ಚಿಮ್ಮುವ
ಚಾರುಚಾಮರ ತುರಗತತಿಯ ಗ
ಭೀರಹೇಷಾರವದಲಿಟ್ಟಿದುದು ರಥ ಸುರೇಶ್ವರನ ॥ ೩೧

ರಥ ಸುರೇಶನದೀತ ನಂಮೆತಿ
ರಥನಲಾ ನೆಱಿ ನೋಂತು ಪಡೆದಳೂ
ಪೃಥೆಯೆನುತ ಕವಿದುದು ಮುನಿವ್ರಜ ಮಿಕ್ಕವರ ಮಿಗುತ ।

ಮಥಿತರಿಪುವವೆಥಾನ ಲೋಕ
ಪ್ರಥಿತ ನಿರುಪಮವೆಂಬ ಸುರಸಾ
ರಥಯ ನೆಲನುಗ್ಗಡಣೆಯಲಿ ನಗುತಿಟಿದನಾರಥವ ॥ ೦೦

ಅರಸ ಕೇಳುಬ್ಬಿನಲಿ ಭೀಮನ
ಧರಣಿಪನ ರೋಮಶನ ಧೌಮ್ಯನ
ಚರಣದಲಿ ಮೆಯ್ಯಿಕ್ಕಿ ಕೈಮುಗಿದೆಱಗಿ ಮುನಿಜನಕೆ ।
ಹರಸಿದನು ಪ್ರೊಡವಂಟ ನಕುಲಾ
ಧ್ಯರನು ಮೆಧುರಪ್ರೀತಿವಚನ
ಸ್ಫುರದಮಂದಸ್ನೇಹದಲಿ ನೋಡಿದನು ಪರಿಜನವ ॥ ೦೫

ಬಿಗಿದಗವಸಣಿಗೆಯಲಿ ಸೂರ್ಯನ
ನುಗಿವವೋಲ್ ವಜ್ರಾಣಿಕ್ಯಮಯರ
ಶ್ಮಿಗಳು ರಂಜಿಸೆ ಮಿಗೆ ಸುರೇಶ್ವರನಿತ್ತ ಭೂಷಣವ ।
ತೆಗೆತೆಗೆದು ಯಮನಂದನಂಗೋ
ಲಗಿಸಿ ಭೀಮಂಗಿತ್ತು ನಕುಲಾ
ದಿಗಳ ಮೈಯಲಿ ತೊಡಿಸಿದನು ಕೈಯ್ಯಾೞೇ ಕಲಿಪಾರ್ಥ ॥ ೦೪

ಕರೆಸಿ ಕಾಣಿಸಿದನು ಸುರಾಧೀ
ಶ್ವರನ ಸಾರಥಿಯನು ಸುರೇಶನ
ವರವರೂಥದ ಸನ್ನಿವೇಶದ ಸಕಲಕೋಳ್ಪೆಗಳ ।
ಅರಸವೊದಲಾದವಿಳಜನಭೂ
ಸುರರು ಕಂಡುದು ಮಾತಳಿಯ ಸ
ತ್ಕರಿಸಿ ಸಂಭಾವಿಸಿದನವನೀಪತಿ ಸರಾಗದಲಿ ॥ ೦೫

ಕುಶಲವೇ ದೇವೇಂದ್ರನಾತನ
ಶಶಿವದನೆಯರು ಸುಖಿಗಳೇ ರಾ
ಕ್ಷಸರು ವಶವರ್ತಿಗಳೇ ನಿರ್ಜರನಗರ ನಿರ್ಭಯವೆ ।

ದೆಸೆಯುವರು ಮೂಲೆಗಳವರು ಮ
ನ್ನಿಸುವರೇ ಸುರಲೋಕಸಾಖ್ಯ
ವ್ಯಸನಭರಭಂಗಿಸದಲೇ ಹೇಱೆಂದನಾಭೂಪ ॥ ೬೬

ಹದುಳಿಗನು ದೇವೇಂದ್ರನಾತನ
ಸುದತಿಯರು ಸುಖಜೀವಿಗಳು ನೆಱೆ
ತ್ರಿದಶರುಱೆ ಬಲ್ಲಿದರು ವಶವರ್ತಿಗಳು ದಿಗ್ಧಿಪರು ।
ಮದಮುಖದ ರಾಕ್ಷಸರು ಮಾಯಾ
ವಿಧದ ದನುಜರು ಧೂಳಿಪಟವಾ
ಯ್ತುದಱಿನೀ ಸುರಲೋಕ ಸಾಖ್ಯದೊಳಿಹುದು ಕೇಳೆಂದ ॥ ೬೭

ಭಜಿಸುಗೈ ಭರ್ಗನನು ಶಾಂಭವ
ಯಜನಸಾರಸಮೋಧಿ ಶಿವ ಪದಕೆ
ರಜವ ಬೆಱಸಿತೆ ಬಗೆಯ ಕುಳಿ ತೆವರಾಯ್ತು ತಡಿದೆಗೆದು ।
ವಿಜಯಶಬ್ದವು ಪಾರ್ಥಕೃತಿಯಲಿ
ಮಜಡವಿಲ್ಲಲೆ ವೈರಿರಾಯರ
ಕುಜನತಾನಿಚ್ಛಿಸಿದ ಸಾಧ್ಯವೆ ಯೆಂದನಾಭೂಪ ॥ ೬೮

ಜೀಯ ಚಿತ್ತೈಸಿಂದ್ರನಲ್ಲಿ ಸ
ಹಾಯವಾದನು ಶಿವನ ಕಾರು
ಣ್ಯಾಯುಧವೆ ನುಸೆದುದು ಸುರೇಂದ್ರಸ್ನೇಹ ಸಾಣೆಯಶಿ ।
ಗೇಯವೇ ಧೂರ್ಜಟಿಯ ಶರ ಲೋ
ಕಾಯತರಿಗೇನೆಂಬೆನೆದು ನಿ
ರ್ದಾಯದಲಿ ವಶವರ್ತಿಯಾದುದೆನಗೆಂದನಾಪಾರ್ಥ ॥ ೬೯

ಹರನ ಕರುಣಾಲಾಭ ಲೋಕೋ
ತ್ತರದ ಪರಿತೋಷದಲಿ ತಾನಿರೆ
ಸುರಪ ಕಳುಹಿದನೀರಥವನೀನಿಘಳಮೊತಳಿಯ ।

ಕರೆಸಿದನು ನಿಜನಗರಿಗಾ ನಿ
ರ್ಜರನಿಕರವಾಸತಿಯರಾದಿ
ಕ್ಪರಿವೃಢರು ಕೊಂಡಾಡಿತೆನ್ನನು ಭೂಪ ಕೇಳೆಂದ ॥ ೩೦

ಪಾಶುಪತಶರಭುವನದೂರ್ವ್ವ
ಶ್ವಾಸವತಿಕೋವಿದರಲೀ ಚಿ
ತ್ತೈಸಿ ಬಲ್ಲಿರಿ ನಿಮ್ಮಡಿಗಳಾಮ್ನಾಯವೀಥಿಯಲಿ ।
ಆಶರವಲೀ ಸೇರಿತೆನಗೆ ಮ
ಹೇಶನಿಂದಲ್ಲಿಂದ ಬಟಿಕ ಸು
ರೇಶನತಿಮನ್ನಿಸಿದನಮರಾವತಿಯೊಳೂಲವಿನಲಿ ॥ ೩೧

ಖ್ಯಾತಿವಡೆದೆನು ಶಿವನ ಕಾರು
ಣ್ಯಾತಿಶಯಕಿದು ಫಲವೆ ಸಾಕಿ
ನ್ನೆತಕೀರಾಜಸವಿಡಂಬವಿಕಾರಕುಚಿತನೆಲೆ ।
ವೀತಿಹೋತ್ರಪರೇತಪತಿಪ್ರು
ಹೂತವರುಣಾದಿಗಳು ಕಾಂಡ
ವ್ರಾತದಲಿ ತೊಳೆದರು ಮನೋರಥಕಲಿತಕರ್ದಮವ ॥ ೩೨

ಕೇಳಿ ಮಿಗೆ ಹಿಗ್ಗಿದನು ತನುರೋ
ಮಾಳ ತಳಿತುದು ಪರುಷವಾರಿಗ
ಳಾಲಿಗಳ ಪೂಜಿದವು ತೂಜಿದುವಂತರವ್ಯಥೆಯು ।
ತೋಳ ಹಿಡಿದೆಳದಪ್ಪಿ ಪಾರ್ಥನ
ಬೋಳವಿಸಿದನು ಪೌರವಾನ್ವಯ
ಪಾಲಕನೆ ಯೆಂದರಸ ಕೊಂಡಾಡಿದನು ಫಲುಗುಣನ ॥ ೩೩

ಮುಳಿದುದಿನ್ನೀನಹಿತಬಲ ಹಗೆ
ಹಳಿದುದೈ ದೈವವಿಧಿಯು ಮೌಳಿಗೆ
ಕಳುಬಿದವರಿಗೆ ಕಾಣಲಾಯ್ತು ಕೃತಾಂತನೋಲಗವ ।

ಕಱಿದನೇ ಕರುಣವನು ಹರ ಹರ
ಪೆಜ್ಜೆನೊಸಲಬಲುದೈವನಿನಿತರ
ಹೊಱಿಗೆ ಗದುಗಿನ ವೀರನಾರಾಯಣನ ಕರುಣದಲಿ ॥ ೨೪

ಹನ್ನೆರಡನೆಯ ಸಂಧಿ ಮುಗಿದುದು.

ಹದಿಮೂರನೆಯ ಸಂಧಿ.

ಸೂಚನೆ.

ಲೀಲೆ ಮಿಗೆ ನರನಮರಲೋಕದ
ಕಾಲಿಕೇಯನಿವಾತಕವಚರ
ಸೀಳಿ ಬಿಸುಟಿಂದವನು ವಿವರಿಸಿದನು ಮಹೀಪತಿಗೆ ॥

ಕೇಳು ಜನಮೇಜಯ ಧರಿತ್ರೀ
ಪಾಲ ಧರ್ಮಜನರ್ಜುನನನುಪ
ಲಾಲಿಸಿದನುಱಿ ಮುಱುಗಿದನು ಪುಳಕಾಂಬುಪೂರದಲಿ ।
ಹೇಟು ಪಾರ್ಥ ಕಪರ್ದಿಯಸ್ತ್ರ
ವ್ಯಾಳಸಂಗ್ರಹಣಪ್ರಪಂಚವೆ
ನಾಲಿಸುವೆನೆನೆ ನೃಪತಿಗಭಿವರ್ಣಿಸಿದನಾಕಥೆಯ ॥ ೧

ಹರನ ಶರಲಾಭಪ್ರಸಿದ್ಧಿಗೆ
ಕರೆಸಿದನು ಹರಿಯಲ್ಲಿ ಸುರಪತಿ
ಗಱುಹಿದನು ಸುರರಿಪುಗಳೂಟಿಗವನು ಸುರಾಚಾರ್ಯ ।
ಅರಿಗಳಮಗೆ ನಿವಾತಕವಚರು
ಸುರಪದವಿ ಸೋಪದ್ರವದ ನಿ
ಷ್ಕರವಿದೆಂದು ರಹಸ್ಯದಲಿ ತನಗೆಂದನಮರೇಂದ್ರ ॥ ೨

ಅರ್ಜುನನನ್ನು ಕುರಿತು ಇಂದ್ರನು ಸ್ವರ್ಗದ ತೊಂದರೆಯನ್ನು ಹೇಳಿದುದು.

ಶಿವನ ಕೃಪೆ ನಿನಗಾಯ್ತು ನಿರ್ಜರ
ನಿವಹವಿದೆ ನಾಕದಲಿ ಬಲುದಾ
ನವರ ವಿಲಗದಿ ಬೆಚ್ಚುವೋದುದು ಸ್ವರ್ಗಸೌಖ್ಯಫಲ ।
ಜವನ ಭಯ ಜೀವರಿಗೆ ದುರ್ಜನ
ರವೆಗಡವು ಸುಜನರಿಗೆ ತಮ ಶಶಿ
ರವಿಗಳಿಗೆ ಮುನಿವಂತೆ ಖಳರಿದೆ ಯೆಂದನಮರೇಂದ್ರ ॥ ೩

ಮುದದ ನೆಲೆ ಶುಭದಿಕ್ಕೆ ಸೊಗಸಿನ
ಸದನ ಸೌಖ್ಯದ ಗರುಡಿ ಸೊಂಪಿನ
ಪದವಿ ಲೀಲೆಯ ತಾಣ ತಾಯ್ಮನೆ ಖೇಳಮೇಳವದ ।
ಮೆದದ ಮಡು ಭೋಗೈಕನಿಧಿ ಸಂ
ಪದದ ಜನ್ಮಸ್ಥಲ ಮನೋರಥ
ದುದಯಗಿರಿ ಹಿಂದೀಸುದಿನವೆಮರಾವತೀನಗರ ॥ ೪

ಕಳವಳದ ನೆಲೆ ಭಯದ ಜನ್ಮ
ಸ್ಥಲ ವಿಷಾದದ ಪೇಟೆ ಖಾತಿಯ
ನಿಳಯ ಖೇಡಿಯ ಕಟಕ ಭಂಗದ ಸಂಭವಸ್ಥಾನ ।
ಅಳುಕಿನಂಗಡಿ ಹಳಿವಿನಾಡುಂ
ಬೊಲ ನಿರೋಧದ ಶಾಲೆ ದುಗುಡದ
ಕಳನೆನಿಸಿತೀನಗರಿ ಯಿಾಗಳು ಪಾರ್ಥ ಕೇಳೆಂದ ॥ ೫

ನಿಡಿಲಕಾಲದೊಳಿಗುವಂತಿರೆ
ಕಡಲು ಕಲ್ಪದೊಳುಕ್ಕುವಂತಿರೆ
ಪೊಡವಿಯಾಕಸ್ಮಿಕದೊಳಿವಂತಿರೆ ರಸಾತಳಕೆ ।

ತುಡುಕುವುದು ರಕ್ಕಸರ ಭಯ ಹುಡಿ
ಹುಡಿಯುಹುದು ಸುರವಿಭವವೆಮಗಿ
ಮ್ಮಡಿಯಲವರು ನಿವಾತಕವಚರು ಪಾರ್ಥ ಕೇಳೆಂದ ॥ ೬

ಕೆತ್ತ ಕದ ತೆಗೆಯದು ಸುರೌಘದ
ಹೊತ್ತ ಸರಕಿಳಿಯದು ಸುಕಲ್ಪಿತ
ಮತ್ತಗಜರಥವಾಜಿ ತೆಗೆಯವು ಪುರದ ಬಾಹೆಯಲಿ ।
ತೆತ್ತು ಹರಿಯೆದು ಕಾದಿ ರಣದಲಿ
ಸತ್ತು ಹಿಂಗದು ಸುರರ ಸತಿಯರು
ತೊತ್ತಿರಾದರು ಖಳರ ಮನೆಗಳಿಗೆಂದನಮರೇಂದ್ರ ॥ ೭

ಭಯದ ಬಾಹೆಯಲಪಸರದ ನಿ
ಶ್ಚಯದ ದುರ್ಮ್ಮಾನದ ವಿಘಾತಿಯ
ಲಯದ ಲಾವಣಿಗೆಯಲಿ ರಾಗದ ತಡಿಯ ಸಂಕಟದ ।
ದಯೆಯ ಪಾಡಿನ ಹೃದಯಕಂಪದ
ನಯನದೊಳುತೆಯ ಬಗೆಯ ಕೊಳು
ತೆಯ ಜಯದ ಜೋಡಿಯ ದೇವನಿದೆ ನೋಡೆಂದನಮರೇಂದ್ರ ॥ ೮

ಅಲ್ಲಿ ದೈತ್ಯರು ಮೂಲುಕೋಟಿಗ
ಳಲ್ಲಿ ಸಮಸತ್ವರು ಮಹಾರಥ
ರಲ್ಲದಿಲ್ಲವರೊಳಗೆ ದೇವತ್ರಯಕೆ ಬಲ್ಲಿದರು ।
ಗೆಲ್ಲ ನಿನಗಹುದವರೊಡನೆ ಕಳು
ವಿಲ್ಲ ತನ್ನಿಂದಱಿದ ವಿದ್ಯೋಗ
ಳಲ್ಲವಕೆ ಗುರುದಕ್ಷಿಣೆ ಯಿದೆಂದನು ಬಲಧ್ವಂಸಿ ॥ ೯

ಅವರುಪೇಕ್ಷೆಯಲುಟಿವು ಮೇಣ್ ನ
ಮ್ಮವರ ಬೇಹಿನ ಸುಟಿವಿನಲಿ ಮೇ
ಣವರನಳುಕಿಸುವಾಧಿದೈವಿಕಕರ್ಮಗತಿಗಳಲಿ ।

ದಿವಿಜರಿಂದವರುಳಿದರಾದಾ
ನವರ ಧಟ್ಟಿಸಿ ದೇವಲೋಕವ
ನೆವಗೆ ನಿರುಪದ್ರವದಲಿಡೆ ಮಾಡೆಂದನಮರೇಂದ್ರ ॥ ೧೦

ಇಂದ್ರನ ಅಪೇಕ್ಷೆಯಂತೆ ದೈತ್ಯರ ಮೇಲೆ ಯುದ್ಧಕ್ಕೆ
ಹೊರಟುದು.

ಹೈ ಹಸಾದವು ನಿಮ್ಮ ಕೃಪೆಯುವ
ಗಾಹಿಸುವೊಡೇನರಿದು ದೈತ್ಯರು
ಸಾಹಸಿಕರೇ ಸದೆವೆನೀ ಪುರಜನಕೆ ಹಿತವಹರೆ ।
ಆಹರಾಸ್ತ್ರದೊಳಮರವೈರಿ
ವ್ಯೂಹಭಂಜನವಹುದು ನಿಷ್ಪ್ರ
ತ್ಯೂಹ ನಿಶ್ಚಯನೆಂದು ಬಿನ್ನೈಸಿದೆನು ತಾನೆಂದ ॥ ೧೧

ಈರಥವನೇ ಹೂಡಿಸಿದೆನೀ
ಸಾರಥಿಯ ಬೆಸಸಿದೆನು ಸುರಪರಿ
ವಾರ ನೆರೆದುದನೆಣಿಸಲಳವೇ ಕೋಟಿಜಿಹ್ವೆಯಲಿ ।
ವಾರಣದ ಹಯರಥಪದಾತಿಯ
ಭಾರಣಿಗೆ ದಿವ ನೆರೆಯದಿಂದ್ರನ
ವೀರಭಟರೆನ್ನೊಡನೆ ನೆರೆದುದು ಭೂಪ ಕೇಳೆಂದ ॥ ೧೨

ಹೊಲಬಿಗರು ಹರಿದರು ಸುರೇಂದ್ರನ
ದಳದ ಮೊನ್ನರ ಸನ್ನೆಯಲಿ ದಿಗು
ವಳಯದಗಲದೊಳೂಲೆವೆ ಲಲಿತಚ್ಛತ್ರಚಮರಿಗಳ ।
ಜಲಧಿ ಜಲಧಿಯ ಪಳಚಲಗಿದ
ವ್ವಳಿಪ ವಾದ್ಯಧ್ವನಿಯ ಡಾವರ
ಸೆಳದುದಸುರಸಮೂಹಧೈರ್ಯವನರಸ ಕೇಳೆಂದ ॥ ೧೩

ಆಳು ನಡೆದುದು ಮುಂಗುಡಿಯು ಹರಿ
ಧಾಟಿ ನೂಕಿ ಹಿರಣ್ಯನಗರಿಯ
ಮೊಲೆಗೈದಿತು ಹೊಯ್ದುದಲ್ಲಿಯ ಬಿನುಗು ಬಿಚ್ಚಟೆಯ ।
ಸೂಳವಿಸಿದುವು ಸನ್ನೆಯಲಿ ನಿ
ಸ್ಸಾಳ ದನುಜಪುರೋಪಕಂಠದ
ಕೂಲವತಿಗಳ ತೀರದಲಿ ಬಿಡಿಸಿದೆನು ಪಾಳಯವ ॥ ೧೪

ಅಳಿಯದಾಪಟ್ಟಣವಿದೇನೋ
ಹೊಳಿಗೆ ಗಜಬಜವೆನೆ ಸುಪರ್ವರ
ಕುಳುಹುಗಳನಳಿದಮರರಿಪುಗಳು ಹರಿವರರವೆನೆಗೆ ।
ಬಿಳುನುಡಿಯ ಸುಮ್ಮಾನದುಬ್ಬಿನ
ನೆಳೆ ನಗೆಯ ನಯನಾಂಬುಗಳ ಖಳ
ರೆಳಿಗಲತಿಸುಮ್ಮಾನವೇನೆಂವಸುವ ಬೆಸಗೊಂಡ ॥ ೧೫

ಜೀಯ ಬಲೆಗಳ ತೆಗಸು ನಡೆ ನಿ
ರ್ದಾಯದಲಿ ನಿಮ್ಮಡಿಯ ಬೇಂಟೆಗೆ
ರಾಯ ಮೃಗ ನಡೆತಂದವಿವೆ ನಗರೋಪಕಂಠವಲಿ ।
ಹೋಯಿತಸುರರ ಕೈಯ್ಯ ಹಸದಿರು
ಪಾಯ ಪಾಯವೆಧಾರೆನಲು ಖಳ
ರಾಯನೆತ್ತಣ [1] ಮೃಗವದಾವುದೆನುತ್ತ ಬೆಸಗೊಂಡ ॥ ೧೬

ರೂಢಿಸಿದನವರೇಂದ್ರನಮರರ
ವೇಡೆಯಾಯ್ತು ಹಿರಣ್ಯನಗರಿಗೆ
ಗಾಢಬಲರದೆ ವರುಣಯಮವೊಗ್ನಿವಾಯುಗಳು ।
ರೂಢಿಗಚ್ಚರಿಯಾಯ್ತು ಲಾ ಪರಿ
ಗೂಢಮೃಗಗಣ ಬಂದುದೀ ನಿ
ರ್ಮೂಢರನ ಹಿಡಿತರಿಸೆಂದನು ದೂತನೂಡೆಯಂಗೆ ॥ ೧೭

---

[1] ರಾಯ ಕೇಳುತ್ತ, ಚ.

ಇವನ ಹೊಯ್ ಕಟವಾಯ ಕೊಯ್ ತ
ಪ್ಪವನೆ ಸುರಪತಿ ಶಿವ ಶಿವಾ ಸುರ
ರವೆಗಡಿಸುನರೆ ವೇಡೆ ಗಡ ಹೈರಣ್ಯನಗರಿಯಲಿ ।
ಇವನ ಸೀಪಿನೆ ಹೊಯ್ಗೆ ಸುರಸೈ
ನ್ಯವನು ಸೀಪಿಯೆ ಬಟಿಕ ನೀ ನಿ
ನ್ನವನ ಮನವೊಲಿವಂತೆ ಮೊಡೆನೆ ಖಳನು ಬೆಱಗಾದ ॥ ೧೪

ಬಂದನೇ ಸುರರಾಜನಕಟೈ
ತಂದು ಮುತ್ತಿತೆ ದಿವಿಜಬಲ ತರು
ಣೇಂಮುಧರನೇ ತರಿಸಿದನೆ ಶಿವ ಶಿವ ವಿಶೇಷವಲ ।
ಇಂದಿನಲಿ ಕಡೆ ಯೆಮಗೆ ಮೇಣು ಪು
ರಂದರನು ನಿರ್ಜಾಮನೈ ಸಲೆ
ಯೆಂದು ಬಿಟ್ಟನು ಚೂಣಿಯನು ಪಟುಭಟರ ಬೊಬ್ಬೆಯಲಿ [1] ॥ ೧೫

ಧರಣಿಪತಿ ಚಿತ್ತೈಸು ವೇಲೆಯ
ಸಿರವೆನೊಡೆದುಬ್ಬೇಱ್ವ ಘನಸಾ
ಗರದ ವೊಲ್ ಸಿಡಿದೊದಱಿ ಕವಿದುದು ಕೂಡೆ ವೆಂಕದಲಿ ।
ಕರಿತುರಗರಥರಾಜಿ ಕಾಲಾ
ಳುರವಣಿಸಿತೇನೆಂಬೆನಸುರರ
ಘೊರೆಯ ಸನ್ನೆಗೆ ಸೂಳವಿಪನಿಸ್ಸಳಕೋಟಿಯಲಿ ॥ ೧೬

ಅಸುರರು ಯುದ್ಧಕ್ಕೂಸ್ಕರ ಸಿದ್ಧರಾದುದು.

ಕವಿದುದಸುರರ ಚೂಣಿ ಬೊಬ್ಬೆಯ
ವಿವಿಧವಾದ್ಯಧ್ವನಿಯ ಕಹಳಾ
ರವದ ಕೋಳಾಹಳಕೆ ತುಂಬಿತು ಬಹಳಭೇರಿಗಳು ।
ರವಿಯನಾಕಾಶವೆ ದಿಗಂತವೆ
ತಿವಿದು ಕೆಡರುವಧೂಳಿ ತಿಮಿರಾ
ರ್ಣವವಲ್ಲೈ ತ್ರೈಜಗವೆನಲು ಝೋಂಪಿಸಿದುದರಿಸೇನೆ ॥ ೧೭

[1] ವೊಗನೋಡಿ, ಕ. ೩

ದಾನವೆರ ಧಕ್ಕಡತನವನೆದ
ನೇನನೆಂಬೆನು ಜೀಯ ತೂಳಿದು
ವಾನೆಗಳು ತುಱುಗಿದುವು ತೇಜಿಗಳುಱುಬಿದವು ತೇರು ।
ಆನೆಲಳವೇ ಭಟರ ಶರಸಂ
ಧಾನವನು ಬಲುಸರಳ ಸೂಟಿಯ
ಸೋನೆಯಲಿ ಜಗ ಮುಱುಗಿತೆನೆ ರ್ಮೂಡಿಸಿತು ಖಳಸೇನೆ ॥ ೦೦

ಮುಱಿದುದಮರರ ಚೂಣಿ ದಾನವ
ರುಱುಬಿಗಳುಕಿತು ಸಿದ್ಧವಿದ್ಯಾ
ಧರಮಹೋರಗಯಕ್ಷರಾಕ್ಷಸಗುಹ್ಯಕಾದಿಗಳು ।
ಹೊರಗೆ ವನವೀಥಿಯಲಿ ಕಾಹಿನ
ಕುಱುವದಲಿ ಗೋಪುರದಲೌಕಿದ
ಸುರರ ಮುಱಿದರು ಮೇಲುಗಾಳಗವಾದುದಸುರರಿಗೆ ॥ ೦೧

ಕೆಣಕಿದಮರರು [1] ಕೋಲುಗಟ್ಟಿತು
ಬಣಗುಸುರರೋಸರಿಸಿ ಭಾರಾಂ
ಕಣವೆನ್ನಿದಿರಿನಲಿ ಬಿಸುಟರು ಸೂಸಿ ದೆಸೆದೆಸೆಗೆ ।
ರಣವನದನೇನೆಂಬೆನೈ ಧಾ
ರುಣಿಪತಿಯೆ ವಿಗ್ರಹದ ವಿಸ್ತಾ
ರಣನಿಗುರ್ಗಿಯೆ ವಿಗಡಿಸಿತು ವಿಬುಧರ ವಿಡಾಯಿಗಳ ॥ ೦೨

ಬಟಿಕ ಬಿಟ್ಟನು ರಥವನೀಮಾ
ತಳಿ ವಿಭಾಡಿಸಿ ಹೊಕ್ಕ ಚೂಣಿಯ
ಬಲಸಮುದ್ರದ ಮಧ್ಯದಲಿ ಮುಱುಗಿತು ವರೂಥವಿದು ।
ಬಲದೊಳಚ್ಚನು ಹಿಂದು ಮುಂದಿ
ಟ್ಟಳಿಸಿದರನಿಟ್ಟೊರಸಿದೆನು ಮುಂ
ಕೊಳಿಸಿ ಮೇಲ್ವಾಯ್ದವರ ಮುಱಿದೆನು ವಾಮಭಾಗದಲಿ ॥ ೦೩

[1] ಸುರರು, ಚ.

ಕೆಟ್ಟುದಸುರರ ಚೂಣಿ ದಳ ಜಗ
ಜಟ್ಟಿಗಳು ನುಗ್ಗಾಯ್ತು ದಿವಿಜರ
ಥಟ್ಟನಲಿ ಬೊಬ್ಬಾಟವಾಯ್ತು ಗಭೀರಭೇರಿಗಳು ।
ಬಿಟ್ಟನುಂಡೆಯಲಸುರಸುಭಟರು
ಕೆಟ್ಟು ಹಾಯ್ದರು ಕೂಡೆ ಹೆಣ ಸಾ
ಲಿಟ್ಟತೊಱೆ ಯೆನಲರುಣಜಲ ನಗರೋಪಕಂಠದಲಿ ॥ ೭೬

ಅಸುರರು ಅರ್ಜುನನ್ನು ಸ್ತುತಿಮಾಡಿದರೆಂದು ಹೇಳಿದುದು.

ನೂಕಿ ದೈತ್ಯರ ಚೂಣಿಯನು ಮೆಱೆ
ದೌಕಿ ದುರ್ಗವ ಹೊಗಿಸಿದೆನು ಸ
ವ್ಯಾಕುಲರು ಸೂಸಿದರು ಭಯವೆ ನಿವಾತಕವಚರಿಗೆ ।
ಆಕೆವಾಳನು ಜೀಯ ನಮ್ಮ ದಿ
ವೌಕಸರ ಪರಿಯಲ್ಲ ಯುದ್ಧ
ವ್ಯಾಕರಣಪಾಂಡಿತ್ಯವುಂಟೆಂದೆನ್ನ ದೂಷಿದರು ॥ ೭೭

ಕೇಳಿದನು ಕಡುಗೋಪದಲಿ ನಿಡಿ
ಲೇಟಗೆಯಲಿದ್ದ ನಸುರೇಂದ್ರಗೆ
ವೇಲುಗಾಳಗವೇ ಸುಪರ್ವರು ನಮ್ಮ ಸದೆವೆರಲೆ ।
ಕಾಲಗತಿಯೋ ವೇಣ್ಯಪರ್ದಿಯ
ಕೀಲಕವೊ ರವಿಯೊಡನೆ ತಮ ಕೈ
ವೇಳವಿಸಿತೇ ಶಿವ ಶಿವಾ ಯೆಂದಸುರ ಪಲುವೊಱೆದ ॥ ೭೮

ಭಟರ ಬರಹೇಟಾ ಸುರೇಂದ್ರನ
ಕಟಕವಿಕ್ಕಿದ ವೇಡೆಯಲಿ ಲಟ
ಕಟಿಸುತಿದೆ ದಾನವರು ಮಾನಚ್ಯುತಿಯ ಮನ್ನಿಸದೆ ।
ನಿಟಿಲನಯನನನೇಡಿಸುವ ಚಾ
ವಟೆಯುರಾವಿಡೆ ಚತುರರಣಬಲಂ
ಪಟರಡಱು ಬರಹೇಟೆನುತ ಮಿಗೆ ಗರ್ಜಿಸಿದ ॥ ೭೯

ಅಸುರರು ಹೆಚ್ಚಾಗಿ ಬಂದು ಮುತ್ತುವಿಕೆ.

ನೆಱೆದರಸುರರು ಕಾಳಕೂಟದ
ಕಱುವಿನೆಱಕವೊ ಸಿಡಿಲ ದಳ್ಳುರಿ
ದಿರುಳದಡ್ಡಿಯೊ ಪ್ರಳಯಭೈರವನುಬ್ಬಟೆಯು ಪಡೆಯೊ ।
ಹರನ ನಯನಜ್ವಾಲೆಯವದಿರ
ಗರುಡಿಯೋ ಗಾಢಾಯ್ಲ್ತೇಜದ
ದುರುಳದಾನವೆಭಟರು ಬಂದರು ಕೋಟಿಸಂಖ್ಯೆಯಲಿ ॥ ೩೦

ನೆರೆದಿರೈ ಪರಿಭವದ ನೆಲೆಯಲಿ
ನೆರೆದಿರೈ ದುಷ್ಕೀರ್ತಿಸತಿಯಲಿ
ನೆರೆದಿರೈ ಸಲೆ ಹೊರೆದಿರೈ ದುರ್ಗತಿಗೆ ಡೊಳ್ಳುಗಳ ।
ಸುರರಲೇ ನೀವ್ ನಿಮ್ಮ ಹೆಂಡಿರ
ಕುರಳಕೈದೊಳಸಿಂಗೆ ಮಿಗೆ ಕಾ
ತರಿಸುತಿದೆ ವಾಸವನೊಡನೆ ವಾಸಿಗಳ ಬಿಡಿಯೆಂದ ॥ ೩೧

ಜೀಯ ಖಾತಿಯಿದೇಕೆ ದಿವಿಜರ
ರಾಯನರಸಿಯ ನಿನ್ನ ತೊತ್ತಿರ
ಲಾಯದಲಿ ತೋಱುವೆವು ತಾ ತಾ ವೀಳೆಯವನೆನುತ ।
ಹಾಯಿದರು ತಮ ತಮಗೆ ಮುಂಗುಡಿ
ದಾಯದಲಿ ಧಟ್ಟಿಸುವ ನಿಸ್ಸಾ
ಳಾಯತದ ಬಹುವಿಧದ ವಾದ್ಯದ ಲಳಿಯ ಲಗ್ಗೆಯಲಿ ॥ ೩೨

ಒಡೆದುದಿಳೆಯೆನೆ ಸಮವಿಷಮದುರಿ
ಗಡಲು ಶಿವ ಶಿವಾ ಯೆನೆ ವಿಘಾತಿಯು
ಲಿಡೆ ದಡಿಗದಾಸವರು ಕವಿದರು ಕೆದಱಿ ಸುರಬಲವ ।
ಘಡಘಡಿದಿರಾಗಲಿ ಸುರೇಂದ್ರನ
ತೊಡಕ ಹೇಱಿತಾ ಕಾಲಲಿದೆಲಾ
ತೊಡರೆನುತ ಹೊಯ್ದರಸುರರು ಸುರರ ಸಂದಣಿಯ ॥ ೩೩

ದುಷ್ಕೃತಿಯಲೊಡಲುಗಳ, ಚ.

ದೇವತೆಗಳ ಜಯ.

ಮುಱಿದುದವರು ಮತ್ತೆ ಬೊಬ್ಬಿಱಿ
ದುಱುಬಿದೆನು ಹೆಸರೆನಿಸಿದಸುರರ
ತಱಿದೆನದಱೊಳು ಕೋಟಿಸಂಖ್ಯೆಯನೈಂದ್ರಬಾಣದಲಿ ।
ಹಱಿದುದಮರಾರಿಗಳು ಕೋಟೆಯ
ಹೊಱಗೆ ಸುರಬಲವೌಕಿ ಬಿಟ್ಟುದು
ತುಱುಗಿತಮರರು ಖಳರ ದುರ್ಗದ ತೆನೆಯ ತುದಿಗಳಲಿ ॥ ೩೪

ಎಲೆಲೆ ಸುರಪತಿಯಾಳುಕೋಟೆಯ
ನೀಟಿವುತದೆ ನಡೆ ಯೆನುತ ರಕ್ಕಸ
ರುಲಿದು ಕವಿದುದು ಖಾತಿಯಲಿ ಮಿಗೆ ಭಾಷೆಗಳ ಕೊಡುತ ।
ತಲೆಯ ಹೊಯ್ದುಡಿಗೆಡಹು ಸುರಪನ
ಲಲನೆಯರ ನುಂದಲೆಯ ಕೊಯ್
ಹುಲುಸುರರು ಸರಿಯೆ ಮರ್ದು ಯೆನುತೈದಿದರು ರಣಭಟರು ॥೩೫

ಅಸುರರ ಜಯ.

ಏನನೆಂಬೆನು ಜೀಯ ಬಟ್ಟಿಕಾ
ದಾನವಾಧಿಪರುಬ್ಬೆಯನು ಸುರ
ಮಾನವರು ತರಹರಿಸಲಳವೇ [1] ಖಳರ ಫಲ್ಗುಣೆಯ ।
ವೈನತೇಯನ ಪಕ್ಷಹತಪವ
ಮಾನನಂತಿರೆ ಭಟರ ಸುಯ್ಲ್ನೊ
ಳಾನಿರೂಢಿಯ ಸುರರು ಹಾಱುತ ಸೂಸಿ ದೆಸೆದೆಸೆಗೆ ॥ ೩೬

ತೋಱು ತೋಱುವೆರೇಂದ್ರ ನಾವೆಡೆ
ತೋಱುಸೈರಾವತವದೆತ್ತಲು
ತೋಱಿಸುಚ್ಚೈಶ್ರವನೆಲ್ಲಿಹರಗ್ನಿಯಮಿಗಿಮರು ।

[1] ಲಾ ರ, ಟ.

ತೋಱಿರೈ ಕೈಗುಣವನಸುರರ
ಗಾಱುಗೆದಱಿದ ಗರ್ವಿತರ ಮೈ
ದೋಱಿಶೇಷಾ ಕಾಣಬಹುದೆನುತುಱಿಬಿದರು ಭಟರು ॥ ೩೬

ಕಱಿದಗವದಿರು ಕಲ್ಪಮೋಘದ
ಬಿಱುವಣೆಯವೊಲು ಸರಳನನಿತುವೆ
ತಱಿದು ತೆತ್ತಿಸಿದೆನು ತದಂಗೋಪಾಂಗದಲಿ ಸರಳ ।
ಅಱಿಯರೆನ್ನನು ಶಕ್ರನೆಂದೇ
ತಱುಬಿ ದಿಙ್ಮಂಡಲವ ಮುಸುಕಿದ
ರಿರಿತಕಂಜದ ದಿಟ್ಟನಾವೆನು ಸುರರ ಥಟ್ಟಿನಲಿ ॥ ೩೪

ಝಗರ್ಝಗಿಸಿ ಬಾಣಾಗ್ನಿ ಭುಗುಭುಗು
ಭುಗಿಲೆನಲು ದಿವ್ಯಾಸ್ತ್ರತತಿಯಲಿ
ಹೊಗೆಯ ತೋಱಿಸಿದೆನು ಚತುರ್ದಶಭುವನಭವನದಲಿ ।
ವಿಗಡರದ ಲೆಕ್ಕಿಸದೆ ಲೋಟಿಸಿ
ಮೆಗುಚಿದರು ಮದ್ಬಾಣಮಹಿಮೆಯ
ನೊಗಡಿಸಿತು ಕಾಲಾಗ್ನಿ ಕಾಲಾಂತಕರಿಗಾಸಮರ ॥ ೩೫

ಧೊರೆಗಳೞಿತು ರಥತುರಂಗವ
ಕರಿಗಳಳಿ ಕಾಲಾಳ ಬಿಂಕವ
ನರಸ ಬಣ್ಣಿಸಲಱಿಯೆನಾಸುರಕಲಹಕರ್ಮವನೆ ।
ಸರಿಗರೆದ್ದುದು ಮೂಱುಕೋಟಿಯು
ಸುರರು ಸರಿಗಳಲಿಟ್ಟರಶನಿಯ
ಶರದಲೆಡೆಯಲಿ ತಱಿಬಿದರು ಕೈಸೋತುದೆನಗೆಂದ ॥ ೪೦

ದೇವಾಸುರರ ಅಸ್ತ್ರಯುದ್ಧ.

ಲಟಕಟಿಸುನಾಮೂಱುಕೋಟಿಯು
ಭಟರು ಕಱಿದರು ಕಲುವೆಣೆಯನು
ಬ್ಬಟೆಯನದನೇನೆಂಬೆನವದಿರ ಸಮರಸಂಭ್ರಮವ ।

ಕುಟಿಲತನದಿಂದೊದಗಿದರು ಕಲು
ಕುಟಿಗಶರ ಶತಕೋಟಿಯಲಿ ಪಡಿ
ಭಟಬಲವ ಬೆದಱಿಸಿದೆ ಚಿತ್ತೈಸೆಂದನಾಪಾರ್ಥ ॥ ೪೧

ತೆರಳರವದಿರು ಹೂಡಿದರು ದ
ಳ್ಳುರಿಯ ಧಾರೆಯ ಪಾವಕಾಸ್ತ್ರವ
ನರಸ ಹೊಗಡದು ಭುವನ ಹೊಯ್ದುದು ಝಳ ಜಗತ್ತ್ರಯವ ।
ಸರಕು ದೆಗೆದುದು ಸತ್ಯಲೋಕಕೆ
ಥರಥರದ ಜಗವಿಂದ್ರಸಾರಥಿ
ಜಱಿದು ಜವ ಗುಂದಿದನು ಝೂಡಿಸುವನಲನುಬ್ಬೆಯಲಿ ॥ ೪೨

ಸಾರಥಿಯ ಸಂತೈಸಿ ತೇರಿನ
ವಾರುವೆಂಗಳ ನೇಣನೋಜೆಯೊ
ಳೂರಣಿಸಿ ಸಂವರಿಸಿ ರಥವನು ವರುಣಬಾಣದಲಿ ।
ವಾರಿಧಿಯು ಕೆದಱಿದೆನು ಕಟ್ಟಿದು
ಭೂರಿಗಿಡಿಗಳು ಮಾರುತನ ಕೈ
ವಾರ ಕುಂದಿದುದಸುರಮುಖದನಲಾಸ್ತ್ರ ಪರಿಹರಿಸಿ ॥ ೪೩

ಅವರು ಮೆಗುಟೆಚ್ಚರು ಶಿಲೀಮುಖ
ದವಯವದಲುಬ್ಬರಿಸಿ ಗಿರಿಗಳು
ಕವಿಯೆ ಕಡಿದೊಟ್ಟಿದೆನು ಭಾರಿಯವಜ್ರಬಾಣದಲಿ ।
ಅವರು ತಿಮಿರಾಸ್ತ್ರದಲಿ ಕೆತ್ತರು
ಭುವನನಯನದ ಕದವನಾಗಳ
ರವಿಯ ಶರದಲಿ ಮುಱಿದೆನಗುಳಿಯನರಸ ಕೇಳೆಂದ ॥ ೪೪

ಬಟ್ಟಿಕ ಸುಱಿದರು ಹಾವುಗಳ ಹೆ
ಮ್ಮೆಟೆಯನಲ್ಲಿಗೆ ಗರುಡಬಾಣವ
ಸುಟಿಸಿದೆನು ಬಟ್ಟಿಕಾದುದರ್ಧಗ್ರಾಸವಾಕರಕೆ ।

ಉಲಿದು ದನುಜರು ಮತ್ತೆ ಕೆಂಡದ
ಮಳೆಯ ಕಱಿದರು ಮಗುಚೆ ಜಲಧಿಯು
ತುಬುಕಿದೆನು ತೊಡಕಾಯ್ತು ಸಾರಥಿ ಮತ್ತೆ ಬಸವಳಿದ ॥ ೪೫

ಸಾರಥಿತ್ವದ ಕೈಮೆ ತತ್ಪ್ರತಿ
ಕಾರಶರಸಂಭ್ರಮವೆರಡಱ
ಭಾರ ಬಿದ್ದುದು ಮೇಲೆ ದನುಜರ ಮೂಱುಕೋಟಿಯದು ।
ಧೀರರಾತ್ಮಸ್ತುತಿಗೆ ನಾಚದ
ರಾರು ಜೇಯ ಮಹಾಹವದ ವಿ
ಸ್ತಾರವನು ಮಾತಳಿಯ ಕೈಯ್ಯಲಿ ಚಿತ್ತವಿಸಿ ಯೆಂದ ॥ ೪೬

ನಿವಾತಕವಚರ ಸಂಹಾರ

ತೊಡಚಿದೆನು ಬ್ರಹ್ಮಾಸ್ತ್ರವನು ಹುರಿ
ಯೊಡೆದುದಸುರರು ನುಲಿತವರನಿ
ಕ್ಕಡಿಯು ಮಾಡಿತು ಬಂದುದಚ್ಚಿವು ನಿವಾತಕವಚರಿಗೆ ।
ಕಡುಹಿನಿಂದಾಗ್ನೇಯವಾರುಣ
ದಡಬಳಿಗರನು ಬಾಚಿದುವು ಬಱ
ಸಿಡಿಲ ಸೆಱೆ ಬಿಟ್ಟಂತೆ ಕಳಚಿದುವಸುರಬಲದಸುವ ॥ ೪೭

ಕಾಲಕೇಯರೊಡನೆ ಯುದ್ಧ ಮಾಡಿದುದು.

ಕಾಳದನುಜರು ಮೂಱುಕೋಟಿಯೊ
ಳಾಳುತ್ತಿಯದಕ್ಕಾಡಿತವರರ
ಸೂಳೆಯರ ಸೆಱೆ ಬಿಟ್ಟುದರಿನಗರದಲಸಂಖ್ಯಾತ[1] ।
ಧೂಳಿಪಟವಾಯಿತು ಹಿರಣ್ಯಪು
ರಾಲಯದ ನೆಲೆಗಟ್ಟು ಮೆರಳಿಯೆ
ಕಾಲಕೇಯರ ಪುರಕೆ ಬಂದೆನು ಭೂಪ ಕೇಳೆಂದ ॥ ೪೮

[1] ನಗರೋಪಕಂಠವಲಿ, ಚ.

ಕೆರಳಿತಲ್ಲಿ ನಿವಾತಕವಚರ
ಮರಣವಾರ್ತೆಯ ಕೇಳಿದಸುರರು
ಪುರದ ಬಾಹೆಯಲಡ್ಡ ಹಾಯ್ದರು ತಱುಬಿದರು ರಥವ ।
ಅರಸ ಚಿತ್ತೈಸವದಿರಲಿ ಪರಿ
ಪರಿಯ ಮಾಯಾರಚನೆ ರಂಜಿಸಿ
ತೆರಡುಸಾವಿರ ಮೆಡಿಗೆ ಮಿಗಿಲು ನಿವಾತಕವಚರಿಗೆ ॥ ೪೯

ಅವರ ಮಾಯೆಗೆ ತನ್ನ ಮಾಯೆಯ
ಲವರ ಬಲುಹವರಿಘಾತಕನ್ನಲಿ
ಸವೆಡಿ ನಿಗಿಲವರೂಹೆಗಿಚ್ಛೆಯಲೂಪೆ ಹತ್ತುಮಡಿ ।
ಅವರ ಕೈವೆಗೆ ತನ್ನ ಕೈವೆಯ
ಹವಣು ಹಿರಿದವರೆಸುಗೆಗೆನ್ನಲಿ
ರಪಣ ನೂರ್ಮಡಿ ಯೆನಿಸಿ ಕಾದಿದೆನರಸ ಕೇಳೆಂದ ॥ ೫೦

ಬೀಸಿದರು ಬಿಱುಗಾಳಿಯಾಗಿ ಮ
ಹಾಸಮುದ್ರದ ನೂಕುದೆಱೆಯಲಿ
ಬೇಸರಿಸಿದರು ಹುರಿದರವೆನಿಯನಗ್ನಿರೂಪದಲಿ ।
ಆಸುರದ ತಮವಾಗಿ ರವಿಶತ
ದಾಸರಿನ ಬಿಸಿಲಾಗಿ ಮಾಯಾ
ಭ್ಯಾಸಿಗಳು ಮೋಹಿಸಿದರದನೇ ವರ್ಣಿಸುವೆನೆಂದ ॥ ೫೧

ಘೋರತರವದು ಬಟ್ಟಿಕ ದುಷ್ಪ್ರತಿ
ಕಾರವಿತರರಿಗಿಂದುಮೌಳಿಯ
ಸಾರತರ ಕೃಪೆಯಾಯ್ತಲೇ ಸರಹಸ್ಯಸಾಂಗದಲಿ ।
ಬಾರಿಸಿದುದಾವಂಗದಲಿ ಮಾ
ಯಾರಚನೆಯಾವಿವಿಧವಿವರಣ
ದಾರುಭಟೆಯಲಿ ಸೀಳಿ ಬಿಸುಟೆನು ಶಿಲ್ಪದಲಿ ಖಳರ ॥ ೫೨

ನುಚ್ಚಿದುದಸುರರ ಮಾಯೆ ಕಾಹಿನೊ
ಳಱದ ರಸದವೊಲಿದ್ದರನಿಬರು
ತಱುಬಿ ನಿಂದರು ತೂಟಿದರು ಗಜಹಯರಥೌಘದಲಿ ।
ತಱಿದುವುಗಿದುವು ತುಂಡಿಸಿದುವನಿ
ದೆಱಗಿದುವು ಸೀಟಿದುವು ಕೊಯ್ದುವು
ಕೊಱೆದು ಕುಪ್ಪಳಿಸಿದುವು ನಿಮಿಷಕೆ ಶರಹರಿವ್ರಜವ ॥ ೫೩

ಕಾಲಕೇಯರ ಪರಾಜಯ.

ಜೀಯ ವಿಗಡಬ್ರಹ್ಮಶರ ವಿಂ
ದ್ರಾಯುಧದ ಮುಂಗುಡಿಯಲಚ್ಚಿದುದು
ಮಾಯಕಾಱಱ ಮೋಹರವೆನುಬ್ಬಟೆ ಚತುರ್ಬಲವ ।
ಹೋಯಿತಸುರರ ಸೇನೆ ಸರಿದುದು
ನಾಯಕರು ನಾನಾದಿಗಂತ
ಸ್ಥಾಯಿಗಳು ಸ್ವರ್ಗಾದಿಭೋಗಕೆ ರಾಯ ಕೇಳೆಂದ ॥ ೫೪

ಕಡುಹುವೆಗ್ಗದ ಕಾಲಕೇಯರ
ಗೊಡವೆ ತೀಱಿತು ಸುರರ ಬಲುಸೆಱೆ
ಬಿಡಿಸಿದೆವು ಬಟಿಕಾಯ್ತು ಕಡು ಸನ್ನಾಹ ಸುರಕುಲಕೆ ।
ಒಡೆದುದಿಳೆ ಯೆನೆ ಬಾಹುವಿನ ಬಿಱು
ನುಡಿಯ ಕೈಗಳ ತುದಿಬೆರಳ ಬೆಂ
ಬಿಡಿಕೆಗಳ ಸುರಭಟರು ಹರಿದರು ಮುಂದೆ ಸುರಪುರಕೆ ॥ ೫೫

ಕಟ್ಟು ಗುಡಿಯನು ಖೋಡಿಯೇ ಜಗ
ಜಟ್ಟಿಗಳು ನುಗ್ಗಾಯ್ತಲೇ ನೀ
ನಟ್ಟಸಿ ಸುರಕುಜವಲೇ ಕೊಡದೇ ಮನೋರಥವ ।
ಕೆಟ್ಟುದಹಿತನಿವಾತಕವಚರ
ಥಟ್ಟು ಹುಡಿಹುಡಿಯಾಯ್ತು ದನುಜರ
ಹುಟ್ಟು ಹುರಿದುದು ಜೀಯ ಯೆಂದರು ಚರರು ಸುರಪತಿಗೆ ॥ ೫೬

ಶತ್ರುನಾಶವಾಗಲಾಗಿ ಸುರರು ಸುಖದಿಂದಿರುವಿಕೆ.

ಕಾಲಕೇಯರ ನಗರಿಯಲಿ ದು
ವ್ಯಾಳಿಸಿತಲೇ ಮೃತ್ಯು ದಿವಿಜರ
ಸೂಳಯರು ಸೆಱೆ ಬಿಟ್ಟು ಬಂದರು ಯಕ್ಷಕಿನ್ನರರ ।
ಕಾಲಸಂಕಲೆ ಕಡಿದುವಾಖಳ
ರೂಳಿಗಕೆ ಕಡೆಯಾಯ್ತು ಸುರಪುರ
ದಾಳುವೇರಿಯ ಕಾಹು ತೆಗೆಯಲಿ ಯೆಂದರಾಚರರು ॥ ೪೭

ಪುರದ ಬಾಹೆಯ ಕೋರಡಿಯ ಸಂ
ವರಣೆ ತೆಗೆಯಲಿ [1] ನಿರ್ಭಯದಿ ಸಂ
ಚರಿಸುವುದು ನಂದನದೊಳಗೆ ನಿಮ್ಮೊಡಿಯ ರಾಣಿಯರು ॥
ಥರಥರದ ಕೊತ್ತಳದ ಕಾಹಿನ
ಸುರಭಟರು ಸುಖನಿದ್ರೆಗೆಯ್ಯಲಿ
ನಿರುತವಿದು ನಿಜನಿಳಯದೊಳಗೆಂದುದು ಸುರಜನವ್ರಾತ ॥ ೪೮

ಕೇಳಿದನು ಹರುಷಾಶ್ರು ಹೊದಿಸಿದು
ವಾಲಿಗಳ ಸಾವಿರವನುಬ್ಬಿದ
ಮೇಲುಮೆದದ ಸರೋಮಪುಳಕದ ಪೂರ್ಣಸಾಖ್ಯದಲಿ ।
ಬಾಲೆಯರ ಬರಹೇಳು ರತ್ನ ನಿ
ವಾಳಿಗಳ ತರಹೇಳೆನುತ ಸುರ
ಮೌಳಿಮಂಡಿತಚರಣನೆದ್ದನು ಬಂದನಿದಿರಾಗಿ ॥ ೪೯

ಕವಿದುದಮರವ್ರಾತ ಕಾಂತಾ
ನಿವಹ ಹೊಱವಂಟುದು ಸುರೇಂದ್ರನ
ಭವನದಲಿ ಗುಡಿ ನೆಗಹಿದುವು ಸುರಪುರದ ಚೌಕದಲಿ ।

---

[1] ಮುರಳಲಿ, ಕ, ಖ.

ತವತವಗೆ ತನಿವರಿವ ಜನದು
ತ್ಸವವನದನೇನೆಂಬೆನಂದಿನ
ದಿವಸದೊಸಗೆಯನಮರಲೋಕದಲರಸ ಕೇಳೆಂದ ॥ ೬೦

ಅರ್ಜುನನು ಈ ವೃತ್ತಾಂತವನ್ನು ಹೇಳಿ ಇವೆಲ್ಲವೂ ತಮ್ಮ ಕೃಪಾ
ಲಬ್ಧವೆಂದು ಹೇಳಿದುದು.

ಇದಿರುನೆಂದನು ಪದಯುಗದಲಿಳಿ
ಗಿದರೆ ತೆಗೆದಪ್ಪಿದನು ಸನ್ಮಾ
ನದ ಸಘಾಡವನೇನನೆಂಬೆನು ಸಾವಿರಾಲಿಗಳ ।
ಹೊದಱಿನಲಿ ಹೊದಿಸಿದನು ಮಿಗೆ ನಾ
ದಿದನು ಹರುಷಾಶ್ರುಗಳಲೀಯು
ಭ್ಯುದಯವೇ ನಿಮ್ಮಡಿಯ ಕರುಣಾಕಟಾಕ್ಷಕೃತಿಯೆಂದ ॥ ೬೧

ಸುರರು ಕೊಂಡಾಡಿದರು ಸುರಮುನಿ
ವರರು ಪರಮೋಶೀರ್ವಚೋವಿ
ಸ್ತರಕೆ ಫಲವಿದೆಲಾ ಭವಚ್ಚರಣಾಂಬುಜಾಲೋಕ ।
ಅರಿಸುಭಟಸಂತೋಷಮಯಸಾ
ಗರವ ಸುಱಿಯುವೆ ಸರಳುವೆಡಬ
ಸ್ಫುರಣಮೇಘಜ್ವಾಲೆ ಜಾಲಕರಾಳಜಿಹ್ವೆಯಲಿ ॥ ೬೨

ಧರ್ಮರಾಯನ ಸಂತೋಷವಚನಗಳು.

ಲೇಸು ಮಾಡಿದೆ ನಾಕವನು ಖಳ
ರೀಸುಕಾಲ ವಿಭಾಡಿಸಿದರೆ ಸು
ರೇಶನಾಪತ್ತಿಂಗೆ ನಿರ್ವ್ಯಾಪಣವೆ ರಚಿಸಿದೆಲ ।
ಈಸು ಪುಣ್ಯೋದಯಕೆ ಪೂರ್ವಮು
ಹೀಶಕುಲ ನೋಂತುದೆ ಯೆನುತ ಸಂ
ತೋಷಮಯಜಲಧಿಯಲಿ ಕೀಳ ಮೇಲಾದನವನೀಶ [1] ॥ ೬೩

ಹೊಗಳಿ ನಿಲ್ಲದು ಜಿಹ್ವೆ ತೆಕ್ಕೆಯ
ಸೊಗಸಿನಲಿ ವೈದಣಿಯದೀಕ್ಷಣ
ಯುಗಳ ಬೀಯದು ನೋಡಿ ಪಾರ್ಥನ ಮಾತ ಸವಿಸವಿದು ।
ತೆಗೆದು ನಿಲ್ಲದು ಕರ್ಣಯುಗ ಸುರ
ನಗರಿಯುತ್ತಮಗಂಧಭರದಲಿ
ಮಗುಳಿ [1] ದರಸನ ನಾಸಿಕವು ಭೂಪ [2] ಕೇಳಂದ ॥ ೬೪

ನೃಪನ ಮುಖವನು ಭೀಮಸೇನನ
ವಿಪುಳಸಂತೋಷವನು ನಕುಲನ
ಚಪಳಮೆದವನು ಪುಳಕವನು ಸಹದೇವನನಯವದ ।
ದ್ರುಪದಸುತೆಯುತ್ಸವವ ಮುನಿಜನ
ದಪಗತಗ್ಲಾನಿಯನು ಪರಿಜನ
ದುಪಚಿತಾನಂದವನು ಬಣಿ ಸಲಳವೆ ನಾನೆಂದ [3] ॥ ೬೫

ಶಿವನ ಘಾಟದ ಶತ ಚತುರ್ದಶ
ಭುವನಭಂಜನವಿದು ಮದೀಯಾ
ಹವಕೆ ಹೂಣಿಗನಾಯ್ತಲೇ ಹೇರಾಳಸುಕೃತವಿದು ।
ಎವಗೆ ತೋಱಿಸಬೇಕುದೀಶಾಂ
ಭವಮಹಾಸ್ತ್ರಪ್ರಾಪ್ತಿ ಕೇಳೀ
ವಿವರಣವ ಕಾಂಬರ್ತಿಯಾಯ್ತೆಂದನು ಧನಂಜಯಗೆ ॥ ೬೬

ಜೀಯ ನಿಮ್ಮರ್ತಿಯನು ಶಂಭುವಿ
ನಾಯುಧದಲೋಸರಿಸುವೆನಾ
ಗ್ನೇಯವಾಯವ್ಯೈಂದ್ರಕೌಬೇರಾಸ್ತ್ರಕೌಶಲವ ।
ಆಯತದೆ ತೋಱಿಸುವೆನೀಗಳ
ನಾಯತವು ರವಿತುರಗನಿಕರದ
ಲಾಯ ನೀಡಿತು ಪಶ್ಚಿಮಾಶಾ ಗಿರಿಯ ತಪ್ಪಲಲಿ ॥ ೬೭

---

1 ಮುಗಿಯ, ಚ. 2 ಗಂಧವವಹವನೀಶ, ಚ.
3 ಲರಿದು ತನಗೆಗೆಂದ, ಚ.

ಅರಸ ಕಳುಹಿದನಿಂದ್ರಸೂತನ
ನರಮನೆಗೆ ಬಂದನು ಪಲಾಶದ
ಹಿರಿಯ ಚೌಕಿಗೆಗಳಲಿ ಮುನಿಗಳ ಖೇಳಮೇಳದಲಿ [1] ।
ಅರಸಿ ಬಣ್ಣಿಪ ಸೂತರ ಸುಳಿ [2] ದಳು
ಹರಸಿದರು ಮುನಿವಧುಗಳಕ್ಷತೆ
ವೆರಸಿ ಗದುಗಿನ ವೀರನಾರಾಯಣನ ವೈದುನನ ॥ ೬೯

ಹದಿನೂರನೆಯ ಸಂಧಿ ಮುಗಿದುದು.

ಹ ದಿ ನಾ ಲ್ಕ ನೆ ಯ ಸಂ ಧಿ .

ಸೂಚನೆ.

ಅಡವಿಯಲಿ ಫಣಿಭೋಗದಲಿ ಬಿಗಿ
ವೊಡೆದು ಬಳಲಿದ ಭೀಮಸೇನನ
ಬಿಡಿಸಿದನು ಯಮಸೂನು ಧರ್ಮಕಥಾಪ್ರಸಂಗದಲಿ ॥

ಕೇಳು ಜನಮೇಜಯ ಧರಿತ್ರೀ
ಪಾಲ ಪಾಶುಪತಾಸ್ತ್ರವೇದದ
ಪಾಳಿಯುಚ್ಚರಣೆಯಲಿ ತತ್ಪ್ರಣವಸ್ವರೂಪವನೆ ।
ಮೇಳವಿಸಿತರುಣಾಂಶು ಪೂರ್ವದಿ
ಶೈಲತಾಂಗಿಯ [3] ಶಿರದ ಮೌಳಿಯ
ಬಾಲಮಣಿ ಕಂಡಂತೆ ವೆಳ್ಳೆದುದು ಬಿಂಬ ದಿನಮಣಿಯ [4] ॥ ೧

---

1 ....ಧನಂಜಯಂ ವೆರಸಿ ಪರ್ಣದಚೌಕಿಗೆಯಲಿ ಮುನೀಂದ್ರ ಮೇಳದಲಿ, ಚ.
2 ಬಲಿ, ಚ.
3 ಮಂಡನೋಚಿತ, ಚ.
4 ಮೌಳಿಸೂಣಕವೆನಲು ವೆಜ್ಜೆದುದು ಬಿಂಬ ದಿನಮಣಿಯ, ಚ.

ಅರಸನುಪ್ಪವಡಿಸಿದನೆದ್ದನು
ವರವೈಕೋದರನರ್ಜುನನ ದೃಗು
ಸರಸಿರುಹವರಳಿದುವು ಮೊದ್ರೀಸುತರು ಮೈಮುರಿದು ।
ಹರಿಯು ನೆನೆಸರು ನಿದ್ರೆ ತಿಳಿದುದು
ಪರಿಜನಕೆ ಮುನಿನಿಕರವಿದ್ದುದು
ತರಣಿ ಸಂಧ್ಯಾಸಮಯಸತ್ಕೃತಿಜಪಸಮಾಧಿಯಲಿ ॥ ೦

ಮುನಿಜನಕೆ ಕೈಮುಗಿದು ಯಮನಂ
ದನನ ಪಾದಕ್ಕೆರಗಿ ಶಂಭುವ
ನೆನೆದು ಗವಸಣಿಗೆಯಲಿ ತೆಗೆದನು ಗರುವೆ ಗಾಂಡಿವವ ।
ಜನಪ ಕೇಳ್ಕೃಷ್ಣೆ ಕೊಪ್ಪಿನಲಿ ಸಿಂ
ಜಿನಿಯ ಸಿಕ್ಕಿದನಳ್ಳಿರಿದು ಮಾ
ರ್ಗನಿ ದಿಗಂತರವೊದಱಲೊದಱಿಸಿದನು ಮಹಾಧನುವ ॥ ೧

ಘೋರರತಲಯಭೈರವನ ಹೂಂ
ಕಾರವೋ ಸಂಹಾರ ಸುತಿಯೋಂ
ಕಾರವೋ ಕಲ್ಪಾಂತತಾಂಡವವೇದಪಂಡಿತನ ।
ಆರುಭಟಿಯೋ ಮೇಣ್ ತ್ರಿವಿಕ್ರಮ
ವೀರಪದಭಿನ್ನಾಬ್ಜಜಾಂಡಕ
ತೋರರವವೆನೆ ಮೊಱೆದುದರ್ಜುನಚಾಪಟಂಕಾರ ॥ ೪

ಏನಿದದ್ಭುತರವವೆನುತ ವೈ
ಮಾನಿಕರು ನಡುನಡುಗಿದರು ಗ
ರ್ವಾತಿಶಯ ಗತವಾಯ್ತಲೇ ಗಜಪುರದ ಗರುವೆರಿಗೆ ।
ಆನಿರುತಿಯಮವೆರುಣವಾಯುಕೃ
ಶಾನುಧನಪಮಹೇಶರೈತರ
ಲಾನೆಯಲಿ ಹೊಱವಂಟನಂಬರಗತಿಯಲಮರೇಂದ್ರ ॥ ೫

ನೆಱೆದುವಭ್ರದೊಳಮರಗಣ ಮುನಿ
ವರರು ಸಹಿತ ಯುಧಿಷ್ಠಿರಾದಿಗ
ಳರಡುವೆಂಕವೆ ಹೊದ್ದಿದರು ಹರಿತನಯನೆಡಬಲವೆ ।
ತರುನಿಕರ ಗಿರಿನಿಚಯವೆಲ್ಲಿಯ
ಪರಿಜನವೆ ತಱುಬಿದುಯು ತನಗಿದ
ನರಸ ಬಣ್ಣಿಸಲಳವೆ ನರನ ಮಹಾಸ್ತ್ರನಾಟಕವೆ ॥ ೬

ಮೊದಲಲ್ಲಿಂದ್ರ [1] ಮಹಾಸ್ತ್ರವನು ಹೂ
ಡಿದನು ಹೊಗೆದುದು ಭುವನದಿಕ್ಕುಗ
ಳೂದಱುವು ಪಂಥಿಸಿತು ರವಿರಥ ಗಗನಮೊರ್ಗದಲಿ ।
ಉವಧಿ ಯುವಧಿಯು ತೆಱೆಯು ಗಂಟಿ
ಕ್ಕಿದುವು ಹರ ಹರ ಶೇಷಬಾರದ
ಹೊದರು ಹೊದಿಸಿತು ಕೀಳುಮೇಲಣ ಜಗವ ಪಂತಿಗಳ ॥ ೭

ಅಹಹ ಬೆಂದುದು ಭುವನವಿದು ವಿ
ಗ್ರಹದ ಸಮಯವೆ ತಮ್ಮ ಲೀಲೆಗೆ
ಕುಹಕಮತಿಗಳು ತಂದರೈ ತ್ರೈಜಗಕೆ ತಲ್ಲಣವ ।
ರಹವಿದೇನೆಂದಭ್ರತಳದಿಂ
ಮಹಿಗೆ ಬಂದನು ದೇವಮುನಿ ದು
ಸ್ಸಹವಿದೇನೈ ಪಾರ್ಥ ಹೋ ಹೋ ಸಾಕು ಸಾಕೆಂದ ॥ ೮

ತೊಡಚದಿರು ಬ್ರಹ್ಮಾಸ್ತ್ರವಿದು ಬಾಯ್
ಗಡಿಯನಿದು ನಿಮಿಷದಲಿ ಭುವನವ
ನಡುಗಿ ತಣಿಯದಿದೊಂದು ಮೃತ್ಕೀಶಾಂಭವಾದಿಗಳ ।
ತೊಡಚದಿರು ಸಂಹಾರಸಮಯವ
ನೆಡೆಯಲನುಭವಿಸುವುದು ಜಗವಿದು
ಕೆಡಿಸದಿರು ಕೆಡಿಸದಿರು ತೆಗೆ ತೆಗೆ ಯೆಂದನಾಮುನಿಪ ॥ ೯

---

[1] ಮೊದಲೊಳನಲ, ಚ.

ಲಕ್ಷ್ಯವಿಲ್ಲದೆ ತೊಡಕುವರೆ ನಿ
ರ್ಲಕ್ಷ್ಯಶರವೇ ನೀನುಪಾರ್ಜಿಸಿ
ತಕ್ಷಯವಲಾ [1] ಪಾರ್ಥ ಗಣನೆಯ ಗುತ್ತಿನಂಬುಗಳ ।
ಶಿಕ್ಷೆ ರಕ್ಷೆಗೆ ಬಾಣವೊಂದೇ
ಲಕ್ಷ್ಯವಿದು ನೀನಱಿಯದುದಕೆ ವಿ
ಲಕ್ಷ್ಯನಾದೆನು ತಾನೆನುತ ಮುನಿ ನುಡಿದನರ್ಜುನಗೆ ॥ ೧೦

ಹರಮೆಹಾಸ್ತ್ರಾದಿಗಳ ಲೀಲೆಯ
ನರಸ ನೋಡಲು ಬೇಹುದಾದೊಡೆ
ಬೆರಸುವುದು ತತ್ಸಮಯ ಸೈರಿಸು ನೃಪನ ಕಣ್ಮನವ ।
ಹೊಱುವೆ ಹೇರಾಳದ ಮಹಾಸಂ
ಗರವಹುದು ಮುಂದಣಕಥಾವಿ
ಸ್ತರವ ವಿರಚಿಸಬಾರದನುಚಿತವೆಂದನಾಮುನಿಪ ॥ ೧೧

ಅರಸ ಕೇಳ್ಕ ನಾರದನ ನುಡಿ
ಗುರುತರವೆಲೇ ಪಾರ್ಥ ನಾಬಿಲು
ದಿರುವೆ ಮಗುಚಿಬಹಿವನು ಮುನಿಪನ ಮಾತ ಮನ್ನಿಸಿದ ।
ಹರದುದಮರರ ಮೇಲೆ ನೋಡುವ
ನೆರವಿ ದಿಗುಪಾಲಕರು ನಿಜಮುಂ
ದಿರಕೆ ಸರಿದರು ದೇವಮುನಿ ಹಾಯಿದನು ಗಗನದಲಿ ॥ ೧೨

ಇವರು ಕಾಮ್ಯಕಕಾನನವನನು
ಭವಿಸಿ ಬಟ್ಟಿಕಲ್ಲಿಂದ ಹೊಱುವಂ
ಟವಗಡೆಯ ಪರ್ವತಕೆ ಬಂದರು ಯಾಮುನಾಹ್ವಯದ ।
ದಿವಿಜರಿಪು ಹೈಡಿಂಬನಾತುದಿ
ಗವರನೇಱಿಸಿದನು ತದಗ್ರದ
ಲವನಿಪತಿ ಕೆಲದಿವಸವಿದ್ದಲ್ಲಿಂದ ಹೊಱುವೆಂಟ ॥ ೧೩

---

[1] ದಕ್ಷರವಲೇ, ಕ.

ಅರಸ ಕೇಳ್ಕ್ಕಾರ್ತಿಕೇಯನ
ವರಮಹಾಶ್ರಮಕ್ಕೈದಿದನು ಮುನಿ
ವರರು ಸಹಿತೊಲನಿನಲಿ ನೂಕಿದನೊಂದುವತ್ಸರವ ।
ಧರಣಿಪತಿ ಬೃಹದಶ್ವನಾಶ್ರಮ
ವರಕೆ ಬಂದನು ತೀರ್ಥಸೇವಾ
ಪರಮಪಾವನಕರಣನಿದ್ದನು ಪರ್ಣಶಾಲೆಯಲಿ ॥ ೧೩

ಬಂದನೊಬ್ಬನು ಪವನಸುತನ ಪು
ಳಿಂದನಟವೀತಟದ ಖಗಮೃಗ
ವೃಂದದಿಕ್ಕೆಯ ಹಕ್ಕೆಯಾಡುಂಬೊಲದ ಸೋಹೆಗಳ ।
ನಿಂದ ನೆಲೆ ನಿರ್ದಾಣ ಹೆಜ್ಜೆಗ
ಳಿಂದ ಭೇದಿಸಿ ಕಂಡೆ [1] ಚಿತ್ತೈ
ಸೆಂದು ವಿನ್ನಪ ಮಾಡುತಿರ್ದನು ಭೀಮಸೇನಂಗೆ ॥ ೧೪

ಇದೆ ಮಹಾಕಾನನವು ನಸು [2] ದೂ
ರದಲಿ ವೈಕಶಾದ್ರ್ಯಲಕೇಸರಿ
ರದನಿಕಳಭಕ್ರೋಡಶಿಖಿಶೂಲಾಯುಸಾರಂಗ ।
ಮದದ ರಹಿಯಲಿ ಮಾನಿಸರು ಸೋಂ
ಕಿದರು ಸೆಡೆಯವು ಹೊಲನ ಹೊದರಿ
ಕ್ಕಿದುವು ದೀಹದ ಹಿಂಡಿನಂತಿರೆ ಜೀಯ ಚಿತ್ತೈಸು ॥ ೧೫

ಮೇಹು ಗಾಡಿನೊಳಂಬರ ವ್ಯೆವೆಗೆ
ಸೋಹಿದರೆ ಸೂವಲೆಯ ಸುಬ್ಬಲೆ
ಯಾಹವೆದಲೇ ತೋಳತೆಕ್ಕೆಯ ತೋಟ ತೇಗುವೊಡೆ ।
ತೋಹಿನಲಿ ತೊದಳಾಗಿ ಗೋರಿಯ
ಗಾಹಿನಲಿ ಗುಳು ಗಡಬಡಿಸೆ ಪುಲು
ಸಾಹಸಕಂಜುವೆವು ನೀನೇಟೆಂದನಾಶಬರ ॥ ೧೬

---

1 ಜೀಯ, ಚ. 2 ಕಾಂತಾರವತಿ, ಚ.

ಕಂಡ ಮೃಗ ಮೈದೆಗೆಯದಿಕ್ಕೆಯು
ಹಿಂಡು ಹೊಳಹಿನ ಹುಲಿಯ ಕರಡಿಯ
ಮಿಂಡವೆಂದಿಯ ಲಾವಣಿಗೆಯ ಲುಲಾಯಲಾಲನೆಯ ।
ತೊಂಡು ಮೊಲನ ತೊಡಂಕುನವಿಲಿನ
ಮಂಡಲಿಯ ಮೇಳವ ಖಡ್ಗಿಯ
ಹಿಂಡುಗಳ ತೋಱಿಸುವೆನೇಟೆಂದನನಿಲಜನ ॥ ೧೪

ಅಂಗ ಚಿತ್ತವನಿತ್ತನಾಶಬ
ರಂಗೆ ಬಲೆಗಳ ತೆಗಿಸಿದನು ಹಸು
ರಂಗಿಯನು ತೊಟ್ಟನು ಛಡಾಳಿಸೆ ಪದದೊಳಕ್ಕಡವೆ ।
ಸಿಂಗಶರಭವೆನಳವಿಗೊಡಲವ
ರಂಗಳಿಯಲಡುಪಾಯಲೊಡಿಯ
ಜಂಗುಳಿಯ ಜೋಡಿಸಿದರಂದು ಜವಾಯ್ಲ ಜಾಯಿಲನ ॥ ೧೫

ಮಡಿದ ಕೊಡಕೆಗಳೂಡ್ಡಿದುರದೊ
ಪ್ಪಿಡಿಪುನಡುನ ಕೊಂಕಿದುಗುರಿನ
ಕಡುಮನದ ನಿರ್ಮಾಂಸಜಂಘೆಯ ಕೆಂಪಿನಾಲಿಗಳ ।
ಸಿಡಿಲಘನಗರ್ಜನೆಯು ಗಗನವೆ
ತುಡುಕುವಾಕುಳಿಕೆಗಳ ಮೊರಹಿನ
ವಿಡುಕುಗಳ ನಾಯ್ ನೂಕಿದುವು ಹಾಸದ ವಿಳಾಸದಲಿ ॥ ೧೦

ಹೆಸರನಾಯ್ಗಳ ಹಾಸಹರಿದು
ಬ್ಬಸದಲುತ್ತರಿಗರಿದು ಹಿಡಿವೈಗ
ಮುಸಗಿದುವು ಹದವಿಲುಗಳೂದಿದುವು ಪೆದೆಯ ಹರಹಿನಲಿ ।
ನುಸುಳಿದುವು ಮೊಲನುರಿಯ ಹೊಗೆಗಳ
ದೆಸೆವಿಡಿದು ಕೆದಱಿದುವು ಹೊಲದಲಿ
ಹಸುಬಹರಡಿಗಳೀನನೆಂಬೆನು ಶಕುನಸೂಚನೆಯ ॥ ೧೧

ಬಗೆಯನವಶಕುನವ ಮೃಗವ್ಯೆದ
ಸೊಗಡಿನಲಿ ಸಿಲುಕಿದಮನೋವೃ
ತ್ತಿಗಳೊಳಾಂಟಿ ವಿವೇಕಧರ್ಮ ವಿಚಾರವಿಸ್ತಾರ ।
ಹೊಗರೊಗುವ ಹೊಂಗರಿಯ ಬಿಲುಸರ
ಳುಗಳ ಹೊದೆನಡೆದುದಡವಿಯ
ಬೆಗಡುಗೊಳಿಸಿತು ಮುಂದೆ ಪುಳಿಂದಸಂದೋಹ ॥ ೦೦

ಭಂಡಿಗಳ ಬೆಳ್ಳಾರವಲೆಗಳ
ಖಂಡವಲೆಗಳ ತಡಿಕೆವಲೆಗಳ
ಗುಂಡುವಲೆಗಳ ಬೀಸುವಲೆಗಳ ಕಾಲುಕಣ್ಣಿಗಳ ।
ದಂಡಿವಲೆಗಳ ತೊಡಕುವಲೆಗಳ
ಹಿಂಡುವಲೆಗಳ ನುಯಣದಂಟಿನ
ವಂಡವಿಗೆವಲೆಗಳ ಕಿರಾತರು ಕೆದಹುತಗಲದಲಿ ॥ ೦೫

ಏನನೆಂಬೆನು ಭೂಪ ಹೊಕ್ಕನು
ಕಾನನವನನಿಲಜನು ಶಬರವಿ
ತಾನವಿಕ್ಕಿದ ವೇಡೆಗಳ ಬೆಳ್ಳಾರಸುತ್ತುಗಳ ।
ಕಾನನದ ಹಳ್ಳದ ಶಿಲೋಚ್ಚಯ
ಸಾನುಗಳ ಗಹ್ವರದ ಗಂಡ
ಸ್ಥಾನದೀರ್ಘದ್ರೋಣಿಗಳಲಱಸಿದರು ಮೃಗಕುಲವ ॥ ೦೪

ಕಳಚಿ ಹಾಸವನಬ್ಬರಿಸಿ ಕು
ಪ್ಪಳಿಸಿ ಕಂಠೀರವನ ಮೋಹೆಗೆ
ನಿಲುಕಿ ಕವಿದುವು ಬಿದ್ದು ಹಾಯ್ದುವು ಹಣುಗಿ ತುಡುಕಿದುವು ।
ಸೆಳೆದುವುಡಿದುಕ್ಕಳಿಸಿ ಯೆಡಬಲ
ಬಳಸಿದುವು ಮೇಲ್ವಾಯ್ದು ನಿಂದು
ಚಳಿಸಿದುವು ಕುಸುಬಿದುವು ಕುನ್ನಿಗಳಖಿಳಮೃಗಕುಲವ ॥ ೦೫

ಬೇಟೆಯಾಡುವಾಗ ಮೃಗಗಳು ಇದ್ದ ಕ್ರಮ.

ಬೊಬ್ಬೆಗಳ ಪಟಹದ ಮೈದಂಗದ
ಸರ್ಬಲಗ್ಗೆಯ ಸೋಹಿನಲಿ ಸುಟಿ
ವೆಬ್ಬರಕೆ ಹಿಂಡೊಡೆದು ಹಾಯ್ದುವು ಸೂಸಿ ದೆಸೆದೆಸೆಗೆ ।
ತೆಬ್ಬಿದುವು ಬೆಳ್ಳಾರವಲೆ ಹರಿ
ದುಬ್ಬಿ ಹಾಯ್ದರೆ ವೇಡೆಯವರಿಗೆ
ಹಬ್ಬವಾಯ್ತೀನೆಂಬೆನಗಣಿತಮೃಗನಿಘಾತನವೆ ॥ ೦೪

ಹೊಕ್ಕು ತಿವಿದರು ಸಬಳದಲಿ ಜಡಿ
ವೆಕ್ಕಲನನಳವಿಯಲಿ ಹರಿಣನ
ನಿಕ್ಕಿದರು ನಾರಾಚದಲಿ ಸೈವೆರಿದು ಸೈರಿಭನ ।
ಸೊಕ್ಕಿದರು ಸುರಿಗಿಯಲಿ ಹೊದಱಿಲಿ
ಹೊಕ್ಕು ಹುಲಿಗಳ ಕೆಣಕಿ ಖಡುಗದ
ಲಿಕ್ಕಡಿಯ ತೋಱಿದರು ತೂಱಿದರಖಿಳಮೃಗಕುಲವೆ ॥ ೦೫

ಗಾಯವೆಡೆದೆಕ್ಕಲನ ರಭಸದ
ಜಾಯಿಲನ ಗಳಗರ್ಜನೆಯ ಪೂ
ರಾಯದೇಱಿನ ಕರಡಿ ಕಾಡಾನೆಗಳ ಕಳಕಳದ ।
ನೋಯಲೊಱಲುವ ಶರಭಸಿಂಹಲು
ಲಾಯವೈಕಶಾರ್ದೂಲಶಶಗೋ
ಮಾಯುವೊದಲಾದಖಿಳಮೃಗರವ ತುಂಬಿತಂಬರವೆ ॥ ೦೬

ಮುಳುದೊಡಕಿನೊಳು ಕೂದಲೊಂದೇ
ಸಿಲುಕಿ ನಿಂದುವು ಚಮರಿಮೃಗ ಮೆಱಿ
ಗಳಿಗೆ ಮೊಲೆಗೊಡುತಿರುಕಿನಲಿ ಹುದುಗಿದುವು ಹುಲ್ಲೆಗಳು ।
ಎಳವೆಱಿಯ ನಡೆಗಲಿಸಿ ನಿಂದುವು
ಮೆಲೆತು ಸಿಂಹದ ವಿಥುನ ಹಿಂಡಿನ
ಕಳಭವೆನು ಹಿಂದಿಕ್ಕಿ ವೆನಕರಿ ತೂಡಿದುವು ಪಡೆಯ ॥ ೦೭

ಭೀಮಸೇನನು ಸಿಂಹಾದಿಗಳನ್ನು ಕೊಂದುದು.

ಪಡೆ ಬೆದಱೆ ಪಡಿತಳಿಸಿ ಪವನಜ
ಹಿಡಿದು ಬೀಸಿದನಾನೆಗಳನವೆ
ಗಡಿಸಿ ಸಿಂಹವೆ ಸೀಳಿದನು ಹೊಯ್ದೆತ್ತುವೆಕ್ಕಲನ ।
ಮಡದಲುಱೆ ಫಳ್ಳಿಸಿದ ಮುಷ್ಟಿಯೊ
ಳಡಸಿ ತಿವಿದನು ಹುಲಿಯ ಕರಡಿಯ
ಕೊಡಹಿದನು ಕೊಂದನು ವನಾಂತದೊಳಖಿಳಮೃಗಕುಲವ ॥ ೩೦

ಆಗ ಒಂದು ಹಂದಿ ತಪ್ಪಿಸಿಕೊಂಡು ಅರಣ್ಯದಲ್ಲಿ ಓಡಿದುದು.

ಈತನುಱುಬೆಗೆ ಬೆದಱಿತುರುಸಂ
ಘಾತದಲಿ ಹೆಬ್ಬಂದಿಯೊಂದು ವಿ
ಘಾತದಲಿ ಹಾಯ್ದುದು ಕಿರಾತವ್ರಜವನೊಡೆದುಟ್ಟಿದು ।
ಈತನಱಿಯಲ್ಕಟ್ಟಿದನು ಶಬರ
ವ್ರಾತವೃಂದವು ಹಿಂದೆ ಭೀಮನ
ಭೀತಿಯಲಿ ಹೊಕ್ಕುದು ಮಹಾಗಿರಿಗಹನಗಹ್ವರವ ॥ ೩೧

ಮುಡುಹು ಸೋಂಕಿದೊಡುಲಿದು ಹೆಮ್ಮರ
ನುಡಿದು ಬಿದ್ದುವು ಪಾದಘಾತದೊ
ಳಡಿಗಡಿಗೆ ನೆಗ್ಗಿದುದು ನೆಲನುಬ್ಬರದ ಬೊಬ್ಬೆಯಲಿ ।
ಜಡಿದುದಬುಜಭವಾಂಡವೆನಲವ
ಗಡೆಯ ಭೀಮನ ಕಳಕಳಕೆ ಕಿವಿ
ಯೊಡೆಯೆ ತೀದುದು ನಿದ್ರೆ ಮುಱಿದೆಕ್ಕೆಯ ಮಹೋರಗನ ॥ ೩೨

ಅದನ್ನು ಅಟ್ಟಿಕೊಂಡು ಹೋದಾಗ ಸರ್ಪವು
ಭೀಮನನ್ನು ಹಿಡಿದುದು.

ತೆಕ್ಕೆ ಸಡಲಿತು ತಱುಗೆಲೆಯ ಹೊದ
ಱಿಕ್ಕಲಿಸೆ ಮೈಮುಱಿಯಲನಿಲಜ
ನೆಕ್ಕತುಳದಲಿ ಮೇಲೆ ಹಾಯ್ದನು ಕಾಣದಹಿಪತಿಯ ।

ಸಿಕ್ಕಿದುವು ಹೆದ್ದೊಡೆಗಳುರಗನ
ತೆಕ್ಕೆಯಲಿ ಡೆಂಥಣಿಸಿ ಫಣಿಪತಿ
ಡೊಕ್ಕರಕೆ ಹಬ್ಬಿದನು ಬಿಗಿದನು ಭಟನ ಹೇರುರವೆ ॥ ೩೫

ಅದನ್ನು ಬಿಡಿಸಲು ಮಾಡಿದ ಭೀಮನು ಪ್ರಯತ್ನ
ವ್ಯರ್ಥವಾಗುವಿಕೆ.

ಝಾಡಿಸಲು ಝಾಡಿಸಲು ಬಿಗುಹತಿ
ಗಾಢಿಸಿತು ಕೊಡಹಿದೊಡೆ ಮಿಗೆ ವೈ
ಗೂಡಿ ಬಿಗಿದುದು ಭುಜಗವಳಯದ ಮಂದರಾದ್ರಿಯೆನೆ ।
ರೂಢಿಸಿದ ಭುಜಬಲದ ಸಿರಿಯೆ
ಕ್ಕಾಡಿತೇ ತನಗೆನುತ ಖಾಡಾ
ಖಾಡಿಯಲಿ ಕಾತರಿಸಿ ಕಳವಳಿಸಿದನು ಕಲಿಭೀಮ ॥ ೩೬

ಭಟ ಮರಳ ಸಂತೈಸಿ ಕೊಂಡಟ
ಮಟಿಸಿ ಗದೆಯಲಿ ಹೊಯ್ದು ಬಿಗುಹಿನ
ಕಟಕವನು ಬಿಚ್ಚಿದನು ಹೆಚ್ಚಿದನುಬ್ಬಿ ಬೊಬ್ಬಿಡುತ ।
ಪುಟದ ಕಂತುಕದಂತೆ ಫಣಿ ಲಟ
ಕಟಿಸಲೌಕಿತು ಮತ್ತೆ ಗಿಡಗನ
ಪುಟದ ಗಿಳಿಯಂದದಲಿ ಗಿರಿಗಿರಿಗುಟ್ಟಿದನು ಭೀಮ ॥ ೩೭

ಆಗ ಅಪಶಕುನಸೂಚನೆಯಿಂದ ಅರಣ್ಯಕ್ಕೆ ಧರ್ಮ
ರಾಯನು ಬಂದುದು.

ಅರಸ ಕೇಳಿತ್ತಲು ಮಹೀಶನ
ಹೊರೆಯಲಾಯ್ತುತ್ಪಾತಶತ ನಿ
ಷ್ಠುರವಿದೇನೋ ದೈವಕೃತಫಲವಾವುದಿದಕೆನುತ ।
ಕರೆಸಿ ಧೌಮ್ಯಂಗಱುಹಲಿದು ನ
ಮ್ಮರಸುಗಳಿಗಪಘಾತಸೂಚಕ
ವಱಿದಿದಱ ನಿರ್ಘಾಹವೆಂದರೆ ನೃಪತಿ ಚಿಂತಿಸಿದ ॥ ೩೮

ಭೀಮೆನಾವೆಡೆಯೆನೆ ಕಿರಾತ
ಸ್ತ್ರೀಮಸಹಿತ ಮೃಗವ್ಯಕೇಳೀ
ಕಾಮನೈದಿದನೆನಲು ನೃಪ ಹೊಱವಂಟನಾಹ್ನಣಕೆ ।
ಭೂಮಿಸುರರೊಡನೈದಿ ಬರೆ ಸಂ
ಗ್ರಾಮಧೀರನ ಹೆಜ್ಜೆ ವಿಡಿದು ಮ
ಹೀಮೆನೋಹರನಱಿಸಿ ಹೊಕ್ಕನು ಘೋರಕಾನನವ ॥ ೩೯

ವನದಲ್ಲಿ ಸರ್ವಾಂತಕನಾದ ಭೀಮನ ದರ್ಶನ.

ಹುದುಗಿದಗ್ಗದ ಸತ್ವದುತ್ಸಾ
ಹದ ನಿರೂಢಶ್ವಾಸದಲಿ ಗದು
ಗದಿಪಕಂಠದ ತಳಿತಭಂಗದ ತಿರುಗುವಾಲಿಗಳ ।
ಹೆದರದೆಯು ಹೇರಾಳಶೋಕದ
ಕೆದಱುಗೇಶದ ಕೆಳಕೆ ಜೋಲಿದ
ಗದೆಯ ಗರುವಾಯುಚ್ಚಿದ ಭೀಮನ ಕಂಡನವನೀಶ ॥ ೪೦

ಅದಕ್ಕೊಸ್ಕರ ರಾಯನ ಚಿಂತೆ.

ಅಕಟ ಹಿಂದನುಭವಿಸಿದೆವು ಕಂ
ಟಕ ಹಲವನೀಪರಿಯು ಬಲುಕಂ
ಟಕ ವಾಸಾಕರ್ದಮದೊಳದ್ದಿತೆ ವಿಧಿ ಮಹಾದೇವ ।
ವಿಕಟಮದನಾಗಾಯುತತ್ರಾ
ಣಕನ ಸಾಹಸವಡಗಿತೇ ವನ
ವಿಕಟಭುಜಗಾಟೋಪ ಠಾಳಿಯೊಳೆಂದು ಚಿಂತಿಸಿದ ॥ ೪೧

ಏನು ಕುಂತೀಸುತನಪಾಯವ
ದೇನು ಫಣಿಬಂಧದ ವಿಧಾನವಿ
ದೇನು ನಿನಗೆ ವಿನೋದವೋ ತ್ರಾಣಾ [1] ಪಚಯವಿಧಿಯೊ ।

---

[1] ಪ್ರಾಣಾ, ಚ.

ಏನಿದಕೆ ಕರ್ತವ್ಯ ನವುಗೀ
ಹೀನದೆಸೆಗೆ ನಿಮಿತ್ತ ದುಷ್ಕೃತ
ವೇನು ಶಿವ ಶಿವ ಯೆನುತ ನುಡಿಸಿದನನಿಲನಂದನನ ॥ ೪೦

ನೋಡಿದನು ಕಂದೆಱಿದು ಕಂಠಕೆ
ಹೂಡಿದುರಗನ ಸ್ಫೋರಬಂಧದ
ಗಾಢದಲಿ ನುಡಿ ನೆಗ್ಗಿ ನುಡಿದನು ಬೆರಳ ಸನ್ನೆಯಲಿ ।
ಖೇಡನಾದನಜಾತರಿಪು ಮೊ
ತಾಡಿದನಹಿಪತಿಯ ನೆಲೆ ನಾ
ಡಾಡಿಗಳ ನಾಟಕದ ಫಣಿಯಲ್ಲಾರು ಹೇಪೆಂದ ॥ ೪೩

ಆ ಸರ್ಪವನ್ನು ಕುರಿತು ಧರ್ಮರಾಯನ ಪ್ರಶ್ನೆ.

ಅನಿಲಸುತನಪರಾಧಿಯೋ ನೀ
ವಿನಯಹೀನನೊ ಮೇಣು ಪರಪೀ
ಡನವೃಥಾದುಷ್ಕರ್ಮಸಂಗ್ರಹ ಬೇಹುದೇ ನಿನಗೆ ।
ದನುಜನೋ ಗಂಧರ್ವನೋ ಯ
ಕ್ಷನೊ ಸರೀಸೃಪರೂಪದಿವಿಜೇಂ
ದ್ರನೊ ನಿಧಾನಿಸಲಖಿಯೆ ನೀನಾರೆಂದನವನೀಶ ॥ ೪೪

ಕೇಳಿದನು ಫಣಿ ಭೀಮಸೇನನ
ಮೌಳಿ ತಲ್ಪದ ತಲೆಯ ಹೊಳಹಿನ
ನಾಲಗೆಯ ಚೂರಣದ ಝಡಿತೆಗೆ ಚಲಿಸುವಾಲಿಗಳ ।
ಮೇಲುವೊಗದಲಿ ನೃಪನ ನುಡಿಗಳ
ನಾಲಿಸುತ ನುಡಿದನು ಕರಾಳಾ
ಭೀಳದಂಷ್ಟ್ರಾಂತರವಿಸಂಸ್ಥುಳಜಿಹ್ವೆಗಳ ಜಡಿದು ॥ ೪೫

ಆಗ ಸರ್ಪದ ಉತ್ತರ.

ಏನಹನು ನಿನಗೀತ ನೀನಾ
ರೇನು ನಿನ್ನಭಿಧಾನ ವಿಪ್ರನ
ಸೂನುವೋ ಕ್ಷತ್ರಿಯನೊ ವೈಶ್ಯನೊ ಶೂದ್ರಸಂಭವನೊ ।

ಏನು ನಿನಗೀಬನಕೆ ಬರವು ನಿ
ದಾನವನು ಹೇಚೆನಲು ಕುಂತಿಯ
ಸೂನು ನುಡಿದನು ತನ್ನ ಪೂರ್ವಾಪರದ ಸಂಗತಿಯ ॥ ೪೬

ಸೋಮವಂಶಪರಂಪರೆಯಲು
ದ್ದಾಮಪಾಂಡುಕ್ಷಿತಿಪ ಜನಿಸಿದ
ನಾಮಹೀಶನ ಸುತಯುಧಿಷ್ಠಿರನೆಂಬುದಭಿಧಾನ ।
ಭೀಮನೀತನು ಪಾರ್ಥನಕುಲಸ
ನಾಮಸಹದೇವಾಖ್ಯಪಾಂಡವ
ನಾಮಧೇಯರು ನಾವೆ ಯೆಂದನು ಭೂಪನಾಫಣಿಗೆ ॥ ೪೭

ಬೀತುದಖಿಳೈಶ್ವರ್ಯ ಕಪಟ
ದ್ಯೂತದಲಿ ಕೌರವರು ಕೊಂಡರು
ಭೂತಳದಲೆಮೆಗಾಯುತ್ತು ಬಟಿಕಟವೀಪರಿಭ್ರಮಣ ।
ಈತನೆನ್ನೊಡಹುಟ್ಟಿದನು ನೀ
ನೀತನನು ಬಿಡಬಹೊಡೆ ಬಿಡು ವಿ
ಖ್ಯಾತರಿಗೆ ಪರಪೀಡೆ ಧರ್ಮ-ವಿನಾಶಕರವೆಂದ ॥ ೪೮

ಆದೊಡೆಲೆ ಧರಣೀಶ ಧರ್ಮವ
ನಾದರಿಸುವೈ ಧರ್ಮವೆಂಬುದು
ವೇದಮಾರ್ಗವಲೈ ಸುಧರ್ಮದ ಸಾರಸಂಗತಿಯ ।
ಕೈದುವುಳ್ಳೊಡೆ ಕಾದು ನಿನ್ನಯ
ಸೋದರನ ಬಿಡುವೆನು ಮನಃ ಪರಿ
ಖೇದವನು ಬಿಸುಟೆನ್ನು ಧರ್ಮರಹಸ್ಯವಿಸ್ತರವ ॥ ೪೯

ಉಸುರಬಹುದೈ ಧರ್ಮತತ್ತ್ವ
ಪ್ರಸರಣವಿದೇ ಯೆಂದು ನೀ ಶಂ
ಕಿಸಲು ವೇದಸ್ಮೃತಿಪುರಾಣತ್ರಾಣ ತುಟ್ಟಿಸದೆ ।

ಎಸೆವ ವಿಪ್ರರ ಮತಿಗೆ ಸಂಭಾ
ವಿಸುವ ಧರ್ಮವನಱುಹುವೆನು ನೀ
ಬೆಸಸೊಳಂದನು ಧರ್ಮಸುತ ನಹುಷಂಗೆ ವಿನಯದಲಿ ॥ ೪೦

ಧರ್ಮದ ವಿಷಯದಲ್ಲಿ ಸರ್ಪದ ಪ್ರಶ್ನೆ.

ಎಸೆವ ವಿಪ್ರರ ಮತಿಗೆ ಸಂಭಾ
ವಿಸುವ ಧರ್ಮಸ್ಥಿತಿಯನಭಿವ
ರ್ಣಿಸುವೆನೆಂದೈ ಭೂಮಿಪತಿ ಭೂದೇವಕುಲದೊಳಗೆ।
ಎಸೆವ ವಿಪ್ರನದಾರು ಪರಿಶೋ
ಭಿಸುವುದೀ ಬ್ರಾಹ್ಮಣ್ಯವೇತಱ
ದೆಸೆಯೊಳಿದನೇ ಮುನ್ನ ಹೇಳೆನೆ ರಾಯನಿಂತೆಂದ ॥ ೪೧

ಧರ್ಮರಾಯನ ಉತ್ತರ.

ಉರಗ ಕೇಳ್ ಪಿತೃಮಾತೃವಂಶೋ
ತ್ಕರವಿಶುದ್ಧಸದಾಗ್ನಿಹೋತ್ರಾ
ಚರಿತವಾಸ್ವಾಧ್ಯಾಯ ಸತ್ಯಮಹಿಂಸೆ ಪರಿತೋಷ।
ವರಗುಣಂಗಳಿವಾವನಲಿ ಗೋ
ಚರಿಸಿತಾತನೆ ವಿಪ್ರನೆಂಬರು
ಹಿರಿಯರೆಂದನು ಧರ್ಮಸುತ ನಹುಷಂಗೆ ವಿನಯದಲಿ ॥ ೪೨

ಆಯಿತಿದು ಮತವಾದುದೈ ಸ್ವಾ
ಧ್ಯಾಯವೆಂಬುದದೇನು ಸತ್ಯದ
ಕಾಯವಾವುದಹಿಂಸೆ ಪರಿತೋಷಂಗಳದೇನು।
ರಾಯ ಹೇಳೆಂದಱಿರವ ನಿಜಗುಣ
ದಾಯತವನೆನೆ ಧರ್ಮವತಿರಮ
ಣೀಯವೆನೆ ನಹುಷಂಗೆ ನಿವರಿಸಿದನು ಮಹೀಪಾಲ ॥ ೪೩

ನಿಯತವೀಶ್ರೋತ್ರಾದಿಸಂಚೇಂ
ದ್ರಿಯದ ನಿಗ್ರಹ ದಮವೆನಿಪ್ಪುದು
ಭಯವನಿತರರಿಗಾಚರಿಸದಿಹುದೇ ಯಹಿಂಸೆ ಕಣಾ ।
ನಯವಿದನೆ ಚಿತ್ತವಿಸು ಲೋಕ
ತ್ರಯವನೊಂದೇ ಸತ್ಯದಿಂದವೆ
ಜಯಿಸಬಹುದಾಸತ್ಯವುಳ್ಳನೆ ವಿಪ್ರನವನೆಂದ ॥ ೫೪

ಸತ್ಯವೇ ಸ್ವಾಧ್ಯಾಯ ಸತ್ಯವೆ
ನಿತ್ಯಕರ್ಮವಿಧಾನ ವೊಂದೇ
ಸತ್ಯವೇ ಜಪ ಹೋಮ ಯಜ್ಞ ಧ್ಯಾನದಾನತಪ ।
ಸತ್ಯವುಳ್ಳರೆ ಶೂದ್ರ ದ್ವಿಜರಿಂ
ದತ್ಯಧಿಕನಾದ್ವಿಜರೊಳಗೆ ವರ
ಸತ್ಯಹೀನನೆ ಹೀನಜಾತಿಗನೆಂದನಾಭೂಪ ॥ ೫೫

ಧೀರನಾವನು ಧಿಟ್ಟನಾರು ವಿ
ಕಾರಿ ಯಾರು ವಿನೀತನಾರಾ
ಚಾರಹೀನನದಾರು ಸುವ್ರತೆಯಾರು ಶಠನಾರು ।
ಕ್ರೂರನಾರತಿಕಷ್ಟನಾರು ವಿ
ಚಾರಿಯಾರು ವಿಮುಕ್ತನಾರು ವಿ
ದೂರನಾರಿಹಪರಕೆ ಭೂಮಿಪಾಲ ಹೇಳೆಂದ ॥ ೫೬

ನಾರಿಯರ ಕಡೆಗಣ್ಣ ಹೊಯ್ಲಿನ
ಧಾರೆಗಳುಕದ ನಾವನಾತನೆ
ಧೀರನಾತನೆ ಧಿಟ್ಟನಬಲೆಯರುಬ್ಬುಗವಳದಲಿ ।
ಮೀರದಪ್ಪಿದವನೆ ವಿಕಾರಿ ವಿ
ಚಾರಪರನೆ ವಿನೀತನನ್ಯಾ
ಚಾರಯುತನಾಚಾರಹೀನನು ಫಣಿಪ ಕೇಳೆಂದ ॥ ೫೭

ಕೃತಕವಲ್ಲದೆ ದ್ವಂದ್ವಸಹನೇ
ವ್ರತಿ ಮುಮುಕ್ಷು ವಿಚಾರಯುಕ್ತನು
ಕೃತಕನೇ ಶಠನಪ್ರಗಲ್ಭಕೃತಘ್ನನೇ ಕ್ರೂರ ।
ಕ್ಷಿತಿಗೆ ಲೋಭಿಯೆ ಕಷ್ಟನಾತ್ಮನಿ
ರತನೆ ಮುಕ್ತನು ವೇದಮಾರ್ಗ·
ಚ್ಯುತನೆ ಲೋಕವ್ಯಯಕೆ ದೂರನು ಸರ್ಪ ಕೇಳೆಂದ ॥ ೫೪

ಆರು ಭಂಡರು ಸುಜನನಿಂದ್ಯದ
ದಾರು ಹಾಲಾಹಲಸರೂಪಕ
ರಾರು ಸಾಹಸಿಯಾರು ಸಜ್ಜನರಾರು ಶುಚಿಯಾರು ।
ಆರು ಹಗೆ ಸಖರಾರು ಸೇವ್ಯರ
ದಾರು ದುರ್ಲಭರಾರು ದುಸ್ಸಹ
ರಾರು ದುರ್ಮತಿಯಾರು ಧರ್ಮಜ ತಿಳಿಯು ಹೇಳೆಂದ ॥ ೫೫

ವ್ಯಸನಿ ನಿಂದ್ಯನು ರಣದೊಳೂಡೆಯನ
ಬಿಸುಟು ಹೋಹನೆ ಭಂಡನತಿಸಾ
ಹಸಿಕನೇ ಸೇವಕನು ಮಿತ್ರದ್ರೋಹಿಯೇ ವಿಷನು ಕಣ ।
ಪಿಸುಣನೇ ಹಗೆ ಪರಸತಿಗೆ ಮನ
ಮಿಸುಕದವನೇ ಶುಚಿ ಪರಾರ್ಥ
ವ್ಯಸನಿಯೇ ಸಜ್ಜನನು ಸರ್ಪಾಧೀಶ ಕೇಳೆಂದ ॥ ೫೬

ವಿನುತಪರತತ್ವಜ್ಞನತಿಸೇ
ವ್ಯನು ಸುದುರ್ಲಭನೇ ಜಿತೇಂದ್ರಿಯ
ನನುಗುಣನೆ ಸಖನು ಸೈರಿಸದವನೆ ದುಸ್ಸಹನು ।
ಮನುಜರಲಿ ದುರ್ಮತಿಯಲಾ ದು
ರ್ಜನರಿಗಾಶ್ರಯವೆಂದು ತೋಱಿದು
ದೆನಗೆ ನಿನಗಭಿಮತವೆ ಸರ್ಪಾಧೀಶ ಕೇಳೆಂದ ॥ ೫೭

ಅಹುದಲೇ ಬಚ್ಚಿಕೇನು ವಿದ್ಯಾ
ಮಹಿಮೆ ದಾನತಪೋಗುಣಕೆ ಸ
ನ್ನಿಹಿತನೀಧರ್ಮದಲಿ ಸತ್ಯಾಚಾರಶೀಲದಲಿ ।
ಕುಹಕಿಯಲ್ಲ ವಿರೋಧಿಯಲ್ಲತಿ
ಸಹಜನೈ ಸಾರಜ್ಞನಲ್ಲೆನ
ಬಹುದೆ ನಿನ್ನು ಕುತಿಗಳನೆಂದನು ನಹುಷನರಸಂಗೆ ॥ ೬೦

ಅರಸ ಕೇಳ್ಕ್ಷತ್ರತೇಜವ
ಹೊರೆವುದೇ ಬ್ರಹ್ಮಣ್ಯಶಕ್ತಿ
ಸ್ಫುರಣ ನೀನೀಬ್ರಹ್ಮವರ್ಗದ ಸಾರಸಾಖ್ಯದಲಿ ।
ಮೆಱೆದೆಲಾ ವಿಪ್ರಾವಮಾನವೆ
ಸಿರಿಗೆ ನಂಜು ಕಣಾ ಮಹೀಸುರ
ವರರುಷಾಸನೆ ನಿನಗೆ ನೀ ಕೃತಕೃತ್ಯನಹೆಯೆಂದ ॥ ೬೧

ನೂಱುಯಜ್ಞದ ಹೊಯ್ದು ರಿಗೆ ಹರಿ
ದೇಱಿದೆನು ಸುರಪತಿಯ ಪೀಠವ
ನೋಱುಗುಡಿಸಿತು ಪದವಿಯದು ವಿಪ್ರಾವಮಾನದಲಿ ।
ಮಾಱುಮಾತೇನೈ ಮಹೀಸುರ
ರೇಱಿಸಿದರೇಱುವುದು ಮುನಿದರೆ
ಕಾಱಿಸುವರೈ ಕೋಟಿಯಜ್ಞವನೆಂದನಾನಹುಷ ॥ ೬೨

ಸರ್ಪವು ತನ್ನ ವೃತ್ತಾಂತವನ್ನು ಧರ್ಮರಾಯನನ್ನು
ಕುರಿತು ಹೇಳಿದುದು.

ಎನ್ನ ವೃತ್ತಾಂತದ ನಿದಾನವ [1]
ಮುನ್ನ ನೀ ಬೆಸಗೊಳಲು ಹೇಟಿದೆ
ನಿನ್ನು ನಿನ್ನಭಿಧಾನವನು ನೀನಾವನೆಂಬುದನು ।

[1] ರಹಸ್ಯವ, ಖ.

ಇನ್ನು ಕೇಳುವೆನೆನಲು ನಿಮ್ಮೆಲಿ
ನುನ್ನಿನವನು ಯುಯಾತಿಯಯ್ಯನು
ತನ್ನ ನಾಮವೆ ನಹುಷನೆಂಬುದು ನೃಪತಿ ಕೇಳೆಂದ ॥ ೬೫

ಮಾಡಿದೆನು ಶತಮುಖವನದು ಹೋ
ಗಾಡಿತಿಂದ್ರನನಲ್ಲಿ ತನಗೆಡೆ
ಮಾಡಿತರಮನೆ ಕಂಡುದಾತತ್ತೀಸ ಕೋಟಿಗಳು ।
ನಾಡು ಬೀಡೆನಗಾಯ್ತು ವಶ ಖಯ
ಖೋಡಿಯಿಲ್ಲದೆ ಶಕ್ರಪದದಲಿ
ರೂಢಿಸಿದೆನದನೀನ ಹೇಳುವೆನೆನುತ ಬಿಸುಸುಯ್ದ ॥ ೬೬

ಅರಸ ಕೇಳ್ಕ ರಂಭೆಯೂರ್ವಶಿ
ವರತಿಲೋತ್ತಮೆ ಗೌರಿ ಮೇನಕಿ
ಸುರಭಿ ಗಂಧಿನಿ ಮಂಜುಘೋಷೆ ಸುಕೇಶಿ ಮೊದಲಾದ ।
ಸುರಸತಿಯರೆನ್ನ ರಮನೆಯ ತೊ
ತ್ತಿರುಗಳಾದರು ಮೂಱುಲಕ್ಷದ
ಹೊಱಗೆ ಮೂವತ್ತಾಱುಸಾವಿರವೆಂದನಾನಹುಷ ॥ ೬೭

ಈಸು ನಾರಿಯರಿರಲು ಬಯಲಭಿ
ಲಾಷೆ ದಿವಿಜೇಶ್ವರನ ರಾಣೀ
ವಾಸದಲಿ ಕಂಗಟ್ಟಿ ತಂದುದು ತನ್ನನೀವಿಧಿಗೆ ।
ಮಿಾಸಲಿನ ಮಾನಿನಿಯರಲಿ ಮನ
ದಾಸೆ ಮನುಜರ ಮುಱುವುದಕೆ ತಾ
ನೈಸಲೇ ದೃಷ್ಟಾಂತವೆಂದನು ನಹುಷನರಸಂಗೆ ॥ ೬೮

ಆಧಿ ಬಿದ್ದುದು ಶಚಿಯ ಮೇಲಣ
ವೇಧೆಯಲಿ ವಿಟಬುದ್ಧಿ ಸಿರಿಗೆ ವಿ
ರೋಧಿಯೈ ಸಲೆ ಸತಿಯುಪಾಯವ ಮಾಡಿ ಋಷಿಗಳಿಗೆ ।

ಬೋಧಿಸಿದರವರೆನ್ನ ವಾಹನ
ಸಾಧನವೆಯಾದರು ಮುನೀಂದ್ರ ವಿ
ರೋಧವಾಯ್ತಿನಗಲ್ಲಿ ಶಪಿಸಿದನಂದಗಸ್ತ್ಯಮುನಿ ॥ ೯೯

ಸರ್ಪ ಪರಿಸರ್ಪ ತ್ವಮೆನೆ ಘಡ
ಸರ್ಪ ನೀನಾಗೆನಲು ತನ್ನ ಯ
ದರ್ಪವನು ಕೆಡೆನೂಕಿ ಬಿದ್ದೆನು ಮುನಿಯ ಚರಣದಲಿ ।
ಸರ್ಪತನದನುಭವಕೆ ಕಡೆ ಯೆಂ
ದಪ್ಪುದೆನೆ ಧರ್ಮಜನ ವರವಾ
ಗ್ದರ್ಪಣವಲಹುದೆಂದೊಡಿದು ಸಂಘಟಿಸಿತೆನಗೆಂದ ॥ ೯೦

ಎನುತ ದಿವ್ಯಾವಯವಕಾಂತಿಯ
ಮಿನುಗುವೋಹರದೇಪಿ ಮೊಡಿದು
ವನಿಮಿಷಾಂಗದಲುರಗಕಾಯದ ಕೋಹಳಯನುಗಿದು ।
ಜನಪ ನಿನ್ನೊಡಹುಟ್ಟಿದನ ಕೂ
ಳ್ಳನುತ ಹೇಮವಿಮಾನದಲಿ ಸುರ
ವನಿತೆಯರ ವೋಲಗದಲೆಸೆದನು ನಹುಷನಭ್ರದಲಿ ॥ ೯೧

ದುಗುಡದಲಿ ಬರೆ ಭೀಮಸೇನನ
ತೆಗೆದು ಬಿಗಿದಪ್ಪಿದನು ಖೇದದ
ಹೊಗಳಿದೇಕೆ ವೃಥಾಮನೋವ್ಯಥೆಯ ತಾಳದಿರು ।
ಜಗವೆಲ್ಲಿಯೆ ನಮ್ಮನ್ವಯದ ಪೂ
ರ್ವಿಗನಲಾ ನಹುಷಂಗೆ ಬಂದು
ಬ್ಬಿಗದ ಪದನಿದು ನಮ್ಮ ಪಾಡೇನೆಂದನಾಭೂಪ ॥ ೯೨

ನಿನ್ನ ದೆಸೆಯಿಂದಾಯ್ತಲೇ ಪ್ರತಿ
ಪನ್ನ ಶಾಪವಿಮೋಕ್ಷ ವಿದಱಲಿ
ನಿನ್ನದರ್ಪಕೆ ಹಾನಿಯೇ ಹೇರಾಳಸುಕೃತವಿದು ।

ತನ್ನರಿಷ್ಟವನೀಕ್ಷಿಸದೆ ಪರ
ರನ್ನತಿಯ ಬಯಸುವರು ಸಜ್ಜನ
ರಿನ್ನು ಸಾಕೆಂದೊರಸಿದನು ಕಂಬನಿಯನನಿಲಜನ [1] ॥ ೩೩

ತಿಳುಹಿ ತಂದನು ಸಕಲಮುನಿ ಸಂ
ಕುಲಸಹಿತ ತನ್ನಾಶ್ರಮಕೆ ಕೊೀ
ಮಲೆಯ ನುಡಿಯುಲಿ ಬಿಡಿಸಿದನು ಭೀಮನ ಮನೊೀವ್ಯಥೆಯ ।
ಅಳಿವು ನಮಗೆಲ್ಲಿಯದಪಾಯದ
ಜಲಧಿಗಳು ಬತ್ತುವುವು ಯದುಕುಲ
ತಿಲಕಗದುಗಿನ ವೀರನಾರಾಯಣನ ಕರುಣದಲಿ ॥ ೩೪

ಹದಿನಾಲ್ಕನೆಯ ಸಂಧಿ ಮುಗಿದುದು.

ಹದಿನೈದನೆಯ ಸಂಧಿ.

ಸೂಚನೆ.

ಕರುಣಿ ಬಿಜಯಂಗೈದು ಪಾಂಡವ
ಧರಣಿಪನ ಸಂತೈಸಿ ಯಾದವ
ರರಸನಿರೆ ಬಂದರು ಮೃಕಂಡುತನೂಜನಾರದರು [2] ॥

ಧರ್ಮಭೀಮರನ್ನು ಸಮಾಧಾನ ಗೊಳಿಸಿದುದು.

ಚಿತ್ತವಿಸು ಜನಮೆೀಜಯ ಕ್ಷಿತಿ
ಪೋತ್ತಮನೆ ಧರ್ಮಜನ ಮುಖದಲಿ
ಕೆತ್ತದುಗುಡವ ಕಳಚಿ ಭೀಮನ ಖೇದವನು ಬಿಡಿಸೆ [3] ।

---

1 ಪವನಜನ ಕಂಬನಿಯ, ಚ.

2 .... ನಿತ್ತನು ಸಕಲಮುನಿಜನಸಹಿತ ವನದೊಳಗೆ, ಚ.

3 ಭೀಮನ ತಂದರಾಶ್ರಮಕೆ, ಖ, ಚ.

ಮತ್ತಕಾಶಿನಿ ಧೌಮ್ಯನಖಿಲಮ
ಹೋತ್ತಮರು ಪೀಯೂಷಮಧುರರ
ಸೋತ್ಕರದ ನುಡಿಗಳಲಿ ನಾದಿದರನಿಲಜನ ಮನವ ॥ ೧

ಮುಗಿಲು ಬಿಜಿತುದು ಬಿಳಿಯಗಡಬಡೆ
ಗಗನಕಾಳಿದುದು ಕೊಂಡನೆಲನನು
ತೆಗೆದು ನಿಂದುದು ಹೇಡಿಯಂಗದವೊಲು ನದೀನಿವಹ ।
ನಗುವ ಕೊಳನ ಚಕೋರಚಯ [1] ಹಂ
ಸೆಗಳು ಮೆಱೆದುವು ನಗುವ ತುಂಬಿಯ
ಸುಗುಡತನ ತಾವರೆಯೊಳಸೆದುದು ಶರದ ಸಮಯದಲಿ ॥ ೨

ತಿರುಗಿ ಕಾಮ್ಯಕವನಕೆ ಬಂದುದು.

ಸವೆದುದೀ ನವಿಲ್ಲಿ ಫಲಮೃಗ
ನಿವಹ ಬೀತುದು ನಮ್ಮ ಕಾಲಾ
ಟವನು ಸೈರಿಸಿ ನಿಲುವ ವನವನು ಕಾಣೆ ತಾನೆನುತ ।
ನಮಗೆ ಮಗುಟಾಕಾಮ್ಯಕದ ವನ
ಭವನವೈ ಸಲೆ ಯೆನುತಲಾಮುನಿ
ನಿವಹಸಹಿತವನೀಶ ಕಾಮ್ಯಕವನಕೆ ನಡೆತಂದ ॥ ೩

ಆಶರತ್ಕಾಲವನು ತದ್ವನ
ವಾಸದಲಿ ನೂಕಿದನು ಮುನಿ ಪರಿ
ತೋಷವೆಂಗಸ್ಫುರಣೆ ಸೂಚಕ ಶಕುನ ವೊದಲಾದ ।
ಮಾಸಲತ್ತಿಯಲು ಪರುಷದ ಸದಾ
ವೇಶದಲಿ ಮನವುಕ್ಕಿ ಹಿಗ್ಗಿದ
ನೀಶಕುನಸುಮ್ಮಾನ ಯಿದಕ್ಕೇನಹುದೊ ಫಲವೆಂದ ॥ ೪

---

[1] ಭ್ಯಾಗತೆಯ, ಚ.

ಇದಕೆ ಕೃಷ್ಣಾಗಮನವೇ ಫಲ
ದುದಯವೈಸಲೆ ಯೆನುತಲಿರೆ ಬಂ
ದಿದಿರು ನಿಂದನು ದೂತನೊಬ್ಬನು ದ್ವಾರಕಾಪುರಿಯ ।
ಇದೆ ಕೃಪಾನಿಧಿ ಬಂದನಸುರಾ
ಭ್ಯುದಯಘಾತಕ ಬಂದ ರಿಪುಬಲ
ಮದನರುದ್ರನು ಬಂದನಿದೆ ಯೆಂದನು ಮಹೀಪತಿಗೆ ॥ ೫

ಸೂಚಿಸಿದುದೇ ಶಕುನ ಪುನರಪಿ
ಗೋಚರಿಸಿತೇ ಗರುವನಿಧಿ ನಾ
ವಾಚರಿಸಿತೇನೊ ಶಿವ ಶಿವ ಭವಭವಸಪಸ್ಪರದಲಿ ।
ನಾಚಿದುವು ನಿಗಮಂಗಳಾವನ
ಸೂಚಿಸುವುವೆವ್ವೊಳಗೆ ಕೃಪೆಯುಲ
ರೋಚಕವನಾದೈವವಗಾಡದೆನುತ್ತ ಹೊಱವಂಟ ॥ ೬

ಹಱುವೆವನು ಹೊಱವೆಂಟು ಗರುಡನ
ಹಱವಿಗೆಯ ದೂರದಲಿ ಕಂಡನು
ತುಳುಕಿದುವು ಸಂತೋಷಜಲ ನಿಟ್ಟೈಸಳುಕಂಗಳಲಿ ।
ತಳತರೋಮಾಂಚನದ ಸಮ್ಮದ
ಪುಳಕದಲಿ ಪೂರಾಯದುಬ್ಬಿನ
ಲಿಳಯೊಡೆಯ ಮೈಯಿಕ್ಕುತೈದಿದನಖಿಳಜನಸಹಿತ ॥ ೭

ಶ್ರೀಕೃಷ್ಣನ ಆಗಮನ.

ಇತ್ತಿದು ದಂಡಿಗೆಯಿಂದ ಕರುಣಾ
ಜಲಧಿ ಬಂದನು ಕಾಲನಡೆಯಲಿ
ಸೆಳದು ಬಿಗಿದಪ್ಪಿದನಿದೇನಾಸುರವಿದೇಕೆನುತ ।
ಬಟ್ಟಿಕ ಭೀಮಾರ್ಜುನರ ಯಮಳರ
ನೊಲಿದು ಮನ್ನಿಸಿ ಸತಿಯ ಲೋಚನ
ಜಲವ ಸೆಱಗಿನಲೊರಸಿ ಸಂತೈಸಿದನು ಬಾಲಿಕೆಯ ॥ ೮

ಕುಶಲ ಪ್ರಶ್ನೆ.

ಕುಶಲವೇ ಕುರುರಾಯನೂಟಿಗ
ವೆಸಕದಲಿ ನಿಮ್ಮೊತ್ತಲವಧಿಯ
ದೆಸೆ ಸವಿಾಪವೆ ತೊಲಿದಿರೆಲಾ ವನವನಂಗಳಲಿ ।
ಪಶುಪತಿಯು ಹಿಡಿದಂಬು ಕೈವ
ರ್ತಿಸಿತಲಾ ಪಾರ್ಥಂಗೆ ನಮಗಿಂ
ದೊಸಗೆಯಾಯಿತು ಪುಣ್ಯವೆಂದನು ಹರಿ ಮಹೀಪತಿಗೆ ॥ ೯

ಧರ್ಮರಾಯನು ತಮ್ಮ ವೃತ್ತಾಂತವೆಲ್ಲವನ್ನು ಹೇಳಿದುದು.

ಆಗಲೀವೈಷ್ಣವಕೆ ನಮ್ಮಯ
ತಾಗುಥಟ್ಟಿನ ರಕ್ಷೆ ತೊಡಚಿದು
ದಾಗಲಿರ್ದುದು ಪಾಶುಪತ ಶರವೆದಱಿ ಬಟ್ಟಿವಿಡಿದು ।
ಈಗಲೊಸಗೆಯೆ ತಮ್ಮ ಪಂಚಕ
ದಾಗುಯೋಗನು ಹೊತ್ತು ನಡಸಿದೊ
ಡಾಗ ನಮಗಾಯ್ತೊಸಗೆ ಯೆಂದನು ನೃಪತಿ ವಿನಯದಲಿ ॥ ೧೦

ತೊಲಿದೆವೆಲ್ಲೈ ಕೃಷ್ಣ ತಪ್ಪದೆ
ಹಲುವಹಲುವನವನಮರಪುರದಲಿ
ಕೆಲವುದಿನವಿರಲರ್ಜುನಂಗಾಯ್ತೂರ್ವಶಿಯ ಶಾಪ ।
ಖಳರನಲ್ಲಿ ನಿವಾತಕವಚರ
ಗೆಲಿದು ಬಂದನು ಪಾರ್ಥನಿತ್ತಲು
ಕೆಲಬರಸುರರ ಕಾದಿ ಕೊಂದನು ಭೀಮನಡವಿಯಲಿ ॥ ೧೧

ಇಂತು ತಲೆಯೊತ್ತುತ ಮಹಾವಿಪ
ನಾಂತರವ ತೊಲಿದೆವು ಬಟ್ಟಿಕ ವೆ
ನಾಂತದೊಳಗೊಂದಾದುದೂಟಿಗ ನಹುಷನೃಪತಿಯಲಿ ।
ಭ್ರಾಂತಿಯೈ ಸಲೆ ಭೀಮನುರಗಾ
ಕ್ರಾಂತನಾದನು ಧರ್ಮಕಥೆಯಲಿ
ಸಂತವಾಯ್ತು ವಿಶಾಪನಾದನು ನಹುಷನಾಹ್ವಯಕೆ ॥ ೧೨

ಮರಳಿ ಕಾಮ್ಯಕವನದ ದಳಮಂ
ದಿರವನೇ ನೆಲೆಮಾಡಿದೆವು ವಿ
ಸ್ತರಣವಿದು ಹಿಂದಾದ ವಿಪಿನಾಂತರಪರಿಭ್ರಮದ ।
ಕರುಣಿ ನಿಮ್ಮಡಿಯಂಘ್ರಿಕಮಲದ
ದರುಶನದಿನಾಯಾಸಪಾರಂ
ಪರೆಗೆ ಬಿಡುಗಡೆಯಾಯ್ತೆನುತ ವೈಯಿಕ್ಕಿದನು ಭೂಪ ॥ ೧೩

ಏಪೆನುತ ತೆಗೆದಪ್ಪಿದನು ಕರು
ಣಾಳು ಕೇಳ್ ಭೂಪ ಸುರಪತಿ
ಯಾಲಯದೊಳೂರ್ವಶಿಯ ಶಾಪವು ಬಂದೊಡೇನಾಯ್ತು ।
ಲೀಲೆಯಿಂದೀಭೀಮ ದೈತ್ಯರ
ಭಾಳಲಿಪಿಯನು ತೊಡೆದ ನಿನ್ನಯ
ಬಾಳುಬರಹವು ಮುಂದೆ ಯೆಂದನು ನಗುತ ಮುರವೈರಿ ॥ ೧೪

ಆಗ ನಾರದ ಮಾರ್ಕಂಡೇಯರು ಬಂದುದು.

ರಾಯ ಕೇಳಾಹ್ನಿಕೆ ಮಾರ್ಕಂ
ಡೇಯನಾರದರೀತಿದರಬುಜದ
ಳಾಯತಾಕ್ಷಂಗೆಱಗಿದರು ಭಯಭರಿತಭಕ್ತ್ಯಾಯಲಿ ।
ತಾಯಿ ಕಱುಗಳ ಬಿಡದವೊಲು ನಿ
ರ್ದಾಯದಲಿ ನಿಜಭಕ್ತಸಂಗವ
ಮಾಯೆ ಬಿಡದೈ ನಿಮ್ಮದೆಂದರು ಹೊರಳಿ ಚರಣದಲಿ ॥ ೧೫

ಮಾರ್ಕಂಡೇಯರು ಧರ್ಮರಾಯನನ್ನು ಸ್ತುತಿಮಾಡಿದುದು.

ತಪದಲುರಿದು ಸಮಾಧಿಯೋಗವ
ಲುಪಕಮೆದಲುಬ್ಬಿದ್ದ ಮೋನದ
ಜಪದ ಜಂಜಡದೊಳಗೆ ಸಿಲುಕಿ ಜನಾರ್ದನನ ಮಱೆವೆ ।
ಅಪಸದರು ನಾವ್ ಕರ್ಮನಿಷ್ಠೆಯ
ಕೃಪಣರಾವ್ ಕೇಳ್ ನಿನ್ನ ಮೇಲಣ
ಕೃಪೆಯ ನೋಡೈ ಭೂಪ ಯೆನುತೀಕ್ಷಿಸಿದರಚ್ಯುತನ ॥ ೧೬

ಈಯಘಟದ ದೈವವಿದು ನಿ
ರ್ದಾಯದಲಿ ನಿಮ್ಮೊಳಗೆ ಸೇರಿತು
ರಾಯರಿರ್ದರು ಹಿಂದೆ ಭರತಭಗೀರಥಾದಿಗಳು ।
ಆಯಿತೇನವರಿಗೆ ಸರೋಜದ
ಳಾಯತಾಕ್ಷನ ಚರಣಸೇವೆ ನಿ
ರಾಯಸದೆ ಸಹವಾಸಭೋಜನವೆಂದರಾನೃಪಗೆ ॥ ೧೩

ವರುಷಹದಿನಾಱಱಲಿ ಮೃತ್ಯುವೆ
ಪರುತವಿಸಿದುದು ಕರ್ಮಗತಿ ಮುರ
ಹರನ ಸೇವೆಯ ಮಾಡಿ ಸವೆದೆನು ಸರ್ವಭಾವದಲಿ ।
ಕರುಣಿ ಬಿಜಯಂಗೈದು ಮೃತ್ಯುವಿ
ನುರಿಯ ಗಂಟಲಲಿಟ್ಟಿದ ತನ್ನನು
ಬರೆಸೆಳೆದನೆಂದಮಲಮಾರ್ಕಂಡೇಯಮುನಿ ನುಡಿದ ॥ ೧೪

ಓಕರಿಸಿದುದು ಮೃತ್ಯುವೆನ್ನನು
ಲೋಕದಿಂ ಹೊಱಗೆಂದು ಯಮಗಿಮ
ಱಕರಣಿಗಳ ಜೀವಜಾತಿಯೊಳಲ್ಲ ನೀನೆಂದು ।
ಲೋಕದಲಿ ಡಂಗುರವ ಹೊಯ್ಸಿದ
ನೀಕಮಲನಾಭನೆ ಕಣಾ ಕರು
ಣೈಕನಿಧಿ ನಿಮಗೊಲಿದನೆಂದನು ಮುನಿ ಮಹೀಪತಿಗೆ ॥ ೧೫

ಪ್ರಳಯ ಕಾಲದಲ್ಲಿ ನಡೆದ ಕ್ರಮವನ್ನು ಹೇಳಿದುದು.

ಧರಣಿಪತಿ ಕೇಳ್ ಪ್ರಳಯದಲಿ ಸಾ
ಗರದ ತೆಱೆ ಮುಂಡಾಡುವೊಲು ಸಾ
ಗರದ ಕೂಟಕೆ ಸಕಲಜಲಧಿಗಳೀಕರೂಪದಲಿ ।
ಧರೆಯ ಮುಱುಗಿಸಿ ಮೇಲೆಮೇಲು
ಬ್ಬರಿಸಿ ಜಗದಡಿಕಿಲದ ಜೋಡಿಯ
ಜರುಹಿದುವು ನೀರೇಱುತಗ್ಗದ ಸತ್ಯಲೋಕದಲಿ ॥ ೧೬

ಜಗದ ಜೀವರ ಕರ್ಮಬೀಜಾ
ಳಿಗಳ ಬೈತ್ರವ ತನ್ನ ಬಾಲಕೆ
ಬಿಗಿದು ನೀರಲಿ ನುಸುಳಿದನು ಮತ್ಸ್ಯಾವತಾರದಲಿ ।
ಬಗೆಯಲಾ ಹರಿ ಯಿಂತನೇ ವೃ
ಗ್ಯಗಳಗೋಚರನಾದನಜಸುವ
ನಿಗಮವೀತನ ಹೆಜ್ಜೆ ಗಾಣವು ಭೂಪ ಕೇಳೆಂದ ॥ ೮೧

ಮೆರಳಿ ಹೂಡಿದನೀಜಗವ ವಿ
ಸ್ತರಣವನು ಮಾಯಾಮಹೋದಧಿ
ಹೊರೆದನುನ್ನತಸತ್ವದಲಿ ಮೇಲಾದ ಲೋಕಗಳ ।
ಉರಿಯಲದ್ದುವೆನಿವನು ಲೀಲಾ
ಚರಿತವಿದು ಕೃಷ್ಣಂಗೆ ನಿನ್ನಯ
ಸಿರಿಯೆ ಸಿರಿ ಬಡತನವೆ ಬಡತನ ವೆಂದನಾಮುನಿಪ ॥ ೮೨

ಅರಸ ಕೇಳ್ ಕಲ್ಪಾಂತದಲಿ ಬಿಡೆ
ಬಿರಿದುದೀಬ್ರಹ್ಮಾಂಡ ಬಹಿರಾ
ವರಣಜಲನಿಧಿಜಲದೊಳೊಂದಾಯ್ತೀನ ಹೇಳುವೆನು ।
ಹರಿ ವಿನೋದದಬೊಳಲದೆಲೆಯಲಿ
ಸಿರಿಸಹಿತ ಪವಡಿಪಿವನಿನಕಟಿ
ಕಿರಣವಿಲ್ಲ ಮಹಾಂಧಕಾರ ಸಭಾರವಾಯ್ತೆಂದ ॥ ೮೩

ಈನೆಲನನೀಚಂದ್ರಸೂರ್ಯ ಕೃ
ಶಾನು ತೇಜವನೀಸಮೀರಣ
ನೀನಭವ ತಾ ಕಾಣೆನೊಂದೇಸಲಿಲಸೃಷ್ಟಿಯಲಿ
ಏನ ಹೇಳುವೆನೆನ್ನ ಚಿತ್ತ
ಗ್ಲಾನಿಯನು ಬಲುತೆಱೆಯು ಹೊಯ್ಲಿನೊ
ಳಾನು ಮುಱುಗುತ್ತೇಳುತಿರ್ದೆನು ಭೂಪ ಕೇಳೆಂದ ॥ ೮೪

ಆಗ ಮಾರ್ಕಂಡೇಯರು ತನ್ನ ದುರವಸ್ಥೆಯನ್ನು ಹೇಳಿದುದು.

ಹೇಟಿಲೇನದು ಮೃತ್ಯುವಿನ ಗೋ
ನಾಳಿಯೊಳಗಂದಿಟ್ಟಿಯಲೊಲ್ಲದೆ
ಕಾಳುಮಾಡಿದೆನೇ ಮುರಾರಿಯ ಭಜಿಸಿ ಭಕ್ತಿಯಲಿ ।
ಬಾಲಕನೊಳವಗುಣವನಕಟಾ
ತಾಳಬಹುದೇ ತಾಯೆ ಮೃತ್ಯುವೆ
ತಾಳಿಗೆಯ ತೆಗೆದೆನ್ನನೊಳಕೊಳ್ಳೆಂದು ಪಲುಬಿದೆನು ॥ ೨೫

ನೀರು ಹೊಕ್ಕುದು ನೂಕಿ ವಿವಿಧ
ದ್ವಾರದಲಿ ಬೆಂಡೇಟ್ವೆನೊಮ್ಮತಿ
ದೂರ ಮುಚ್ಚುಗುವೆನಷ್ಟಬೀಟ್ವೆನು ತೆಱೆಯ ಹೊಯ್ಲಿನಲಿ ।
ಯಾರಿಗುಬ್ಬಸವೆನ್ನ ಮರಣವ
ನಾರು ಕಂಡರು ಹೇಸಿ ತನ್ನನು
ದೂರಬಿಸುಟಳು ಮೃತ್ಯು ಬಟಲಿದೆ ನಿಂತು ಪಲಕಾಲ ॥ ೨೬

ಆಗ ಅಚ್ಯುತನ ಬಳಿಗೆ ಬ್ರಹ್ಮನು ಬಂದುದು.

ಮುಚ್ಚುಗುತೇಚುತ ಬರುತ ವಟಕುಜ
ದೆಲೆಯಲೀತನ ಕಂಡೆನ್ನೆ ನಾ
ನೆಳತಟಕೆ ಬಿದ್ದಂತೆ ತೆಱೆಯೆಡೆದೆಱೆಗೆ ತನಿಗೆಡೆದು ।
ಜಲಜಸಂಭವನಾಜಲವ ಮು
ಕ್ಕುಳಿಸುತುಗುಳುತ ನಾಲ್ಕುಮುಖ
ದಲಿ ನಿಲುಕಿ ನಿಗುರುತ ಬಂದನು ಕಂಡನಚ್ಯುತನ ॥ ೨೭

ಆಗ ಬ್ರಹ್ಮಾಚ್ಯುತರ ಸಂಭಾಷಣ.

ಆರು ನೀನೆಂದಾತನೀತನ
ಸಾಱಿದನು ಬೆಸಗೊಳಲು ಜಗದಾ
ಧಾರಕನು ಜಗದುದರ ಹರಿ ತಾನೆಂದೊಡಜ ನಗುತ ।

ಭೂರಿಜಗವೆನ್ನುದರದಲ ನೀ
ನಾರು ಜಗಕೆಂದುಲಿದು ಗರ್ವವಿ
ಕಾರದಲಿ ಪರಮೇಷ್ಠಿ ನಿಜತೇಜವೆ ವಿಭಾಡಿಸಿದ ॥ ೮೪

ಆದುವೇ ನಿನ್ನುದರದಲಿ ಜಗ
ವಾದೊಡೀಕ್ಷಿಪೆನೆನುತಲಾಕಮ
ಲೋದರನು ಕಮಲಜನ ಜಠರವ ಹೊಕ್ಕು ಹೊಱವಂಟು ।
ಭೇದಿಸಿದೆ ತಾನೆನ್ನ ಜಠರವ
ಲಾದ ಲೋಕವನೆಱಿಸಿ ಬಾರೆನ
ಲಾದುರಾಗ್ರಹಿ ಯಿಚ್ಛಿದನಸುರಾಂತಕನ ಜಠರವಲಿ [1] ॥ ೮೫

ಹೊಲವು ದಪ್ಪಿದನಲ್ಲಿ ಭುವನಾ
ವಳಿಗಳಿದ್ದುವು ಕೋಟಿರುದ್ರಾ
ವಳಿಗಳಿದ್ದರು ಕೋಟಿಪರಮೇಷ್ಠಿಗಳು ಶತಕೋಟಿ ।
ಹುಲು ನೊರಜು ಸಾಗರದ ಸಲಿಲವ
ನಳವವೊಲು ನೊಣ ಪಾಱಿ ಗಗನದ
ತಲೆವೊದಲಕಾಣಿಸುವೆನೆಂಬವೊಲಾಯ್ತು ಕೇಳೆಂದ ॥ ೮೬

ಪಲವುಯುಗಪರ್ಯಂತ ವಲ್ಲಿಯೆ
ತೊಱಲಿ ಕಡೆಗಾಣದೆ ಕೃಪಾಳುವ
ನೊಲಿದು ಹೊಗಟಿದನಜನು ಸಹಸ್ರವೇದಸೂಕ್ತದಲಿ ।
ಬಟಿಕ ಕಾರುಣ್ಯದಲಿ ನಾಭೀ
ನಳಿನದಲಿ ತೆಗೆದನು ವಿರಿಂಚಿಗೆ
ನಳಿನಸಂಭವನೆಂಬ ಹೆಸರಾಯ್ತೆಂದು ಮೊದಲಾಗಿ ॥ ೮೭

ಆಮಹಾಜಲಕಗ್ನಿ ಮುಖದಲಿ
ಹೋಮವಾಯ್ತು ತದಗ್ನಿಯುಡಗಿದು
ದಾಮರುತ್ತಿನೊಳಖಿಪಳಬಹಿರಂಗಪವಮಾನ ।

[1] ವದನದಲಿ, ಖ.

ವ್ಯೋಮದಲಿ ತದಹಂಮಹತ್ತು ವಿ
ರಾಮವಾಪ್ರಕೃತಿಯಲಿ ಮಾಯಾ
ಕಾಮಿನಿಗೆ ಪರಮಾತ್ಮನಲ್ಲಿ ಲಯವೆಂದನಾಮುನಿಪ ॥ ೩೦

ಏಸುದಿನ ವೀಜಗದ ಬಾಳುವೆ
ಯೇಸುದಿನ ವೀಪ್ರಳಯಮಯ ಪರಿ
ಭಾಸಮಾನಬ್ರಹ್ಮತೇಜೋರೂಪ ವೇಸುದಿನ ।
ಆಸದಾನಂದೈಕರಸವೆ ಪ್ರ
ಕಾಶಿತವವಿದ್ಯಾಪ್ರಪಂಚವಿ
ಲಾಸವಾಯ್ತು ಸೃಷ್ಟಿವಿಭಾಗಸೃಷ್ಟ್ಯವಿಧಾನಚಿಂತೆಯಲಿ ॥ ೩೧

ತಿರುಗಿ ಸೃಷ್ಟಿಕ್ರಮ ನಿರೂಪಣ

ಏಕಮೇವಾದ್ವಿತೀಯವೆಂಬ ನಿ
ರಾಕುಳಿತತೇಜೋನಿಧಿಗೆ ಮಾ
ಯಾಕಳತ್ರದೊಳಾಯ್ತು ನಿಜಗುಣಭೇದವದಱಿಂದ ।
ಆಕಮಲಭವನೀಮುಕುಂದಪಿ
ನಾಕಿಯೆಂಬಭಿಧಾನದಲಿ ತ್ರಿಗು
ಣಾಕೃತಿಯ ಕೈಕೊಂಡನುರುಲೀಲಾವಿನೋದದಲಿ ॥ ೩೨

ಆರಜೋಗುಣಕಬುಜಭವನ ವಿ
ಕಾರಿ ತನ್ನ ಶರೀರದರ್ಧವ
ನಾರಿಯನು ಮಾಡಿದನು ಶತರೂಪಾಭಿಧಾನದಲಿ ।
ಸೇರಿಸಿದನರ್ಧದಲಿ ಮನುವೆನು
ದಾರಚರಿತನು ಸಕಲಧರ್ಮದ
ಸಾರವನು ವಿಸ್ತರಿಸಿದನು ಮನು ಭುವನವಿಭುವಾಗಿ ॥ ೩೩

ಭೃಗುಪುಲಸ್ತ್ಯವಸಿಷ್ಠದಕ್ಷಾ
ದಿಗಳನಿಪ್ಪನವಪ್ರಜೇಶ್ವರ
ರೊಗುಮಿಗೆಯು ಮಾಡಿದರು ಸೃಷ್ಟಿಗೆ ಬೇಱೆ ಬೇಱಿವರು ।

ಜಗದ ಜೋಡಣೆಯಾಯ್ತು ಭೂತಾ
ಳಿಗೆ ಚತುರ್ವಿಧಸೃಷ್ಟಿಯೊಡ್ಡಣೆ
ನಿಗಮಮೆತದಲಿ ಹೂಡಿತವನೀಪಾಲ ಕೇಳೆಂದ ॥ ೫೬

ಚತುರ್ಯುಗಗಳ ಸ್ಥಿತಿ.

ಆದಿಯಲಿ ಕೃತಯುಗ ಹರಿಶ ಂ
ದ್ರಾದಿಗಳು ಸೂರ್ಯಾನ್ವಯಕೆ ಬುಧ
ನಾದಿ ನಿಮ್ಮನ್ವಯಕೆ ಬಟ್ಟಿಕ ಪುರೂರವಕ್ಷಿತಿಪ ।
ಮೇದಿನಿಯನಾಯುಗದೊಳವರೋ
ಪಾದಿ ಸಲಹಿದರಿಲ್ಲ ಬೆಳಗಿತು
ವೇದಬೋಧಿತಧರ್ಮ ಸೂರ್ಯಪ್ರಭೆಗೆ ಸರಿಯಾಗಿ ॥ ೫೭

ಆಯುಗದ ತರುವಾಯಲಾ ತ್ರೇ
ತಾಯುಗವೆಲೇ ಬಟ್ಟಿಕ ಧರ್ಮದ
ಲಾಯದಲಿ ಕಟ್ಟಿದರಧರ್ಮವನೊಂದುಪಾದದಲಿ ।
ರಾಯ ಕೇಳ್ ದ್ವಾಪರದಲಿ ದೃ
ಢಾಯದಲಿ ತಾ ಧರ್ಮವೆರಡಡಿ
ಬೀಯವಾದುದು ನಿಂದುದೆನಿಸಿತು ತನ್ನ ದೆಸೆಯಿಂದ ॥ ೫೮

ಕಲಿಯ ರಾಜ್ಯದಲೊಂದುಪಾದದ
ಸಲುಗೆ ಧರ್ಮಕ್ಕಹುದು ಸಲೆ ವೆ
ಗ್ಗಳೆಯವೆದಱೊಳಸತ್ಯ ಬಂಧುದ್ರೋಹ ಮತ್ಸರವು ।
ಕಳವು ಹಿಂಸೆಯನೀತಿ ಲೋಭ
ಸ್ಖಲಿತವಾಖಡಿ ಠಕ್ಕು ವಂಚನೆ
ಹಟವು ಹಾದರ ಕವಟೆಯೆಂಬಿವೆರಾಬ್ಬು ಹಿರಿದೆಂದ ॥ ೫೯

ಈ ಯಧರ್ಮವ ಪತಿಕರಿಸಿ ತ
ನ್ನಾಯತಕೆ ಭೂತಳವ ತಂದು ನಿ
ರಾಯಸದಲೇ ಬಳಸುತಿದ್ದನು ದುಂಧುವೆಂಬಸುರ ।

ರಾಯ ಕೇಳ್ಹಾದೈತ್ಯನನು ತ
ನ್ನಾಯುಧಕೆ ಬಲಿಗೊಟ್ಟು ಬಂಚಿಕ
ಸ್ಥಾಯಿ ಧರ್ಮವೆ ಬಲಿದು ಕೊಟ್ಟನು ದುಂದುಮಾರನೃಪ ॥ ೪೦

ಆನೃಪನ ರಾಜ್ಯದಲಿ ಯಜ್ಞಾ ವಿ
ಧಾನವೈದಿಕವಿಧಿಕೃತಾನು
ಷಾ ನಯಮನಿಯಮಾದಿಯೋಗವಿಶಿಷ್ಟನೀತಿಯಲಿ ॥
ದೀನಭಾವವನುಟ್ಟಿದು ಯಾಚ್ಞಾ
ಹೀನವೃತ್ತಿಯ ಬಿಸುಟು ಲೋಕದಿ
ಭಾನುತೇಜದಿಲೆಸೆದುದಂದು ಮಹೀಸುರವ್ರಾತ ॥ ೪೧

ರಣದೊಳಹಿತರ ಶಿರದ ಮಿದುಳೌ
ತಣವು ಶಸ್ತ್ರಕೆ ವಿತ್ತ ಭೂಸುರ
ಗಣಕೆ ವರಯೌವನದ ವಿಭ್ರಮ ನಿಜಸತೀಜನಕೆ ।
ಗುಣ ಮನುಷ್ಯವ್ರಜಕೆ ಪರರ
ಹ್ಲಣವೆಶೇಷಪ್ರಜೆಗೆನಲು ಧಾ
ರುಣಿಪತಿಗಳೊಪ್ಪಿದರು ಕೃತಯುಗದಾದಿಕಾಲದಲಿ ॥ ೪೨

ಪ್ರಾಥನೇ ವೈವೆಹರಿಸಲಗ್ಗದ
ಮೂಥನೇ ಬರಲೊಂದೆ ಸತ್ಯ ನಿ
ರೂಢಿಯಲಿ ವಾಣಿಜ್ಯಸುವ್ಯವಹಾರಮಾರ್ಗದಲಿ ।
ಗಾಢವಿಕ್ರಯಸಕ್ರಯದಲೇ
ಗೂಢಕರು ನೂಲ್ಕೈಕಲಾಭನಿ
ರೂಢಪರರೊಪ್ಪಿದರು ವೈಶ್ಯರು ಧರ್ಮಕಾಲದಲಿ ॥ ೪೩

ನಿಜಕೃಷಿವ್ಯವಸಾಯದಲಿ ತ
ದ್ದ್ವಿಜಕುಲದ ಶಿಶ್ರೂಷೆಯಲಿ ಪಾ
ದಜರು ಕೃತಕೃತ್ಯರು ಚತುರ್ವರ್ಣದಲಿ ಮಾರ್ಗವಿದು ।

ನಿಜನಿಜಾಂಗದ ಧರ್ಮ ಗತಿಯುಲಿ
ಮಜಡರಾದರೆ ಮನುಜರಾದವ
ರಜನ ಪರಮಾಯುಷ್ಯಪರಿಯಂತಿಹರು ನರಕದಲಿ ॥ ೪೪

ಅಲ್ಲಿ ಆಶ್ರಮಚತುಷ್ಟಯದ ಸ್ಥಿತಿ.

ನಯವಿದನೆ ಕೇಳ್ ವೇದಶಾಸ್ತ್ರ
ಧ್ಯಯನದಲಿ ಪಿತೃಮಾತೃಶಿಶ್ರೂ
ಷೆಯಲಿ ಗುರುಪರಿಚರ್ಯದಲಿ ನಿಮೆಲಾಗ್ನಿಕಾರ್ಯದಲಿ ।
ನಿಯತಮೌನವ್ರತದ ಸಂಗ
ಪ್ರಿಯದ ಶೌಚಾಸ್ತೇಯದಿಂದ್ರಿಯ
ಜಯದ ವಿಮಲಬ್ರಹ್ಮಚರ್ಯಾಶ್ರಮದ ಗತಿಯೆಂದ ॥ ೪೫

ದೇವಗುರುಪಿತೃವಹ್ನಿಶಿಶ್ರೂ
ಷಾವಧಾನ ನಿರಂತಪಟ್ಟ
ರ್ವಾವಲಂಬ ನಿಜೋನ್ನತಾಲಾಭೈಕಸಂತೋಷ ।
ಪಾವನವ್ರತ ನಿಜಪುರಂಧ್ರಿಯ
ಸೇವೆ ಸತ್ಯಾಸ್ತೇಯಶೌಚಗು
ಣಾವಳಿಗಳುಳ್ಳತ ಗೃಹಪತಿ ಯೆಂದನಾಮುನಿಪ ॥ ೪೬

ವನವನದೊಳಾಶ್ರಮದೊಳಗ ಕುಲ
ವನಿತೆಸಹಿತಮಲಾಗ್ನಿಹೋತ್ರದ
ನೆನಪು ತಪ್ಪದೆ ಕಂದಮೂಲಫಲಾಶನಂಗಳಲಿ ।
ವಿನುತಯಜ್ಞತಪೋವ್ರತಾದಿಗ
ಳನಿತರಲಿ ನಿಷ್ಣಾತನಾವರೆ
ವಿನುತವಾನಪ್ರಸ್ಥನೆಂಬರು ರಾಯ ಕೇಳೆಂದ । ೪೭

ಮದನನಂಬನು ಮುಕ್ಕುಡಿ ರೋಷವ
ಕದನದಲಿ ಸೋಲಿಸುತ ಲೋಭವ
ನೊದೆದು ಮೋಹವ ನೂಕಿ ಯುಷ್ಟಿದೀಮದವ ಮತ್ಸರವ ।

ಎದೆಯಲಂಕವೆ ಬರೆದು ವೈರಾ
ಗ್ಯದ ಸುಸಮ್ಯಗ್ಜ್ಞಾನಯೋಗದ
ಪದದ ಬೆಳಸಿರಿವಂತನೇ ಯತಿ ಯೆಂದನಾಮುನಿಪ ॥ ೪೮

ಧರಣಿಪತಿ ಕೇಳ್ ಜಾತಿಧರ್ಮವೆ
ಪರಮಧರ್ಮದ ಸಾರ ವಿದನಾ
ಚರಿಸಿ ಸಿದ್ಧಿಯನೈದಿದನು ಪಿತೃಮಾತೃಭಕ್ತಿಯಲಿ ।
ಒಜ್ಜೆಗೆ ಬಣ್ಣ ಕೆ ಬೆರಸಿ ವೇದೋ
ಚ್ಚರಿತಧರ್ಮವ ತಿಳುಹಿದನು ಭೂ
ಸುರಗೆ ಧರ್ಮವ್ಯಾಧನಾತನ ಕಥೆಯ ಕೇಳೆಂದ ॥ ೪೯

ಹದಿನೈದನೆಯ ಸಂಧಿ ಮುಗಿಯಿತು.

ಹ ದಿ ನಾ ರ ನೆ ಯ ಸಂ ಧಿ .

ಸೂಚನೆ.

ಮುನಿಗಳುಪಕಥೆಯಲಿ ಯುಧಿಷ್ಠಿರ
ಜನಪತಿಯ ಸಂತೈಸೆ ಕಾಮ್ಯಕ
ವನದಿನಸುರಾರಾತಿ ಬಂದನು ದ್ವಾರಕಾಪುರಿಗೆ ॥

ವಿಪ್ರನ ಕೋಪದಿಂದ ಪಕ್ಷಿಯ ಮೃತಿ.

ಕೇಳು ಜನಮೇಜಯ ಧರಿತ್ರೀ
ಪಾಲ ಮಾರ್ಕಂಡೇಯಮುನಿಪತಿ
ಹೇಳಿದನು ವೇದೋಕ್ತಧರ್ಮದ ಸಾರಸಂಗತಿಯ ।
ಶೀಲಗುಣಸಚ್ಚರಿತದಲಿ ಸಂ
ಮೇಳವಿಸಿ ಮೌದ್ಗಲ್ಯವಂಶವಿ
ಶಾಲನೊಬ್ಬನು ವಿಪ್ರನಿದ್ದನು ಬ್ರಹ್ಮಚರಿಯದಲಿ ॥ ೧

ಧರಣಿಪತಿ ಕೇಳಾ ಮಹೀಸುರ
ವರನು ವೇದಾಧ್ಯಯನಪರನನ
ವರತವಿದ್ಯಾಭ್ಯಾಸಶೀಲನು ವನದಲೊಂದುದಿನ ।
ಮರದ ಮೊದಲಲಿ ವೇದಪಾಠಕ
ನಿರೆ ಮಹೀರುಹದಗ್ರದಲಿ ಸಂ
ಚರಿಸುತಿಹ ಖಗವಿಷ್ಠೆ ಬಿದ್ದುದು ಮೇಲೆ ಭೂಸುರನ ॥ ೮

ಮೇಲೆ ನೋಡಿದನಧಿಕರೋಷ
ಜ್ವಾಲೆಯಲಿ ಗಱು ಸೀದು ಧರಣಿಯ
ಮೇಲೆ ಬಿದ್ದುದು ವಿಹಗವೀತನ ಮುಂದೆ ತನು ಬೆಂದು ।

ಭಿಕ್ಷೆಯನ್ನಿಡುವವಳ ಉತ್ತರ.

ಲೀಲೆಯಲಿ ಭೂದೇವನಲ್ಲಿಂ
ಮೇಲೆ ಭಿಕ್ಷಾಟನಕೆ ಭೂಸುರ
ರಾಲಯದ ಹಂತಿಯಲಿ ಹೊಕ್ಕನು ಭೂಪ ಕೇಳೆಂದ ॥ ೩

ಒಂದು ಮನೆಯಲಿ ಭಿಕ್ಷೆಗೋಸುಗ
ನಿಂದನಾಮನೆಯಾಕೆ ಭಿಕ್ಷವ
ತಂದಪಳು ನಿಲ್ಲೆನುತ ಪತಿಪರಿಚರ್ಯೆಯನು ಮಾಡಿ ।
ತಂದು ಭಿಕ್ಷೆಯು ಹಿಡಿಯೆನಲ್ ದ್ವಿಜ
ನಂದು ಮುದದೀಕ್ಷಿಸಿದೊಡಾಸತಿ
ಯೆಂದಳಳ ಮರುಳ ಕುಜಾಗ್ರದ ವಿಹಗನಲ್ಲೆಂದು ॥ ೪

ಖಳಿಕ ತನ್ನ ವರ್ತಮಾನವನ್ನು ಹೇಳಿ ಧರ್ಮವ್ಯಾಧನ
ಖಳಿಗೆ ಕಳುಹಿಸಿದುದು.

ಬೆರಗಿನಲಿ ದ್ವಿಜನೆಂದ ನೀನೆಂ
ತಱಿದೆ ಹೇಟೆನೆ ವಿಪ್ರ ನಿಗಮವ
ನಱಿಯೆ ಧರ್ಮರಹಸ್ಯತತ್ವದ ಸಾರಸಂಗತಿಯ ।

ಅಖಿದೆ ಪತಿಪರಿಚರ್ಯಾದಲಿ ಕೈ
ಮಿಕ್ಕಿಯುದಾರಾಗಲಿ ಸುಧರ್ಮದ
ಲಿಖಿಕವುಳ್ಳೊಡೆ ಧನ್ಯರೆಂದಳು ಕಾಂತೆ ಮುನಿಸುತಗೆ [1] ॥ ೫

ಇಲ್ಲಿಗಿದೆ ನಾಲ್ಕೈದುಯೋಜನ
ದಲ್ಲಿ ಪಟ್ಟಣವದಱೊಳೊಬ್ಬನು
ಬಲ್ಲನಗ್ಗದ ಧರ್ಮಮುದಾತ್ತಘಟನವಿಘಟನದ ।
ಅಲ್ಲಿಗೈದುವುದಾತನಲಿ ನೀ
ನೆಲ್ಲವನು ತಿಳಿ ನಿನ್ನ ಚಿತ್ತದೊ
ಳಿಲ್ಲಲೇ ಪರಿಹಾಕವೆಂದುಸದೇಶಿಸಿದಳಬಲೆ ॥ ೬

ಹೆಸರು ಧರ್ಮವ್ಯಾಧನಾತನ
ದೆಸೆಯಲಱಿ ಹೋಗೆನಲು ಬಂದನು
ವಸುಧೆಯುಮರನು ನಗರಿಗಾಸತಿ ಕೊಟ್ಟ ಕುಱುಹಿನಲಿ ।
ಹಸಿದು ಬೀದಿಗಳೊಳಗೆ ತೊಱಲುತ
ಘಸಣಿಗೊಳುತ ಪುರಾಂತದಲಿ ಕ
ರ್ಕಶಪುಳಿಂದರ ಕೇರಿಯಿರೆ ಕಂಡಲ್ಲಿಗೈತಂದ ॥ ೭

ಧರ್ಮ ವ್ಯಾಧನ ಅಂಗಡಿ.

ಬಸೆನೆಣನ ಸುಂಟಿಗೆಯ ಹರಹಿದ
ಹಸಿಯತೊಗಲಿನ ತಳಿತಖಂಡದ
ಹಸರದುರುಗಲ ಕಾಳಿಜದ ಜಂಗಡೆಯ ಗಳಿಗೆಗಳ ।
ಬಸೆಯ ಹರವಿಯ ಸಾಲತೊರಳಿಗೆ
ಬೆಸಳಿಗೆಯ ಕುಱುದಲೆಯ ಹಂತಿಯ
ಕುಸುರಿದೆಲುವಿನ ಕೋದವಿಖಾನಂಗಡಿಯಲೈತಂದ ॥ ೮

ಬರಬರಲು ದೂರದಲಿ ವಿಪ್ರನ
ಬರವ ಕಂಡಿದಿರಾಗಿ ಬಂದುಪ
ಚರಿಸಿದನು ಬಂದೈ ಪತಿವ್ರತೆಯನ್ನ ದೂಱಿದಳ ।

[1] ಭೂಸುರಗೆ, ಚ.

ಧರಣಿಯಮರೋತ್ತಮರಿಗಿದು ಸಂ
ಚರಣಯೋಗ್ಯಸ್ಥಾನವಲ್ಲಾ
ದರಿಸುವರೆ ಬಾ ಯೆನುತ ತನ್ನಾಲಯಕೆ ಕೊಂಡೊಯ್ದ ॥ ೯

ಆತನು ತನ್ನ ಚರಿತ್ರವನ್ನು ಹೇಳಿದುದು.

ಒಳಗೆ ಮಂಚದ ಮೇಲೆ ನಡುಗುವ
ತಲೆಯ ತೆರಳಿದವ್ಯೈಯ್ಯ ಬೆಳುಪಿನ
ತಲೆನವಿರ ತಗ್ಗಿದಕರೀರದ ನಿಗ್ಗಿದವಯವದ ।
ತಳಿತನರೆಗಳ ತಾರಿದಾನನ
ದಿಟ್ಟಿದಹುಬ್ಬಿನ ಪುದಿದಕಂಗಳ
ಚಲಿತವದನದ ವೃದ್ಧರನು ತೋಱಿದನು ಮುನಿಸುತಗೆ ॥ ೧೦

ಇವರು ಮಾತಾಪಿತೃಗಳನ್ನಯ
ಯುವತಿ ಯಿವಳೆನಗೆನ್ನ ಮಗನಿಂ
ದಿವರ ರಕ್ಷೆಗೆ ಬೇಂಟೆಯಾಡುವೆನಡವಿಯಜಿಯಲಿ ।
ಕವಲುಗೊಳಲಲಿ ಮೃಗಗಣವ ಕೊಂ
ದವನು ತಪೆನಂಗಡಿಯಲವ ಮಾ
ಱುವೆನು ಲಾಭವನಲ್ಲಿ ಮಾಡೆನು ವಿಪ್ರ ಕೇಳೆಂದ ॥ ೧೧

ದೊರಕಿದನಿತಾವ್ರನ್ನವಲಿ ವಿ
ಸ್ತರಿಸುವೆನು ಸಕುಟುಂಬವಿದನಾ
ಹೊರೆವೆನಾರ್ಜಿಸುವೆನು ಕುಟುಂಬಕೆ ತಕ್ಕನಿತುಧನವ ।
ನಿರುತವಿದು ಮಾತಾಪಿತರಪರಿ
ಚರಿಯವಲಿ ರಾಗಾದಿದೋಷಾ
ಚರಣವದು ಮನವಚನಕಾಯದಲಿಲ್ಲ ತನಗೆಂದ ॥ ೧೨

ಭೂತಹಿಂಸೆಯಿದಲ್ಲ ತನಗಿದು
ಮಾತೃಪಿತೃರಕ್ಷಾರ್ಥವೆಮ್ಮಯ
ಜಾತಿಧರ್ಮವು ಮಾಂಸವಿಕ್ರಯವೈಗವೆಧಾದಿಗಳು ।

ಜಾತಿಧರ್ಮತ್ಯಾಗಕರ್ಮ ವಿ
ಜಾತಿಧರ್ಮಗ್ರಹಣವೆ ವಿ
ಖ್ಯಾತಕುಂಭೀಪಾಕಸಾಧನ ವಿಪ್ರ ಕೇಳೆಂದ ॥ ೧೩

ವಿತಥಭಾಷಿತವೆನ್ನವಿತ್ತಾ
ಹೃತಿ ಪರವ್ಯಾಪಾದವಾತ್ಮ
ಸ್ತುತಿ ಪರನಿ ್ರೀವ್ಯಸನನತ್ಯಾಚಾರ ಬಕವೃತ್ತಿ ।
ಕೃತವಿನಾಶನ ಡಂಭ ಹಿಂಸಾ
ರತಿ ನಿಜಾನ್ವಯಧರ್ಮ ಕರ್ಮ
ಚ್ಯುತಿಗಳಿವು ದೋಷಾಂಕುರಂಗಳು ವಿಪ್ರ ಕೇಳೆಂದ ॥ ೧೪

ಸಾಂಗವೇದಾಧ್ಯಯನ ಸಜ್ಜನ
ಸಂಗ ಶಾಸ್ತ್ರ ್ರಶ್ರವಣ ತೃಷ್ಣಾ
ಭಂಗಯಜನವು ದಾನಮೌನವ್ರತ ಸದಾಚಾರ ।
ಮಾಂಗಲಿಕ ಕರ್ಮಾಭಿಯೋಗ ಕು
ಲಾಂಗನಾರತಿಯಾತ್ಮ ಚಿಂತೆ ಸ
ರಾಂಗನಾವೈಮುಖ್ಯವಿವು ಸದ್ಧರ್ಮಗತಿ ಯೆಂದ ॥ ೧೫

ಧನಮದವೆ ಸತ್ಕುಲಮದವ ಯಾ
ವನಮದವ ವಿದ್ಯಾಮದವ ಪರಿ
ಜನಮದವ ವೈಭವಮದವ ನಾಚಾರಪಥಮದವ ।
ಮನನದಿಂ ಶ್ರವಣದಿ ಸಿಧಿಧ್ಯಾ
ಸನದಿನಿವ ನಭಕೊತ್ತಿ ವಿದ್ಯಾ
ವಿನಯಸಾಶೀಲ್ಯದಲಿ ನಡೆವುದು ವಿಪ್ರ ಕೇಳೆಂದ ॥ ೧೬

ನೀವು ಜಾತಿಯಲಧಿಕತರರಿಂ
ದಾವು ಜಾತಿವಿಹೀನರಾಗಿಯೆ
ಭಾವಶುದ್ಧಿಯಲಿಸೆವಧರ್ಮಾಚಾರ ಮಾರ್ಗದಲಿ ।

ಆವದೂಣೆಯವಿಲ್ಲವೀದ್ವಿಜ
ದೇವಗುರುಪರಿಚರ್ಯದಲಿ ಸಂ
ಭಾವಿತರು ನಾವಾದೆವೆಮ್ಮನು ನೋಡಿ ನಡೆ ಯೆಂದ ॥ ೧೬

ಈಪರಿಯಲುರುಧರ್ಮಕಥನಾ
ಳಾಪದಲಿ ಮುನಿಸುತನ ಸಂ
ದೇಪಾಗನೋದವ ಕಳಚಿ ಕಳುಹಿದನಾಮಹೀಸುರನ ।

ಆಗ ನಾರದಾದಿಗಳು ಧರ್ಮರಾಯನಿಗೆ ಸಮಾಧಾನವನ್ನು
ಹೇಳಿ ಹೊರಡುವಿಕೆ.

ಭೂಪ ಕೇಳ್ಯ ಕ್ಷಾತ್ರಧರ್ಮಕ
ಳಾಪದಲಿ ನಿನಗಿಲ್ಲ ಕೊಱತೆ ಕೃ
ತಾಪರಾಧರು ಕೌರವರು ನಿರ್ನಾಮರಹರೆಂದ ॥ ೧೪

ಬಾಹುಬಲ ಬಲವೆಲ್ಲ ಧರ್ಮ
ದ್ರೋಹಿಗಳಿಗೆ ಸುಧರ್ಮನಿಷ್ಠ ರ
ಸಾಹಸವು ಕಿಱಿದಾದೊಡೆಯು ಕೊಲುವರು ವಿರೋಧಿಗಳ ।
ಆಪರಾತ್ಮಜ ಹಸುಳ ತನದ
ವ್ಯೂಹದಲಿ ತಾರಕನನಿಕ್ಕಿದ
ನಾಹವದ ಜಯಸಿರಿಯು ಧರ್ಮದ ಬೆನ್ನ ಲಿಹುದೆಂದ ॥ ೧೫

ಎಂದು ಮಾರ್ಕಂಡೇಯಮುನಿ ಯಮ
ನಂದನನನಿತಿಹಾಸಕಥೆಗಳ
ಲಂದವಿಟ್ಟನು ಚಿತ್ತವನು ಭಯಖೇಡಿಗಳ ಕಳದು ।
ಕಂದು ಕನಲಿಕೆ ಯೇಕೆ ನಿಮಗೆ ಮು
ಕುಂದನೊಲವಿದೆ ಬಯಕೆ ಬೇಱೇ
ಕೆಂದು ಮಾರ್ಕಂಡೇಯನಾರದರಡಹಿದರು ನಭವ ॥ ೧೦

ದ್ರೌಪದಿ ಸತ್ಯಭಾಮೆಯರ ಸಂವಾದ.

ಅರಸ ಕೇಳ್ಯ ದ್ರೌಪದಿಗೆ ಹರಿ
ಯರಸಿ ನುಡಿದಳು ಸತ್ಯಭಾಮಾ
ಸರಸಿಜಾನನೆ ನಗೆನುಡಿಯ ಸಂಮೇಳಖೇಳದಲಿ ।
ಅರಸಿ ಕೌತುಕವೆನಗೆ ನೀನೈ
ವರಿಗೆ ಸತಿ ವಲ್ಲಭರ ಚಿತ್ತಾ
ಕರುಷಣವು ನಿನಗೆಂತು ಸೇರಿಹುದೇಕಭಾವದಲಿ ॥ ೧೧

ಮಂತ್ರಸಿದ್ಧಿಯೊ ಮೇಣು ಶಾಬರ
ಯಂತ್ರರಕ್ಷೆಯೊ ಬಟಿಕಲೌಷಧಿ [1]
ತಂತ್ರತಿಲಕವೊ ರಮಣರಿವರೈವರ ವಶೀಕರಣ ।
ಯಂತ್ರಮಯಮಹೂಹೆಗಳು ನೃಪರೀ
ಯಂತ್ರಸೂತ್ರದ ಕುಣಿಕೆ ನಿನ್ನಲಿ
ಯಂತ್ರಣವೆ ಹೇಪೌ ನಿಧಾನವನೆಂದಳಿಂದುಮುಖಿ ॥ ೧೨

ದೇವಿ ಯೆಂದಳು ಸತ್ಯಭಾಮಾ
ದೇವಿಯರು ಮುಗ್ಧೆಯರಲಾ ತಾ
ನಾವ ಮಂತ್ರದ ತಂತ್ರ ತೊಡಕಿನ ತೋಟಿಯುಳ್ಳವಳು ।
ಭಾವಶುದ್ಧಿಯಲೈವರನು ಸಂ
ಭಾವಿಸುವೆನವರವರ ಚಿತ್ತದ
ಭಾವವೆಲ್ಲವನುಪಚರಿಸುವೆನು ಚತುರತೆಯ ಚಾಳಿಯಲಿ ॥ ೧೩

ಬಲವೆಱಿದು ಹತ್ತುವುದು ಚಿತ್ತದ
ನೆಲೆಯಱಿದು ನಮ್ಮುವುದು ಮುರಿಪಿನ
ಹೊಳವಱಿದು ಹಿಂಗುವುದು ಹೊಗುವುದು ಮನದೊಳೊಳವಱಿದು
ಸುಳಿವಱಿದು ಸೋಂಕುವುದು ತವಕಕೆ
ಬಲಿದು ಮುಸಿವುದು ಸವಿಯ ಬೇಟನ
ನೆಳಸಿ ಬೆಸವುದು ಬಗೆಯಲೆಂದಳು ನಳಿನಮುಖಿ ನಗುತ ॥ ೧೪

---

1 ಮೇಣ್ವರೌಷಧ, ಚ.

ರಸಿಕ ಹರಿ ಹದಿನಾಲ್ಕುಸಾವಿರ
ಶಶಿಮುಖಿಯರಲಿ ಬೇಟ ಜಾಣಿನ
ಲಸಕ ನೆವಿಮ್ಮಡಿತು ಬಗೆಯ ಭಂಗವ್ಯಾಪ್ತಿ ಕೃಷ್ಣೆಯಲಿ ।
ನುಸುಳು ನೆಲೆ ಡಿಳ್ಳಾಯ [1] ಪಯ್ಸರ
ಬೆಸುಗೆ ಬಿಗುಹುಳುಕೊತ್ತು ಕಲೆಗಳ
ರಸದ ಪಸರವನಳಿಯಬಾರದು ವಿಗಡವಿ [2] ಟರುಗಳ ॥ ೨೫

ನೀವು ಮುಗ್ಧೆಯರತಿವಿದಗ್ಧನು
ದೇವಕೀಸುತನೆನ್ನ ವರು ಧ
ರ್ಮ್ಮವಲಂಬರು ದಿಟ್ಟರಲ್ಲ ಮನೋಜಕೇಳಿಯಲಿ ।
ನೀವು ಸೊಬಗಿನ ನಿಧಿಗಳೈ ಶತ
ಸಾವಿರದ ಸತಿಯೆರಲಿ ಕೃಷ್ಣನ
ಜೀವವಿಶ್ರಮಸತಿಯರೆಂದಳು ನಗುತ ನಳಿನಾಕ್ಷಿ ॥ ೨೬

ಅರಸ ಕೇಳೈ ಸತ್ಯಭಾಮಾ
ಸರಸಿಜಾನನೆ ದ್ರುಪದಸುತೆಯರು
ಸರಸಮೇಳದೊಳೊಪ್ಪಿದರು ಚತುರೋಕ್ತಿಲೀಲೆಯಲಿ ।
ಹರಿ ಯುಧಿಷ್ಠಿರಭೀಮಪಾರ್ಥರು
ವರಮುನಿಗಳಿತಿಹಾಸವೆಯಬಂ
ಧುರಕಥಾಕೇಳಿಯಲಿ ಕಳೆದರು ಹಲವುದಿವಸಗಳ ॥ ೨೭

ಹಗೆಗಳಮರಾರಿಗಳು ನಮ್ಮೆಯ
ನಗರಿ ಶೂನ್ಯಾಸನದಲಿರ್ದುದು
ವಿಗಡರಾಮೋದಿಗಳು ವಿಷಯಂಗಳ ಏನೋದಿಗಳು ।
ಅಗಲಲಾರೆನು ನಿಮ್ಮ ವನದೋ
ಲಗಕೆ ಬಿಡೆಯವ ಕಾಣೆನೆಂದನು
ನಗುತ ಕರುಣಾಸಿಂಧು ಯಮನಂದನನ ಮೊಗ ನೋಡಿ ॥ ೨೮

---

[1] ಡಿಳ್ಳಾಸ, ಟ. [2] ಚದುರ, ಟ.

ನುಡಿದ ಕಾಲಾವಧಿಗೆ ಜರೆ ತೆರೆ
ಯಡಸಿದುವು ಜಾಣಿನಲಿ ಸತ್ಯವ
ನಡೆಸಿದಿರಿ ಕಡೆಸಾರಿಗೆಯಲುನ್ನತಿಯ ಕೆಡಿಸದಿರಿ ।
ಕಡುಮನದ ಕರ್ಣಾದಿಗಳು ಕೈ
ದುಡುಕಿದರೆ ಕೈಗಾಯ್ದು ಧರ್ಮದ
ತಡಿಗೆ ಜಾಱಿ ಜಯಾಧ್ವದಲಿ ಜಂಘಾಲರಹಿರೆಂದ ॥ ೮

ಮೆಱೆಯಲಿಹ ಕಾಲದಲಿ ಬಲಿದೆ
ಚ ಱಿದಿಹುದು ಬೇಕಾದರೆಮಗೆ
ಚ ಱಿಸಿ ಕಾರ್ಯಸ್ಥಿತಿಯ ನಿಶ್ಚ ಱಿಸುವುದು ನಮ್ಮೊಳಗೆ ।
ಅ ಱಿದಿಹುದು ನೀವೆಂದು ರಾಯರಿ
ಗಱುಹಿ ಭೀಮಾದಿಗಳಿಗುಚಿತವ
ನೆಱಿ ನುಡಿದು ದ್ರೌಪದಿಯ ಮನ್ನಿಸಿ ಮರಳಿದನು ಪುರಕೆ ॥ ೯೦

ಅಱಿಸಿ ಹರಿಯಾಮ್ನಾಯತತಿ ಕು
ಕ್ಕ ಱಿಸಿದುವು ಮುನಿವರ ಸಮಾಧಿಗೆ
ಕಱುಬುವವರಾವಲ್ಲಿ ಕಾಣರು ನಖದ ಕೊನೆಗಳನು ।
ಅರಸ ತಾನೇ ಹರಿಸುವಿದು ತ
ನ್ನೆ ಱಕದವರನು ಬಿಡದೆ ಸಲಹುವ
ಕರುಣವೆಂತುಟೊ ರಾಯ ಗದುಗಿನ ವೀರನಾರಣನ ॥ ೯೧

ಹದಿನಾರನೆಯ ಸಂಧಿ ಮುಗಿದುದು.

* ಹದಿನೇಳನೆಯ ಸಂಧಿ.

ಸೂಚನೆ.

ವಿಪಿನದಲಿ ಪಾಂಚಾಲಿ ಭಕ್ತಿಯ
ತಪದಲಿರೆ ದೂರ್ವಾಸನುಗ್ರವ
ನಪಹರಿಸಲಸುರಾರಿ ಬಂದನು ಪಾಂಡವರ ಬಳಿಗೆ ॥

ಪಾಂಡವರು ದ್ವೈತವನದಲ್ಲಿ ವಾಸವಾಡಿದುದು.

ಚಿತ್ತವಿಸು ಜನಮೇಜಯಕ್ಷಿತಿ
ಪೋತ್ತಮನೆ ನಿನ್ನವರು ಬನದಲಿ
ಹತ್ತುವರುಷವನಿಂತು ನೂಕಿದರಿರದೆ ಲೀಲೆಯಲಿ ।
ಉತ್ತಮೋತ್ತಮಯಾವುನಾನದಿ
ತೀರ್ಥಸೇವಾಶೀಲದಿದ್ದರು
ಮತ್ತೆ ಮುನಿಜನಸಹಿತ ಹರುಷದಿ ದ್ವೈತಕಾನನದಿ ॥ ೧

ದೂರ್ವಾಸರ ಆಗಮನ.

ಆಸುಯೋಧನನೇಕಛತ್ರವಿ
ಲಾಸದುರ್ವೀರಾಜ್ಯಪದವಿ
ನ್ಯಾಸವಿಭವದ ಸುಲಭಸಾಖ್ಯವನನುಭವಿಸುತಿರಲು ।
ಭೂಸುರವ್ರಜವೆರಸಿ ವರವಿ
ನ್ಯಾಸಮುನಿಜನಸಹಿತಲಾದೂ
ರ್ವಾಸಮುನಿಪತಿ ಬಂದು ಪೊಕ್ಕನು ಹಸ್ತಿನಾಪುರವ ॥ ೨

---

* ಈ ಸಂಧಿ ಬಹು ಪುಸ್ತಕಗಳಲ್ಲಿ ಇರುವದಿಲ್ಲ.

ದುರ್ಯೋಧನನು ದೂರ್ವಾಸರನ್ನು ಮರ್ಯಾದೆ
ಯಿಂದ ಕರೆತಂದುದು.

ಮುನಿಯ ಬರವನು ಕೇಳ್ದು ದುರ್ಯೋ-ೀ
ಧನನು ಭೀಷ್ಮದ್ರೋಣಗೌತಮ
ರಿನತನಯಗುರುಸೂನುವಿದುರಾದಿಗಳನೊಡಗೊಂಡು ॥
ವಿನುತಭೂಸುರನಿವಹ ಕಾಂತಾ
ಜನದ ಕನ್ನಡಿಕಲಶವಾದ್ಯ
ಧ್ವನಿಯಲಾಗಿದಿರ್ಗೊಂಡು ತಂದನು ಕಾಣಿಕೆಯ ನೀಡಿ ॥ ೩

ವಂದನೆಯ ಕೈಕೊಳುತ ಗಂಗಾ
ನಂದನನ ಕೈವಿಡಿದು ಬರೆ ನೃಪ
ಮುಂದೆ ಕರ್ಣಾದಿಗಳ ಗಡಣದಿ ಹೊಕ್ಕನರಮನೆಯ ।
ಬಂದನಂಗನೆಸಹಿತ ನಮಿಸಿದೊ
ಡಂಧಭೂಪನ ಹರಸಿ ಹರುಷದ
ಲಂದು ಮುನಿ ಮಂಡಿಸಿದನುನ್ನತಸಿಂಹಪೀಠದಲಿ ॥ ೪

ದುರ್ಯೋಧನನು ದೂರ್ವಾಸರಿಗೆ ಆತಿಥ್ಯ ಮಾಡಿದುದು.

ಹೊಳವ ಹೊಂಗಳಶದಲಿ ತುಂಬಿದ
ಜಲದಲಾಮುನಿಪತಿಯ ಪಾದವ
ತೊಳದು ಮಧುಪರ್ಕಾದಿಮನ್ನಣೆಗಳನು ವಿಸ್ತರಿಸಿ ।
ಬಟಿಕ ಕುಶಲವ ಕೇಳ್ದ ಮುನಿಸಂ
ಕುಲವನೊಲಿದಾದರಿಸಲಿತ್ತಲ
ದೊಳಗೆ ಮಿಗೆ ಯೆಡೆಯಾಗಲಾರೋಗಣೆಗೆ ಮುನಿ ಪೊಕ್ಕ ॥ ೫

ಷಡುರಸಾನ್ನದಲಾದರಣೆಯಿಂ
ದುಡುಗೆಯಿಂದವೆ ತುಷ್ಟಬಡಿಸಿದ
ಪೊಡವಿಪಾಲಕ ಮುನಿಗಳಷ್ಟಾಶೀತಿಸಾವಿರವ ।

ಕಡುಸುಖದ ಸಂನ್ಯಾಸಿವೇಷದ
ಮೃಡನು ಮನದಲಿ ಕೌರವನ ಮೈ
ದಡವಿ ಮೆಚ್ಚಿದೆ ಮಗನೆ ಬೇಡೊಲಿದುದನು ನೀನೆಂದ ॥ ೬

ಅರಸ ಕೇಳ್ಯ ಹಸ್ತದಲ್ಲಿಹ
ಪರುಷವನು ಕಲ್ಲೆಂದು ಟಿಕ್ಕೆಯು
ಹರಳಿನಲಿ ಹರಹಿಸುವ ಮೂಢಮನುಷ್ಯರಂದದಲಿ ।
ಕುರುಕುಲಾಗ್ರಣಿ ನುಡಿದನಿನಿಬರು
ವೆರಸಿ ಪಾಂಡವರರಸಿ ಯುಣಲೊಡ
ನಿರದೆ ಗ್ರಾಸವ ಬೇಡಿ ನೀವ್ ನಮಗಿತ್ತ ವರವೆಂದ ॥ ೭

ಭೂಪ ಕೇಳಿದು ದಿನಕೆ ನಿನ್ನಾ
ಳಾಪವನು ಕೈಗೊಂಡೆವೆನುತಾ
ತಾಪಸೋತ್ತಮನೇಳಲೆದ್ದುದು ನೃಪ ಮುನಿವ್ರಾತ ।
ತಾಪಸರು ಬಳಿವಿಡಿದು ಮಿಗೆ ಬಿಟಿ
ಕಾಪುರವ ಹೊಱವಡಲಿಭಪುರ
ಭೂಪ ಭೀಷ್ಮದ್ರೋಣರನು ಕಳುಹಿದನು ಮನೆಗಳಿಗೆ ॥ ೮

ಅಗಡುಮುನಿಪತಿ ಯೊಡ್ಡಿದನಲಾ
ವಿಗಡವನು ಮುನಿಯುಗ್ರದೋಷದ
ಸೆಗಳಿಕೆಗೆ ಪಾಂಡವರು ಸವೆದಂತಾಗದಿರರೆನುತ ।
ದುಗುಡದಲಿ ಗಾಂಗೇಯವಿದುರಾ
ದಿಗಳು ಮನೆ ಹೊಗಲಿತ್ತ ಕೌರವ
ನಗುತ ಕರ್ಣಾದಿಗಳ ಗಡಣದಿ ಹೊಕ್ಕನರಮನೆಯ ॥ ೯

ಇತ್ತಲಾ ದೂರ್ವಾಸಮುನಿ ಯೆಂ
ಭತ್ತಯೆಂಟುಸಹಸ್ರರೊಗ್ಗಿನ
ಲುತ್ತಮರ ವನಕಾಗಿ ಬಂದನು ನಗುತ ಕೌರವನ ।

ಮತ್ತೆ ಮುನಿಗಳು ಕಂಡರೇ ದು
ರ್ವೃತ್ತಿಯನು ಶಿವ ಯೆನುತ ತಲೆದೂ
ಗುತ್ತ ಸಾಹಂಕಾರನಲಿ ಕಾಠಿನ್ಯಭಾವದಲಿ ॥ ೧೦

ದೂರ್ವಾಸರು ಪಾಂಡವರು ಇದ್ದೆಡೆಗೆ ಬಂದುದು.

ಮಱುದಿವಸ ಸತಿಯುಂಡಸಮಯವ
ನಱಿದು ಮುನಿಪತಿ ಬರಲು ಕಪಟದ
ನಿಱುಗೆಯನು ಬಲ್ಲನೆ ಯುಧಿಷ್ಠಿರನೆದ್ದು ಮುನಿಸಹಿತ ।
ಕಿಱಿದೆಡೆಯಲಿದಿರ್ಗೊಂಡು ಭಕ್ತಿಯ
ಹೊಱೆಯೊಳಗೆ ಕುಸಿದಂತೆ ನಡೆತಂ
ದೆಱಗಿದನು ಮುನಿಪದಕೆ ತನ್ನನುಜಾತರೊಡಗೂಡಿ ॥ ೧೧

ಆಗ ಪರಸ್ಪರ ಕುಶಲ ಪ್ರಶ್ನೆ.

ಕುಶಲವೇ ನಿಮಗೆನುತಲೈವರ
ನೊಸಲ ಹಿಡಿದೆತ್ತಿದನು ಕರದಿಂ
ದೊಸೆದು ಧೌಮ್ಯಾದಿಗಳ ಭೂಸುರಜನವ ಮನ್ನಿಸಿದ ।
ಹೊಸಕುಶೆಯ ಪೀಠದಲಿ ಮುನಿ ಮಂ
ಡಿಸಿದನರ್ಘ್ಯಾಚಮನಪಾದ್ಯ
ಪ್ರಸರಮಧುಪರ್ಕಾದಿ ಪೂಜೆಯ ಮಾಡಿ ನೃಪ ನುಡಿದ ॥ ೧೨

ದೇಶ ಕಾನನ ವಲ್ಕಲ ವಾಸವು
ಭೂಸುರವ್ರಜ ವಾತ್ಮಜನವು ಪ
ಲಾಶಪರ್ಣವೆ ಪಾತ್ರ ಭೋಜನ ಕಂದಮೂಲಫಲ ।
ಈಸರಸಿಪಾನೀಯಮಜ್ಜನ
ವಾಸವೀಗೃಹ ಭುವನರಾಜ್ಯವಿ
ಲಾಸವೆಮ್ಮದು ಜೀಯ ಚಿತ್ತವಿಸೆಂದನಾಭೂಪ ॥ ೧೩

ಧಾರುಣೀಪತಿ ಹೇಟಿಬಹುದುಪ
ಚಾರವೇಕಿದು ರಾಜ್ಯಪದವಿ
ಸತ್ತಾರವಾವುದು ರಾಜಋಷಿ ನಿನಗಾರು ಸರಿಯುಂಟೆ ।

ದೂರ್ವಾಸರು ಭೋಜನವನ್ನ ಪೇಕ್ಷಿಸಿದುದು.

ಸಾರೆಯಾಯಿತು ಸಮಯವೆಮ್ಮಹ್ಹು
ಧಾರಪಣವ್ರಣವಿನಿಧಪೀಡಾ
ಹಾರಿಯೇನು ಚಿಕಿತ್ಸೆಯೆಂದನು ಮುನಿಪ ಭೂಪತಿಗೆ ॥ ೧೪

ಆವಜನ್ಮದ ಸುಕೃತ ಫಲ ಸಂ
ಭಾವಿಸಿತೊ ನಿಮ್ಮಡಿಯ ದರ್ಶನ
ಕಾವ ಫಲವಿದು ಕೊಟ್ಟೆನೆಂದನು ನೃಪತಿ ಮುನಿಪತಿಗೆ ।
ಆವಿಗಡ ಮುನಿ ಬಟಿಕನುಷ್ಣಾ
ನಾವಲಂಬನಕತ್ತ ತೆರಳಲು
ಭೂವಧೂವರ ಕರೆಸಿದನು ದ್ರುಪದಾತ್ಮಜೆಯ ಬೇಗ ॥ ೧೫

ಆಗ ನಾನಾವಿಧಚಿಂತೆ.

ಆರಸಿ ಯಾರೋಗಿಸಿದ ಹದನನು
ಬರವಿನಲಿ ನೃಪ ತಿಳಿಯಲಂತಃ
ಕರಣ ಕಳವಳಗೊಳಲು ಸುರಿದುದು ನಯನಜಲಧಾರೆ ।
ಉರಿಹೊಡೆದ ಕೆಂದಾವರೆಯ ವೋಲ್
ಕರಕುವರಿಯಲು ಮುಖ ಕಪಾಲದಿ
ಕರವನಿಟ್ಟು ಮಹೀಶ ತೊನಹುತ ನುಡಿದನಿಂತೆಂದು ॥ ೧೬

ತುಡುಕಿ ಸುರಪನ ಸಿರಿಯ ಶರಧಿಯ
ಮಡುವಿನಲಿ ಹಾಯ್ಕಿದನು ರೋಷವ
ಹಿಡಿದೊಡೀಗಲೆ ಸುಟ್ಟು ಬೊಬ್ಬಿಡುವನು ಜಗತ್ತ್ರಯವ ।
ಮೃಡಮುನೀಶನು ತನಗೆ ಶಾಪವ
ಕೊಡಲಿ ನಾನದಕಂಜೆ ತನ್ನಯ
ನುಡಿಗನೃತಸಂದಪ್ಪವಾದರೆ ಕೆಟ್ಟೆ ತಾನೆಂದ ॥ ೧೭

ಏನಿದೇನೆಲೆ ನೃಪತಿ ಚಿತ್ತ
ಗ್ಲಾನಿಯನು ಬಿಡು ನಿನ್ನ ವಚನಕೆ
ಹಾನಿಯೇಕೈ ಸುಡುವೆನೀಗಳೆ ಸುರಪತಿಯ ಪುರವ ।
ತಾನೆ ಪದವಿಡಿದೆಳದು ತಹೆ ಸುರ
ಧೇನುವನು ನಿಮ್ಮಡಿಗೆನುತ್ತ ಕೃ
ಶಾನುಸಖಸುತ ಗದೆಯ ಕೊಂಡನು ಬೀಗ ಬೆಸಸೆನುತ ॥ ೮೯

ಹ್ಷತ್ರತೇಜದ ತೀವ್ರವನು ನಳ
ಕೊತ್ತಿ ದಿವಿಜೇಶ್ವರನು ಕೊಡುವನೆ
ಹತ್ತಿರದಲಾ ವೈರಿಕೌರವರಾಯ ಸಾಭಾಗ್ಯ ।
ಸತ್ಯವೇಯಿದು ಸುರಭಿಗಳುಕಿದ
ಕಾರ್ತವೀರ್ಯಾರ್ಜುನನ ಕಥೆಯನು
ಮತ್ತೆ ಹೇಳುವೆ ಭಜಿಸಿ ಕೃಷ್ಣನನೆಂದನಾಥೌಮ್ಯ ॥ ೯೯

ಬಿಟ್ಟುನುಡಿಗಳೇಕಕಟ ನಿಮ್ಮಯ
ಹೊರಿಗೆಕಾರನು ಕೃಷ್ಣ ನಾತನ
ಮಟ್ಟಿಯ ಹೊಕ್ಕರಿಗುಂಟೆ ದುಃಖದರಿದ್ರಕಷ್ಟಭಯ ।
ಅಟ್ಟಿಯಿರೇ ಸೆಳೆ ಸೀರೆಯಲಿ ಸತಿ
ಯೊಟ್ಟಿಲಲಹ್ಷಯವಿತ್ತು ತನ್ನನು
ಪೊರೆದ ಕರುಣಾರ್ಣವನ ಭಜಿಸುವ್ರದೆಂದನಾಥೌಮ್ಯ ॥ ೯೦

ನಾಮವನು ನೆಟ್ಟ ನಂಬಿ ಮತ್ತಾ
ನಾಮವನು ನೆನೆದವರು ಪಡೆವರು
ಕಾಮಿತಾರ್ಥವನಿದು ನಿಮ್ಮ ನೆಲೆ ನಿಮಗಱಿಯಬಾರದಲೆ ।
ನಾಮೆ ನಿಮ್ಮಲಿ ಕೃಪೆ ವಿಶೇಷವು
ಕಾಮಿನಿಗೆ ಕಱಿಗುವೆನು ಕೃಷ್ಣನು
ಯಾಮಹಿಳೆ ಭಜಿಸುವುದು ಋಷಿವೆತವೆಂದನಾಥೌಮ್ಯ ॥ ೯೧

ಆಗ ಶ್ರೀಕೃಷ್ಣನನ್ನು ದ್ರೌಪದಿಯು ಪ್ರಾರ್ಥಿಸುವಿಕೆ.

ಭೂಸುರರ ಕಳಕಳವ ನೃಪನಾ
ವೇಶವನು ಪವಮಾನಸುತನ
ಕ್ಲೇಶವನು ನರನಾಟವನು ಮೊದ್ರೇಯರುಪಟಳವ ।
ಆಸರೋಜಾನನೆ ನಿರೀಕ್ಷಿಸು
ತಾಸುರದ ದುಃಖದಲಿ ಮುನಿಯುಪ
ದೇಶಮಂತ್ರದ ಬಲದಿ ಭಾವಿಸಿ ನೆನೆದಳಚ್ಯುತನ ॥ ೮೮

ಮುಗುಧೆ ಮಿಗೆ ನಿಂದಿರ್ದು ಸಮಪದ
ಯುಗಳದಲಿ ಸೂರ್ಯನ ನಿರೀಕ್ಷಿಸಿ
ಮಗುಚಿವೆಯು ನೆಱಿ ಮುಚಿ ನಾಸಿಕದಗ್ರದಲಿ ನಿಲಿಸಿ ।
ನೆಗಹಿ ಪುಳಕಾಂಬುಗಳ ಲೋಚನ
ಬಿಗಿದು ಹೊಗರೆದ್ದಾಗ ಹಿಮ್ಮಡಿ
ಗೊಗುವ ಕೇಶದ ಬಾಲೆ ಭಾವಿಸಿ ನೆನೆದಳಚ್ಯುತನ ॥ ೮೯

ಶ್ರೀರಮಾವರ ದೈತ್ಯಕುಲಸಂ
ಹಾರ ಹರಿ ಭವಜನನಮರಣಕು
ಠಾರ ನಿಗಮವಿದೂರ ಸಚರಾಚರಜಗನ್ನಾಥ ॥
ಚಾರುಗುಣಗಂಭೀರ ಕರುಣಾ
ಕಾರ ವಿಹಿತವಿಚಾರಪಾರಾ
ವಾರ ಹರಿ ಮೈದೋಱೆನುತ ಹಲುಬಿದಳು ನಳಿನಾಕ್ಷಿ ॥ ೯೦

ದ್ರೌಪದಿಯು ಶ್ರೀಕೃಷ್ಣನನ್ನು ನಾನಾ ರೀತಿಯಾಗಿ ಸ್ತುತಿಮಾಡಿದುದು.

ನೀಲಕಂಠನ ನೇತ್ರವಹ್ನಿ
ಜ್ವಾಲೆಗಾಹುತಿಯಾಗಿ ಯೈವರು
ಕಾಲಯಮಪದವ ಪಡೆವರು ಹರ ಜಗನ್ನಾಥ ।

ಕೇಳ ದಿಟ ನೀವೆಮ್ಮ ನುಡಿ ಸಂ
ಭಾವಿಸದೆ ಸಂಕಲ್ಪವಿಟ್ಟಿದರೆ
ಸೋಲುಪಜಿವ್ರದು ಕೃಷ್ಣ ಮೈದೋಱಿಂದಳಿಂದುಮುಖಿ ॥ ೨೫

ಹಿಂದೆ ನಾನಾಪಾಯದಿರುಬಿನ
ಬಂಧನವೆ ಬಿಡಿಸಿದೆ ಯೆಲ್ಲೆ ಗೋ
ವಿಂದ ಕರುಣಾಸಿಂಧು ಮುನಿವೃಂದನತಪಾಪ ।
ಇಂದು ರುದ್ರನು ತಪ್ಪ ಸಾಧಿಸಿ
ಕೊಂದರೆಮ್ಮನು ಕಾಯ್ವರಾರೆಲೆ
ಮುಂದರಾದ್ರಿಧರಾಮರಾಶ್ರಿತಕಲ್ಪಕುಜ ಕೇಳ್ ॥ ೨೬

ಅಱಿಸುವೆನೆ ಪರಿಪೂರ್ಣ ಕೇಳಂ
ದಱಿಹುವೆನೆ ಸರ್ವಜ್ಞ ಸಾಕಿ
ನ್ನಱಿಸಿ ಮಾಡುವುದೇನು ತಾಯ್ ನೀನಾವು ಶಿಶುಗಳಲೆ ।
ಕುಱಿಹು ದೋಱ್ಯೈ ಕೃಷ್ಣ ಕರುಣವೆ
ಕಱಿದು ಕಳಯೈ ಭಕ್ತರರ್ಥವೆ
ಹೊಱಿವೆ ಹೊಂಪುಳ್ಳದಟರಾರೆಂದಳ್ ಸರೋಜಮುಖಿ ॥ ೨೭

ಮುನ್ನವೇ ಮುನಿದಂಬರೀಷಗೆ
ಬೆನ್ನ ತೆತ್ತನ ಹರನ ನೇತ್ರದ
ವಹ್ನಿಯೊಳಗುದ್ಧರಿಸು ಕೆಡುವರು ಪಾಂಡುನಂದನರು [1] ।
ಉನ್ನತೋನ್ನತಕೃಷ್ಣ ರಕ್ಷಿಸು
ಪನ್ನಗಾರಿಧ್ವಜನೆ ರಕ್ಷಿಪು
ದನ್ಯಗತಿಯಾರೆನುತ ಹಲುಬಿದಳಂದು ನಳನಾಕ್ಷಿ ॥ ೨೮

ಬಟಿಕ ನಿನ್ನಯ ವರಸುದರ್ಶನ
ಸುಟ್ಟಿವು ದೋಱಲು ಕೋಟಿಸೂರ್ಯರ
ಬೆಳಗ ಬೀಱುತ ಹೊತ್ತಿ ಹೊಗಲುರಿ ಮೂಱುಲೋಕದಲಿ ।

---

1 ವಹ್ನಿಯೊಳಗುದಯಿಸಿದ ಕಂಗಿಡಿ ಸುಡಲು ಕಂಗಡುತ್ತ ಚ

ಬಲುಬಿಸಿಲಲಾಯೆಂದು ಚಂದ್ರಿಕೆ
ಬೆಳಗೆನಲು ಘನರೋಷವಹ್ನಿಯ
ಕಳೆದು ಬೀರಲು ವಿಕಳ [1] ಚಂದ್ರಮನಾದ ದೂರ್ವಾಸ ॥ ೮

ಚಿಗಿದು ಬೆಂಬತ್ತಲರಿ ಮುನಿ ಮೂ
ಜಗವನೆಲ್ಲವ ತೊಟ್ಟಿಲಿ ಭಕ್ತಿಯ
ಬಿಗುಹಿನಲಿ ಮೈಯಾರಿ ಶ್ರುತಿಶೀರ್ಷೋಕ್ತರೀತಿಯಲಿ [2] ।
ಹೊಗಟಿದರೆ ಹಿಂದೆಗೆದುದಾ ಮುನಿ
ಬೆಗಡ ಬಿಡಿಸಿತು ನೃಪನ ಕಾಯ್ದುಱೆ
ಸುಗುಣಶೇಖರ ಕೃಷ್ಣ ಕಮಲಾಂಬಕನೆ ಮೈದೋಱೈ ॥ ೯

ಅವನಿಪತಿ ಕೇಳಖಿಳವೇದ
ಸ್ತವಕೆ ತಾನೆಡೆಗೊಡದ ಮಹಿಮಾ
ರ್ಣವನನೇಸುಭವಂಗಳಲಿ ಭಜಿಸಿದರೊ ಪಾಂಡವರು ।
ಯುವತಿಯಕ್ಕೆಯ ಸೈರಿಸದೆ ಯಾ
ದವಶಿರೋಮಣಿ ಬಂದನಾಪಾ
ರ್ಥಿವರು ಕಂಡರು ದೂರದಲಿ ಜನನಾಥ ಕೇಳೆಂದ ॥ ೧೦

ಮುಗುಳುನಗೆಗಳ ಹೊಂಗುವೆಂಗದ
ದೃಗುಯುಗಳದಾನಂದಬಿಂದುಗ
ಳೊಗೆಯೆ ಸಂತಸವೆತ್ತು ಪರುಷಸ್ವೇದಸಂಪುಟದ ।
ಬಗೆಯ ಬೆರಸದ ಪರವಸದೊಳಾ
ನಗೆಯೊಳಡೆಗೊಂಡತುಳಜನ್ಮದ
ಮುಗುದಪಾಂಡವರೆಱಗಿದರು ಧೌಮ್ಯಾದಿಗಳು ಸಹಿತ ॥ ೧೧

ಶ್ರೀಕೃಷ್ಣನ ಆಗಮನ,

ರಥವಿಷ್ಟದನಸುರಾರಿ ಸುಮನೋ
ರಥವಿದಿರು ಬಪ್ಪಂತೆ ಕುಂತೀ
ಸುತರ ನಿಜಭುಜಸಾರೆ ತಕ್ಕೈಸಿದನು ಪರುಷದಲಿ ।

---

1 ಚಕಿತ, ಚ, 2 ಸಾರೂಪ್ಯಮಾನದಲಿ, ಚ,

ಕ್ಷಿತಿಯಮರರಾಶೀರ್ವಚನಸಂ
ಸ್ತುತಿಗೆ ತಲೆವಾಗುತ್ತ ಮಿಗೆ ದೌ
ಪತಿಯು ಹೊರೆಗೈದನುಷೀ ಯೆಂದುದು ಸುರಸ್ತೋಮ ॥ ೩೩

ಜ್ಞಾನ [1] ಗೋಚರನಾಗಿ ವನಿತೆಯ
ಮಾನಸದಲಿಹ ಪರಮಹಂಸನು
ಮಾನವಾಕೃತಿಯಾಗಿ ತೋಱಿದ ಬಾಹ್ಯರಚನೆಯಲಿ ।
ಮಾನಿನಿಯ ಮೈದಡಹಿ ಚಿಂತೆಯ
ದೇನು ತಂಗಿ ಲತಾಂಗಿ ಹೇಳೆಂ
ಮೌನಮುದ್ರೆಯದೇನೆನಲು ಕಂದೆಱೆದಳಿಂದುಮುಖಿ ॥ ೩೪

ದೌಪದಿಯು ಸಂತೋಷದಿಂದ ಪಾದದಲ್ಲಿ ಬಿದ್ದು
ಸ್ತುತಿಮಾಡಿದುದು.

ಉಬ್ಬಿದಳು ಹರುಷದಲಿ ಗಾಢದ
ಮುಬ್ಬು ವೆರಿದುದು ಪುಳಕವಾರಿಯೊ
ಳುಬ್ಬಸವನೊಡೆಹಾಯ್ದು ನಿಂದಳು ನಯನವಾರಿಯಲಿ ।
ಸಭ್ಯತಾಲತೆ ಹೂತು ಹಸರಿಸಿ
ಹಬ್ಬಿ ಫಲವಾದಂತೆ ಕಾಯುವ
ನಿಬ್ಬರದಲೀಡಾಡಿದಳು ಹರಿಪದಪಯೋಜದಲಿ ॥ ೩೫

ಧರಣಿಯನು ಬಿಡದಳೆದು ಹೆಱಿ ದ
ಚರಣವಿದು ಕಾಳಿಂಗಮರ್ದನ
ಚರಣವಿದು ಹರಳಾದಹಲ್ಯೆಯ ಶಾಪಹರಣ ವಿದು ।
ಚರಣವಿದು ಸುರನದಿಯ ಸೃಜಿಸಿದ
ಚರಣವಿದು ಶಕಟಪ್ರಭಂಜನ
ಚರಣವಿದು ಯೆನುತ ಕೊಂಡಾಡಿದಳು ಹರಿಪದವ ॥ ೩೬

---

[1] ಧ್ಯಾನ, ಚ.

ಶ್ರೀಕೃಷ್ಣನು ಪಾಂಡವರ ಇಷ್ಟವನ್ನು ನೆರವೇರಿಸಿದುದು.

ಗಾತಗಳಿಗಿ [1] ದು ಸಮಯವೇ ಹೇ
ಶೀತಕೀಸು ತಿಯಂತರಂಗದ
ಲಾತುರವಿದೇನೆನುತ ಹಿಡಿದೆತ್ತಿದನು ಬಾಲಿಕೆಯ ।
ಬೀತತರು ಶುಕನಿಕರಕೀವುದೆ
ಯೌತಣವಸಲೆ ತುಷ್ಟಬಡಿಸುವ
ರೀತಿಯನು ನೀ ಬಲ್ಲೆ ಯೆಂದಳು ಕಮಲಮುಖಿ ನಗುತ ॥ ೩೭

ಶೌರಿ ಕೇಳ್ಸಾಕ್ಷಾತ್ತು ಶಿವನವ
ತಾರವಹ ದೂರ್ವಾಸ ಮುನಿ ಪರಿ
ವಾರಸಹಿತೈತಂದೊಡಭ್ಯಾಗತವ ನೃಪನಿತ್ತ ।
ತೀರಿತಕ್ಷಯದನ್ನವಿಂದು * ಮು
ರಾರಿ ಮುನಿಯೂಟಕ್ಕೆ ಯೇನೈ
ಪಾರಣೆಯ ಮಾಡುವನು ನಿನ್ನಯ ಪೇಣ್ದೈವರನು * ॥ ೩೮

ನಾವು ಹಸಿದೈತಂದೊಡೀಪರಿ
ದೇವಿ ನಾನಾದೂಟ ದೂಹುವು
ದಾವುದುಚಿತವು ಹೇಳೆನಲು ನಡುನಡುಗಿ ಕೈಮುಗಿದು ।
ದೇವ ನಿಮ್ಮಯ ಹಸಿವ ಕಳವೊಡೆ
ಭಾವಶುದ್ಧಿಯ ಭಕ್ತಿ ಬೇಱು
ಲ್ಲಾವು ಚಂಚಲಹೃದಯರೆಂದಳು ನಗುತ ನಳಿನಾಕ್ಷಿ ॥ ೩೯

ಮಾತುಗಳು ಸೊಗಸುವುವೆ ಕೇಳ್ ಹ್ಞು
ಧಾತುರರಿಗೆಲೆ ತಂಗಿ ತಾವು
ಪ್ರೀತಿಯಿಂದೊಲಿದಿತ್ತುದೆ ಸುಧೆ ನಮಗೆ ಪಥ್ಯವಿದು ।

---

1 ಸ್ತೋತ್ರ, ಚ.

* .....ಮು
ಹಾರುಷಿಗೆಯಾಹಾರ ನಿನ್ನಯ
ವೀರವೈದುನರೆಂದು ಬಿನ್ನೈಸಿದಳು ನಳಿನಾಕ್ಷಿ ॥, ಚ.

ನಿತಕೀಜಂಜಡವೆನಲು ಜಲ
ಜಾತಮುಖಿ ಕಂಪಿಸುತ ಕುಮುದಾ
ರಾತಿಯಿತ್ತಾ ಸ್ಥಳಿಯನು ತಂದಿತ್ತಳಿದೆ ಯೆನುತ ॥ ೪೦

ಕಂಡು ಕಿಂಚಿತ್ಪ್ರಕಶೇಷವ
ಪ್ರುಂಡರೀಕಾಂಬಕನದನು ಕೈ
ಕೊಂಡು ತಾನದನುಂಡು ತಲೆದೂಗಿದನು ತೇಗಿದನು ।
ಭಾಂಡ ತುಂಬಿತು ಮತ್ತೆ ನಲಿಯುತ
ಚಂಡಹೃದಯನ ನುಡಿಯ ವಿಷವನು
ಖಂಡಿಸಿದೆಲಾ ಯೆನುತ ಕೊಂಡಾಡಿದನು ಕೋಮಲೆಯ ॥ ೪೧

ಆಗ ದೂರ್ವಾಸರು ಕೃಷ್ಣಗಮನವನ್ನು ತಿಳಿದುದು.

ಅರಸ ಕೇಳೀಚೆಯಲಿ ಮುದದು
ಬ್ಬರದ ತನುವಿನ ತಳಿತರೋಮೋ
ತ್ಕರದ ಹೃಷ್ಟ್ಯಯ ಬಳ್ಳಿದೇಗಿನ ಹಿಗ್ಗುವಳ್ಳಿಗಳ ।
ಕೊರಳಿಗಡಱಿದ ಹೊಟ್ಟೆಗಳ ಋಷಿ
ವರರುಸಹದೂರ್ವಾಸಮುನಿಯಾ
ಸರಸಿಜಾಹ್ವನ ಬರವ ಕಂಡನು ದಿವ್ಯದೃಷ್ಟಿಯಲಿ ॥ ೪೨

ಬಂದನೇ ಗೋವಿಂದ ಭಕ್ತರ
ಬಂಧುವೇ ಈತನೊಳುಮೆನಸಿಗೆ
ಬಂದಮನುಜರ ಸೆಣಸ ಮಾಡುವರಾರುಭುವನದಲಿ ।
ಎಂದೆನುತ ದೂರ್ವಾಸಮುನಿಪತಿ
ಬಂದು ಕಂಡನು ಕೃಷ್ಣರಾಯನ
ನಂದು ಕುಂತೀಸುತನ ರಾಯನ ಪರ್ಣಶಾಲೆಯಲಿ ॥ ೪೩

ಆಗ ಕೃಷ್ಣದೂರ್ವಾಸರ ಪ್ರೇಮಾಲಿಂಗನ ಸಂವಾದಗಳು.

ಕಾಣುತಿದಿರೆದ್ದಸುರಮರ್ದನ
ಕಾಣಿಕೆಯನಿತ್ತೆಱಗಿ ಹೋ ಹೋ
ಸ್ಥಾಣುವಿನ ಬರವೆತ್ತಲಿಂದಾಯ್ತೆಂದು ಕೈಮುಗಿಯೆ ।

ಮೊಣು ಮೂಢವೆ ನಾವು ಮಾನವ
ರಾಣೆ ನಾಟಕದಲ್ಲಿ ನುಡಿ ಯಿದು
ಜಾಣ ನೀನಹೆ ಯೆನುತ ಹಾಯ್ದಪ್ಪಿದನು ಮುನಿ ಹರಿಯ ॥ ೪೪

ಯತಿಗಳ್ಯತರೆ ಗಾರುಹಸ್ತ್ಯ
ವ್ರತಿಯು ವಂದಿಸಬೇಹುದಾಪ
ದ್ಧತಿಯ ತೋಱುವ ಪಥವಿದೈ ಸಲೆ ನೀನು ವಂದಿಪ್ರದು ।
ಅತಿಸಹಜವೈ ಕೃಷ್ಣ ಕುಳ್ಳಿರು
ಶ್ರುತಿಶಿರೋಮಣಿ ಕುಳ್ಳಿರೈ ವ್ಯಾ
ಹೃತಗೃಹಸ್ಥನೆ ಕುಳ್ಳಿರೆನುತವೆ ಮುನಿಪ ಮನ್ನಿಸಿದ ॥ ೪೫

ಮುನಿಪನಿರ್ದನು ಕುಶೆಯ ಪೀಠದಿ
ದನುಜಹರ ಕೆಲಕಡೆಯಲಾ
ತನ ಕೆಲದಲೈದರು ಬಹಿಕ ಬುಧಜನರವರ ಮಧ್ಯದಲಿ ।
ತನತನಗೆ ದೂರ್ವಾಸನಾಜ್ಞೆಯೊ
ಳನಿತು ಅಷ್ಟಾಶೀತಿಸಾವಿರ
ಮುನಿಗಳಿರಲಂದಬಲೆ ಬಂದಳು ಹರುಷಭಾಮೆದಲಿ ॥ ೪೬

ತುಂಬಿ ಕುಳ್ಳಿರ್ದಖಿಳಮುನಿನಿಕು
ರುಂಬ ಸಭೆಯೊಳಗಿರ್ದ ಮುನಿಪಂ
ಗಂಬುಜಾನನೆ ನಮಿಸೆ ಹರಸಿದನೈದೆಯಾಗೆನುತ ।
ಹಂಬಲಿಸುತಿಹ ನಿಗಮಶಾಸ್ತ್ರಗ
ಳಿಂಬುಗೊಡದಿಹ ಗಾಢದೈವವು
ಬೆಂಬಳಿಯಲಿರಲರಿದದಾವುದಸಾಧ್ಯವೇನೆಂದ ॥ ೪೭

ಮೈವಳವ ಮಾಡಿದರಲೈ ಬಲು
ದೈವವೆನು ಕುರುಕುಲದ ಬೇಱನು
ಕೊಯ್ವನೀಹರಿ ಬಳಿಸಲಿಸಿ ಭೀಮಾರ್ಜುನಾಸ್ತ್ರದಲಿ ।

* ಕಾವೆ ನಿಮ್ಮನು ಬಟ್ಟಿಕ ಕಡೆಯಲಿ
ಭೂವಧುವ ಸೇರಿಸುವೆ ಕೊಡುವೆನು
ಕೈವಲವೆನುತ್ತ ಕೈವಿಡಿದು ಕಲ್ಪಿತಸಿದ್ಧವಹುದೆಂದ * ॥ ೪೪

ಧರ್ಮರಾಯರು ದೂರ್ವಾಸರನ್ನು ಭೋಜನಕ್ಕಾಗಿ ಕರೆದುದು.

ಎಲೆ ಮುನೀಶ್ವರ ನಿಮ್ಮ ನುಡಿಯ
ಸ್ಖಲಿತವಿದು ಯಿಹಪರದ ಗತಿ ನಿ
ರ್ಮಲವು ಕೃಷ್ಣನ ಕೂರ್ಮೆಯಿರಲರಿದಾವುದೆರಡಱಲಿ ।
ನಳಿನಸಖನಪರಾಂಬುರಾಶಿಯ
ನಿಲುಕುತೈದನೆ ಹಸಿದುದೀಮುನಿ
ಬಳಗವಾರೋಗಣೆಗೆ ಚಿತ್ತವಿಸೆಂದನಾಭೂಪ ॥ ೪೯

ಆಗ ತೃಪ್ತರಾಗಿ ದೂರ್ವಾಸರು ಆಡಿದಮಾತುಗಳು.

ಬೇರು ನೀರುಂಡಾಗ ದಣಿಯದೆ
ಭೂರುಹದ ಶಾಖೋಪಶಾಖೆಗ
ಳೋರಣಿಯು ನಿಜದೇಹವೆಂಗೋಪಾಂಗವೆಂದೆಂಬ ।
ಶ್ರೀರಮಣಸಂತುಷ್ಟನಾದರೆ
ಬೇರೆ ಭೋಜನ ನಮಗೆ ಬೇಹುದೆ
ಭೂರಮಣ ಹೇಟೆಂದು ನಗುತಿಂತೆಂದನಾಮುನಿಪ ॥ ೫೦

ಮೈಷ್ಟಭೋಜನದಿಂದ ನಾವ್ ಸಂ
ತುಷ್ಟರಾವೊಲಿದುದನು ಬೇಡೈ
ದುಷ್ಟಕಾರಣ ನಮ್ಮ ಕಳುಹಿದ ಧೂರ್ತವಿದ್ಯೆಯಲಿ ।
ಕಷ್ಟಕೈಗೂಡಿದರೆ ಮಿಗೆ ವ್ರತ
ಗೆಟ್ಟರೇ ಪಾಂಡವರು ಹರಿಪದ
ನಿಷ್ಠರನು ನಿಲುಕುವರೆ ದುರ್ಜನರೆಂದನಾಮುನಿಪ ॥ ೫೧

* ಕಾವನೈ ನಿಮ್ಮೊಳವರನು ಕೈ
ಗಾವನೇ ವರರಾಜ್ಯಲಕುಮಿಯ
ಕೈವಿಡಿವ ಸಂಕಲ್ಪಸಿದ್ಧಿಪುದೆಂದನಾಮುನಿಪ, ॥ ಚ.

ಎಂದು ಹರಿಯನು ಹೊಗಳಿ ನಾನಾ
ಛಂದದಲಿ ಪಾಂಡವರ ತಿಳುಹಿ ಮು
ನೀಂದ್ರ ತನ್ನಾಶ್ರಮಕೆ ಸರಿದನು ತಾಪಸರು ಸಹಿತ ।
* ಅಂದು ಕುಂತೀಸುತರನತಿಕೃಪೆ
ಯಿಂದ ಮೆನ್ನಿಸಿ ವೀರನಾರಣ
ನಂದು ಬಿಜಯಂಗೈದ ಸಂದಾದ್ವಾರಕಾಪುರಿಗೆ * ॥ ೪೦

ಹದಿನೇಳನೆಯ ಸಂಧಿ ಮುಗಿದುದು.

ಹ ದಿ ನೆಂ ಟ ನೆ ಯ ಸ ಂ ಧಿ .

ಸೂಚನೆ.

ರಾಯ ಕುರುಪತಿವಿದುರಗುರುಗಾಂ
ಗೇಯಕೃಪರಲ್ಲಿನಲು ಪಾಂಡವ
ರಾಯವಿಪಿನಕೆ ದ್ರೌಪದಿಯು ನೆವದಲ್ಲಿತಂದ ॥

ಕೃಷ್ಣನು ದ್ವಾರಕಗೆ ಹೊರಡಲು ಪಾಂಡವರ ಚಿಂತೆ.

ಕೇಳು ಜನಮೇಜಯ ಧರಿತ್ರೀ
ಪಾಲ ನಿಜನಗರಕ್ಕೆ ಲಕ್ಷ್ಮೀ
ಲೋಲ ಬಿಜಯಂಗೈದನಿತ್ತಲು ಪಾಂಡುನಂದನರು ।
ಮೇಲುದುಗುಡದ ಮುಖದ ಚಿಂತೆಯ
ಜಾಳಿಗೆಯ ಜಡಮನದಲಿದ್ದರು
ಸೂಳುಸುಯ್ಲಿನ ಹೊಯ್ಲ ನಾಸಾಪುಟದ ಬೆರಳಿನಲಿ ॥ ೧

---

* ಅಂದು ಕುಂತೀನಂದನರಿಗಾ
ನಂದಸುಖವನು ಕರದು ದೇವಮು
ಕುಂದ ಬಿಜಯಂಗೈದು ಹೊಕ್ಕನು ನೋರಕಾಪುರಿಯ, ಚ.

ಸೂಱೆಯೋದುದು ರಾಜ್ಯಸಿರಿ ಮು
ಮ್ಮೂಱುವೋದುದು ಲಜ್ಜೆ ಬೆಟ್ಟವ
ಸೇಱಿ ಕಾನನಕೀಡಿದು ವನದಿಂದಡಱಿ ಗಿರಿಕುಲವ ।
ತಾಱಿಥಟ್ಟಿಗೆ ಹಾಯ್ವ ಸುಖ ಮನ
ದೇಱಿ ಮಸಗಿ ಮುರಾರಿ ಕೃಪೆಯನು
ತೋಱಿ ಯಡಗಿದನಕಟವಿಧಿಯೆಂದಬಲಿದನು ಭೂಪ ॥ ೦

ಎಹಗೆ ಸೈರಿಸಿ ನಿಂವರೋ ವ್ರಜ
ಮಹಿಳೆಯರು ಕೃಷ್ಣಾಂಘ್ರಿವಿರಹದ
ದಹನತಾಪಸ್ತಂಭಕೌಷಧದಾನಶೌಂಡರಿಗೆ ।
ಅಹಹ ಕೊಡುವೆನು ತನ್ನನೆನುತು
ಮ್ಮಹದ ಮೊನೆಮುಱಿದವನಿಪತಿ ನಿ
ಸ್ಸಹೆಯಲಿರ್ದನು ರಾಜಕಾರ್ಯವಿಹಾರಲೀಲೆಯಲಿ ॥ ೧

ಕಾಮ್ಯಕವನದಿಂದ ಬಂದ ಬ್ರಾಹ್ಮಣನಿಂದ ಪಾಂಡವರ
ವರ್ತಮಾನ ಕೇಳಿದುದು.

ಅರಸ ಕೇಳ್ಹ ಹಸ್ತಿನಾಪುರ
ವರಕೆ ಕಾಮ್ಯಕವನದಿ ಬಂದನು
ಧರಣಿಸುರನೈತಂದು ಕರ್ಣಾದಿಗಳ ಭವನದಲಿ ।
ಇರಲಿರಲು ಧೃತರಾಷ್ಟ್ರಭೂಪತಿ
ಕರೆಸಿ ಬೆಸಗೊಂಡನು ಯುಧಿಷ್ಠಿರ
ನಿರವನಟವೀತಟಪರಿಭ್ರಮಭೂರಿಭೂಷಣನ ॥ ೪

ವಿವಿಧವನಪರ್ಯಟನದಾಯಾ
ಸವೆನು ತತ್ಪರಿಸರದ ಕಂಟಕ
ನಿವಹವೆನು ದಾನವರ ದಕ್ಕಡತನದ ಧಟ್ಟಣೆಯು ।

---

1 ಪರಭ್ರಮಣೈಕಭೀಷಣನ, ಚ.

ಅವಚಿದಾಪತ್ತಿನ ಮನಃಖೇ
ದವನು ಖೋಡಿಯು ಖತಿಯು ಲಜ್ಜಾ
ವಿವರಣವನಱುಹಿದನು ದ್ವಿಜ ಧೃತರಾಷ್ಟ್ರ ಭೂಪತಿಗೆ ॥ ೫

ಅದರಿಂದ ಧೃತರಾಷ್ಟ್ರರಾಯನ ಚಿಂತೆ.

ಈ ವಿಧಿಯೆ ಪಾಂಡವರಿಗಕಟಾ
ಸಾವು ಬಾರದು ತನಗೆ ತಾ ಮು
ನ್ನಾವ ನೋಹಿಯನಟಿದೆನೋ ಶಿವೆ ಭವಸಹಸ್ರದಲಿ ।
ಈ ವಿಲಾಸವನೀವಿಭವಸಂ
ಭಾವನೆಯನೀಪದವನೀಪ್ರ
ತ್ಯಾವಳಿಯ ಸುಡಲೆನುತ ಮಿಗೆ ಮಱುಗಿದನು ಧೃತರಾಷ್ಟ್ರ ॥ ೬

ಮರಳಿ ಮರಳಿ ಯುಧಿಷ್ಠಿರನ ಮನ
ದಿರವೆ ಭೀಮನ ಖತಿಯ ಪಾರ್ಥನ
ಪರಿಯ ನಕುಲನ ನಿಲವನಾ ಸಹದೇವನಾಯತವ ।
ತರಳಯುಚ್ಚೈಯನಾಪ್ತರೋಹಿತ
ವರನ ಖೇದವನಾಮುನೀಂದ್ರರ
ಪರಗತಿಯನಡಿಗಡಿಗೆ ಕೇಳುತ ಮಱುಗಿದನು ನೃಪತಿ ॥ ೭

ಇದನ್ನು ನೋಡಿ ಕರ್ಣಾದಿಗಳ ಪ್ರಶ್ನೆ ಮತ್ತು
ರಾಯನ ಉತ್ತರ.

ಅಳಲುವೀ ಧೃತರಾಷ್ಟ್ರ ಭೂಪನ
ಕಳಕಳವನುಱಿ ಕೇಳಿ ಹರುಷದೊ [1]
ಳುಲಿದು ತಂಬುಲ ಸೂಸೆ ನಕ್ಕರು ಹೊಯ್ದು ಕರತಳವ ।
ಖಳಶಿರೋಮಣಿಗಳು ಮಹೀಶನ
ನಿಳಯಕೈತಂದರು ವಿಲೋಚನ
ಜಲವ ಸೆಱಗಿನೊಳೊಱಸಿ ನುಡಿದರು ಖೇದವೇಕೆಂದು ॥ ೮

1 ಕಳವ ಕೇಳುತ ಕರ್ಣ ಶಕುನಿಗ, ಚ.

ಖೇದವೇಕೆಂದೇಸು ಮಕ್ಕಳು
ಬೀದಿಗರುವಾದರು ವನಾಂತದ
ಲಾದಚಿತ್ತವ್ಯಥೆಯ ಕೇಳಲು ಬೆಂದುದೆನ್ನೊಡಲು ।
ಆದಿವಾಕರನಂತೆ ನಿಚ್ಚ ಲು
ಕಾದುದುದಯಾಸ್ತಮಯದಲಿ ದನು
ಜಾದಿಖಳರೊಡನಡವಿಗೋಟಲೆ ಯೆಂದು ಬಿಸುಸುಯ್ದ ॥ ೯

ಅದಕ್ಕೆ ಶಕುನಿಯ ಸಮಾಧಾನ.

ಈಕುಮೊರಕರಲ್ಲಲೇ ಕುಂ
ತೀಕುಮೊರರು ನವೆವುತಿದ್ದರೆ
ಸಾಕು ಸಾಕಳಲೇಕೆ ಸತ್ಪಾಧಿಕರು ಸಜ್ಜನರು ।
ಈಕುರುಕ್ಷಿತಿಪತಿಯಲನ್ಯಾ
ಯೈಕಲವವುಂಟೇ ವಿಚಾರಿಸಿ
ಶೋಕವನು ಬಿಡಿ ಬಯಲಡೊಂಬೇಕೆಂದನಾಶಕುನಿ ॥ ೧೦

ವಿಷಯಲಂಪಟರಹ್ಲಲೀಲಾ
ವ್ಯಸನಕೋಸುಗವೊತ್ತಿ ಯಿಟ್ಟರು
ವಸುಮತಿಯಲನ್ಯಾಯವುಂಟೇ ನಿನ್ನ ಮಕ್ಕಳಲಿ ।
ಉಸುರಲಮ್ಮದೆ ಸತ್ಯವನು ಪಾ
ಲಿಸಲು ಹೊಕ್ಕರರಣ್ಯವನು ತ
ದ್ವ್ಯಸನಫಲಭೋಗಿಗಳಿಗಖಿಲುವಿರೇಕೆ ನೀವೆಂದ ॥ ೧೧

ಅವರು ಕುಹಕೋಪಾಯದಲಿ ಕೌ
ರವರ ಕೆಡಿಸದೆ ಮಾಣರರ್ಜುನ
ಪವನಜರ ಭಾಷೆಗಳ ಮೆಱೆದಿರಿ ಜೂಜುಸಭೆಯೊಳಗೆ ।
ಅವರು ಸುಜನರು ನಿಮ್ಮವರು ಖಳ
ರವರು ಸದಮಲಸಾಧುಗಳು ಕೌ
ರವರಸಾಧುಗಳೆಂದು ತೋಱಿತೆ ನಿಮ್ಮ ಚಿತ್ತದಲಿ ॥ ೧೨

ಗಳಹನನಿಲಜ ಗಾಢಗರ್ವದ
ಹುಳುಕನರ್ಜುನನವೆರ ದೇಹದ
ನೆಳಲು ಮೊದ್ರೀಸುತರು ಮೆಕ್ಕಳು ವಿಪುಳಸಾಹಸರು ।
ಅಳಲಬಹುದರಸಂಗೆ ಫಳಿಗೆಗೆ
ತಿಳಿವನವದಿರ ಸಂಗದಲಿ ಮನ
ಮುಳಿವನೆರಡಿಟ್ಟಹನು ಧರ್ಮಜನೆಂದನಾಶಕುನಿ ॥ ೧೩

ಅವರ ವನವಾಸದ ದಿನಂಗಳು
ನಮಗೆ ಸುದಿನ ಸುಖಾನುಭವವೆವ
ರವಧಿ ತುಂಬಿದ ಬಟ್ಟಿಕ ನೋಡಾ ಸಾಧುಗಳ ಪರಿಯು ।
ನಿವಗೆ ದುರ್ಯೋಧನನ ಸಾಮ್ರ್ಯ
ಜ್ಞವೆ ನಿರೀಕ್ಷಿಸುವರ್ತಿಯಲಿ ಪಾಂ
ಡವರ ಹಂಬಲ ಬಿಡುವುದುಚಿತವಿದೆಂದನಾಶಕುನಿ [1] ॥ ೧೪

ಬೀವು ತಾ ಪರಿಪಕ್ವವಾದರೆ
ಹಾವು ಮೆಕ್ಕೆಗೆ ಸಾಕ್ಷಿ ಗಡ ಧ
ರ್ಮಾವಮಾನದ ಕವಿಗೆ ಕ್ಷಾಮೊದಿಗಳ ನೆರವಿ ಗಡ ।
ಆವಿಡಂಬದ ಶಕುನಿಕರ್ಣರು
ಜೀವಸಖರ್ಕೆ ತವ್ಕೊಳಗೆ ದು
ರ್ಭಾವಫೀಕರಹೃದಯ ನುಡಿದನು ಕರ್ಣನರಸಂಗೆ ॥ ೧೫

ಶಕುನಿಯು ಹೇಳಿದ್ದನ್ನು ಕರ್ಣನು ಅನುವೋದಿಸಿದುದು.

ಆಹ ಶಕುನಿಯ ಮಾತಿನಲಿ ಸಂ
ದೇಹವೇ ಪಾಂಡವರು ಬಂಧು
ದ್ರೋಹಿಗಳು ತಮ್ಮವಧಿ ತುಂಬಲು ಕೇಡತಹರೆಂಬ ।
ಈಹದನು ತಪ್ಪುವುದೆ ನೀವತಿ
ಮೋಹದಲಿ ಬಿಡೆ ಬಿಸಿದು ಬಿದ್ದರೆ
ಕಾಹುರರು ಕುರುಪತಿಯ [2] ಕೆಡಿಸುವರೆಂದನಾಕರ್ಣ ॥ ೧೬

---

1 ಮಱಿವುದುಚಿತವು ಕರ್ಣ ಹೇಟೆಂದ, ಚ. 2 ಕೌರವನ, ಚ,

ಈಸುಖದ ಸುಗ್ಗಿಯಲಿ ನಿನ್ನವ
ರೇಸು ಹೆಚ್ಚು ಗೆಯಾಗಿ ಬದುಕಿದ
ರೈಸುವನು ನೆಜ್ಜಿ ನೋಡಿ ಹಿಗ್ಗದೆ ಪಾಂಡುನಂದನರು ।
ಘಾಸಿಯಾದರು ಘಟ್ಟಬೆಟ್ಟದ
ಪೈಸರದಳಂದಬಲಿ ಮಱುಗುತ
ಸೂಸಿದೈ ಸಾಹಿತ್ಯಭಾಷೆಯನೆಂದನಾರ್ಕಣ್ಣ ॥ ೧೭

ಸೊಗಸು ತಳಿತುದು ತರಳಮನ ತಳ
ಮಗುಚಿದಂತಾಯ್ತುವರೊಲವು ಕಾ
ಡಿಗೆಯು ಕೆಸಱೊಳಗ್ಗದ ನೀಲದ ಸರಿಗೆ ಸರಿಯಾಯ್ತು ।
ಮುಗುಳುಗಂಗಳ ಬಾಷ್ಪಬಿಂದುವ
ನುಗುರಕೊನೆಯಲಿ ಮಿಡಿದು ಕಣ್ಣಿನ
ಹೊಗಱಿದನು ಬಟ್ಟಕೇನು ಸಿಂಗಿಯಲುಂಟೆ ಸವಿಯೆಂದ ॥ ೧೮

ಹೋಗಲಾಪಾಂಡವರ ಚಿಂತೆಯ
ನೀಗಿದೆವು ನೀವಿನ್ನು ನೆನೆವು
ದ್ಯೋಗವೇನೆನೆ ನಗುತ ನುಡಿದರು ಕರ್ಣಶಕುನಿಗಳು ।
ಘೋಷಯಾತ್ರೆಗೆ ಹೋಗುವುದಕ್ಕೆ ಉಪಾಯ.
ಈಗಳೀವಿಭವದ ವಿಲಾಸದ
ಭೋಗದಗ್ಗಳಿಕೆಗಳ ಭುಜದ
ರ್ಪಾಗಮವನವರಿದ್ದ ಬನದಲಿ ತೋಱಬೇಕೆಂದ ॥ ೧೯

ನಾಡೊಳಗೆ ತುಱುಹಟ್ಟಿಯಲಿ ಹೊಲ
ನಾಡಿ ಹೆಚ್ಚಿದ ಗೋಕದಂಬವ
ನೋಡುವುದು ನೆವ ಕುರುಪತಿಯ ಗಾಢದ ಸಗಾಢಿಕೆಯ ।
ನೋಡಿ ನಸಿಯಲಿ ಪಾಂಡುಸುತರವ
ರಾಡುಗಾಡಿನ ಹೊಲನ ಹೊರೆಯಲಿ
ಕೂಡೆ ತನುಪರಿಮಳದಲರಮನೆ ಮಾಡಬೇಕೆಂದ [1] ॥ ೨೦

---

1 ಯುಂಗನಾನಿವಹ, ಚ.

ವನದ ಚಿಮ್ಮಂಡೆಗಳ ಘೋರ
ಧ್ವನಿಗಳಲಿ ಕಿವಿ ಮೃಗಕುಲದ ಸೊಗ
ಡಿನಲಿ ನಾಸಿಕ ರೌದ್ರಭೂತಾಲೋಕನದಿ ನಯನ ।
ಜನಪರುಳಿ ಬೆದಱುವೆರು ನಿನ್ನರ
ಮನೆಯ ಸತಿಯರ ನೇವುರದ ನು
ಣ್ಣಿನಿಗಳಲಿ ತನುಗಂಧದಲಿ ರೂಪಿನಲಿ ಸೊಗಸಿನಲಿ ॥ ೧೧

ಅದಕ್ಕೆ ಧೃತರಾಷ್ಟ್ರನ ಅಸಮ್ಮತಿ.

ಸಿರಿಗೆ ಸಫಲತೆಯಹುದು ನಾನಿದ
ನಱಿಯೆ ನೀವವರಿದ್ದವಿಪಿನಾಂ
ತರಕೆ ಗವಿಸುವುದುಚಿತವೇ ಮನಮುನಿಸು ನೆಱಿ ಬಲಿದು ।
ಕೆರಳಿದರೆ ಕಾಳಹುದು ಭೀಮನ
ದುರಳುತನವೀಕಾರವೇಂದ್ರನ
ಹುರುಡು ಹುರಿಯೇಱುವುದು ಮತವಲ್ಲೆಂದನಂಧನೃಪ ॥ ೧೨

ಧೃತರಾಷ್ಟ್ರನನ್ನು ಸಮ್ಮತಿಪಡಿಸಿದುದು.

ಹೂಣೆಯೇಕ [1] ವರೊಡನೆ ಸೆಣಸಿನ
ಸಾಣೆಯಿಕ್ಕುವ ಮಸೆವ ಕದನವ
ಕಾಣೆವೆಮ್ಮಱಿಕೆಯಲಿ ಸಲುಗೆಯ ಸಾಧುಸಾಮೆದಲಿ ।
ರಾಣಿಯರ ರಹಿಯಿಂದ ರಂಜಿಸಿ
ಜಾಣಿನಲಿ ಬಹೆವರಸ ನಿಮ್ಮಡಿ
ಯಾಣೆ ಯೆಂದೊಡಬಡಿಸಿದರು ನೃಪ ಕರ್ಣಶಕುನಿಗಳು ॥ ೧೩

ಇದು ಉಚಿತವಲ್ಲೆಂದು ಭೀಷ್ಮಾದಿಗಳು ಹೇಳಿದುದು.

ಪರಿಮಿತದಲೀವಾರ್ತೆನೆಗಳಿದು
ದರಮನೆಯಲಿದನೆಲ್ಲ ಕೇಳ್ದರು
ಗುರುವಿದುರಗಾಂಗೇಯಕೃಪರಱಿಲಿದರು ತಮ್ಮೊಳಗೆ ।

---

[1] ಹೂಗೆವನ, ಚ.

ಕರೆಸಿ ನುಡಿದರು ಕರ್ಣಸೌಬಲ
ಕುರುಪತಿಗಳಿಗೆ ಘೋಷಯಾತ್ರಾ
ಭರವನೆಯಿದೆವು ಹೋಹುದನುಚಿತವೆಂದರನಿಬರಿಗೆ ॥ ೦೪

ಅವೆಗಡೆಯನಾಭೀವು ನೀವೆಂ
ಬವರು ನಿಸ್ಸೀಮರು ಚತುರ್ಬಲ
ನಿವಹ ಸಿಲ್ಲದು ತುಡುಕುವುದು ತುಟಿವುದು ತಪ್ಪೋವನವ ।
ವಿವಿಧಋಷಿಗಳನೇಡಿಸುವರೀ
ಯುವತಿಯರು ಕೈಕಾಲುಮೆಟ್ಟಿನ
ಬವರ ಗಂಟಕ್ಕುವುದು ಲೇಸಲ್ಲೆಂದನಾಭೀಷ್ಮ ॥ ೦೫

ಸಾಯಿದೆವು ನಿವೊಡನೆ ಬಾರೆವು
ದೂಯಿಲಾಗದು ನಮ್ಮ ನಿನಿಬರ
ಮಾಯಿದರೆ ರಣಭಂಗ ತಪ್ಪದು ಹೋಗಿ ನೀವೆನಲು [1] ।
ದೂಯ ತಾರೆವು ನಿಮಗೆ ನಾವ್ ಕೈ
ಮಾಯ ನಡೆಯವು ಕಾರ್ಯಗತಿಯಲಿ
ಜಾಯಿ ಝಡಿತೆಯ ಮಾಡೆವೆಂದನು ಕೌರವರ ರಾಯ ॥ ೦೬

ಆದರೇಳಿ [2] ಶುಭಾಶುಭದ ಫಲ
ಬೀದಿವರಿಸುವುದೈಸಲೇ ನಿಮ
ಗೀದುರಾಗ್ರಹವೇಕೆ ಕಾಂಬಿರಿ ಫಲವನಗ್ರದಲಿ ।

ಯಾರ ಮಾತನ್ನೂ ಕೇಳದೆ ಘೋಷಯಾತ್ರೆಗೆ ಹೊರಡುವಿಕೆ.

ಆದುದಾಗಲಿ ಹೋಗಿ ಯೆನೆ ದು
ರ್ಭೇದಗರ್ವಗ್ರಂಥಿಕಲುಷವಿ
ನೋದಶೀಲರು ಭುಜವ ಹೊಯ್ದರು ನೋಡಬಹುದೆನುತ ॥ ೦೭

---

[1] ಹೋಗಬೇಡೆನಲು, ಚ. [2] ರಲ್ಲಿ, ಚ.

ಘೋಷಯಾತ್ರಾವರ್ಣನ.

ಊರೊಳಗೆ [1] ಸಾಱುದರು ಕೊಟ್ಟರು
ವಾರಕವನಬಲಾಜನಕೆ ಭಂ
ಡಾರ ಸವೆದುದು ಗಣಿಕೆಯರಿಗಾಭರಣದಾನದಲಿ ।
ಸಾರಪರಿಮಳವಸ್ತುಗಳ ಬಲು
ಭಾರಣೆಯ ಪೆಟ್ಟಗೆಗಳೂಟ್ಟತು
ತೇರುಗಳ ಮೇಲೊದಗಿತಕ್ಷೌಹಿಣಿಯ ನಾರಿಯರು ॥ ೮೪

ಬಿಗಿದಬೀಯಗಬದ್ಧರದಭಂ
ಡಿಗಳು ರಾಣಿಯ ವಾಸದಂದಣ
ತೆಗೆದುವೊಱಿಲುವೆ ಕಂಚುಕಿಗಳುಗ್ಗಡದ ರಭಸದಲಿ ।
ಗಗನ ವಡಗಿತು ಪಲ್ಲವದ ಸ
ತ್ತಿಗೆಯ ಸಾಲಿನಲಿ ಝಲ್ಲರಿಯ ಝೂ
ಡಿಗಳಲಾಡುವ ಚಮೆರಸೀಗುರಿಗಳ ಪತಾಕೆಯಲಿ ॥ ೮೫

ಸವಡಿಯಾನೆಯ ಮೇಲೆ ಗಣಿಕಾ
ನಿವಹ ದಂಡಿಗೆಗಳಲಿ ಕೆಲವರು
ಯುವತಿಯರು ಕೆಲರಶ್ವಚಯದಲಿ ರಥನಿಕಾಯದಲಿ ।
ಯುವತಿಮಯವೋ ಸೃಷ್ಟಿ ಗಣಿಕಾ
ಯುವತಿಯರ ನೆಲನೀದುದೋ ದಿ
ಗ್ವಿವರ ಕಱಿದುದೊ ಕಾಂತೆಯರನೆನೆ ಕವಿದುದಗಲದಲಿ ॥ ೮೬

ಧರಣಿಪತಿ ಕೇಳ್ ಹತ್ತುಸಾವಿರ
ಕರಿಘಟಾವಳಿ ಯೆಂಟುಸಾವಿರ
ವರರಥವು ರಾವುತರ ವಾಘೆಯಲಿ ಹಯಕೋಟಿ ।
ಬಿರುದಿನಗ್ಗದ ಭಟರ ಸಂಖ್ಯೆಯ
ನಱಿಯೆನಿಂತಿದು ಘೋಷಯಾತ್ರಾ
ಪರುಠವಣೆಯ ಮಹಾಚತುರ್ಬಲ ಕೌರವೇಶ್ವರನ ॥ ೮೭

[1] ಕೀರಿಯಲಿ, ಚ.

ನೆರೆದುದಗಣಿತವೆಂದಿಜನ ಕವಿ
ವರರು ವಿದ್ವಾಂಸರು ವಿಧಾವಂ
ತರು ಸುನರ್ತಕ ಕಥಕಪರಿಹಾಸಕರು ಮಾಗಧರು ।
ಚರರು ಮಲ್ಲರು ಬೀಟಿಕಾಜರು
ಪರಿಜನಾವಳಿಸಹಿತ ವಿಪಿನಾಂ
ತರಕೆ ಪಯಣದ ಮೇಲೆ ಪಯಣದಲರಸನೈತಂದ ॥ ೩೦

ಆ ಕಾಲದಲ್ಲಿ ಅಪಶಕುನಗಳಾದರೂ ಅದನ್ನು ಉಪೇಕ್ಷಿಸಿ ಹೊರಡುವಿಕೆ.

ಅರಸ ಕೇಳವರತ್ತಪಯಣದ
ಭರದಲೈತರೆ ಮುಂದೆ ವಾಯಸ
ವೆರಡು ತಮ್ಮೊಳು ಕದನಮುಖದಲಿ ವಾಮದೆಸೆಗಾಗಿ ।
ಪರಿದುವಲ್ಲಿಂ ಬಟಿಕ ಹಸುಬನ
ಸರುವು ವಾಮದೆ ಗರ್ದಭನ ಬಲ
ಕರಿಯೆ ಹಕ್ಕಿಯ ತಡೆಯ ಮನ್ನಿಸದ್ಯೈದಿದನು ಭೂಪ ॥ ೩೩

ಇಂದು ಕಂಡವಶಕುನಗತಿಯಲಿ
ಮುಂದೆ ಲೇಸಲ್ಲೆನುತ ನುಡಿಸಿದೊ
ಡಂದು ಸಚಿವಪಶಾಯ್ತ್ರರಾಪ್ತರು ಮಂತ್ರಿವರ್ಗಚಯ ।
ಚಂದವಾಗದು ಶಕುನಗತಿ ಮರ
ಳೆಂದು ಹೇಟಿಲು ಬಾರೆವಾವೆನೆ
ಮುಂದಣಗ್ರಹ ಘನವೆನುತ ಮಱುಗಿದರು ಮಂತ್ರಿಗಳು॥ ೩೪

ದ್ವೈತವನಕ್ಕೆ ಹೋಗಿ ಅಲ್ಲಿನ ಗೋವುಗಳನ್ನು ನೋಡುವುದು.

ಧರಣಿಪತಿ ಕೇಳ್ ದ್ವೈತವೆನಬಂ
ಧುರನದೀತೀರದಲಿ ವನದಲಿ
ಸರಸಿಯಲಿ ದೀರ್ಘಿಕೆಗಳಲಿ ವಾಪೀತಟಾಕದಲಿ ।

ಬೆರಸಿ ಬಿಟ್ಟುದು ಕೂಡೆ ಪಾಳಯ
ವರಮನೆಯ ಗುಡಿ ನೆಗಹಿದುವು ವಿ
ಸ್ತರಿಸಿದುವು ನಿಂಡವಿಗೆ ಲಾಯದ ಭದ್ರಭವನಗಳು ॥ ೩೫

ಕರೆಸಿದನು ಕೀಲಾರಿಗಳನಾ
ದರಿಸಿ ಹಟ್ಟಿಯ ತುಱುಗಳಲ್ಲವ
ಕರೆಸಿ ನೋಡಿದನಲ್ಲಿ ಹಿಂಡಿನ ಕೋಟಿಸಂಖ್ಯೆಗಳ ।
ಹರಿವೆ ಹಾಱುವೆ ಪಂಠಿಸುವ ಸೈ
ವರಿವ ಮುರಳುವ ಮುಖಿವ ನಿಲುವೆಳ
ಗಱುಗಳನು ನೋಡಿದನು ನಗುತ ನರೇಂದ್ರನೊಲವಿನಲಿ ॥ ೩೬

ಬೆಳೆನಿಱಿಯು ಮಿಡಿ ಗೊಲೆವೆ ಬಾಲದ
ನೆಲಕೆ ನಿಗುರುವ ಗಂಗೆದೊಗಲಿನ
ಹಲಗೆಬೆನ್ನಿನ ಸಿಡಿಲಮೊಗೆಯೆನೆ ಮೊಱೆವೆ ಹುಂಕೃತಿಯ ।
ಕೆಲವಿದಿರುಬರಲದ್ರಿಯದ್ರಿಯ
ಹಳಚುವಂತಿರೆ ಹರಿವ ಹಾಱುವ
ಸಲಗನೀಡಿಱಿದಾಡುತಿರ್ದುವು ಹಿಂಡುಹಿಂಡಿನಲಿ ॥ ೩೭

ಆಗ ಅನೇಕಗೋವುಗಳನ್ನು ದಾನವಾಗಿಕೊಡುವಿಕೆ.

ತರಿಸಿ ಹೋರಿಯ ಗವಿಯ ಗೂಳಿಯ
ಬರೆಸಿದನು ಕೆಲಕೆಲವ ಕೃಷಿಕರಿ
ಗಿರಿಸಿದನು ಗೋಲಕ್ಷವಿತ್ತನು ವಿಪ್ರಸಂಕುಲಕೆ ।
ಕರೆಸಿ ಕೊಟ್ಟನು ಭಟ್ಟರಿಗೆ ಮ
ಲ್ಲರಿಗೆ ಗಾಯಕರಿಗೆ [1] ವಿಧಾವಂ
ತರಿಗೆ ಬಹುವಿಧಬಹಳವಂದಿಗೆ ಮಾಗಧವ್ರಜಕೆ ॥ ೩೮

ಅಂಗ ಚಿತ್ತವನಿತ್ತು ಮೊದಲಿನ
ಪುಂಗವನ ಸತ್ಕರಿಸಿ ಹಿಂಡಿನ
ಪಂಗಡದ ಗೋಪಾಲನಿಕರಕೆ ಕೊಟ್ಟನುಡುಗೊಱೆಯ ।

---

1 ವಿಟರಿಗೆ ನಟ,ಚ.

ಹಿಂಗಿದುವು ತುಜುಬೇಟೆಯಾಡಿ ಮೈ
ಗಂಗಳಿಗೆ ಮದ್ದಜ್ಜಿದು ಗಡಿ ಭಾ
ಗಂಗಳನು ಕೊಡಿಸಿದನು ಪರಿವಾರಕೆ ವಿನೋದದಲಿ ॥ ೫೯

ಹದಿನೆಂಟನೆಯ ಸಂಧಿ ಮುಗಿದುದು.

ಹತ್ತೊಂಬತ್ತನೆಯ ಸಂಧಿ.

ಸೂಚನೆ.

ಪರಿವಿಡಿಯಲಾದ್ವೈತವನದಲಿ
ಬೆರಸಿ ಬಿಟ್ಟುದು ಬೀಡು ಗಂಧ
ರ್ವರಿಗೆ ಕೌರವಬಲದೊಡನೆ ಮೆಸೆದುದು ಮಹಾಸಮರ ॥

ಪಾಂಡವರು ಇದ್ದವನದ ಬಳಿ ದುರ್ಯೋಧನನು ಪಾಳೆಯವನ್ನು ಬಿಡಿಸಿದುದು.

ಕೇಳು ಜನಮೇಜಯ ಧರಿತ್ರೀ
ಪಾಲ ತುಜುಪಳ್ಳಿಗಳ ನೋಡಿ ವ
ನಾಳಿ ದಪ್ಪದೆ ಬೇಟೆಯಾಡಿ ಸಮಸ್ತದಳಸಹಿತ ।
ಲೀಲೆ ಮಿಗಲಾಪಾಂಡವರ ವನ
ವೇಲೆಯಲಿ ನಿಸ್ಸಾಳರಭಸದ
ಸೂಳ ಸಂಕೇತದಲಿ ನೃಪ ಬಿಡಿಸಿದನು ಪಾಳಯವ ॥ ೧

ಲಾಯ ನೀಡಿತು ಮುಂದೆ ರಾವುತ
ಪಾಯಕರಿಗೆಡವಂಕ ಮಂತ್ರಿಪ
ಸಾಯಿತರು ಕರ್ಣಾದಿಗಳಿಗೆಡೆಯಾಯ್ತು ಬಲವಂಕ ।

ರಾಯನರಮನೆ ಮೌಕ್ತಿಕದ ಕಳ
ಶಾಯತದ ಬೆಳಗಿನಲಿ ಪಾಂಡವೆ
ರಾಯನೆಲೆವನೆಗಳನು ನಗುತಿರ್ದುದು ನವಾಯಿಯಲಿ ॥ ೦

ಆಗ ಪರಿವಾರದ ತರುಣಿಯರ ಕಾರ್ಯಗಳು.

ಅರಸ ಕೇಳ್ ಕೌರವೇಶ್ವರ
ನರಸಿಯರು ಲೀಲೆಯಲಿ ಶತಸಾ
ವಿರಸಖೀಜನಸಹಿತ ಹೊಱವಂಟರು ವನಾಂತರಕೆ ।
ಸರಸಿಜದ ನಿಜಗಂಧದಲಿ ತನು
ಪರಿಮಳವ ತಕ್ಕೈಸಿ ವನದಲಿ
ತರಳೆಯರು ತುಂಬಿದರು ಮೆಱೆದುಂಬಿಗಳ ಡೊಂಬಿನಲಿ ॥ ೧

ಕೆಲರು ಹೊಂದಾವರೆಯ ಹಂತಿಯ
ಕೊಳನ ಹೊಕ್ಕರು ಬಿಲ್ವಫಲಗಳ
ನಿಲುಕಿ ಕೊಯ್ದರು ಕೊಡಹಿ ವೊಲೆಗಳ ಮೇಲುದಿನ ನಿಱೆಯೆ ।
ಕೆಲರು ಹೂಗೊಂಚಲಿನ ತುಂಬಿಯ
ಬಳಗವನು ಬೆಂಕೊಂಡರುಲಿಪರೆ
ಗಿಳಿಗೆ ಹಾರದ ಬಲೆಗಳನು ಹಾಯ್ಕಿದರು ಕೊಂಬಿನಲಿ ॥ ೪

ಪಾರಿಜಾತವ ಪಾದರಿಯ ನಾ [1]
ನಾರಿಯರು ಕೆಲರಾ [2] ನನದಲಿ ಚ
ಕೋರಿಗಳ ನಿಲಿಸಿದರು ಕೆಲಕೆಲರಂಗಪರಿಮಳಕೆ ।
ಸಾರಿದರೆ ಮೆಱೆದುಂಬಿಗಳ ಸುಖ
ಪಾರಣೆಯ ಬೆಸಗೊಳುತ ನಗುತ ವಿ
ಕಾರಿಗಳು ವೇಡೈಸಿದರು [3] ನೃಪ ಮುನಿಜನಾಶ್ರಮವ ॥ ೫

---

[1] ಪಾರವದುಪಾಧ್ಯರನು ನಮಿಸುತೆ. ಖ. ಚ.
[2] ವಾರನಾರಿಯರಾ, ಖ. ಚ. [3] ವೊಡ್ಡೈಸಿದರು, ಚ.

ನೇವುರದ ದನಿ ದಟ್ಟಿಸಿತು ವೇ
ದಾವಳಿಯ ನಿರ್ಘೋಷವನು ನಾ
ನಾವಿಭೂಷಣಕಾಂತಿ ಕೆಣಕಿತು ಮುನಿಸಮೂಹಿಗಳ ।
ಆವಧೂಜನದಂಗಗಂಧ
ಪ್ರಾವರಣ ಹುತಚರುಪುರೋಡಾ
ಶಾವಳಿಯ ಸಂಭವವೆ ಮುಸುಕಿತು ವನದ ವಳಯದಲಿ ॥ ೬

ಹೊಕ್ಕರಿವರಾಶ್ರಮವೆ ತುಱುಗಿದ
ತಕ್ಕರಂತಃಕರಣ ತುರಗಕೆ
ದುಕ್ಕುಡಿಯನಿಕ್ಕಿದರು ತಿರುಹಿದರೆರಡುವಾಘೆಯಲಿ ।
ಸಿಕ್ಕಿದುವು ಧಾವಿಯಲಿ ಧೈರ್ಯದ
ದಕ್ಕಡರಮನ ಹರಹಿನಲಿ ಹಾ
ಯಿಕ್ಕಿದರು ಕಡೆಗಣ್ಣ ಬಲೆಗಳ ಮುನಿಮೃಗಾವಳಿಗೆ ॥ ೭

ಸ್ರುಕ್ಸ್ರುವವೆ ಮುಟ್ಟಿದರು ಧೌತಾಂ
ಶುಕದೊಳಗೆ ತಂಬುಲವ ಕಟ್ಟಿದ
ರಕಟುಪಾಧ್ಯರ ವೋಜಿಯನು ತೇಡಿಸುತ ಬೆರಳಿನಲಿ ।
ಚಕಿತಧೃತಿಯರು ದೀಕ್ಷಿತರ ಚಂ
ಡಿಕೆಗಳನು ತುಡಕಿದರು ಮುನಿವೆಟು
ನಿಕರಶಿರದಲಿ ಕುಣಿಸಿದರು ಕುಂಚಿತಕರಾಂಗುಲಿಯ ॥ ೮

ಆಗ ಅಲ್ಲಿದ್ದ ಬ್ರಾಹ್ಮಣರ ಅವಸ್ಥೆ

ರಾಯರೆಂಬವರಿಲ್ಲಲಾ ಸ್ವಾ
ಧ್ಯಾಯ ಕೆಟ್ಟುದು ಮುಟ್ಟಿದರುಪಾ
ಧ್ಯಾಯರನು ಶೂದ್ರೆಯರು ಸೆಳೆದರು ಮೌಂಜಿಮೇಖಲೆಯ ।
ಹಾಯಿದರು ಯಜ್ಞೋಪವೀತಕೆ
ಬಾಯಲೆಂಜಲಗಿಡಿಯ ಬಗೆದರ
ಳಾಯೆನುತ ಬಿಟ್ಟೋಡಿದರು ಸಬ್ರಹ್ಮಚಾರಿಗಳು ॥ ೯

ಕೆದಱಿದರು ಗಡ್ಡವನುಪಾಧ್ಯರು
ಬೆದಱಿನಿಂದರಿದೇನು ನೀವು ಮಾ
ಡಿದವಿಟಾಳವ ಹೇಱುವೆವು ಕುಂತೀಕುಮಾರರಿಗೆ ।
ಇದು ಮಹಾಮುನಿಸೇವಿತಾಶ್ರಮ
ವಿದಱ ಶಿಷ್ಟಾಚಾರವನು ಕೆಡಿ
ಸಿದವರೇ ಹ್ಲಯವಹರು ಶಿವ ಶಿವ ಯೆಂದರಾದ್ವಿಜರು ॥ ೧೦

ಆಗ ದ್ವಿಜರಿಗೂ ತರುಣಿಯರಿಗೂ ನಡೆದ ವಿವಾದ.

ಹೇಱಿದರೆ ಕುಂತೀಕುಮಾರರು
ಕೇಳಿ ಮಾಡುವುದಾವುದೋ ವನ
ಪಾಲಕರು ತಾವಿಂದು ಪೃಥ್ವೀಪಾಲ ನಮ್ಮೊಡೆಯ ।
ಹೇಱಿ ಬಱಿಕಜ್ಜ-ನನ ಭೀಮನ
ಧಾಱಿಯನು ತರಲಹಿರೆನುತ ಘಾ
ತಾಳಿಯರು ಮುನಿಜನವೆ ಬೈದರು ಬಹುವಿಕಾರದಲಿ ॥ ೧೧

ಶಾಂತರುಱಿ ವಿಜಿತೇಂದ್ರಿಯರು ವೇ
ದಾಂತನಿಷ್ಠರು ಸುವ್ರತಿಗಳ
ಶ್ರಾಂತವೇದಾಧ್ಯಯನಯಾಜ್ಞಿಕಕರ್ಮಕೋವಿದರು ।
ಸಂತತಾನುಷ್ಠಾನಪರರನ
ದೆಂತು ನೀವಾಕ್ರಮಿಸುವಿರಿ ವಿ
ಭ್ರಾಂತೆಯರು ನೀವೆನುತ ಜಱಿದರು ಕಾಮಿನೀಜನವ ॥ ೧೨

ಒದೆದು ಪದದಲಿ ಕೆಂದಳಿರ ತೋ
ಱಿದೆವಶೋಕೆಗೆ ಮಧ್ಯಗಂಡೂ
ಷದಲಿ ಬಕುಳದ ಮೆರನ ಭುಲ್ಲವಿಸಿದೆವು ಕುರುವಕಕೆ ।
ತುದಿವೊಲೆಯ ಸೋಂಕಿನಲಿ ಹೂದೋ
ಱಿದೆವು ಕಂಣ್ಣೋಱಿಯಲಿ ತಿಲಕವೆ
ಕದುಕಿದೆವು ನೀವಾವ ಘನ ಘಡ ಯೆಂದರಬಲೆಯರು ॥ ೧೩

ಬಲುವೊಲೆಯ ಸೋಂಕಿನಲಿ ಶಾಂತರ
ತಲೆಕೆಳಕ ಮಾಡುವೆವು ಕಡೆಗ
ಣ್ಣ ಲಗಿನಲಿ ಕೊಯ್ದೆತ್ತುವೆವು ವಿಜಿತೇಂದ್ರಿಯರ ಮನವ ।
ಎಳನಗೆಗಳಲಿ ವೇದಪಾಠರ
ಕಲಕುವೆವು ವೇದಾಂತನಿಷ್ಠರ
ಹೊಳಸು ದುರ್ವ್ಯಾಳಿಸುವೆವೆಮಗಿದಿರಾರು ಲೋಕದಲಿ [1] ॥ ೧೪

ಎನುತ ಕವಿದುದು ಮೆತ್ತೆ ಕಾಂತಾ
ಜನಸುಯೋಧನನರಮನೆಯ ಸೊಂ
ಪಿನ ಸಖೀನಿಕುರುಂಬ ತುಂಬಿತು ವರತಪೋವನವ ।
ಮನಸಿಜನ ದಳ ನೂಕಿತೇಪೇ
ಟೆನುತ ಚೆಲ್ಲಿತು ಮುನಿನಿಕರ ನೃಪ
ವನಿತೆಯಿದಿರಲಿ ಸುಳಿದರವದಿರ ಮುಂದೆ ಸಂದಣಿಸಿ ॥ ೧೫

ಆಗ ಆತರುಣಿಯರು ದ್ರೌಪದಿಯನ್ನು ನೋಡಿ ಆಡಿದ ಮಾತುಗಳು.

ಈಕೆ ಪಾಂಡವಸತಿ ಕಣಾ ತೆಗೆ
ಯಾಕೆ ಯತಿದಾರಿದ್ರ್ಯಮೊರುತಿ
ಯಾಕೆಯಲ್ಲಡಗಿಹಳು ರಾಣಿಯವಾಸವೆಂಬರಲೆ ।
ಈಕೆಯಹುದಲ್ಲಿದಕೆ ಪಣವೇ
ನೀಕೆ ಬಣಗಕಟೆನುತ ಕಾಂತಾ
ನೀಕ ತವ್ಕೊಳು ನುಡಿವುತಿರ್ದುದು ತೋಱು ಬೆರಳಿನಲಿ ॥ ೧೬

ಕುಣಿವರಂದುಗೆಗಾಲ ಝಣಝಣ
ಝಣಝಣತ್ಕೃತಿರವ ಮಸಗೆ ಕಂ
ಕಣದ ದನಿ ದೋಱುವರು ನುಡಿನುಡಿಸೇರದಂದದಲಿ ।
ಮಣಿಮಯದ ಕುಂಡಲವನೆಲುಗುವ
ರೆಣಿಸುವಂತಿರೆ ಕೊರಲ ಹಾರದ
ಮಣಿಗಳನು ಮುತ್ತುಗಳ ಮೆಱುವೆರು ಮುಱುದ ಮೌಳಿಯಲಿ ॥ ೧೭

---

1 ವಿದಿರಾರೊಂದು ನಿಮಿಷದಲಿ, ಚ. ಕ. ಖ.

ಈ ತೊಂದರೆಯನ್ನು ಧರ್ಮರಾಯರಿಗೆ ತಿಳಿಸುವಿಕೆ.

ಬಿಟ್ಟಿಯಲ್ಲಿದಿತು ಮುನಿಗಳಿವರುಪ
ಟಳವನರಸಂಗಱಿಹಿದರು ವೆ
ಗ್ಗಳಿಸಿ ಭೀಮಂಗೆಂದರರ್ಜುನಯಮಳರಿದಿರಿನಲಿ ।
ಉಟ್ಟಿದರೆಮಗೀವನವಿಟಾಳ
ಪ್ರಳಯವಾದುದು ಕಾನನಾಂತರ
ನಿಳಯದಲಿ ನಿಲಿಸೆಮ್ಮನೆಂದುದು ಸಕಲಮುನಿನಿಕರ ॥ ೧೪

ಇದಕ್ಕೆ ಧರ್ಮರಾಯರ ಸಮಾಧಾನ.

ಅರಸಲಾ ಕುರುರಾಯನಾತನ
ಬರವು ತುಱಿಪಳ್ಳಿ [1] ಗಳ ಗೋವಿ
ಸ್ತರಣಕೋಸುಗವೈಸೆ ಪಾಳಯ ಸಾರ್ವಭೌಮನದು ।
ಪರಿಸರದಲಿದ್ದುದು ವಿನೋದಕ
ತರುಣಿಯರು ಬರಲೀಕೆ ನೀವ
ಬ್ಬರಿಸುವಿರಿ ನಮ್ಮವರಲಾ ಯೆಂದನು ಮಹೀಪಾಲ ॥ ೧೫

ಭೀಮನ ಕೋಪವನ್ನು ಧರ್ಮರಾಯರು ಶಮನ ಮಾಡಿದ ವಿಕೆ.

ಪೊಡು ಗಚ್ಚಿದನಂಘ್ರಿಯಲಿ ನೆಲ
ಬೀಡ ಬಿಡಲೊದೆದನು ಕರಾಂಗುಲಿ
ಗೂಡಿ ಮುಱಿದೊಕಿದನು ಪತಿಯಲಿ ನಿಜಗದಾಯುಧವ ।
ನೋಡಿದನು ಕುರುರಾಯನಲಿ ಹೊ
ಯ್ದಾಡಿ ಬರಬೇಕೆಂಬ ಭೀಮನ
ವೋಡಿಯನು ನೃಪನಱಿದು ಸಂತೈಸಿದನು ಸಾಮದಲಿ ॥ ೧೬

ದುರ್ಯೋಧನನ ಸ್ತ್ರೀಜನರ ಬರುವಿಕೆಯ ವರ್ಣನೆ.

ಕರೆಸಿದನು ನೃಪ ವಾರಿಕೇಳಿಗೆ
ವರವಧೂವರ್ಗವನು ಕೇಳಿದು
ತಿರುಗಿತಂಗಜ [2] ಘಟ್ಟ ಝಣ ಝಣರವದ ರಭಸದಲಿ ।

---

[1] ವಟ್ಟ, ಚ. [2] ತಿಱ್ಱಿಯ' ಜ. ಡ. ಟಿ.

ಸರಿದಿಟಿವೆ ನಿಱಿಯೊಂದು ಕೈಯಲಿ
ಸುರಿವೆರಳಮುಡಿ ಯೊಂದು ಕೈಯಲಿ
ಭರದೆ ಗಮನಸ್ವೇದಜಲ ಮಘವಮಿಸೆ ದೆಸೆದೆಸೆಗೆ ॥ ೨೧

ಬಲುವೊಲೆಗಳಳ್ಳಿಱಿಯಲೇಕಾ
ವಳಿಗಳನು ಕೆಲಕೊತ್ತಿ ಮೇಲುದ
ಕಳಚಿ ನಡುಗಿಸಿ ನಡುವನಂಜಿಸಿ ಜಘನಮಂಡಲವ ।
ಅಳಕನಿಕರವ ಕುಣಿಸಿ ಮಣಿಕುಂ
ಡಲವನೆಲುಗಿಸಿ ಹಣೆಯ ಮುತ್ತಿನ
ತಿಲಕವನು ತನಿಗೆದಱಿ ನಡೆದುದು ಕೂಡೆ ಸತಿನಿವಹ ॥ ೨೨

ತಾರಕೆಗಳುತ್ಪಿದಂಬರದ ವಿ
ಸ್ತಾರವೋ ಗತಹಂಸಕುಲಕಾ
ಸಾರವೋ ನಿಸ್ಸಾರವೋ ನಿರ್ಮಳತಪೋವನವೋ ।
ನಾರಿಯರ ದಳ ನೂಕಿದರೆ ತನು
ಸಾರಭದ ದಳ ತೆಗೆಯದಾಕಾಂ
ತಾರದೊಳಗೇನೆಂಬೆನಾಸಾಗಂಧಬಂಧುರವ ॥ ೨೩

ಅಲರ್ದ ಹೊಂದಾವರೆಯ ಹಂತಿಯೊ
ತಳಿತಮಾವಿನ ಬನವೊ ಮಿಗೆ ಕ
ತ್ತಲಿಪ ಬಹಳತಮಾಲಕಾನನವೋ ದಿಗಂತದಲಿ ॥
ಹೊಳವ ವಿದ್ರುಮವನವೊ ಕುಸುಮೋ
ಚ್ಚಳಿತಕೇತಕಿದಳವೊ ರಂಭಾ
ವಳಿಯೊ ಕಾಂತಜನವೊ ಕಮಲಾಕಾರವದನೆಯರೊ ॥ ೨೪

ಅರಸ ಕೇಳ್ಕ ವಾರಿಕೇಳಿಗೆ
ಕುರುಪತಿಯು ನೇಮದಲಿ ಶತಸಾ
ವಿರಸರೋಜಾನನೆಯರೈದಿತು ವನವನಂಗಳಲಿ ।
ಪರಿಮಳದ ಪಸರಣದ ಪದ್ಮಾ

ಕರಸಹಸ್ರದ ಸಾಲಸುಮನೋ
ಹರಮುಹೋದ್ಯಾನವನು ಕಂಡ್ಯೈತಂದರಬಲೆಯರು ॥ ೫೫

ರಾಯುಕುವರರು ಸಚಿವಮಂತ್ರಿ ಪ
ಸಾಯಿತರ ಮಕ್ಕಳು ಚಮೂಪರ
ನಾಯಕರ ನಂದನರು ವಿಟರು ವಿನೋದಿಗಳು ಪುರದ ।
ಆಯತಾಕ್ಷಿಯರೊಡನೆ ರಾವುತ
ಪಾಯಕರ ಸುತರೋಳಿವೋಳನ
ವಾಯಿಗಳ ನಾಗರಿಕರೈದಿತು ಕೋಟಿಸಂಖ್ಯೆಯಲಿ ॥ ೫೬

ಆರಭಸಕ್ಕೆ ಕೋಪದಿಂದ ವನಪಾಲರು ಬರುವಿಕೆ.

ತವೆಗೆ ತಟ್ಟಿ ಮುಳುವೇಲಿ ಬಾಗಿಲ
ಜವಳಿಗದ ಬೀಯಗದಲಿದ್ದು ದು
ದಿವಿಜವನ ವೃದ್ಧಾಂಡತರಪರಿಮಳದ ಪೂರದಲಿ ।
ಯುವತಿಯರ ದಳ ನೂಕಿತುದಕೋ
ತ್ಸವವ್ಯಥಾಕೇಳಿಯಲಿ ಕನಕೋ
ದ್ಭವನೆಕವಾಟವನೊದೆದು ಕರೆದರು ಕಾಹಿನವರುಗಳ ॥ ೫೭

ಆರಿವರು ಕರೆವವರೆನುತ ಸುರ
ವೀರರೊಕಿತು ಬಾಗಿಲಲಿ ನೀ
ವಾರೆನಲು ತೆಗೆ ಕದವನಖಿಯಾ ರಾಯುಕುರುಪತಿಯು [1] ।
ವಾರನಾರಿಯರವನಿಪತಿಯು ಕು
ಮಾರರಿದೆ ಬೀಹವರು ಸರಸಿಯ
ವಾರಿಕೇಳಿಗೆ ಬಂದೆವೆಂದರು ಗಜಿಯಿ ಗರ್ಜಿಸುತ ॥ ೫೮

ಆಗ ಗಂಧರ್ವರು ಜಲಕ್ರೀಳೆಯನ್ನು ತಡೆಯಲು ಯುದ್ಧವಾಗುವಿಕೆ.

ಹೊಗಬಹುದೆ ಗಂಧರ್ವರಾಯನ
ಮಗನ ವನವಿದು ನೋಡಿದರೆ ದೃ
ಗ್ಭಾಗಗಳದೆವೆ ನೀವುವು ಕಣ್ಣಾ ಫಡ ಹೋಗಿ ಹೋಗಿಯೆನೆ ।

---

1 ನರನುಸೆಯ, ಚ.

ತೆಗೆ ವಿಕಾರವ ನವೆ್ಮಡನೆ ತೆಗೆ
ತೆಗೆ ಕದವ ಗಂಧರ್ವನಾರಿಗೆ
ಮಗನದಾವವನೆನುತ ಹೊಕ್ಕರು ತಳಿಯ ಮುಖದೊದೆದು ॥೦೯

ಬಳಿಲಿದುವು ಕಹಳೆಗಳು ಕಾಹಿನ
ಸುರಭಟರು ನೆರೆದಸಿ ಮುಸುಂಡಿಯ
ಪರಶುಮುದ್ಗರಚಾಪಮೊಗರ್ಗಣ ಸಬಳಸೂನೆಗೆಯ ।
ಹರಿಗೆ ಖಡ್ಗದಲರಿಭಟರ ಚ
ಪ್ಪರಿಸಿದರು ಗಂಧರ್ವಭಟರಿಗೆ
ಕುರುಪತಿಯ ಸುಭಟರಿಗೆ ತೊಡಕಿತು ತೋಟಿ ತೋಪಿನಲಿ॥ ೩೦

ಚೆಲ್ಲಿದರು ಚಪಳೆಯರು ಮುನಿಜನ
ವೆಲ್ಲ ಪಾಂಡವರಾಶ್ರಮದ ವೊಗ
ಲಲ್ಲಿ ವೊನೆಗಣೆ ಮುಖಿಮು ಮುಖಿದುವು ವೊನೆಯ ಮುಂಬಿಗರ।
ಚೆಲ್ಲೆಗಂಗಳ ಯುವತಿಯರ ನಾ
ನೆಲ್ಲಿ ಕಾಣೆನು ಕಾಮುಕರು ನಿಂ
ದಲ್ಲಿ ನಿಲ್ಲದೆ ಹಾಯು ರವನೀಪತಿಯ ಪಾಳೆಯಕೆ ॥ ೩೧

ಬಳಿಯ ಮಕ್ಕಳ ತಂಡವೇ ಹೊ
ಕ್ಕಿಳಿದುದವದಿರನುಳುಬಿ ದಿವಿಜರು
ಜಳಿದು ನೂಕಿತು ವನವನೊಳಬಿದ್ದವರ ಹೊಱವಡಿಸಿ ।
ಮುಳಿದು ತಱಿಗಳ ಬಲಿದು ಬಾಗಿಲ
ಹೊಳಿಗೆ ನಿಂದರು ವಾರಿಕೇಳಿಯ
ಮೊಳಿಮು ಶೋಣಿತವಾರಿಕೇಳಿಗೆ ಬನ್ನಿ ನೀವೆನುತ ॥ ೩೨

ನೃಪಸುತರ ಪಡಿಬಲಕೆ ಬಂದುದು
ವಿಪುಲಬಲ ಹಲ್ಲಣಿಸಿ ಹೊಯ್ ಹೊ
ಯ್ಯುಪಳದರ ಗಂಧರ್ವಸುಭಟರನೆನುತ ಸೂಟಿಯಲಿ ।

ಕುಪಿತರಹಿಯಟ್ಟಿದರು ತೋಪಿನ
ಕಪಿಗಳಾವೆಡೆ ಕಾಣಬಹುದಿ
ನ್ನುಪಚರರನಿನ್ನೇನು ಹೊಗಿಸಿದರವರನಾವೆನವೆ ॥ ೩೩

ಬಂದ ಬಲ ಹೇರಾಳ ತೆಗೆ ತೆಗೆ
ಯೆಂದು ತೋಪಿನ ಕಡೆಗೆ ಹಾಯ್ದುಱಿ
ನಿಂದು ನೆರಹಿದರಕಟ ಗಂಧರ್ವರು ಭಟವ್ರಜವ ।
ಬಂದುದದು ನಡುಬನಕೆ ಕೌರವ
ವೃಂದವೆನು ಕರೆದರು ವಿನೋದಕೆ
ಬಂದಿರೈ ನಾವಾಚಸಲಿಲಕ್ರೀಡೆ ಯಿದೆ ಯೆನುತ ॥ ೩೪

ಮುಱಿಯಿಸುತ ಗಂಧರ್ವಬಲ ಮು
ಕ್ಕುಱಿಕಿ ಕೌರವಬಲವ ತತ್ತರ
ದಱಿದು ಪರವಿಲ್ಲೆನಿಸಿ ಹೊಗಿಸಿದರು ಪಾಳಯವ ।
ಹೊಱಗುಡಿಯ ಹೊಱಪಾಳಯದ ಭಟ
ರಱಿಹಿದರು ಕುರುಪತಿಗೆ ಖತಿಯಲಿ
ಜಱಿದು ಜೋಡಿಸಿ ಬಿಟ್ಟನಕ್ಷೋಹಿಣಿಯ ನಾಯಕರ ॥ ೩೫

ಹಲ್ಲಣಿಸಿದುದು ಚಾತುರಂಗವ
ದೆಲ್ಲ ಕವಿದುದು ಹೊಕ್ಕ ದಿವಿಜರ
ಚೆಲ್ಲ ಬಡಿದರು ಚಾಚಿದರು ತೋಪಿನ ಕವಾಟದಲಿ ।
ನಿಲ್ಲದೊಕಿದರಂತಕನ ಪುರ
ದೆಲ್ಲೆಯಲಿ ಹೆಕ್ಕಳದ ಖಡುಗದ
ಘಲ್ಲಣೆಯ ಖಣಿಖಟಿಲ ಗಾಢಿಕೆ ಘಲ್ಲಿಸಿತು ನಭವ ॥ ೩೬

ಯುದ್ಧದಿಂದ ವನಕ್ಕಾದ ದುರವಸ್ಥೆಯನ್ನ ಚಿತ್ರಸೇನನಿಗೆ ತಿಳಿಸುವಿಕೆ.

ಬಲದ ಪದಘಟ್ಟನೆಗೆ ಹೆಮ್ಮರ
ನುಲಿದು ಬಿದ್ದುದು ಸಾಲಪೂಗಾ
ವಳಿಕಪಿತ್ಥಲವಂಗತುಂಬುರನಿಂಬದಾಳಿಂಬ ।

ಫಲಪಲಾಶರಸಾಲಶಮಿಗು
ಗ್ಗುಲಮೆಧೂಕಾಶೋಕಬಿಲ್ವಾ
ಮಲಕಜಂಬೀರಾದಿಗಳು ನುಗ್ಗಾಯ್ತು [1] ನಿಮಿಷದಲಿ ॥ ೩೬

ಕದಡಿದುವು ಸರಸಿಗಳು ಕೆಡೆದುವು
ಕದಳಿಗಳು ಗೊನೆಸಹಿತ ಸೆಳದೊಯ್ [2]
ಗಿದುವು ಮುಂಡಿಗೆ ಮುಱಿದು ಮಿನುಗುವ [3] ನಾಗವಳ್ಳಿಗಳು ।
ತುದಿಗೊನೆಯ ಚೆಂದೆಂಗು ಖರ್ಜೂ
ರದಲಿ ಕಾಣೆನು ಹುರಳನಾರಾ
ಮದ ವಿರಾಮವನೇನನೆಂಬೆನು ನಿಮಿಷಮಾತ್ರದಲಿ ॥ ೩೭

ತೋಟ ಹುಡಿಹುಡಿಯಾಯ್ತು ಮುಱಿದುದು
ತೋಟಯಲಿ ನಮ್ಮವರು ಹಗೆಗಳ
ಘಾಟದವರಾಚೆಯಲಿ ದುಬಿ೯ಲ ನಮ್ಮದೀಚೆಯಲಿ ।
ಆಟವಿಕದಳ ಹೊಯ್ದು ಮಿಂಡರ [4]
ಮಾಟನೆತ್ತಿದರವರು ಕಾಹಿನ
ಕೋಟಲೆಗೆ ನಾವೊಲ್ಲೆವೆಂದರು ಚಿತ್ರಸೇನಂಗೆ ॥ ೩೮

ಆಗ ಗಂಧರ್ವರಾಜನು ಯುಧ್ಧಕ್ಕೆ ಬಂದುದು.

ಅವರು ಮರ್ತ್ಯರು ನಮ್ಮದಕಟಾ
ದಿವಿಜರೀವಿಧಿಯಾದುದೇ ಕವಿ
ಕವಿ ಯೆನುತ ಬೇಹವರಿಗಿತ್ತನು ರಣಕೆ ವೀಳಯವ !
ಗವಿಯ ಗರುವರು ಗಾಢಿಸಿತು ಮಾ
ನವರ ಮೆಱುಕಕೆ ಮುದುದೇ ಸುರ
ನಿವಹ ಸುಡಲಾಪವೆವೆನುತ್ಕೈದಿದರು ಸೂಟಿಯಲಿ [5] ॥ ೪೦

---

1 ಕದಂಬವು ನುಗ್ಗನುಸಿಯಾಯ್ತೆಂದು, ಚ.
2 ಮುಂಡಿಗೆ, ಚ. 3 ಮುದುಡಿ ನೆಲಕೊಱಗಿದುವು ಮಿಱುಗುವ, ಚ.
4 ರೊಳಹೊಕ್ಕು ಬೇರರ, ಖ. 5 ಸಂದಣಿಸಿ. ಚ.

ಕೌರವರ ಪರಾಜಯ.

ಆತುದಿದು ತೋಪಿನಲಿ ಗಂಧ
ರ್ವಾತಿರೇಕವ ಸೈರಿಸಿತು ಪದ
ಘಾತಧೂಳೀಪಟಲ ಪರಿಚುಂಬಿಸಿದುದಂಬರವ ।
ಭೀತಿ ಬಿಟ್ಟುದೆ ಮನುಜರಿಗೆ ನ
ರ್ಮಾತಗಳ ಕೂಡಹುದಲೈ ಕಾ
ಲಾತುದೇ ಕಲಿತನಕೆನುತ ಕೈಕೊಂಡರವೆಗಡಿಸಿ ॥ ೪೧

ಆರು ನಿಲುವೆರು ದೇವಲೋಕದ
ವೀರರಲ್ಲಾ ವಿಗಡರೆಸುಗೆಯ
ಭೂರಿಬಾಣದ ಹಿಂಡು ತಱಿದುವು ಹೊಗುವ ದಂಡಿಗರ ।
ವಾರುವನು ಮುಖದಿಱುಹಿದುವು ಮದ
ವಾರಣಂಗಳು ಕೊಡಹಿದುವು ಹೊಂ
ದೇರು ಮುಗ್ಗಿದವೊಗ್ಗು ಮುಱಿದುದು ನಿಗುವಕಾಲಾಳ ॥ ೪೨

ಮುಱಿದುದಿದು ಗಂಧರ್ವಬಲ ವಿ
ಕ್ಕುಱುಬಿಕೊಂಡೇ ಬಂದುದಗ್ಗದ
ಗರುವೆರಚಿದರು ಬಱಿಯುವುರ್ಯಶ ವೃತ್ತಿದುದರಸಂಗೆ ।
ಕರಿತುರಗರಥಪಾಯಿದಳಹೆಣ
ಹೊರಳಿಗಟ್ಟಿತು ಪಾಳಯದ ಗೋ
ಪುರದ ಹೊಱಿಬಾಹೆಯಲಿ ನಿಂದುದು ಬಲಕೆ ಬೇಹವೆರು ॥ ೪೩

ಮುಱಿದು ಬರುತಿದೆ ಜೀಯ ನಾಯಕ
ರುರಿವವರ ಬಲುಘಾಯದಲಿ ಕು
ಕ್ಕುರಿಸಿದರು ಗಂಧರ್ವರಿದೆ ಕಡೆವನದ ಕಾಹಿನಲಿ ।
ಮೆರಳಿ ಪಾಳಯ ಬಿಡಲಿ ಮೇಣ್ ಹಗೆ
ಯಿಱಿತಕಂಫ್ಯೈಸುವರ ಬಿಡು ಕೈ
ಮಱಿಯ ಬೇಡೆನೆ ಬೆರಳ ಮೊಗಿನಲರಸ ಬೆಱಿಗಾದ ॥ ೪೪

ಹತ್ತೊಂಬತ್ತನೆಯ ಸಂಧಿ ಮುಗಿದುದು.

ಇಪ್ಪತ್ತನೆಯ ಸಂಧಿ.

ಸೂಚನೆ.

ರಾಯದಲಿವೆನು ಮುಖ್ಯಿದು ಕೌರವ
ರಾಯನನುಜರು ಸಹಿತ ಗಗನಕೆ
ಹಾಯಿದನು ಗಂಧರ್ವಪತಿ ಸುರಪತಿಯು ನೇಮದಲಿ ॥

ಆಗ ದುರ್ಯೋಧನನ ಚಿಂತೆ.

ಕೇಳು ಜನಮೇಜಯ ಧರಿತ್ರೀ
ಪಾಲ ವನಪಾಸಕರ ಜಗಳದೊ
ಳಾಳು ನೊಂದುದು ಧರೆಗೆ ಬಿದ್ದುದು ತೋಟಿ ತೋಪಿನಲಿ ।
ಆಲಿಗಳ ಕಣ್ಣೊಟದೊಲಹಿನ
ಮೌಳಿಯುಬ್ಬಿನ ಸುಯ್ಲು ದುಗುಡದ
ಜಾಳಿಗೆಯ ಜಡನಾನದಲಿದ್ದನು ಕೌರವರ ರಾಯ ॥ ೧

ಜೀಯ ದುಗುಡವಿದೇಕೆ ದಿವಿಜರ
ರಾಯ ಶಿಖಿ ಯಮ ನಿರುತಿ ಜಲಧಿಪ
ವಾಯು ಧನದ ಶಿವಾದಿಗಳ ಸಾಹಸಕೆ ಮೊವಡಿಯು ।
ರಾಯಭಟರಿದೆ ನೇಮಿಸಾ ಸುರ
ರಾಯನೂರಿನ ಹಾಡುಗರು ಹುಲು
ನಾಯಕರಿಗೀಸೇಕೆ ಖತಿ ಬೆಸಸೆಂದನಾಕರ್ಣ ॥ ೨

ಕರ್ಣಾದಿಗಳು ಯುದ್ಧವನ್ನು ಮಾಡಿದುದು.

ನೇಮವಾಯಿತು ಸುಭಟರೊಳಗೆ ಸ
ನಾಮೆರೆದ್ದರು ಕರ್ಣಸಾಒಲ
ಭೂಮಿಪತಿಯನುಜಾತಬಾಹ್ಲಿಕಶಲ್ಯನಂದನರು ।

ಸೋಮದತ್ತನ ಸುತ ಕಳಿಂಗ ಸು
ಧಾಮಚಿತ್ರಮಹಾರಥಾದಿಮ
ಹಾಮಹಿಮರನುವಾಯ್ತು ರಥಗಜಹಯನಿಕಾಯದಲಿ ॥ ೩

ನೂಕಿದರು ಮುಂಗುಡಿಯವರು ಬನ [1]
ದಾಕೆಯಲಿ ಹೊಯ್ದರು ವಿರೋಧಿದಿ
ವೌಕಸರನಿಕ್ಕಿದರು ಸಿಕ್ಕಿದರನೆರು ಸಬಳದಲಿ ।
ಆಕೆವಾಳರು ಕರ್ಣಶಕುನಿಗ
ಳೀಕೆ ನಿಲುವೆರು ಬಿರಿದುಪಾಡಿನ
ನೇಕಭಟರೊಳಹೊಕ್ಕು [2] ತಿವಿದರು ಬೆರಸಿ ಸುರ [3] ಬಲನ ॥ ೪

ಮೆತ್ತಿ ಮುಸುಕಿದುದು ದೇವಬಲ ಬೆಂ
ಬತ್ತಿ ತಿವಿದರು ಕೌರವನ ಭಟ
ರೆತ್ತಿ ಹಾಯ್ಕಿದರದಟಗಂಧರ್ವರ ಭಟವ್ರಜವ ।
ತೆತ್ತಿಸಿದ ಸರಳೇಱಿ ಸುರಿಗರು
ಳೂತ್ತುಗೈಗಳ ತಾಳಿಗೆಯ ತಲೆ
ಹೊತ್ತು ರಕ್ತದ ರಹಿಯಲೋಡಿತು ಸೇನೆ ಸುರಪುರಕೆ ॥ ೫

ಹೊಯ್ಯಲಾದುದು ಚಿತ್ರಸೇನನ
ಬಯ್ಯಲೇತಕೆ ಬೇಱೆ ಘಾಯದ
ವೈಯ್ಯ ಬಿಸುಟಾಯುಧದ ಬೆನ್ನಲಿ ಬಿಟ್ಟ ಮಂಡೆಗಳ ।
ಸುಯ್ಯಬಹಳದ ಭಟರು ತೊದಳಿಸು
ತೊಯ್ಯನೆಂದರು ಜೀಯ ಕರ್ಣನ
ಕೈಯ್ಯಲವರರ ಜೀವವಿದೆ ಜಾಱುವುದು ನಿಮಿಷದಲಿ [4] ॥ ೬

---

[1] ಬಲ, ಟ. [2] ಬಿದ್ದು, ಚ. [3] ಪರ, ಚ.
[4] ನಯವೆಂದ, ಚ, ಹಿತನಿವುಗೆ, ಕ. ಖ.

ಸುರಪನಾನುಡಿಗೇಳಿ ಶಿವ ಶಿವ
ನರರ ಕೈಯ್ಯಲಿ ಛಾಸಿಯಾದರೆ
ಸುರರೆನುತ್ತವೆ ಚಿತ್ರಸೇನನ ನೋಡಲವನೆಂದು ।
ಅರಸ ನೇಮವೆ ತನಗೆ ತಂದಾ
ಕುರುಪತಿಯ ನೊಡಹುಟ್ಟಿದರ ಸಹಿ
ತೊಱಗಿಸುವೆ ನಿಮ್ಮಡಿಯ ಚರಣದೊಳನುತ ಬೀಡ್ಕೊಂಡ ॥ ೩

ಗಂಧರ್ವನು ಸೈನಿಕರಿಗೆ ಅಭಯವನ್ನು ಹೇಳಿದುದು.

ಕಳವಳಿಸದಿರಿ ಧನುವ ತಾ ಹೆ
ಬ್ಬಲವ ಕರೆ ಕರೆ ಹುಲುಮನುಷ್ಯರ
ಬಲುಹು ಗಡ ಬಯಲಾಯ್ತು ಗಡ ಗಂಧರ್ವರಾಟೋಪ ।
ನೆಲದೊಳೂಕ್ಕೊಡೆ ಕೋಣಿತಕೆ ಱಾ
ಟಳವ ಹಿಡಿ ಬರಹೇಳು ಶಾಕಿನಿ
ಕುಲವ ಡಾಕಿನಿಯರನು ನೆತ್ತರಗುಡುಹಿ ಗೈನೆಯರ ॥ ೪

ಏನ ಹೇಳುವೆನರಸ ದಿವಿಜರ
ಸೇನೆಯಲ್ಲಾ ಛತ್ರಚಮೆರವಿ
ತಾನದಲಿ ನಭವಿಲ್ಲ ನಗಹಿದಸಬಳ ಶಲ್ಯಹಕೆ ।
ಮೈನುಸುಳ ಕಾಣೆನು ಸವಿಾರನ
ಭಾನುಕಿರಣದ ಸುಟಿವನೀಶ್ವರ
ತಾನೆ ಬಲ್ಲನು ಶಿವ ಶಿವನೆ ಜೋಡಿಸಿತು ನಿಮಿಷದಲಿ ॥ ೫

ತಿನ್ನಡಗ ಕೊಯ್ನಿಣನ ಮನುಜರ
ಬೆನ್ನಲುಗಿ ತನಿಗರುಳನಕಟಾ
ಕುನ್ನಿಗಳಿರುದ್ಯಾನವನು ನೆಱೆ ಕೆಡಿಸಿ ಕಳದಿರಲ ।
ಮುನ್ನ ಮುಱಿದವರಾರೆನುತಲಾ
ಪನ್ನರನು ತೊಲಗಿಸುತ ಸುರಪನ
ಮನ್ನಣೆಯ ಗಂಧರ್ವಬಲ ಬೆರಸಿದುದು ಪರಬಲವ ॥ ೧೦

ಹೊಯ್ದು ರೊಳಬಿದ್ದವರ ಮುಂದಲೆ
ವಾಯ್ದು ತಿವಿದರು ಮುಖದ ಮೊಳೆಯ
ಹಾಯ್ದ ಕರುಳಿನ ಮಿದುಳಜೋಡಿನ ಬಸಿವೆಶೋಣಿತದ ।
ಕೈದುಗಳ ಖಣಿಖಟಿಲ ಹೊಯ್ಲಿನ
ಬಾಯ್ದಣಿಯೆ ಬೈಗುಳಿನಲುಭಯದ
ಕೈದುಗಾಹಿರು ನೀಗಿದರು ನಿಜಪತಿಯ ಹಣರುಣವೆ ॥ ೧೧

ಬಿಟ್ಟ ಸೂಟಿಯ ಕುದುರೆಗಾಳುಳು
ನಿಟ್ಟಿಡೆಯಲೊಕುವ ಮದೇಭದ
ಥಟ್ಟುಗಳನುಬ್ಬಿಮ್ಮ ಗಗನವನಡರ್ವತೇರುಗಳ [1] ।
ಬಿಟ್ಟ ನಾರಾಚದ ವಿಘಾತದೊ
ಳಟ್ಟಸೆಲ್ಲಿ ಹಸಬಳಬಿಟ್ಟೀ
ಳುಟ್ಟೈಗಳ ಮಳೆ ನಾದಿದುವು ಕಾದಿದರಿಂತು ಚೂಣಿಯಲಿ ॥ ೧೨

ಆಗ ಕೌರವಸೇನೆಯು ದುರವಸ್ಥೆ.

ಮುಸುಕಿದು ಚೂಣಿಯು ಭಟರುತಂದರು
ಬಿಸುಸಿನರನೆಲೆಗಿದು ನಿಹಾರದೊ
ಳಸುದು ನೆಲೆ ಸೊಪ್ಪಾಗೆ ಸಾರಿತು ಸರಿದು ಹಿನ್ನೆಲೆಗೆ ।
ಸುಳಿಯಲರುಣಾಂಬುಗಳ ನದಿ
ಹೊಳಿವುಳಿಯೆ ದೊರೆಗಿಕ್ಕಿದರು ಬೊ
ಬ್ಬಿರಿದಿಳಿತ ಧನಿ ಧಟ್ಟಿಸಿತು ನಿಸ್ಸಾಳ ಹತಿ ದನಿಯು ॥ ೧೩

ನೂಕಿದರೆ ಕರ್ಣಾದಿದೊರೆಗಳ
ಧಾಕನಾನುವೆರಾರು ದಿವಿಜಾ
ನೀಕದಲಿ ಧಕ್ಕಡರು ದುವ್ವಾಳಿಸಿತು ಯಮಪುರಕೆ [2] ।
ತೋಕಿದುವು ನಾರಾಚ ದಶದಿಶೆ
ಯೋಕರಿಸಿದುವೊ ಸರಳನೆನೆ ಸ
ವ್ಯಾಕುಳರ ಹಿಂದಿಕ್ಕಿ ಹಿಂಡಿದನಸುವನತಿಬಲರ ॥ ೧೪

---

1 ಹರಿಸುವ ರಥದ ವಾಜಿಗಳ, ಚ. 2 ಮಿಗೆ ದುವ್ವಾಳಿಸಿತು ನಭಕೆ, ಚ,

ಕೌರವಸೇನೆಯ ಪರಾಕ್ರಮ.

ಮುಸುಕಿದುದಾಗಂಧರ್ವಬಲ ಹೊ
ಕ್ಕಸುಕಿದು ಕೌರವರಾಯದಳದಲಿ
ಕುಸುಹಿನವರಪ್ಪಿದರು ಖಚರೀಜನದ ಕುಚಯುಗವ ।
ಉಸುಬಿತರೆನೆಲೆ ಚಿತ್ರಸೇನನ
ಸೆಸಿಗ ಹಿಡಿದರು ಸಮರ ಹೊಯ್ ಹೊಯ್
ಕುಸುಮನದ ಕುನ್ನಿಗಳನೆನುತೇಸುದನು ಮಣಿರಥವ ॥ ೧೫

ಧನುವ ಕೊಂಡನು ತನ್ನ ತೂಕದ
ವಿನುತಭಟರೊಗ್ಗಾಯ್ತು ವಾದ್ಯ
ಧ್ವನಿಯು ಧಟ್ಟಣೆ ಧಾತುಗೆಡಿಸಿತು ಜಗದ ಜೋಡಿಗಳ ।
ಮನುಜರಿವದಿರ ಮುಸುಕಿದು ಬಹಭಟ
ರನಿಮಿಷರು ಬಯಲಾಯ್ತು ಕಟಕಟ
ದನುಜರಿಪುಗಳ ದೆಸೆಗಳಚ್ಚದವೆ ಶಿವ ಶಿವಾ ಯೆಂದ ॥ ೧೬

ನೂಕಿದನು ಗಂಧರ್ವಸೇನೆಯೊ
ಳಾಕೆವಾಳರ ಮುಂದೆ ತಾನವಿ
ವೇಕಿಯೇ ದೊರೆತನದಲಿದ್ದನು ಸಕಲದಳಸಹಿತ ।
ಸೋಕಬಹುದೇ ಕರ್ಣ ಕೆಲಬಲ
ದಾಕೆವಾಳರ ಕೊಂಬನೇ ನೆಱೆ
ತೋಕಿದನು ಗಂಧರ್ವಬಲಜಲಧಿಯನು [1] ನಿಮಿಷದಲಿ ॥ ೧೭

ಗಾಯವಡೆದರು ಕೆಲರು ನೆಲದಲಿ
ಲಾಯ ನೀಡಿತು ಕೆಲಬರಿಗೆ ಪೂ
ರಾಯದೆಸುಗೆಗೆ ಹಸುಗೆಯಾದರು ಭಟರು ದೆಸೆದೆಸೆಗೆ ।
ಆಯುಧದ ಮೆದೆಯೊಡ್ಡಿ ತಾಕ
ರ್ಣಾಯತಾಹ್ವನ [2] ಕೆಣಕಿ ಖೇಚರ
ರಾಯದಳ ನುಗ್ಗಾಯ್ತು ದೊರೆ ಹೊಕ್ಕನು ಮಹಾಹವವ ॥

---

1 ಜಲಧಿಯನೊಂದು, ಚ. 2 ಸ್ಯನ, ಚ.

ಚಿತ್ರಸೇನನ ಯುದ್ಧ.

ತೊಲಗು ಮೆರ್ತ್ಯರಿಗೀಸುದರ್ಪದ
ಗೆಲುವುತನವೇ ನಿಮಿಷ ಸೈರಿಸು
ಹುಲುಭಟರು ಹುರಿವೆ ಪ್ರತಾಪಾನಳನ ಸೆಗಳಿಯಲಿ ।
ಅಳುಕುವುದೆ ಖಚರೇಂದ್ರಜಳಧರ
ನೆಲವೊ ತೋಱುವಾ ಚಾಪವಿದ್ಯಾ
ಕಲೆಯ ನೋಡುವೆನೆನುತ ಬೊಬ್ಬಿಱಿದೆಚ್ಚ ನಿನಸುತನ ॥ ೭೯

ಹೇಱಬಹುದೆ ಸುರೇಂದ್ರಭವನದ
ಸೂಳೆಯರ ಸೂಱಾಯುತದ ವಾ
ಚಾಳತನಕೇನೊಱಿವೆ ನಟರಿಗೆ ಮುಖ್ಯವಿದ್ಯೆಯೆಲ ।
ಅಳುತನದಂಗದಲಿ ಬಹೊಡೆ ಶ
ರಾಳಿಯುಲಿ ಮಾತಾಡೆನುತ ಕೆಂ
ಗೋಳಿನಲಿ ಸಲೆ ಹೂಟ್ಟಿದನು ವುದ್ಯಾನವನತಳವ ॥ ೮೦

ಪೂತು ಮಱು ಮೆರ್ತ್ಯರಲಿ ಬಿಲ್ವಿ
ದ್ಯಾತಿಶಯ ಕಿಱಿದುಂಟಲಾ ತಾ
ನೀತ ಕರ್ಣನೆ ಕೌರವೇಂದ್ರಗೆ ಬೀಹಭಟನಿವನೆ ।
ಆತುಕೊಳ್ಳಾದೊಡೆ ಯೆನುತ ದಿಗು
ಜಾತವೆಂಬಿನಲಡಗೆ ರಿಪ್ರಕರ
ಜಾತವನು ಹರೆಗಡಿದು ಕರ್ಣನ ಧನುವ ಖಂಡಿಸಿದ ॥ ೮೧

ಕರ್ಣನು ಗಂಧರ್ವರನ್ನು ಓಡಿಸಿದುದು.

ಇದು ಶರಾವಳಿ ಯಹುದು ಸರಿಗವೆ
ಪದನಿಗಳ ಸರವೆಲ್ಲಲಾ ಸೇ
ರಿದ ಧನುರ್ವಿದ್ಯಾತಿಶಯಯೋಗ್ಯತೆ ವಿಶೇಷವಲ ।
ಇದು ಮನುಷ್ಯರ ಕಲುಹೆ ನೋಡೆನು

ತೊದಳು ಹೊಸಚಾಪದಲಿ ಕಲಿ ಚಿ
ಮ್ಮಿದನು ಚಾಮೀಕರಸುರೇಖಾವಳಿಶರಾವಳಿಯ [1] ॥ ೦೦

ಕಡಿದು ಗಂಧರ್ವನ ಶರೌಘವ
ನಡಸಿ ನಟ್ಟವು ಕರ್ಣಶರ ಸೈ
ಗೆಡಹಿದುವು ಕಿಂಪುರುಷಗುಹ್ಯಕಯಕ್ಷರಾಕ್ಷಸರ ।
ಹೊಡೆಕರಿಸಿ ಹೊದರೆದ್ದು ಬಲಸಂ
ಗಡಿಸಿ ತಲೆವರಿಗೆಯಲಿ ಕರ್ಣನ
ಬಿಡುಸರಳ ಭೀತಿಯಲಿ [2] ಬೆದಱಿದೆ ನೂಕಿತಳವಿಯಲಿ ॥ ೦೩

ಸಂಧಿಸಿತು ಪಡೆ ಚಿತ್ರಸೇನನ
ಹಿಂದೆ ನಿಲಿಸಿ ವಿರೋಧಿಶರಹತಿ
ಗಂದವೞಿಯದೆ ಮುಸುಕಿದರು [3] ಕಟ್ಟಳವಿಯಲಿ ರಥವ ।
ಮುಂದುಗೆಟ್ಟನು ಕರ್ಣನೆನೆ ಕೈ
ಗುಂದಿದರು ಸಾಬಲಸುಯೋಧನ
ನಂದನರು ದುಶ್ಶಾಸನಾದಿಸಮಸ್ತಪರಿವಾರ ॥ ೦೪

ನೊರಜಿನೆರಕೆಯ ಗಾಳಿಯಲಿ ಹೆ
ಮ್ಮರದ ಮೊದಲಳುಕುವುದೆ ಘಡ ಕಾ
ತರಿಸದಿರಿ ಕೌರವರೆನುತ ಕಲಿಕರ್ಣ ಬೊಬ್ಬಿಱಿದು ।
ಶರನಿಧಿಗೆ ಬಡಬಾಗ್ನಿ ಮುನಿವವೊ
ಲುರುವಣಿಪ ಹೆಬ್ಬಲವನೊಂದೇ
ಸರಳಿನಲಿ ಸವಱಿದನು ಸುಳಿಸಿದನೌಕಿ ನಿಜರಥವ ॥ ೦೫

ಗೆದ್ದುದೇ ರಣವೆಲವೊ ದಿವಿಜರ
ದೊದ್ದಿಯಲಿ ಸೂಳೆಯರ ಜಾತಿಯು [4]
ಬಿದ್ದಿನರ ವೀಳೆಯದ ಬದಗರು ಭಟರ ಮೋಡಿಯಲಿ ।

---

1 ತಿಲೀಮುಖವ, ಚ. 2 ಬೀದಿಯಲಿ, ಚ.
3 ಮುತ್ತಿದುದು, ಚ. 4 ಚಾರಿಗೆ, ಚ.

ಹೊದ್ದಿದರೆ ಹುರುಳಹುದೆ ಭಯರಸ
ದದ್ದುಗೆಯ ಮಂಚಡಿಕೆಮನದವ
ರಿದ್ದು ಫಲವೇನೆನುತ ಕೈವೊಡಿದನು ಕಲಿಕರ್ಣ ॥ ೬೬

ನೊಂದುದಾತನ ಪೊರೆಯ ಸುಭಟರು
ಸಂದಣಿಗಳಿಕ್ಕಲಿಸಿ ಬಿದ್ದುದು
ಮುಂದೆ ಬಲುಗಂಧರ್ವಬಲವಿನಸುತನ ಶರಹತಿಗೆ ।
ಬಂದುನಿಮಿಷಕೆ ಮತ್ತೆ ಪಡಿಬಲ
ಬಂದುದಗಣಿತಯುಹ್ಕರಾಹ್ಕಸ
ವೈಂದ ಮುಕ್ಕುರುಕಿದುದು ಕರ್ಣನ ರಥದ ಮುಂಕಣಿಯ ॥ ೬೭

ಆಯುದ್ಧವನ್ನು ಪಾಂಡವರು ನೋಡಿದುದು.

ಅರಸ ಕೇಳೀಚೆಯಲಿ ಕೌರವ
ರರಸ ಬಂದನು ಸರ್ವದಳಸಹಿ
ತೆರಡು ಬಲದುಬ್ಬರದ ಬೊಬ್ಬೆಗೆ ಬಿರಿದುದವನಿತಳ ।
ನರವೈಕೋದರನಕುಲಸಹದೇ
ವರು ಕುತೂಹಲದಿಂದ ಸುತ್ತಣ
ವೊಣಿಡಿಗಳ ಮೇಲಿದ್ದು ನೋಡಿದರಾಮಹಾಹವವ ॥ ೬೮

ತೆಗಿಸಿದನು ನೃಪನಿನಸುತನ ಮು
ತ್ತಿಗೆಯನೆರಡೊಡ್ಡಿನಲಿ ಸೂಸುವ
ಹೊಗರಗಣೆಗಳ ಹೊಯ್ವಡಾಯುಧ ಕಡಿವಪರಶುಗಳ ।
ಬಿಗಿವ ಸಬಳದ ಲೋಟಿಸುವ ಲೌ
ಡಿಗಳ ಚಿಮ್ಮುವ ಸುರಗಿಗಳ ಕಾ
ಳಗದ ರೌದ್ರಾಟೋಪವಂಜಿಸಿ [1] ತಮರರಾಲಿಗಳ ॥ ೬೯

ನೂಕಿದುದು ತೋಪಿನ ತುದಿಗೆ ಮಗು
ಚ್ಚೌಕಿದುದು ಪಾಳಯಕೆ ಮುಖಿದು ದಿ
ವೌಕಸರು ಜಾಜಿವರು ಜೋಡಿಸಿ ಮತ್ತೆ ಕುರುಬಲವ ।

1 ರಂಜಿಸಿ,

ತೋಕುವೆರು ಗಂಧರ್ವ ರುಭಯಾ
ನೀಕದೋಹರಿಸಾಹರಿಯು ಸ
ವ್ಯಾಕುಲರನೀಕ್ಷಿಸುತಲಿದ್ದರು ಪವನಜಾದಿಗಳು ॥ ೪೦

ಈಸು ಕೊಂಡಾಡಿದರೆ ಸುರರುಪ
ಹಾಸವಾಡುವರೆಮ್ಮನೆನುತ ಮ
ಹಾಸಗರ್ವಗು ಚಿತ್ರಸೇನನ ಮನ್ನಣೆಯ ಭಟರು ॥
ಪಾಶಚಕ್ರಮುಸುಂಡಿಪರಿಘ
ಪ್ರಾಸಪರಶುಕೃಪಾಣಸಬಳಶ
ರಾಸನಾದಿಯ ಕೈದುಗಾಱರು ಕದನಕನುವಾಯ್ತು ॥ ೪೧

ಜೋಡುಮಾಡಿತು ಖಚರಬಲ ಕೈ
ಮಾಡಿ ಕವಿದುದು ಚಿತ್ರಸೇನನ
ಜೋಡಿಯಲಿ ಜರ್ಝರರಿಷ್ಟಿದರು ಮುಂದೆ ಮುಂಗುಡಿಯ ।
ಓಡಿದರೆ ಹಾವಿಂಗೆ ಹದ್ದಿನ
ಕೂಡೆ ಮಱುಕವೆ ಫಡ ಯೆನುತ ಕೈ
ಮಾಡಿದರು ರಿಪುಭಟರು ನಿಂದರು ನಿಮೆಷಮಾತ್ರದಲಿ ॥ ೪೨

ಗಿಳಿಯ ಹಿಂಡಿನ ಮೇಲೆ ಗಿಡುಗನ
ಬಳಗ ಕವಿವೆಂದದಲಿ ಸೂಟಿಯೊ
ಳಳವಿಗೊಡ್ಡಿದ ಚಾತುರಂಗವನಿಕ್ಕಡಿಯ ಮಾಡಿ ।
ಎಲೆ ಸುಯೋಧನ ಬೀಟುಕೈದುವ
ನಿಳುಹಿ ಖೇಚರರಾಯನಂಘ್ರಿಯೊ
ಳಲವೊ ರವಿಸುತ ಹೋಗೆನುತ ಹೊಕ್ಕಿಱಿದರುರುವಣಿಸಿ ॥ ೪೩

ಕರ್ಣನು ಅಸ್ತ್ರಗಳನ್ನು ಬಿಡುವಿಕೆ.

ಹೊಡಕರಿಸಿ ಹೊದರೆದ್ದು ಬೞಸಂ
ಗಡಿಸಿ ತಲೆವೆರಿಗೆಯಲಿ ಕರ್ಣನ
ಬಿಡುಸರಳ ಬೆದಕೆಗೆ ಬೆದಱಿದೆ ನೂಕಿತಳವಿಯಲಿ ।

ಫಡ ಸುಯೋಧನ ತೊಲಗು ಕರ್ಣನ
ಕಡುಹಿನಲಿ ಫಲವೇನು ನಿನ್ನಯ
ಪಡೆಯು ಬಂದರೆ ಕೆಡದೆ ಯೆಂದುದು ಕೂಡೆ ಸುರಸೇನೆ ॥ ೫೪

ಕರ್ಣ ಚಿತ್ರಸೇನರ ಪರಸ್ಪರಾಸ್ತ್ರಯುದ್ಧ.

ಗರುವರೇ ನೀವೆಲವೊ ಸುರಪನ
ಪುರದ ನಟ್ಟವಿಗರು ಸುಯೋಧನ
ನರಮನೆಯ ನಟ್ಟವಿಗಳಿಗೆ ಪೂಡಹಿರಿ ತುಡುಕು [1] ವೊಡೆ ।
ಅರಸುಪರಿಯಂತೇಕೆ ನಿಮಗೆನು
ತರಿಭಟರಿಗಾಗ್ನೇಯವಾರುಣ
ನಿರುತಿವೊದಲಾದಸ್ತ್ರಚಯವೆನು ಕವಿಸಿದನು ಕರ್ಣ ॥ ೫೫

ನೈರುತಕ್ಕಾಗ್ನೇಯಯಾಮ್ಯೇಕ
ವಾರುಣಕೆ ಸುರರೊಡೆಯರೆಮ್ಮಲಿ
ವೈರಬಂಧವಿದುಂಟೆ ಸಾಧನ ನಿನಗೆ ದಿವ್ಯಶರ ।
ಸೇರಿದರೆ ನಿನಗಾದರಿದಕೋ
ವಾರುಣ ಪ್ರತಿಕಾರ ಪಾವಕ
ನೈರುತಾದಿಗೆ ಕೊಳ್ಳನುತ ಗಾಂಧರ್ವಪತಿ ಯೆಚ್ಚ ॥ ೫೬

ಗಬ್ಬರಿಸಿದುವು ದಿವ್ಯೇಶರಚಯ [2]
ಗರ್ಭವೆ ಪ್ರತಿಕಾರಿಶರ ಮಗು
ಹೆಬ್ಬಿಸಿದನಿನಸೂನು ಪರ್ವತತಿಮಿರಫಣಿಶರವ ।
ಪರ್ಬತಕೆ ವಜ್ರಾಸ್ತ್ರ ತಿಮಿರದ
ಹಬ್ಬುಗೆಗೆ ರವಿಬಾಣ ಹಾವುಗ
ಳೊಬ್ಬುಳಿಗೆ ಗರುಡಾಸ್ತ್ರವೆನು ಗಂಧರ್ವಪತಿ ಯೆಚ್ಚ ॥ ೫೭

ಸವೆದುವಿನಸುತನಂಬು ಖೇಚರ
ನವಗಡಿಸಿ ಕವಿದೆಚ್ಚ ನೀತನ

---

[1] ನೋಡುವರೆ. ಕ. ಚ. [2] ವಿಶಿಖ, ಚ.

ಸವೆಗಸೀಸಕಜೋಡು ತೊಟ್ಟವು ಸರಳಜೋಡುಗಳ ।
ಕವಿದುದೆಡಬಲವೆಂಕದಲಿ ಸುರ
ನಿವಹ ಸೂಟಿಯು ಸರಳಸೋನೆಯು [1]
ಲವೆಗಡಿಸಿತ [2] ಡಿಗಡಿಗೆ ಕರ್ಣನ ರಥದ ವಾಜಿಗಳು ॥ ೩೮

ಗಂಧರ್ವನು ಕರ್ಣನನ್ನು ಅಸ್ತ್ರಗಳಿಂದ ನೋಯಿಸಿದುದು

ಜೋಡು ಹರಿದುದು ಸೀಸಕದ ದಡಿ
ಬೀಡೆ ಬಿರಿದುದು ತಲೆಯ ಚಿಪ್ಪಿನ
ಜೋಡು ಜಱಿದುದು ಮನಕೆ ಸುಱಿದುದು ಸೊಗಡು ರಣರಸದ ।
ಖೋಡಿ ಕೊಪ್ಪರಿಸಿದುದು ಧೈರ್ಯವೆ
ನೀಡಱಿದುದಪದೆಸೆ ವಿಟಾಳಿಸಿ
ಖೇಡತನ ಭುಲ್ಲವಿಸುತಿರ್ದುದು ಭಾನುನಂದನನ ॥ ೩೯

ಕರ್ಣನು ಗಂಧರ್ವನನ್ನು ನೋಯಿಸಿದುದು.

ಮತ್ತೆ ಕೊಂಡನು ಬಿಲುಸರಳ ನಭ
ಕೊತ್ತಿದನು ರಣಭಯಾನಹಿತನ
ಕುತ್ತಿದನು ಕಣ್ಣಿನಲಿ ಕದಡಿದನು ಮನದೊಳರಿಭಟನ ।
ಕೆತ್ತಿದನು ಕೂರಲಗಿನಲಿ ಮುಳು
ಮುತ್ತ ಹೂತಂದದಲಿ ಹುದುಗಿದ
ನೆತ್ತರಿನ ನೆಣವೆಸೆಯೊಳಸೆದನು ರಥದೊಳಾಖಚರ ॥ ೪೦

ನೊಂದೊಡುಬ್ಬಿತು ದರ್ಪಶಿಖಿ ಖತಿ
ಯಿಂದ ಮೆದದುಬ್ಬಿನಲಿ ಘಾತದ
ಕಂದುಕದವೋಲ್ ಕುಣಿದುದಂತಃಖೇದ ಕೊಬ್ಬಿನಲಿ ।
ನೊಂದುದಿನಿಸಿಲ್ಲಕಟ ದೈತ್ಯರ
ದಂದುಗದಲಾವಿಂದು ಮರ್ತ್ಯರು
ಬಂದಿವಿಡಿದರೆ ಬಲುಹನೆನುತೋರಂತೆ ಚಿಂತಿಸಿದ ॥ ೪೧

---

[1] ಸೋನೆಗೈ, ಟ. [2] ತವರಿಸಿದುವ, ಚ.

ತಿರುಗಿ ಗಂಧರ್ವನು ಬಿಟ್ಟ ಅಸ್ತ್ರಗಳ ವಿಷಯದಲ್ಲಿ
ಕರ್ಣನು ವರ್ತಿಸಿದುದು.

ಋತಿಯಲುಗಿದನು ದಿವ್ಯಬಾಣ
ಪ್ರತತಿಯನು ರಥಸೂತಹಯಸಂ
ತತಿಶರಾಸನಕೇತುದಂಡಚ್ಛತ್ರಚಾಮರವ ।
ಹುತವಹನೊಳೊಟ್ಟಿದನು ಸಮರ
ವ್ಯತಿಕರದೊಳಾಗ್ನೇಯಶರ ಚಿ
ಮ್ಮಿತು ಛಡಾಳಿಸಿ ಕೆಂಡ ಗೆದಱಲು ಕರ್ಣ ಬೆಱಗಾದ ॥ ೪೦

ಕರ್ಣನು ಹಿಂದಾಗಲು ಕೌರವರು ಚಿಂತೆ ಮಾಡಿದುದು.

ವಿರಥನಾದನು ಹಲಗೆಱಡ್ಡದ
ಲರಭಟನ ಪಡಿಮುಖಕೆ ಚಿಮ್ಮಿದ
ನೆರಡನೊಂದಂಬಿನಲಿ ಕಡಿದನು ಜಡಿದನಿನಸುತನ ।
ತಿರುಗಿ ಹಾಯ್ದನು ಕರ್ಣನಾತನ
ಮುಱಿವೆ ಕಂಡು ವಿಕರ್ಣ ತನ್ನಯ
ವರರಥವ ಚಾಚಿದನು ಬೋಳ್ಕಯಿಸಿದನು ಭಾನುಜನ ॥ ೪೨

ಪೈಸರಿಸಿತೋ ಕುರುಚತುರ್ಬಲ
ಘಾಸಿಯಾದನು ಕರ್ಣನಿದು ಧೊರೆ
ಗೈಸಲೇ ದುರ್ಮಾನವೆನುತಲ್ಲಲ್ಲಿ ಕುರುಸೇನೆ ।
ಓಸರಿಸಿದುದು ಸಮರಮುಖದಲಿ
ಸೂಸಿದರು ಸಮರಥರು ಸೋಲವ
ನಾಸುಯೋಧನ ನಗುತ ಕಂಡನು ನೋಡಿ ಕೆಲಬಲನ ॥ ೪೪

ಅವನಿಪನ ಮೊಗಸನ್ನೆಯಲಿ ಸೂ
ಳವಿಸಿದುವು ನಿಸ್ಸಾಳಕೋಟಿಗ
ಳವಱಿದುದು ಬಹುವಿಧದ ವಾದ್ಯಧ್ವನಿ ದಿಶಾಮುಖವ ।

ತವತವಗೆ ಧುರತೋರಹತ್ತರು
ತವಕಿಸುತ ಹುರಿಯೋಱಿದರು ಕೌ
ರವರು ಕರ್ಣನ ಹವಿಬದಾಹವವೆನಗೆ ತನಗೆನುತ ॥ ೪೫

ಗಂಧರ್ವನ ಮೇಲೆ ಕೌರವರು ಯುದ್ಧ ಮಾಡಿದುದು

ಮುಱಿದು ಬಲ ಸಂವರಿಸಿ ಪಡಿಮುಖ
ಕುಱುಬಿದುದು ದುರ್ಯೋಧನಾನುಜ
ರಱಿಸಿದರು ಗಂಧರ್ವನಾವೆಡೆ ತೋಱು ತೋಱೆನುತ ।
ತಱುಬುವುದು ಜಯವೊಮ್ಮೆ ಮನದಲಿ
ಕಱುಬುವುದು ಮತ್ತೊಮ್ಮೆ ತಪ್ಪೀ
ನಿಱಿದಸಹಸವ ತೋಱೆನುತ ಬೆರಸಿದರು ಪರಬಲವ ॥ ೪೬

ಅರಸನನುಜರೆ ನೀವು ಕರ್ಣನ
ಹರಿಬದವರೇ ಹರ ಹರೆಮಗಿ
ನ್ನರಿದಲೈ ನಿಮಗೀಸು ಖತಿ ಝೋಂಪಿಸಿತು ಬೞಿಕ್ಕೇನು ।
ತರಹರವು ತಮಗಿಲ್ಲಲಾ ಪೂ
ತುಱಿ ಯೆನುತ ಪಡಿತಳಿಸಿ ಗಂಧ
ರ್ವರ ಚಮೂಪರು ನೂಕಿದರು ತೋಕಿದರು ಪರಬಲವ । ೪೭

ಎಚ್ಚರಿಱಿದರು ಹೊಯ್ದರಿಟ್ಟರು
ಚುಚ್ಚಿದರು ಸೀಟಿದರು ನೂಕಿದ
ನಿಚ್ಚಟರ ಸೇದಿದರು ದಡಿವಲೆಕಣಿ ವಲೆಗಳಲಿ ।
ಕೊಚ್ಚಿದರು ನುಗ್ಗಿದರು ಕೊಯ್ದಿದರು
ನುಚ್ಚುನುಱಿಮಾಡಿದರು ಹರಿಬಕೆ
ಹೆಚ್ಚಿ ಹೊಗುವ ಮಹೀಶನನುಜರ ಮನ್ನಣೆಯ ಭಟರ ॥ ೪೮

ಅವರನ್ನು ಸೋಲಿಸಲು ದುರ್ಯೋಧನನೇ ಯುದ್ಧಕ್ಕೆ ಬರುವಿಕ.

ಗಾಯವಡೆಯದರಿಲ್ಲ ಸಾಯದೆ
ನೋಯದವರಿಲ್ಲ್ರೆ ರಡುಬಲದಲಿ
ಬೀಯವಾದರು ಸುಭಟರೆನೆ ಗಂಧರ್ವಪತಿ ಮುಳಿದು ।

ರಾಯನನುಜರನಟ್ಟಿದನು ದೀ
ಕ್ಷಾರ್ಯವೆನು ಹಿಡಿದನು ವಿಕರ್ಣನ
ನೋಯಲೆಚ್ಚನು ಕೆದಱಿದನು ಕೌರವಚತುರ್ಬಲವ ॥ ೪೯

ಘಡ ಯೆನುತ ಕುರುರಾಯನಾತನ
ಪಡಿಮುಖಕೆ ನೂಕಿದನು ಜೋಡಿಸಿ
ಜಡಿವ ನಿಸ್ಸಾಳಾಯತದ ಕಹಳೆಗಳ ಕಳಕಳದ ।
ಬಿಡುರಥದ ಧಟ್ಟಣೆಯ ಧಾಟಿಯ
ಕಡುಗುದುರೆಗಳ ನೆತ್ತಿಯಂಕುಶ
ದೆಡೆಯ ಘಟೆಯಾನೆಗಳ ದಳ ಸಂದಣಿಸಿತೊಗ್ಗಿನಲಿ ॥ ೫೦

ನುಗ್ಗನಿವೆ ಕೈಕೊಂಬನೇ ರಣ
ದಗ್ಗಳದ ಮೌಳಿಯಲಿ ಕದನದ
ಹುಗ್ಗಿಗರ ಸಾಕಿದನು ಶಾಕಿನಿಡಾಕಿನೀಜನವೆ ।
ಬುಗ್ಗಿ ಕವಿದರನಿಂದ್ರಲೋಕದ
ಸುಗ್ಗಿಯಲಿ ಸೇಱಿಸಿದನಾಹವ
ದುಗ್ಗಡವನೇನೆಂಬೆನೈ ಗಾಂಧರ್ವವಿಕ್ರಮವ ॥ ೫೧

ವಿಾಟನಿಪ ಗಂಧರ್ವರೊಂದೇ
ಕೋಟಿ ಕವಿದುದು ಕುರುಬಲಕೆ ಪಡಿ
ಕೋಟಿಯಾದುದು ನೃಪತಿ ಸಿಲುಕಿದನವರ ವೇಡೆಯಲಿ ।
ದಾಟಿತರಸನ ಧೈರ್ಯ ಕೈದುಗ
ಳಾಟ ನಿಂದುದು ಕರದ ಹೊಯ್ಲಲಿ
ನೋಟಕರು ಘೋಷೆಂದರಿತ್ತಲು ಪಾಂಡವರ ವನದ ॥ ೫೨

ಆಗ ದುರ್ಯೋಧನನನ್ನು ನೋಡಿ ಜನಗಳು
ಪರಿಹಾಸ ಮಾಡಿದುದು,

ಮುತ್ತಿದರಿಬಲಜಾಲವನು ನಳ
ಕೊತ್ತಿ ದಿವ್ಯಾಸ್ತ್ರದಲಿ ಸೀಳಿದ
ನೆತ್ತ ಮುಖವಿದೋಡಿದರೆ ರಥವನು ಹರಿಸಿ ಬೇಗದಲಿ ।

ಒತ್ತಿ ಹರಿತಹರಥತುರಂಗವ
ಮುತ್ತಿದಿಭಸಂಘಾತವನು ನೃಪ
ನೊತ್ತಿ ಕಡಿದನು ಹಯವ ಗಜರಥವೃಷ್ಟಿದಕಾಲಾಳ ॥ ೪೩

ಇತ್ತ ಕೌರವರಾಯ ರಥವನ
ದೆತ್ತಿ ಬಿಟ್ಟನು ಖಚಚರರಾಯನ
ಸುತ್ತಣಿಯ ಚತುರಂಗಸೇನೆಯನಸಮಬಾಣದಲಿ ।
ತೆತ್ತಿಗರ ಕರೆ ನಿನಗೆ ನೂಕದೆ
ನುತ್ತ ಶರಸಂಧಾನಚಯದಲಿ
ವೆತ್ತಿದನು ಮೊನೆಗಣೆಗಳಲಿ ಖಚರೇಂದ್ರ ಕೈಮರೆಯು ॥ ೪೪

ದುರ್ಯೋಧನನು ಗಂಧರ್ವನ ವಶವಾದುದು.

ಮುಸುಕಿದ ಬಲ ಗರಿಗಟ್ಟಿನೋಡಿ
ಧರಣಿಪನ ಮುಂಗಡಿಯಲೀಯಿತು
ತುರಗಗಜರಥಹರಿಗೆಸಬಳ ಮುಸುಂಡಿಪರಿಘದಲಿ ।
ಉರುಬಿದನು ಖಚರೇಂದ್ರ ಕೌರವ
ರರಸ ಸಾಬಲಸೈಂಧವರು ಕೈ
ಮರೆದು ಹಿಂಗಿತು ಕೌರವೇಶ್ವರ ಸಲುಕಿದನು ಪಗೆಗೆ ॥ ೪೫

ಇಟ್ಟಣಿಸಿದರು ಮುಟ್ಟಿ ರಾಯನ
ನಟ್ಟಲೀಸದೆ ಕುರುಚತುರ್ಬಲ
ಹೊಟ್ಟುಗಳ ತೂಹಿದರು ಹಿಡಿದರು ಕೌರವಾನುಜರ ।
ಮುಟ್ಟಿ ಬಂದುದು ಕೇಡು ರಾಯನ
ನಟ್ಟ ಹಿಡಿದುದು ದಿವಿಜಬಲ ಜಗ
ಜಟ್ಟಿ ಚಿತ್ರಾಂಗದನು ನೋಡಿದ ಕೌರವೇಶ್ವರನ ॥ ೪೬

ಅರರೆ ಧೊರೆ ಸಿಕ್ಕಿದನು ನೆಱೆ [1] ಡಾ
ವರಿಸುವರ ಹೊಯೆ ಹೊಯ್ಯೆನುತ ಖೇ
ಚರರ ಕಂಬಿಗಳಾಡಿದುವು ಸುತ್ತಲು ಸುಯೋಧನನ ।

---

1 ಧೊರೆಡೊಂಬಿಯಲಿ, ಚ,

ಅರಸರಂಜದಿರಂಜದಿರಿ ಯೆನುತ
ತುರುವಣಿಸಿ ಕೌರವನರೇಂದ್ರನ
ಕರದ ಕೈದುವನೀಸಿಕೊಂಡನು ಖಚರಪತಿ ನಗುತ ॥ ೫೭

ಹಯದ ಪಡಿವಾಘೆಯಲಿ ಬಾಹು
ದ್ವಯವ ಬಿಗಿದನು ತನ್ನ ರಥದಲಿ
ಜಯವಿಹೀನನನಿರಿಸಿದನು ಕುರುರಾಯವಲ್ಲಭನ ।
ಭಯಭರಿತದುಶ್ಶಾಸನನ ದು
ರ್ಜಯನ ಚಿತ್ರಾಂಗದವಿಕರ್ಣನ
ನಯವಿದೂರರ ತಂದರಿಸ್ಪತ್ತೈಮುಸಹಭವರ ॥ ೫೮

ಇತ್ತಿದು ಗಜವನು ಕೈದುಗಳನೆಲ
ಕಿಟ್ಟುಹಿ ಜೋಧರು ವಾರುವದಿನಿಳ
ಗಿತ್ತಿಯ ರಾವ್ತರು ಹಾಯ್ಕಿದರು ದೂಹತ್ತಿಲೋಡಿಗಳ ।
ಬಿಲುಸರಳ್ಗಳ ಬಿಸುಟು ರಥಿಕರು
ನೆಲಕೆ ಹಾಯ್ದರು ಹೊತ್ತ ಕೈದುವ
ನಿಳುಹಿ ಪಯದಲಿ ಬೀಟುಗೊಂಡುದು ಖೇಚರೇಶ್ವರನ ॥ ೫೯

ಮುಟ್ಟಿದಿರಿ ಪರಿವಾರಕೈದುವ
ಕೊಟ್ಟು ಹೋಗಲಿ ಧೊರೆಗಳಾದರ
ಬಿಟ್ಟವರಿಗಮರೇಂದ್ರನಾಣೆ ಯೆನುತ್ತ ಸಾರಿದರು ।
ಕೆಟ್ಟುದೀ ಕುರುಪತಿಯ ದಳ ಜಗ
ಜಟ್ಟಿಗಳು ಕರ್ಣಾದಿಗಳು ಮುಸು
ಕಿಟ್ಟು ಜಾಹಿತು ಕಂಡದೆಸೆಗವನೀಶ ಕೇಳೆಂದ ॥ ೬೦

ಖಿನ್ನನಾದನು ಪಾರ್ಥನನಿಲಜ
ನುನ್ನತೋತ್ಸವನಾದನತಿಸಂ
ಪನ್ನಸಮ್ಮದರಾದರಾಮಾದ್ರೀಕುಮಾರಕರು ।

ಇನ್ನು ಪಾಂಡವರಾಜ್ಯಸಿರಿ ಯೆಮಗೆ
ಗಿನ್ನು ಲೇಸಹುದಕಟ ದೈವದ
ಗನ್ನಗತಕವೆ ಯೆನುತ ಹಿಗ್ಗಿತು ಮುನಿಜನಸ್ತೋಮ [1] ॥ ೬೧

ಭಾವನವರರ್ತಿಯಲಿ ಜಲಕ್ರೀ
ಳಾವಿನೋದಕೆ ಬಂದು ಗಂಧ
ರ್ವಾವಳಿಯ ಕೇಳಿಯಲಿ ಚಿತ್ತೈಸಿದರಲಾ ಯೆನುತ ।
ದೇವಿಯರು ನಸುನಗುತ ಚಿತ್ತದ
ಚಾವಡಿಯಲೋಲೈಸಿ ಕೊಂಡರು
ಭೂವಳಯದೇಕಾಧಿಪತ್ಯದ ಸಾಖ್ಯಸಂಪದವ ॥ ೬೨

ಕೇಳಿದನು ಯಮಸೂನು ದುಗುಡವ
ತಾಳಿದನು ನಳನಹುಷಭರತನೃ
ಪಾಲಪಾರಂಪರೆಯಲುದಿಸಿದ ಸೋಮವಂಶದಲಿ ।
ಕೊಳ್ಳು ವೋದುದೆ ಕೀರ್ತಿ ಯೆಮ್ಮಾ
ಬಾಳಿಕೆಯ ಸುಡಲೆನುತ ಚಿಂತಾ ,
ಲೋಲನಿದ್ದನು ಧೀರನಾರಾಯಣನ ನೆನೆಯುತ್ತ ॥ ೬೩

ಇಪ್ಪತ್ತನೆಯ ಸಂಧಿ ಮುಗಿದುದು.

ಇಪ್ಪತ್ತೊಂದನೆಯ ಸಂಧಿ.

ಸೂಚನೆ.

ರಾಯದಟವಿನು ಮುಱಿದು ಕೌರವ
ರಾಯನನು ಕೊಂಡೊಯ್ವ ಖೇಚರ
ರಾಯನನು ತಾಗಿದನು ಮುರಳಿಚಿ ತಂದನಾಪಾರ್ಥ ॥

---

[1] ವಧೂಸಿಕರ, ಕ. ಖ.

ದುರ್ಯೋಧನನನ್ನು ಹಿಡಿದಾಗ ಕೊಳ್ಳಿಯನ್ನು ಹೊಡೆದುದು.

ಕೇಳು ಜನಮೇಜಯ ಧರಿತ್ರೀ
ಪಾಲ ಸಿಕ್ಕಿದನತ್ತ ಕುರುಭೂ
ಪಾಲನದನೇ ಹೇಱುವೆನು ಪಾಳಯದ ಗಜಬಜವ ।
ಆಳು ಹಾಯ್ದುದು [1] ಕಂಡಮುಖದಲಿ
ಕೀಳುಮೇಲೊಂದಾಯ್ತು ಧನಿಕರ
ಪೀಠಿಗೆಯ ಧನ ಸೂಱೆವೋದುದು ಕೇರಿಕೇರಿಯಲಿ ॥ ೧

ಕುದುರೆ ಹಾಯ್ದುವು ಕಂಡಕಡೆಯಲಿ
ಮದಗಜಾವಳಿಯೋಡಿಯುವು ವರ
ಸುದತಿಯರು ಬಾಯ್ವಿಡುತ ಹರಿದರು ಬಿಟ್ಟವುಂಡೆಯಲಿ ।
ಕದಡಿದುದು ಜನಜಲಧಿ ಝೂಡಿಸಿ
ಬೆದಱಿದರು ಕೋಡಿಗಳು [2] ರಾಯನ
ಹದನದೇನೆನುತ ಹರದರು ಹರಿದರಗಲದಲಿ ॥ ೨

ಕೌರವರ ಪತ್ನಿಯರ ರೋದನ.

ಗಾಳಿಯುಱಿಯದು ರವಿಯ ಕಿರಣಕೆ
ಬಾಲೆಯರು ಗೋಚರವೆ ದಡ್ಡಿಯ
ಮೇಲು ಬೀಯಗದಂಗರಕ್ಷೆಯ ಕಂಚುಕಿವ್ರಜದ ।
ಮೇಳವವದೇನಾಯ್ತೊ ಬೀದಿಯ
ಗಾಳುಮಂದಿಯ ನಡುವೆ ಕುರುಭೂ
ಪಾಲನರಸಿಯರಳುತ ಹರಿದರು ಬಿಟ್ಟವುಂಡೆಯಲಿ ॥ ೩

ಭಾನುಮತಿ ಬಂದು ಧರ್ಮರಾಯನನ್ನು ಮರೆಹೊಗುವಿಕೆ.

ಕುರುಪತಿಯ ದುಶ್ಶಾಸನಾದಿಯ
ರರಸಿಯರು ಚೌಪಟಿದಲೊದರಿದ
ರರಸನುಪಹತಿಗೊಪ್ಪಗೊಟ್ಟರೆ ಕರ್ಣಶಕುನಿಗಳು ।

---

[1] ನಡೆದುದು, ಚ. [2] ನಱಿದು, ಕದಱಿದುವು ಕೀರಿಗಳು, ಜ, ಟ.

ಗುರುನದೀಸುತರಿದ್ದರೀಪರಿ
ಪರಿಭವಕೆ ಪಾಡಹುದೆ ಪಾಂಡವ
ರರಸನಿಹ ವನವಾವುದೆಂದೊಱಲಿದಳು ಭಾನುಮತಿ ॥ ೪

ಆರಸಿಯರು ಸಖಿಯರು ಕುಮೌರಿಯು
ರರಸನನುಜರ ಹೆಂಡಿರನಿಬರು
ವೆರಸಿ ಬಂದಳು ಭಾನುಮತಿ ಯಮತನುಜನಾಶ್ರಮಕೆ ।
ಕರುಣಿ ರಕ್ಷಿಸು ಸೋಮವಂಶೋ
ದ್ಧರಣ ರಕ್ಷಿಸು ಸತ್ಯಧರ್ಮದ
ಸಿರಿಯೆ ರಕ್ಷಿಸೆನುತ್ತ ಧೊಪ್ಪನೆ ಕೆಡೆದಳಂಘ್ರಿಯಲಿ ॥ ೫

ನಾದಿದಳು ನೃಪನಂಘ್ರಿಯನು ನಯ
ನೋದಕದ ಧಾರೆಯಲಿ ಭಾಳವ
ತೀದು ತಿಲಕದ ಗಂಧದಲಿ ಬೈತಲೆಯ ಮುತ್ತಿನಲಿ ।
ಆದರಿಸಿ ನವಕುಸುಮದಲಿ ಘನ
ರೋದನಧ್ವನಿಮಂತ್ರದಲಿ ನೃಪ
ಪಾದಪೂಜೆಯ ರಚಿಸುವವೊಲೊಪ್ಪಿದಳು ಭಾನುಮತಿ ॥ ೬

ಖಳರು ಕೌರವರೆಂದು ಸಜ್ಜನ
ಕುಲಶಿರೋಮಣಿ ನೀನು ಕರುಣಾ
ಜಲಧಿ ನೀನಪರಾಧಿಗಳು ನಾವೆಹೆವು ಜಗವಱಿಯಿ ।
ಹುಳಿಗೆ ಹಾಲಳುಕಿದರೆ ಹಾಲಿನ
ಜಲಧಿ ಕೆಡುವುದೆ ಜೀಯ ತನ್ನವ
ರೆಳಸಿ ಕೊಂಡರು ಕಾಯಬೇಕೆಂದೊಱಲಿದಳು ತರಳ ॥ ೭

ರಾಯರಿಗೆ ಬಿನ್ನಹವ ಮಾಡೌ
ತಾಯೆ ಕೇಳೌ ದ್ರೌಪದಿಯೆ ಹಿರಿ
ದಾಯುಸವ ಬಡಿಸಿದನು ಕುರುಪತಿ ನಿನ್ನ ಮೈದುನನು ।

ನೋಯಿಸಲು ಶ್ರೀಗಂಧ ನಿಜಗುಣ
ದಾಯತವ ಬಿಡದಂತೆ ನೀವೇ
ಕಾಯಬೇಹುದು ಪತಿಯನೆಂದೊಲಿದಳು ಭಾನುಮತಿ ॥ ೪

ಧರ್ಮರಾಯನು ಭಾನುಮತಿಯನ್ನೆತ್ತಿ ಸಮಾಧಾನಪಡಿಸಿದುದು.

ಚುಂಬಿಸಿತು ಕಡುಶೋಕ ಮಿಡಿದನು
ಕಂಬನಿಯನುಗುರಿನಲಿ ಘನಕರು
ಣಾಂಬುನಿಧಿ ಸೀವರಿಸಿ ಮೈಗುಡಿಯಿರಿದರೋವೆದಲಿ ।
ಹಂಬಲಿಸಬೇಡಕಟ ಕುರುಪತಿ
ಯೆಂಬನಾರವ ಬೊಪ್ಪನವರೇ
ನೆಂಬರೇಷಾ ತಾಯೆ ಯೆನುತತ್ತಿದನು ಭಾಮಿನಿಯ ॥ ೯

ಗಂಧರ್ವರನ್ನು ಗೆಲ್ಲುವುದಕ್ಕಾಗಿ ಭೀಮಸೇನನಿಗೆ ಹೇಳುವಿಕ.

ಭೀಮ ಬಾ ಕುರುರಾಜಕುಲಚೂ
ಡಾಮಣಿಯೆ ತಾ ಹೋಗು ಕದನೋ
ದ್ದಾಮವರ್ಪನ ತಾ ನಿಜಾನ್ವಯಕುಮುದಚಂದ್ರಮನ ।
ತಾ ಮನೋವ್ಯಥೆ ಬೇಡ ನೃಪಚಿಂ
ತಾಮಣಿಯೆ ತಾ ಹೋಗೆನಲು ಕರ
ತಾಮರಸವೆನು ಮುಗಿದು ಬಿನ್ನಹಮಾಡಿದನು ಭೀಮ ॥ ೧೦

ಅದಕ್ಕೆ ಭೀಮಸೇನನ ಅಸಮ್ಮತಿ.

ಬೆಸಸಬೇಹುದು ನೀತಿಶಾಸ್ತ್ರದ
ಬೆಸುಗೆ ತಪ್ಪದೆ ರಾಜಧರ್ಮದ
ಮುಸುಡು ಕಂದದೆ ಖೋಡಿವಿಡಿಯದೆ ಕುಶಲರಾದವರು ।
ಎಸಗುವುದು ತಾವಾವ ಕಾರ್ಯದೊ
ಳಸುವನಿಕ್ಕಿ ತದರ್ಥವನು ಪರ
ರೆಸಗಿದರೆ ನಮಗೇನು ಬಾಧಕವೆಂದನಾಭೀಮ ॥ ೧೧

ತಮ್ಮ ಸಂಕಟಕಿವರು ವಿನಯವ
ನೆಮ್ಮಿ ಬಿನ್ನಹವೊಡುತಿದ್ದರೆ
ನಿಮ್ಮಡಿಗೆ ಪರಿತೋಷವೇ ಕರ್ತವ್ಯ ವಿಷಯದಲಿ ।
ಎಮ್ಮ ಮನ ಮುಂಚುವುದು ಕಾರ್ಯದ
ಹಮ್ಮುಗೆಯ ನೀವಱಿಯಿರೇ ತಮ
ತಮ್ಮದುಷ್ಕೃತ ತಮಗೆ ಫಲಿಸಿದರೇನು ನಿಮಗೆಂದ ॥ ೧೦

ಧರ್ಮರಾಯನ ನೀತಿವಾಕ್ಯಗಳು.

ಅನುಜ ಕೇಳಪಕಾರಿಜನದಲಿ
ನೆನೆವುದುಪಕಾರವನು ಗುಣಹೀ
ನನಲಿ ಗುಣವನು ತೋಱುವುದು ಗರುವರಿಗೆ ತೊಡಿಗೆಯಿದು ।
ಅನುಜನಲ್ಲಾ ನಮಗೆ ಕೌರವ
ಜನಪನವರಪರಾಧಶತವನು
ನೆನೆವೊಡಿದು ಹೊತ್ತೇ ಮಹಾದೇವೆಂದನಾಭೂಪ ॥ ೧೩

ಭರತವಂಶದೊಳವರ ಭಂಗವೆ
ನಿರುತವೆಮ್ಮದು ನಮ್ಮ ಭಂಗ
ಸ್ಫುರಣವವರದು ನೀನಱಿಯೆ ತಾವಱಿಯೆವೀಹದನ ।
ಪರರ ಕಲಹಕೆ ನಾವು ನೂಱ್ಮೈ
ವರುಗಳಂತಃಕಲಹದು ನೂ
ರ್ವರು ವಿಚಾರಿಸಲೈವರಾವೆಂದನು ಮಹೀಪಾಲ ॥ ೧೪

ಆವನಾಗಲಿ ಬೇಡಿದಂಗೊಲಿ
ದೀವುದೇ ನೃಪಧರ್ಮ ಹಗೆ ಕೆಳ
ಯಾವನಾಗಲಿ ಸೆಣಸಿದರೆ ಕಾದುವುದೆ ನೃಪನೀತಿ ।
ಆವನಾಗಲಿ ಶರಣುವೊಕ್ಕರೆ
ಕಾವುದೇ ಕ್ಷತ್ರಿಯರ ಮತ ವಿ
ನ್ನಾವುದುಚಿತವು ಭೀಮ ನೀ ಹೇಟೆಂದನಾಭೂಪ ॥ ೧೫

ಆರಿಗಾರುಪಕಾರಿಗಳು ಮೇ
ಣಾರಿಗಾರಪಕಾರಿಗಳು ತಾ
ನಾರಿಗಾರುಂಟವರ ಕೃತಕರ್ಮಗಳಸಂಸ್ಕಾರ ।
ಹೋರಿಸುವುದಳಿಸುವುದು ಸಾಖ್ಯಕೆ
ಸೇರಿಸುವುದಿದಕಹಿತಹಿತರೆಂ
ದಾರ ಮುಖವ್ರದು ಮನ್ನಿಸುವುದೈ ಭೀಮ ಹೇಚೆಂದ ॥ ೧೬

ಅದಱಿನಾಚೆಯ ಭವದ ದುಷ್ಕೃತ
ವೊದಗಿತೀಜನ್ಮದಲಿ ವನವಾ
ಸದ ಪರಿಕ್ಲೇಶಾನುಭವಕಿವರೇನ ಮಾಡುವರು ।
ಒದಗಿತುತ್ಸಾಹದಲಿ [1] ಪರರ
ಭ್ಯುದಯವನು ಬಯಸುವುದು ಪರರಿಗೆ
ಮುದವನಾಚರಿಸುವುದು ಧರ್ಮಜ್ಞರಿಗೆ ಗುಣವೆಂದ ॥ ೧೭

ಯುದ್ಧಕ್ಕೀಸ್ಕರ ಅರ್ಜುನನನ್ನು ಆಜ್ಞಾಪಿಸಿದುದು.

ಎಣಿಸಲೇಕಿನ್ನದನು ಕೌರವ
ಗಣ ಮರಳಿ ಬಂದಲ್ಲದಾರೋ
ಗಣೆಯ ಮೊಡೆನು ಪಾರ್ಥ ನೀ ನುಡಿ ನಿನ್ನ ಪವಣೇನು ।
ರಣದೊಳರಿಗಳ ಮುಖವಿದು ಕುರುಧಾ
ರಣಿಪತಿಯ ತಹುದುಂಟೆ ಯೆನೆ ಬಿಲು
ಗಣೆಗಳನು ತಿದ್ದಿದನು ಫಲುಗುಣ ಹೂಡಿದನು ರಥವ ॥ ೧೮

ಧರ್ಮರಾಯನ ಅಪೇಕ್ಷೆಯಂತೆ ಅರ್ಜುನನು ಯುದ್ಧಕ್ಕೆ
ಹೊರಟುದುದು.

ಎಮಗೆ ನುಡಿ ಬೇಱುಂಟೆ ನೀತಿ
ಭ್ರಮಿತರಾದಲ್ಲನಿಲಸುತನು
ಭ್ರಮಿತನವ ಸೈರಿಸುವುದೈ ಕಾರುಣ್ಯನಿಧಿ ನೀನು ।

---

[1] ಒದಗಿದುತ್ಸವದಲ್ಲಿ. ಚ.

ನಿಮಿಷದಲಿ ಗಂಧರ್ವಕನನಾ
ಕ್ರಮಿಸಿ ಕೌರವಗಣವ ನಿಜಪದ
ಕಮಲದಿದಿರಲಿ ಕೆಡಹಿ ತೋಱುವೆನೆನುತ ಹೊಱಮಟ ॥ ೧೯

ಮುಱಿದು ಚೆಲ್ಲಿದ ಸಕಲಕುರುಬಲ
ನೆರೆದುದರ್ಜುನನೊಡನೆ ಸೂಟಿಯ
ಲರಿಭಟರ ಬೆಂಬತ್ತಿದನು ಘಡ ನಿಲ್ಲು ನಿಲ್ಲೆನುತ ।
ಸೆಱಿಯ ಬಿಡು ಗಂಧರ್ವಲೋಕವ
ನುರುಹುವೆನು ಹಿಂದಿಕ್ಕೆ ಕೊಂಬನ
ಶಿರವ ಚಂಡಾಡುವೆನೆನುತ ಕವಿದೆಚ್ಚನಾಪಾರ್ಥ ॥ ೨೦

ಸರಳಿನುಬ್ಬೆಗೆ ಸೆಡೆದು ಸಮರಕೆ
ತಿರುಗಿ ನಿಂದುದು ಖಚರಬಲವು
ಬ್ಬರದ ಬೊಬ್ಬೆಯಲುರುಬಿದರು ಕರಹತಿಗೆ ಸೈರಿಸುತ ।
ಉರುಳಿದುವು ಗಂಧರ್ವಶಿರ ನಭ
ಸರಳಮಯದಿಗುಜಾಲವೆಂಬಿನ
ಹೊರಳಿಯಲಿ ಹೊದಿಸಿದುದೆನಲು ಕವಿದೆಚ್ಚನಾಪಾರ್ಥ ॥ ೨೧

ಮೊಱೆವ ಗಱುಗಳ ಮೊನೆಯಲು
ದುರುವ ಹೊರಳಿಗಿಡಿಗಳ ಬಾಯುಧಾರೆಗ
ಳುರಿಯ ಹೊದರಿನ ಹುದಿದ ಹೊಂಬರಹದ ಸುರೇಖೆಗಳ ।
ಸರಳು ಹೊಕ್ಕುವು ಹಿಕ್ಕಿದುವು ಖೇ
ಚರಬಲವನೊಕ್ಕಿದುವು ಕೂರಿದು
ವರಿಭಟರ ಚುಚ್ಚಿದುವು ಕೊಚ್ಚಿದುವೆಂಟುದೆಸೆಗಳಲಿ ॥ ೨೨

ಕೋಲ ಬಲುಮೆಚ್ಚಿಗೊಡ್ಡಿ ಹರಿಗೆಯ
ಮೇಳವವ ಮಱಿಗೊಂಡು ಖೇಚರ
ರಾಳು ನಿಂದೆಚ್ಚುದು ನಿಹಾರದಲರ್ಜುನನ ರಥವ ।

ಕೋಲುಗಳನಾಹರಿಗೆ ಹಲಿಗೆಯು
ಮೇಳವಿಸಿನಾಮೆರೆಯಲುಗಿದೆಸು
ವಾಳನೊಂದಂಬಿನಲಿ ಸಂದಣಿಗೆಡಹಿದನು ಪಾರ್ಥ ॥ ೨೩

ಮೆಟ್ಟೈ ಹೆಣನನು ಖಚರಬಲ ಹುರಿ
ಗಟ್ಟಿ ತಲೆವರಿಗೆಯಲಿ ಪಾರ್ಥನ
ಕಟ್ಟಳವಿಯಲಿ ಚೂರಿಸಿದರುಬ್ಬಣದ ಮೊನೆಗಳಲಿ !
ಧಿಟ್ಟರಹಿರೋ ಕೌರವೇಂದ್ರನ
ಕಟ್ಟಿದಾತನ ಕರೆಯಿ ನಿಮ್ಮನು
ಮುಟ್ಟಿದರೆ ನೃಪನಾಣೆ ಯೆನುತೊಡೆಹಾಯ್ದಿದನು ರಥವ ॥ ೨೪

ಗಜದ ಪದಘಟ್ಟಣೆಯು ಬಹಳಂ
ಬುಜದವೋಲ್ ರಥಚಕ್ರಗತಿಯಲಿ
ಗಿಜಿಗಿಜಿಯ ಮಾಡಿಸಿದ ಖೇಚರ ಚಟುಳಪಟುಭಟರ ।
ವಿಜಯನಲ್ಲಾ ಸುರಪುರದ ಮೌ
ರಜಿಗನಾವೆಡೆ ಕುರುಬಲದ ಗಜ
ಬಿಜದ ಗರುವನ ತೋಱಿನುತ ತೆಗೆದೆಚ್ಚನಾಪಾರ್ಥ ॥ ೨೫

ಅಳವಿಯಲಿ ಕೈಮಾಡಿ ಖೇಚರ
ನಳಿಗರು ಮುಮ್ಮುಳಿತರಾದರು
ಬೆಳಗಿದುವು ದಿವ್ಯಾಸ್ತ್ರಧಾರೆಗಳಖಿಳದಿಕ್ಕಟವ ।
ತಳಪಟದೊಳಾಸೆರೆಸಹಿತ ಕೈ
ಚಳಕದಲಿ ತೆಗೆದೆಸುತ ಸಮರಕೆ
ಮೆಲೆತು ನಿಂದನು ಚಿತ್ರಸೇನನು ಪಾರ್ಥನಿದಿರಿನಲಿ ॥ ೨೬

ಬಿಡು ಸೆಱೆಯನವಗಡೆಯತನವೆ
ವ್ಯೊಡನೆ ಸಲ್ಲದು ಸೂಳೆಯರ ಸುರೆ [1]
ಗುಡುಹಿ [2] ಗಳ ಸರವಾದಿಗಳ ಸೇರುವೆಯಲೊಪ್ಪುವುದು ।

---

[1] ಸುತಿ, ಕ. [2] ಗುರುಹಿ, ಕ.

ಫಡ ಯೆನುತ ನಾರಾಚದಲಿ ಬಲ
ನೆಡನ ಕೀಲಿಸಿ ಪಿಂಗಡೆಯುಮುಂ
ಗಡಿಯು ಕಟ್ಟಿದನಂಬಿನಲಿ ಖಚರಾಧಿಪನ ರಥವೆ ॥ ೨೩

ನೂಕದಿರಲಾಹವಕೆ ಸಮ್ಮುಖ
ವೇಕೆನುತ ಹತ್ತಿದನು ಗಗನವ
ನಾಕಿರೀಟಿಯ ಗೆಲುವೆನೆಂದುಬ್ಬರದ ಗರ್ವದಲಿ [1] ।
ನಾಕನಿಳಯರ ಮಾರ್ಗದಲಿ ಸ
ವ್ಯಾಕುಳನು ಭುಲ್ಲವಿಸುತಿರೆ ಲೋ
ಕೈಕವೀರನಲಾ ಧನಂಜಯನಡಹಿದನು ನಭವ ॥ ೨೪

ಎಲವೊ ಕೌರವಸಹಿತ ಕಮಠನ
ಕೆಳಗೆ ಧ್ರುವನಿಂ ಮೇಲೆ ಹೊಕ್ಕರೆ
ಕೊಲುವೆನಲ್ಲದೆ ಬಿಡುವೆನೇ ಫಡ ನಿಲ್ಲು ನಿಲ್ಲೆನುತ ।
ತುಳುಕಿದನು ಕೆಂಗೋಲನಿನಮುಂ
ಡಲಕೆ ದಿಗ್ಭ್ರಾಮೆಯಾಯ್ತು ನಭದಲಿ
ಸುಲಿವೆ ಸುರರ ವಿಮಾನತತಿ ಚೆಲ್ಲಿದುವ್ರ ದೆಸೆದೆಸೆಗೆ ॥ ೨೫

ಚಿತ್ರಸೇನನು ಹೇಳಿದ ನೀತಿ.

ತಿರುಗಿ ನಿಂದನು ಖಚರಪತಿ ನಿ
ಷ್ಠುರವಿದೇನೈ ಪಾರ್ಥ ನೀ ಕಡು
ಮರುಳೂ ಮೂರ್ಖನೊ [2] ಜಡನೊ ಪಿತ್ತಭ್ರಾಂತಿವಿಹ್ವಲನೊ ।
ಧುರದ ಕೌತುಕಗರಳಮೂರ್ಛಾಂ
ತರಿತಹೃದಯನೊ ನಿಲ್ಲು ಚಾಪದ
ಶರವನುಪಸಂಹರಿಸು ತನ್ನಯ ಮಾತ ಕೇಳೆಂದ ॥ ೨೬

ಹುಲಿಯ ಮುಖದೊತ್ತಿದರೆ ಪಶುಸಂ
ಕುಲಕೆ ಸಂಕಟವೇನು ವಾಯಸ
ಕುಲವ ಕೈವೊಡಿದರೆ ಕೋಟಲೆಯೇನು ಕೋಗಿಲೆಗೆ ।

---

1 ಬೊಬ್ಬೆಯಲಿ. ಚ. 2 ಮೂಢನೊ, ಜ.

ಖಳರ ಕೊಪ್ಪರಿಸಿದರೆ ಸುಜನರ
ತಲೆಗೆ ವೇದನೆ ಯೇನು ಕೌರವ
ಕುಲವ ಕಟ್ಟಿದ [1] ರೇನು ಜಠರದ ಶೂಲೆ ನಿನಗೆಂದ ॥ ೩೧

ಹೋದ ಮೊರಿಯು ಕರೆದು ಮನೆಯೊಳ
ಗಾದರಿಸಿದವರುಂಟೆ ನೀರಲಿ
ನಾದ ಕೆಂಡವನುರುಹಿ ಮುಡಿದವರುಂಟೆ ಮಂಡೆಯಲಿ ।
ಕೈದು ಮುಳಿದರೆ ಹಗೆಗೆ ತನ್ನಯ
ಕೈದು ಕೊಟ್ಟವರುಂಟೆ ಕುರುಪನ
ತೀದರೀತನ ಬಿಡಿಸಿಕೊಂಬುದು [2] ಲೇಸೆ ನಿನಗೆಂದ ॥ ೩೨

ಜನಪನೀತಿಯೊ ಮೇಣು ಬೊಳ್ಳಯ
ತನವೊ ಬಿಲುಜಾಣಿಕೆಯ ಬಿಂಕವೊ
ನಿನಗೆ ಕದನದ ಕಲುಹೆಯೋ ನಾವೆಱೆಯೆವಿದನೀಗ ।
ಬನಕೆ ಮರಳ್ಚಿ ಮರುಳ ನೀ ಪ್ರದು
ಮನೆಯು ಹಾವನು ಹದ್ದು ಹಿಡಿವರೆ
ಮನಕತವ ಮೂಡುವರೆ ಬಿಜಯವ ಮಾಡು ನೀನೆಂದ ॥ ೩೩

ಅರ್ಜುನನು ಅಣ್ಣನ ಅಪ್ಪಣೆಯೇ ಮ ಖ್ಯವೆಂದು ಹೇಳಿದುದು

ನಟರಲಾ ನೀವ್ ಸುರಪುರದ ಚಾ
ವಟಿಯರೈ ಚತುರೋಕ್ತಿಗಳಲಟ
ಮಟಿಸಿದರೆ ನಾ ಮರಳುವೆನೆ ಬಿಡು ಬಿಡು ಸುಯೋಧನನ ।
ಕಟು ಮಧುರ ವ್ರುರಿ ಶೀತವತಿಸಂ
ಕಟವು ಸುಖ ವಿಷವಮೈತವಾವುದು
ಘಟಿಸಲಗ್ರಜನಾಜ್ಞೆಯದು ತಮಗೆಂದನಾಪಾರ್ಥ ॥ ೩೪

[1] ನದ್ದಿದ, ಡ. [2] ಕರೆಸಿಕೊಂಬುದು, ಡ.

ಧರ್ಮವಾಗಲಿ ಮೀಣು ಜಗದಲ
ಧರ್ಮವಾಗಲಿ ರಾಜಮಂತ್ರದ
ಮರ್ಮವಾಗಲಿ ನೀತಿಬಾಹಿರವಾಗಲದು ಮೀಣು ।
ಧರ್ಮಪುತ್ರನ ಬೆಸನೆ ವೈದಿಕ
ಧರ್ಮವೆಮಗದು ರಾಜಮಂತ್ರದ
ನಿರ್ಮಳಿನಮತವೆಮಗೆ ಬೇಱೊಂದಿಲ್ಲ ಗತಿ ಯೆಂದ [1] ॥ ೩೫

ನುಸುಳುಗಂಡಿಯಿದಲ್ಲ ಕೌರವ
ವಸುಮತೀಶನನಕಟ ಬಿಡು ನಿ
ನ್ನ್ನು ಸುರಿಗುಬ್ಬಸ ಮಾಡೆನಂಘ್ರಿಗಳಾಣೆ ಧರ್ಮಜನ ।
ಮಸಗುವೊಡೆ ಹಿಡಿ ಧನುವನೆನುತೆ
ಬ್ಬಿಸಿದನವಿರಳಶರವನಾತನ
ಮುಸುಕಿದುವು ಮುಕ್ಕುರಿಕಿದುವು ರಥಸನ್ನಿವೇಶದಲಿ ॥ ೩೬

ಆಗ ಅರ್ಜುನ ಚಿತ್ರಸೇನರಿಗೆ ಕೌರವರನ್ನು ಬಿಡಿಸುವ ವಿಷಯದಲ್ಲಿ
ಯುಕ್ತಾಯುಕ್ತ ವಿಚಾರ.

ಕೊೞಲ ಬಱುದೇ ಬೀಯ ಮಾಡದಿ
ರೇಳು ಫಲುಗುಣ ಮುರಳು ನೀ ದಿಟ
ಕ್ಕೇಳುವರೆ ನಾನಿವನ ಕಟ್ಟಿದೆನಿಂದ್ರನಾಜ್ಞೆಯಲಿ ।
ಪಾಲಿಸಾ ಸಿಮ್ಮಯ್ಯ ಬೆಸಸಿದ
ನೇಳಿಸದೆ ಕೇಳನಲು ಕೆಂಗರಿ
ಗೊೞಲ ದೂಗುತ ಪಾರ್ಥ ನುಡಿದನು ಚಿತ್ರಸೇನಂಗೆ ॥ ೩೭

ಕುರುಪತಿಯ ಕಟ್ಟಿಂದು ಸುರಪತಿ
ಕರೆದು ಬೆಸಸಿದ ನಿನಗೆ ನನಗೆ
ಮ್ಮರಸ ನೇಮವ ಕೊಟ್ಟನೀಕುರುಪತಿಯ ಬಿಡಿಸೆಂದು ।
ಸುರಪತಿಗೆ ಕೃತಕಾರ್ಯ ನೀನಾ

---

[1] ನಮಗೆಂಬ, ಡ.

ಗಿತಲು ನಾವಕೃತಾರ್ಥರಾಗಿಯೆ
ಮರಳಿ ಜನಪನ ಕಾಂಬುದುಚಿತವೆ [1] ಜಾಣನಹೆ ಯೆಂದ ॥ ೩೪

ಎಲೆ ಧನಂಜಯ ಕೌರವೇಶ್ವರ
ನೊಲವು ಮಿಗಿಲ್ಕೆತಂದು ತನ್ನಯ
ಲಲನೆಯರ ಸಾಭಾಗ್ಯ ತನ್ನನುಜಾತರಾತ್ಮಜರ ।
ಬಲುಹ ರವಿಸುತಸಾಬಲಾದ್ಯರ
ಸಲೆ ಮದಮುಖರ ತನ್ನ ಬಲದಲಿ
ತಳದ ಚಾತುರ್ಬಲವ ನೀವ್ ನೋಡಲ್ಕೆ ನಡೆತಂದ ॥ ೩೫

ಇದನಱಿತು ದೇವೇಂದ್ರ ಮದಮುಖ
ಗುದಿಸಿದಗ್ಗದ ಮಾನಹಾನಿಯ
ನೊದಗಿ ಮಾಡುವುದೆಂದು ತನಗಗ್ಗಳದ ವರವಿತ್ತು ।
ಮುದದಿ ಕಳುಹಲು ನಿಮ್ಮ ಪಕ್ಷದ
ಲೊದಗಿದೆನು ತಾನಕಟ ದುರ್ಧರ
ದಟು ನಿನಗಿದ ಚಿತವೆ ನಮ್ಮಲಿ ಲೇಸು ಲೇಸೆಂದ ॥ ೩೬

ಆದರೂ ಅಣ್ಣನ ಅಪ್ಪಣೆಯಂತೆ ಇವನನ್ನು ಬಿಡಿಸಬೇಕಾಗಿದೆ ಎಂದು ಹೇಳಿದುದು.

ಆದೊಡೆಲೆ ಗಂಧರ್ವಪತಿ ದು
ರ್ಯೋಧನನುವೊದಲಾಗಿ ಕೌರವ
ರಾದರದಲ್ಕೆತಂದ ಕಾರ್ಯವಿದಹುದು ಸಿದ್ಧವಲೆ ।
ಆದರೆಯು ಯಮಸುತನ ಚರಣದೊ
ಳಾದರದಿ ಬಿದ್ದವರ ಕಾವುದು
ವೇದನೀಶರ ಧರ್ಮವಿದು ಲೇಸಾಗಿ ನೋಡೆಂದ ॥ ೩೭

ಬಿಡುವೆ ಯಾದರೆ ನೃಪನ ಸೆಱೆಯನು
ಬಿಡಿಸುವೆನು ಮೇಣಿಲ್ಲದಿರ್ದೊಡೆ
ಬಿಡಿಸುವೆನು ನಿನ್ನಸುರ ಸೆಱೆಯನು ನಿನ್ನದೇಹದಲಿ ।

---

[1] ಕಾಂಬವ್ಯಸಲ್ಕೆ, ಕ. ಖ.

ನುಡಿಗೆ ತೆರಹಿಲ್ಲೀಚೆನುತಲವೆ
ಗಡೆಯನೆಚ್ಚನು ಕಾಳಕೂಟದ
ಕಡಲು ಕವಿವಂದದಲಿ ಕವಿದುವು ಪಾರ್ಥನಂಬುಗಳು ॥ ೪೦

ಆಗ ಚಿತ್ರಸೇನನು ಧರ್ಮರಾಯನ ಬಳಿಗೆ ಬಂದು ಅರ್ಜುನನನ್ನು ಸ್ತುತಿಮಾಡಿದುದು.

ಕಡಿದನರ್ಜುನನಂಬ ನಿನ್ನವ [1]
ಗಡವಿದೇಕೈ [2] ಮರುಳ ಕೆಂಡವ
ಮಡುಲೊಳಿಕ್ಕುವುದರ್ತಿಯೇ ಸಂಧಾನ ನಿಮಗೆಮಗೆ ।
ಬಿಡುವೆನಿನಿಬರ ಸೆಱೆಗಳನು ನಿ
ಮ್ಮೊಡೆಯನಲ್ಲಿಗೆ ಕೊಂಡುಬಹೆನೆಂ
ದೊಡನೆ ಬಂದನು ಧರ್ಮಪುತ್ರನ ಬಳಿಗೆ [3] ಖಚರರೇಂದ್ರ ॥ ೪೩

ಸೋಲವೆಮ್ಮದು ನಿಮ್ಮ ತಮ್ಮನೆ
ವೇಲುಗೈ ನಿಮ್ಮಡಿಗಳಾಜ್ಞಾ
ಪಾಲಕರು ಭೀಮಾರ್ಜುನರು ಮಾದ್ರೀಕುಮಾರಕರು ।
ಕಾಳಗದೊಳಮ್ಮ ಖಿಳಖಚರರ
ಧೂಳಿಪಟವಾಡಿದರು ಲಕ್ಷ್ಮೀ
ಲೋಲ ನಿಮಗೊಳ್ಳಿದನು ಗದುಗಿನ ವೀರನಾರಯಣ ॥ ೪೪

ಇಪ್ಪತ್ತೊಂದನೆಯ ಸಂಧಿ ಮುಗಿವುದು.

ಇಪ್ಪತ್ತೆರಡನೆಯ ಸಂಧಿ.

ಸೂಚನೆ.

ಕಳುಹಿದನು ಯಮಸೂನು ವಂಶ
ಪ್ರಳಯನನು ಪ್ರಾಯೋಪವೇಶವ
ತಿಳುಹಿ ದೈತ್ಯರು ಸಂತವಿಟ್ಟರು ಕೌರವೇಶ್ವರನ ॥

---

1 ನೀನವ, ಡ. 2 ಗಡಿಸಲೇತಕೈ, ಡ. 3 ಬನಕೈ, ಡ.

ಕಟ್ಟಿದ ದುರ್ಯೋಧನನನ್ನು ಧರ್ಮರಾಯನ ಬಳಿಗೆ ತಂದುದು.

ಕೇಳು ಜನಮೇಜಯ ಧರಿತ್ರೀ
ಪಾಲ ಕೌರವನೃಪನ ತಂದು ಕೃ
ಪಾಳುವಿನ ಚರಣಾಗ್ರದಲಿ ಕೆಡಹಿದನು ಕಲಿಪಾರ್ಥ ।
ತೋಳ ಹಿಂಗಟ್ಟುಗಳ ವೋರೆಯ
ಕಾಳಕೆಯ ಬಿಱುದಲೆಯ ನೀರೊಱೆ
ವಾಲಿಗಳ ಕುರುಭೂಪನಿದ್ದನು ತಮ್ಮ ದಿರುಸಹಿತ ॥ ೧

ಗಂಧರ್ವನು ತನ್ನ ಅಭಿಪ್ರಾಯವನ್ನು ಧರ್ಮರಾಯನ ಮುಂದೆ ಹೇಳಿದುದು.

ಕೊಳ್ಳಿ ಸೆಱೆಯನು ನಿಮ್ಮ ಸಹಭವ
ರೆಲ್ಲರುಂ ಕಡುಮೂರ್ಖರಿದು ನಿ
ಮ್ಮೆಲ್ಲರಿಗೆ ಮತವೈಸಲೀ ನಾವೆಂದು ಫಲವೇನು ।
ಖುಲ್ಲರಿವದಿರ ಬಿಡಿಸಿದಕೆ ತಳು
ವಿಲ್ಲದಹುದಪಘಾತ ಸಾಕಿ
ನ್ನೆಲ್ಲಿಯದು ನಯ ಬೀಱುಗೊಡಿ ನೀವೆಂದನಾಖಚರ ॥ ೨

ಆಗ ಆತನಿಗೆ ಮರ್ಯಾದೆಮಾತಿ ಕಳುಹಿದುದು.

ಮಾನಭಂಗವೆ ಬರಲಿ ಮೇಣಭಿ
ಮಾನವಾಲಿಂಗಿಸಲಿ ಚರಣದೊ
ಳಾನತರ ಪಾಲಿಸುವುದೇ ಕ್ಷತ್ರಿಯರ ಮಾರ್ಗ [1] ವಿದು ।
ನೀನೆಮಗೆ ಬಾಂಧವನೆನುತ ಸ
ನ್ಮಾನದಲಿ ಕಳುಹಿದನು ಬಳಿಕು
ದ್ಯಾನದಲಿ ದೇವೇಂದ್ರನೆತ್ತಿದನಟ್ಟಿದ [2] ಖೇಚರರ ॥ ೩

ಆಗ ಧರ್ಮರಾಯನ ಆಪ್ಪಣೆಯಂತೆ ಖಂಡ ದೌಪ್ರದಿಯು ಇವರ
ಅವಸ್ಥೆಯನ್ನು ನೋಡಿದುದು,

ಕಳುಹಿದನು ಖೇಚರನನವನಿಸ
ತಿಲಕನೀತನ ನೋಡಿದನು ನಿಜ

---

1 ಧರ್ಮ, ಚ. 2 ನಖಿಳ, ಜ,

ಲಲನೆಯನು ಕರೆದನು ಸುಯೋಧನ ನೊಂದನಕಟೆನುತ ।
ನಳಿನಮುಖಿ ಹೆಡಗೈಯ್ಯ ಬಿಡುಕಲು
ನೆಲನು ಹಾಸಿಕೆ ಹಂಸತಲ್ಪದ
ಪಳಿಕಿನಲಿ ಪವಡಿಸುವೆಗೀವಿಧಿಯೇ ಶಿವಾ ಯೆಂದ ॥ ೪

ಎಲ್ಲರನ್ನು ಬಿಡಿಸಿ ದುರ್ಯೋಧನಾದಿಗಳಿಗೆ ಉಪಚಾರವನ್ನು ಹೇಳಿದುದು.

ಬಂದಳಬುಜಾನನೆ ಸುಯೋಧನ
ನಂದವನು ನೋಡಿದಳು ಸುಯ್ದಳು
ಬೆಂದ ವಿಧಿ ಬಂಧನವ ತಂದುದೆ ಸಾರ್ವಭೌಮರಿಗೆ ।
ಒಂದು ಕೈ ಗಲ್ಲದಲಿ ಬಿಡಿಸಿದ
ಳೊಂದು ಕೈಯಲಿ ಭುಜದ ಪಾಶವ
ನಿಂದುಮುಖಿ ದುರ್ಯೋಧನನ ದುಶ್ಶಾಸನನು ಸಹಿತ ॥ ೫

ಕೆಳದಿಯರ ಕೈಯ್ಯಿಂದ ಕೊಯ್ಸಿದ
ಳುಟಿದ ಕೌರವನನುಜವರ್ಗದ
ಬಲುಹುರಿಯ ನೇಣುಗಳನವದಿರ ಗೋಣುಗಳು ಮಣಿಯೆ [1] ।
ಅಳಲಿಸಿದನೇ ಚಿತ್ರಸೇನನ
ಕೊಲಿಸಬೇಹುದು ಕಳುಹಿ ಕಷ್ಟವ
ಬಳಸಿದನು ಭೂಪಾಲನೆಂದಳು ನಳಿನಮುಖಿ ನಗುತ ॥ ೬

ಅರಸ ನೊಂದೈ ಮರ್ದನಕೆ [2] ಮ
ಲ್ಲರುಗಳಿಲ್ಲೆಮಗೊತ್ತುವೊಡೆ ಕಲು
ಹರಳು ಮಜ್ಜನಮಾಡುವೊಡೆ [3] ಶೀತಾಂಬು ತಿಳಿಗೊಳದ ।
ಹರಿಣಶಾದ್ರ್ಲಾದಿಚರ್ಮಾಂ
ಬರವೆ ಸಮಕಟ್ಟಿಮಗೆ ರತ್ನಾ
ಭರಣವೇ ರುದ್ರಾಕ್ಷಿ ಯೆಂದಳು ನಳಿನಮುಖಿ ನಗುತ ॥ ೭

---

1 ಗೋಣ ಕೊಯಿವಂತೆ, ಟ. 2 ಬಂಧನಕ, ಜ, ಡ. 3 ಮಾಡುವರೆ, ಡ.

ವಾರುವನು ವಟಶಾಖೆ ಗಿರಿಗಳು
ತೋರಕರಿಗಳು ಭದ್ರಗಜ ವನ
ಭೂರುಹದ ನೆಳಲೆಮಗೆ ಸತ್ತಿಗೆ ಪಲ್ಲವವ್ರಾತ ।
ಚಾರುಚಾವುರ ಕಿಱುವೊಱಡಿ ವಿ
ಸ್ತಾರಪೀಠವು ಹಂತಿಕಾಱರು
ಭೂರಿಸಪರ್ಜವಳಿಗಳರಮನೆ ಹೊದರು ಹೊಸಮೊಳಯು ॥ ೪

ಈವಿಪತ್ತಿನ ನಿಮ್ಮೞಿಯು ಸಂ
ಭಾವಿಸುವರೆಮಗಾವ ವಸ್ತುಗ
ಳೀವಿಧಿಗಳೀಕೆಮ್ಮ ಬಾಳಿಕೆಯೆಂದು ನಸುನಗುತ [1] ।
ದೇವನಿರ್ಪನು ಧರ್ಮಸುತ ನಿ
ನ್ನಾವುದುಚಿತಾನುಚಿತವೆಂಬುದ
ಭಾವನವರೇ ಬಲ್ಲರೆಂದಳು ದ್ರೌಪದೀದೇವಿ ॥ ೫

ಮೌನಿನಿಯ ಕಟಕಿಯ ಮಹಾಸ್ತ್ರಕೆ
ಮೌನವನು ಮಱೆಗೊಂಡು ಕಲುಷ
ಧ್ಯಾನನಿದ್ದನು ಚಿತ್ತದಲಿ ಬೇಱೊಂದ ಚಿಂತಿಸುತ ।

ಭಾನುಮತಿಯು ಧರ್ಮರಾಯನಿಗೆ ನಮಸ್ಕರ ಮಾಡಿದುದು.

ಭಾನುಮತಿ ಕೈಮುಗಿದಳೀಕ
ರ್ಣಾನುಗತತಾಟಂಕಮುದ್ರೆಯ
ನೀನಲ್ಲೆ ದಯೆಗೈದೆ ಯೆಂದೆಱಗಿದಳು ಚರಣದಲಿ ॥ ೧೦

ಎತ್ತಿದನು ನಾರಿಯನು [2] ನೃಪತಲೆ
ಗುತ್ತಲೀಕ್ಕೆ ನಿನಗೆ ಬಂದಾ
ಪತ್ತು ನಮ್ಮದು ನಮ್ಮ ತೊಡಕಿನ ತೋಟಿಗಳು ನಿಮಗೆ ।
ಹೆತ್ತತಾಯೆ ಗಾಂಧಾರಿಸತಿ ನಾ

---

[1] ದುಗುಡದಲಿ, ಚ. [2] ರಾಣಿಯನು ಚ. ಟ.

ವಿತ್ತಡಿಗಳಕಟಕಟ ನೀದು
ಶಿತ್ತನಹೆ ಯೇಕೆಂದು ನುಡಿದನು ನೃಪತಿ ಕೌರವನ ॥ ೧೧

ದುರ್ಯೋಧನನಿಗೆ ಧರ್ಮರಾಯನು ಹೇಳಿದ ಮಾತುಗಳು.

ದ್ರೋಣರೆಂದುದ ಮಾಡೆ ಭೀಷ್ಮರ
ವಾಣಿ ವಿಷವೈ ನಿನಗೆ ವಿದುರನು
ರಣಿಕವೆ ನಿನ್ನಲ್ಲಿ ಬಲ್ಲನೆ ಬಗೆಯೆ ನೀನವರ ।
ಪ್ರಾಣವಾಯುಗಳವರು ಸುಭಟ
ಶ್ರೇಣಿ ದೇಹಕೆ ನಿನ್ನ ತನು ನಿ
ತ್ರಾಣವದಕ್ಕಿಂದಾಯ್ತು ಪರಿಭವವೆಂದನಾಭೂಪ ॥ ೧೨

ದುರ್ಯೋಧನನು ಅವಮಾನಿತನಾಗಿ ಹೊರಟುದು.

ಬಿಡಿಸಿದಧರದ್ವಯವಿಷಾದದ
ತಡಿಯ ಚಿತ್ತದ ನೈಗೆ ಬೇಱೊಂ
ದೆಡೆಯಲಿದ್ದುದು ಬೀಳುಕೊಂಡನು ಧರ್ಮನಂದನನ ।
ಒಡನೆ ಬಂದರು ರಾಣಿಯರು ಕೈ
ಗುಡಿಯವರ ಸುದ್ದಿಯಲಿ ಸೂಸಿದ
ಪಡೆಯು ನಿಮಿಷಕೆ ನೆರೆದುದಿನಸುತಸೌಬಲರು ಸಹಿತ ॥ ೧೩

ಭಟರ ಬೊಬ್ಬೆಗಳಡಗಿದುವು ಬಾ
ಯ್ದುಟಿಗಳಾಡವು ವಂದಿನಿಕರಕೆ
ಪಟಹಪಣವವೈದಂಗವಿದ್ದುವು ಮೌನದೀಕ್ಷೆಯಲಿ ।
ಚಟುಳಗಜಹಯರಥದವರು ಲಟ
ಕಟಿಸದಿದ್ದರು ಕೌರವೇಂದ್ರನ
ಕಟಕ ದುರ್ಮ್ಮಾನದಲಿ ಬಂದುದು ಹಸ್ತಿನಾಪುರಕೆ ॥ ೧೪

ಹೊಗಲಿ ಪಾಳೆಯ ಪುರವನೆಂದು
ಬ್ಬೆಗದ ಬೆಳ ಸಿರಿವಂತನೆತ್ತಿದ

ದುಗುಡದಲಿ ಕುಳ್ಳಿರ್ದನಾಸುರನದಿಯ ತೀರದಲಿ ।
ಹೊಗುವವೋರೆಯ ನೆಲಕೆ ನೆಟ್ಟ
ಲಿಗಳ ನಿಖಿಳೇಂದ್ರಿಯದರೋಚಕ
ಬಿಗಿಯಬೇಗೆಯ ಬೇಸಱಿನ ಬಿಸುಗುದಿಯ ಸುಯ್ಲಿನಲಿ ॥ ೧೫

ದುರ್ಯೋಧನನ ಪ್ರಾಯೋಪವೇಶ.

ತರಿಸಿ ಗಂಗಾಜಲವ ಗೋಮಯ
ವೆರಸಿ ಕುಶಸಂಮೋರ್ಜನವ ವಿ
ಸ್ತರಿಸಿ ಪರಿಕರಶುದ್ಧಿಯಲಿ ಪಸರಿಸಿದ ಬರ್ಹಿಯಲಿ ।
ನಿರಶನವ್ರತವೆಂದು ಮಂತ್ರೋ
ಚ್ಚರಿತಸಂಕಲ್ಪದಲಿ ಕೌರವ
ರರಸ ಪವಡಿಸಿದನು ಕೃತಪ್ರಾಯೋಪವೇಶದಲಿ ॥ ೧೬

ಹೊಗಿಸಬೇಡಾರುವನು ಕರ್ಣಾ
ದಿಗಳ ಮೊದಲಾಗೆಂದು ದಡ್ಡಿಯ
ನುಗುಳುಗಂಡಿಯ ಕಾಹ ಕೊಟ್ಟನು ತನ್ನ ಬೇಹವರ ।

ಆಗ ಭಾನುಮತಿ ಬಂದು ಸವಿಸ್ತಾರ ಹೇಳಲು ನಡೆದ ಸಂವಾದ.

ದುಗುಡದಲಿ ಪರಿವಾರ ಬಂದೋ
ಲಗಿಸಿ ಹೊಱಗೇ ಹೋಗುತಿರ್ದುದು
ನಗುತ ಹೊಕ್ಕಳು ಭಾನುಮತಿ ಕಂಚುಕಿಯನೊಡೆನೂಕಿ [1] ॥೧೭

ಏನು ದಿಟ ಸಂಕಲ್ಪವಿನಿತಕೆ
ತಾನು ಹೊಱಗೇ ಹೊಗುವೆವೇಳು ಕೃ
ಶಾನುವನು ಬೀಱುವೆವು ನಡೆ ಭಾಗೀರಥಿಯ ಮಡುವ ।
ಮಾನನಿಧಿಯೇ ವಿವಿಧಗರಳವಿ
ತಾನವನು ತರಿಸುವೆನು ನಿಶ್ಚ
ಯವೇನು ನಿರಶನಮರಣವೇಕೆಂದಳು ಸರೋಜಮುಖಿ ॥ ೧೮

---

1 ತುಳಿದು, ಕ. ಖ.

ತರುಣಿ ನೀ ಹೆಸರಿಸಿದುವಿವು ದು
ರ್ಮರಣಸಾಧನ ವಿಮಲದರ್ಭಾ
ಸ್ತರಣವಿದು ಪಾವನವಲಾ ಪ್ರಾಯೋಪವೇಶದಲಿ ।
ಪರಿಹರಿಸುವೆನು ದೇಹವನು ಸುಡ
ಲರಸುತನವೆನು ಪಾಂಡುಪುತ್ರರ
ಕರುಣಕಲುಷಿತಕಾಯವಿದನಾದರಿಸುವೆನೆ ಯೆಂದ ॥ ೧೯

ಈನಿರಾಹಾರವು ನಿರರ್ಥಕ
ವೇನನೆಂಬೆನು ಜೀಯ ಮುಖದಲಿ
ಮಾನ ಬೆಸುವುದೆ ಬಣ್ಣ ವೆಚ್ಚವುದೆ ಬಂದದುರ್ಯಶದ ।
ಆನದೀಸುತವಿದುರನೆಂದುದ
ನೀನುವೇಕ್ಷಿಸಿ ಕಳವೆ ಹೆಂಗುಸು
ನೀನಖಿಲೆ ಯೆನಬೇಡ ಚಿತ್ತವಿಸೊಂದು ಬಿನ್ನಪವ ॥ ೨೦

ತಮ್ಮನೆಱೆ ವೊಟ್ಟೈಸಿ ರಣದಲಿ
ನಮ್ಮ ಬಿಡಿಸಿದರವರು ನೀವಿ
ನ್ನೆಮ್ಮ ಹಿಂದಣಗುಣವ ನೋಡದಿರೆಂದು ಯಮಸುತನ ।
ನಮ್ಮ ನಗರಿಗೆ ಕರಸಿ ಧರೆಯನು
ನಮ್ಮ ಪಟ್ಟಣಸಹಿತ ಕೊಟ್ಟರೆ
ನಿಮ್ಮಡಿಗಳನು ಲೋಕ ಮೆಚ್ಚುವುದೆಂದಳಂದುಮುಖಿ [1] ॥ ೨೧

ಕರೆಸಿದರೆ ದಿಟಬಾರರವರಾ
ಧರಣಿಯನು ಕೈಕೊಂಡು ನಿಲುವರು
ವರುಷಹದಿಮೂಱಾದೊಡಲ್ಲದೆ ಕೊಟ್ಟ [2] ರೀನೆಲನ ।
ಅರಿಗಳುಪಟಳದಿಂದ ತಪ್ಪಿಸಿ
ಮರಳಚಿದ ಜೀವೋಪಕಾರಕೆ
ಕುರುಕುಲಾಗ್ರಣಿ ಲೇಸಮಾಡಿದನೆಂಬುದೀಲೋಕ ॥ ೨೨

---

1 ಳಬುಜಾಕ್ಷಿ, ಕ. ಖ. 2 ಪೆಟ್ಟ, ಚ.

ನುಡಿದವಧಿ ಹದಿಮೂಱುವರುಷದ
ಹೆತಲೆಯನೊದೆದೆದ್ದು ನಿಮ್ಮಯ
ಪೊಡವಿಯರ್ಧಕೆ ಬಲೆಯು ಬೀಸದೆ ಬಿಡುವರೇ ಒಳಿಕ ।
* ನುಡಿಯ ಸಲಿಸದ ಮುನ್ನ ಕೊಟ್ಟೊಡೆ
ಕಡು ಕೃತಘ್ನತೆ ತಪ್ಪುವುದು ಮಿಗೆ
ನುಡಿಯಲಮ್ಮೆನು ರಾಜಕಾರ್ಯವನೆಂದಳಿಂದುಮುಖಿ ॥ ೨೩

ಮಱೆವ ಹಗೆಯೇ ನಾವು ಮಾಡಿದ
ನಱಿಯಲಾ ಮೂದಲಿಸು ಧರ್ಮಜ
ನಿಱುವ ಕತ್ತಿ ಕಣಾ ಸದಾ ಪಾಂಚಾಲಿಪವನಜರು ।
ಮಱುಗಲೇತಕೆ ಭಾನುಮತಿ ನಿ
ನ್ನುಱುವ ಮಗನಲಿ ರಾಜ್ಯಲಕ್ಷ್ಮಿಯ
ಹೊಱಿಸಿ ನೀ ಬದುಕೆಮ್ಮ ಕಾಡದೆ ಪೋಗು ನೀನೆಂದ ॥ ೨೪

ಸಾಕು ಸಾಕೀಮೊತಿನಲಿ ಜಗ
ದೇಕರಾಜ್ಯದ ಪಟ್ಟವಾಯಿತವಿ
ವೇಕಿಗಳಿಗಧಿದೈವ ತಾನೆನಗೀಸು ಹಿರಿದಲ್ಲ ।
ಮೂಕಭಾವದ ದೀಕ್ಷೆಯೆನಗೆಂ
ದಾಕಮಲಮುಖಿ ಯಿದ್ದಳಿತ್ತಲು
ನೂಕು ನೂಕಾಯ್ತಾರಮನೆಯು ದಂಡಿಗೆಗಳಟ್ಟಣಿಸಿ ॥ ೨೫

ಆಗ ಗಾಂಧಾರಿಯು ಹೇಳಿದುದು.

ಬಂದಳಾಗಾಂಧಾರಿ ಸೊಸೆಯರ
ವೃಂದಸಹಿತುರುವಣಿಸಿ ಹೊಕ್ಕಳು
ನಿಂದು ನೋಡಿದಳಾತನಿರವನು ಕುಶೆಯ ಹರಹಿನಲಿ ।
ಕಂದಿದಳು ಕಡುಶೋಕಶಿಖಿಯಲಿ
ಬೆಂದೆನೇಪೈ ಮಗನೆ ಹಾಸಿಕೆ
ಯಿಂಗ ಲೇಸಾಯ್ತೆನುತ ಕುಳ್ಳಿರ್ದಳು ಸವಿಾಪದಲಿ ॥ ೨೬

---

* ನುಡಿಯ ಸಲಿಸದ ಮುನ್ನನೀಕೆ । ಟ್ಟೊಡೆ ಕೃತಜ್ಞತೆ ತಪ್ಪುವುದೆ, ಕ. ಖ.

ಏನು ದರ್ಭಾಸ್ತರಣಶಯನವಿ
ದೇನು ಕಾರಣವನಶನವ್ರತ
ವೇನ ಸಾಧಿಸಲಾದುದೀಪ್ಸಾಯೋಪವೇಶದಲಿ ।
ಏನು ಸಿದ್ಧಿ ಯಿದಕ್ಕೆ ಮೋಹಿದ
ಮೌನಮುದ್ರೆಯ ಬಿಟ್ಟು ಹೇಳೆ
ನ್ನಾಣೆಯೆಂದಳು ಹಣೆಯ ಹಣೆಯಲಿ ಬಾಚಿದಳು ಮಗನ ॥ ೨೩

ದುರ್ಯೋಧನನ ನುಡಿ.

ತಾಯೆ ಹೇಳುವುದೇನು ಪಾಂಡವ
ರಾಯುರುಬ್ಬಿಹಿದರೊಡಲನಿನ್ನಿವ
ಳಾಯಸವ ತಾ ಹೇಳಲಳಿಯೆನು ಹೊಱಗೆ ಕೇಳುವ್ರದು ।
ನೋಯಲೇತಕೆ ನಿಮಗೆ ಮಕ್ಕಳು
ತಾಯೆ ನೂಱುಂಟನಿಬರಲಿ ಕುಂ
ದಾಯಿತೊಂದೈಸಲೆ ಮನೋವ್ಯಥೆಯೇಕೆ ನಿಮಗೆಂದ ॥ ೨೪

ಮಾಡಿದೆನು ಸಂಕಲ್ಪವಿದಱಲಿ
ಗೂಡ ಕಳಚುವೆನೊವ್ವೆ ನೀವೇ
ನೋಡಿ ಸಂತಸಬಡುವ್ರದಾದುಶ್ಶಾಸನಾದಿಗಳ ।
ಕೇಡಿಗನು ಕುರುವಂಶಕೆಂದಿಳ
ಯಾಡುವುದು ತನ್ನೊಬ್ಬನನು ತಾ
ಮಾಡಿದವ ನೆಱೆ ಮುಳುಗಿದರೆ ಕುಲಕೆಲ್ಲ ಲೇಸೆಂದ ॥ ೨೫

ಉಸುರು ಬೀಯದ ಮುನ್ನ ರಾಜ್ಯವ
ನೊಸೆದು ಕೊಟ್ಟೆನು ಪಟ್ಟಬಂಧನ
ದೊಸಗೆಯುಲಿ ಕೌತುಕವನೀಕಿವಿಯಾರೆ ಕೇಳುವೆನು ।
ಅಸುವನಳುಕದೆ ಬಿಡುವೆನೌ ಶಂ
ಕಿಸದೆ ದುಶ್ಶಾಸನಗೆ ಪಟ್ಟವ
ನೆಸಗಿ ನಡೆಯೌ ತಾಯೆ ವಿಜಯಂಗೈಯ್ಯಿ ನೀನೆಂದ ॥ ೨೬

ಧೃತರಾಷ್ಟ್ರರಾಯನ ಆಗಮನ ಮತ್ತು ಉಚಿತಭಾಷಣ.

ಆಸಮಯದಲಿ ವಿಗತನಯನನು
ಹೀಶ ಬಂದನು ಜನಪದದ ವಿ
ನ್ಯಾಸದುಗ್ಗಡಣೆಯಲಿ ವಿದುರನ ಹೆಗಲ ತೋಳಿನಲಿ ।
ಆಸಖನ ಬಿಸುಗುದಿಯ ಚಿಂತೆಯ
ಬೇಸಱಿನ ಬಿಸುಸುಯ್ಲ ರಾಣಿ
ವಾಸಕುವಿದಿರೆದ್ದು ಸಖಿಳಾಭರಣರಭಸದಲಿ ॥ ೩೧

ಸಂತವಿಡಿರೇ ಮಗನ ನಿಜದೇ
ಹಾಂತಕೃತಸಂಕಲ್ಪ ಗಡ ನೃಪ
ನಂತರಂಗರ ಕರೆಸಿ ಯೆಂದಳಚಿಲಿದಳು ಗಾಂಧಾರಿ ।
ಭ್ರಾಂತಿಬಿಡದೇ ಚತುರಚಿತ್ತಕೆ
ಚಿಂತೆ ಬೇಱೊಂದಾಯ್ತು ರಾಯನ
ಪಂತಿಕಾಪರು ಬರಲಿ ಹಿಡಿಯಲಿ ನಿಶ್ಚಿತನವ್ರತನ ॥ ೩೨

ಸಾಕು ಮಗನೆ ದುರಂತಚಿಂತೆ ಯಿ
ದೇಕೆ ಸಂಕಲ್ಪಾಭಿಯೋಗ
ವ್ಯಾಕುಲತೆ ಬೇಡೇಱು ಪಾಲಿಸು ಸಕಲಭೂತಳವ ।
ಆಕುಮೊರರ ಕರೆಸಿ ಗುಣದಲಿ
ಸಾಕುವುದು ಜೀವೋಪಕಾರಕೆ
ಕಾಕ ನೆನೆಯಿದಿರೆನುತ ಮುಂಡಾಡಿದನು ನಂದನನ ॥ ೩೩

ದುರ್ಯೋಧನನು ತನಗೆ ಈ ಜಗತ್ತು ಬೇಡವೆಂದು ಹೇಳಿದುದು,

ಸವೆದು ಹೋಯ್ತಾಯುಷ್ಯ ತನಗಿ
ನ್ನವನಿಯಾಗದು ಮಱಿ ಯುಧಿಷ್ಠಿರ
ಪವನಜರು ನಿನಗನ್ಯರೇ ಕರೆಸುವುದು ರಾಜ್ಯದಲಿ ।
ಅವರುಗಳ ನಿಲಿಸುವುದು ನೆಲನ

ರ್ಧವೆನು ದುಶ್ಶಾಸನಗೆ ಕೊಡುವುದು
ನಿವಗೆ ಚಿತ್ತಕೆ ಬಹೊಡೆ ಯೆಂದನು ತಂದೆಗವನೀಶ ॥ ೨೪

ಅದಕ್ಕೆ ಧೃತರಾಷ್ಟ್ರನ ಉತ್ತರ.

ಆದೊಡವರಂತಿರಲಿ ನಿನಗಿ
ನ್ನೀದುರಾಗ್ರಹ ಬೇಡ ನಿನ್ನ ಚಿ
ವಾದೊಡೀಕುರುವಂಶವೃಚಿಯದು ಪಟ್ಟವಾವನಲಿ ।
ಬೀದಿಗಲಹದಲೊಮ್ಮೆ ಪೈಸರ
ವಾದೊಡದು ಪರಿಹರಿಸಿದವರೇ
ಸೋದರರಲಾ ಹೆಚ್ಚು ಕುಂದೇನೆಂದನಂಧನೃಪ ॥ ೨೫

ದುರ್ಯೋಧನನ ಮಾತು.

ಕಲಹ ಬೀದಿಯೊಳಾಯ್ತು ಖೇಚರ
ರಲಿ ವಿನೋದದಲಹಿತರೆಡಹಾ [1]
ಯೆ೦ದೆಳದು ತಂದನು ಪಾರ್ಥ ಬಾಹುದ್ವಯದ ನೇಣುಗಳ ।
ನಳಿನಮುಖಿ ಕಡು ಮೌಳಿಯಲಿ ಮೂ
ದಲಿಸಿ ಕೊಯ್ದಳು ತನಗೆ ಭಂಗದ
ಲುಳಿವುದೆತ್ತಣ ಮಾತು ಕರುಣಿಸಿ ಬೊಪ್ಪನೀವೆಂದ ॥ ೨೬

ದೋಷ ನಿಮಗಿಲ್ಲೆಮ್ಮ ಮೇಲಭಿ
ಲಾಷೆಯನು ಬಿಡಿ ನಿಮ್ಮ ಮಗ ಕುಲ
ಭೂಷಣನಲಾ ಧರ್ಮಸುತನಾತನಲಿ ಹುರುಡಿಸುವ ।
ರೋಷ ವುಂಟೇ ತನಗೆ ನಿಮಗದು
ಭೂಷಣವು ತಾನಲ್ಲ ನಾನಾ
ಸ್ಫೋಷಿಸುವೆನೈ ಧರ್ಮಸುತನರಸಾಗಬೇಕೆಂದು [2] ॥ ೨೭

ಸಾರವೀನುಡಿ ಕಟಕಿಯಲ್ಲ ವಿ
ಚಾರಪರರಿಗೆ ನಿಮ್ಮ ಚಿತ್ತಕೆ

---

[1] ಹಿತರಡಹಾ, ಟ. [2] ಪಾಂಡುಸುತರರಸಾಗಬೇಕೆಂದು, ಚ.

ಬಾರದಿದ್ದರೆ ನಿಲಲಿ ದುಶ್ಶಾಸನನ ಕರೆಸುವುದು ।
ಸೇರಿಸುವುದವನಿಯನು ಮೇಣಿದು
ಭಾರವೇ ನಮ್ಮರಮನೆಗೆ ವಿ
ಸ್ತಾರದಿಂದವೆ ಚಿತ್ತವಿಸಿ ಯೆನುತತ್ತ ಮುಂತಾದ ॥ ೨೮

ತಂದೆಯ ಮಾತನ್ನು ಕೇಳದೇ ಇರಲು ಹಿಂದಿರುಗುವಿಕೆ.

ಮುನಿಸಿನಲಿ ಧೃತರಾಷ್ಟ್ರ ತನ್ನರ
ಮನೆಗೆ ತಿರುಗಿದನತ್ತ ನಾರೀ
ಜನವನೆಲ್ಲವ ಬೀಳುಕೊಟ್ಟನು ಬೈದು ಖಾತಿಯಲಿ ।

ಭೀಷ್ಮಾದಿಗಳು ಬಂದು ಹೇಳಿದುದು.

ಮನಕದಡಿ ಕಾತರಿಸಿ ಗಂಗಾ
ತನುಜಗುರುಜದ್ರೋಣಗೌತಮ
ರನುಚಿತಪ್ರಾರಂಭಭೀತರು [1] ಬಂದರೊಗ್ಗಿನಲಿ ॥ ೨೯

ರಾಯನಿಹ ಹದನೇನು ನಿದ್ರಾ
ನಾಯಿಕೆಯ ಮೇಳವದಲಿರ್ಪನೆ
ಜೀಯ ಯೆನಲೊಳಹೊಕ್ಕು ನಿಂದರು ನೃಪಸನಿಧಾನದಲಿ ।
ಆಯಿತೇ ನಾವೆಂದ ನುಡಿಯದು
ಹೋಯಿತನಶನದಿಂದ ದೇಹದ
ಬೀಯದಲಿ ಸಂಕಲ್ಪ ಗಡ ಹೇಟೆಂದನಾಭೀಷ್ಮ ॥ ೪೦

ದುರ್ಯೋಧನೋಕ್ತಿ.

ಈಸುದಿನ ಸಾಮ್ರಾಜ್ಯಸಾಖ್ಯವಿ
ಲಾಸದಲಿ ಬಳಸಿದೆನು ಸಾಕಿ
ನ್ನೀ ಶರೀರವ ನೂಕಿ ನಿಲುವೆನು ಮುಕ್ತಿರಾಜ್ಯದಲಿ ।
ಆಕಯವನಿಯೊಳಿಲ್ಲ ವಿಷಯಾ

[1] ಚಿತ್ತರು, ಕ. ಖ.

ಭ್ಯಾಸಕೊಮ್ಮೆ ವಿರಕ್ತಿದೆಸೆಯಹು
ದೈಸಲೇ ಗುರು ನೀವು ಬೆಸಸುವುದೆಂದನಾಭೂಪ ॥ ೪೧

ಭೀಷ್ಮಪ್ರತ್ಯುಕ್ತಿ.

ಕೇಳಿದೆವು ಹಿಂದಾದ ಖೇಚರ
ರೂಳಿಗವನೆಡಹಾಯ್ದು ನಿನ್ನವ
ರೋಲಗಿಸಿದಂದವನು ನಿನಗದಱಿಂದ ಪರಿಭವವ ।
ತಾಳದಂತಿರಲವರ ಕರೆಸುವೆ
ವೇಳು ಭೀಮಾರ್ಜುನರ ನಿನಗಿ
ನ್ನಾಳುಗೆಲಸದೊಳಿರಿಸಿ ನಡೆಸುವೆವೆಂದನಾಭೀಷ್ಮ ॥ ೪೨

ದುರ್ಯೋಧನನು ತನ್ನ ದುಃಖವನ್ನು ಹೇಳಿಕೊಳ್ಳುವಿಕೆ.

ಮೊದಲು ಧೃತರಾಷ್ಟ್ರಂಗೆ ನಾ ಜನಿ
ಸಿದೆನು ಬಳಿಕೀದೇಹ ಧರ್ಮಜ
ನುದರದಿಂದವೆ ಬಂದುದಿನ್ನವರೊಡನೆ ಮತ್ಸರವೆ ॥
ಅದು ನಿಲಲಿ ದುರ್ವಿಷಯವೈರಾ
ಗ್ಯದಲಿ ದೇಹವ ಬಿಡುವೆನಲ್ಲದೆ
ಬೆದಱುಮನಸಿನೊಳಿಲ್ಲ ಬಿಜಯಂಗೈಯ್ಯಿ ನೀವೆಂದ ॥ ೪೩

ಆಗ ಭೀಷ್ಮಾದಿಗಳ ವಚನ.

ನಾವು ಪಡಿಬಾಹಿರರು ಬೀಯದ
ಸೇವಕರು ಸಮೆ ಹಂತಿಕಾಱರಿ
ಗೀವುದೈಸಲೆ ದೃಢಮುದ್ರಿತಾಂತರ್ಮೋನಸಾಮ್ಯತವ ।
ಭೂವಧುವ ಬೋಳವಿಸು ತಾವನು
ಜೀವಿಗಳು ತವ್ಮೊಲಿದುದಾಗಲಿ
ಸಾವುದನುಚಿತವೆಂದು ನುಡಿದರು ಭೀಷ್ಮಗುರುಕೃಪರು ॥ ೪೪

ಎಮ್ಮ ನುಡಿಗಳು ಪಥ್ಯವಾದೊಡೆ
ನಿಮ್ಮ ಕರ್ಣಾದಿಗಳ ಕರೆಸುವು

ದೆಮ್ಮ ನುಡಿಗವರೆಂದ ಮಾತನುಳಾರಿ ಯೆನಿಸಿದರೆ ।
ಒಮ್ಮೆ ಕೈಕೊಂಬುದು ವೃಥಾ ನೃಪ
ಧರ್ಮವನು ಬಿಡಬೇಡ ಸಮರವ[1]
ನೆಮ್ಮಿ ಸಾವುದು ಗರುವರಿಗೆ ಗುಣವೆಂದರವರಂದು[2] ॥ ೪೫

ಭೀಷ್ಮಾದಿಗಳ ಮಾತನ್ನು ನಡಿಸದೇ ಇರಲು ಅವರು ಹಿಂತಿರುಗಿದುದು.

ಕದನವಾರಲಿ ಪಾಂಡುಸುತರಲಿ
ಕದನವಾಡುವುದುಚಿತವೇ ನಮ
ಗಿದಿರು ಬಟ್ಟಿಕಾರುಂಟು ಭಾರತವರುಷಭೂಮಿಯಲಿ ।
ಇದನಳಿದು ಸಂಕಲ್ಪಭಂಗಾ
ಸ್ಪದವೆ ಮಾಡುವುದುಚಿತವೇ ನಿಜ
ಸದನಕಭಿಮುಖರಾಗಿ ಕರುಣಿಪುದೆಂದನವನೀಶ ॥ ೪೬

ಐಸಲೇ ದೈವೋಪಹತಮನ
ದಾಸಳಾರಿಂದಡಗುವುದು ನಾ
ವೇಸನೊಳಿಲಿದೊಡಾಗದವರೇ ಬಂದು ನಿಲಿಸುವರು ।

ಕರ್ಣಾದಿಗಳ ಆಗಮನ ಮತ್ತು ಭಾಷಣ.

ಈಸಳಿಲಿ ಮರಳುವೆವೆನುತ ನಿಜ
ವಾಸಕೈದಿದರಿತ್ತವೋಹಿದು
ವಾಸಕುನಿಕರ್ಣಾದಿಗಳ ದಂಡಿಗೆಗಳೂಗ್ಗಿನಲಿ ॥ ೪೭

ಹೊಕ್ಕು ರಾಯನ ಕಂಡರನಿಬರು
ಹೊಕ್ಕು ಹುಲ್ಲಿನ ಮೇಲೆ ಹರ ಹರ
ಮಕ್ಕಳಾಟಿಕೆಯೇನ್ತಿದಗ್ಗದ ಸಾರ್ವಭೌಮರಿಗೆ ।

---

1 ಸಮರದೊ, ಟ. 1 ಕದನವ, ಜ. 2 ಗುಣವು ಗರುವರಿಗೆಂದನಾಭೀಷ್ಮ, ಚ.
2 ಳೊಮ್ಮೆಸಾವುದು ಗರುವಂಗೆ ಗುಣವೆಂದ ನಾಭೀಷ್ಮ, ಟ.
2 ನೆಮ್ಮುವುದು ತಾನಕಟಗುಣವಲ್ಲೆಂದನಾಭೀಷ್ಮ, ಜ.

ಸಿಕ್ಕುವನು ಹಗೆ ತನಗೆ ತಾನೇ
ಸಿಕ್ಕುವನು ಹಗೆಗಳಿಗೆ ಲೋಕದೊ
ಳಕ್ಕ ಜವೆ ಜಯವಿಜಯವೆಂದರು ಕರ್ಣಶಕುನಿಗಳು ॥ ೪೮

ಹರಿಬ ಬೇಕೇ ಮತ್ತೆ ಗಂಧ
ರ್ವರಿಗೆ ದೂತರನಟ್ಟು ಭೀಮನ
ನರನೊಳನುಸಂಧಾನವೇ ನಾಲ್ಕಂಟುದಿವಸದಲಿ ।
ಧರೆಯೊಳವರಿರದಂತೆ ಧಟ್ಟಿಸಿ
ತೆರಳಿಚುವವಕಟಕಟ ದರ್ಭೆಯ
ಹರಹಿ ಹಕ್ಕೆಯನಿಕ್ಕಲೇಕೆಂದೊದಱಿದರು ಖಳರು ॥ ೪೯

ದೂತರವರರಿಗಟ್ಟುವೆನೆ ತಾ
ಬೂತು ಭೀಮಾರ್ಜುನರ ಕೂಡೆ ವಿ
ಘಾತಿ ಕೈಯೊಡನುಚಿತವೇ ಕೆಡೆನುಡಿಯದೇ[1] ಲೋಕ ।
ಈತನುವನೀಪರಿಯಲೇ ನಿ
ರ್ಘಾತವನು ಮಾಡುವೆನು ನಮ್ಮನು
ಜಾತನಲಿ ಭೂವಧುವ ಸೇರಿಸಿ ಬದುಕಿ ನೀವೆಂದ ॥ ೫೦

ಅವರ ಮಾತನ್ನು ಒಪ್ಪದೆ ಇರಲು ಅವರು ಹಿಂತಿರುಗುವಿಕೆ.

ನಿನ್ನೊಡನೆ ಹುತವಹನ ಹೊಗುವೆವು
ಮನ್ನಣೆಯ ಮಾತಲ್ಲ ನಿನ್ನಿಂ
ಮುನ್ನ ಮುಂಡಿತಶಿರದೊಳುಚಿವೆವು[2] ತೀರ್ಥಯಾತ್ರೆಯಲಿ ।
ಎನ್ನ ಮನ[3]ವೀಸೌಬಲನ ಮನ[4]
ವಿನ್ನು ಕೆಲರಲಿ ಬಿಱಿಸುವುದೆ ಬೇ
ಱಿನ್ನು ಮಾತೇಕೆನುತ ಮುಱಿದರು ತಮ್ಮ ಮನೆಗಳಿಗೆ ॥ ೫೧

---

[1] ನುಡಿವುದೀ, ಟ. [2] ಳೆಸೆವವು, ಚ. [3] ಮತ, ಚ. [4] ಮತ, ಚ.

ದುಶ್ಶಾಸನನು ಬಂದು ಮಾತನಾಡಿದುದು.

ಉಲಿವ ಭಟ್ಟರ ನಿಲಿಸಿದನು ಸಮ
ನೆಲನ ಹೊಗಳುವ ವಾಹಕರ ಕಳ
ಕಳವ ನಭಕೊತ್ತಿದನು ಕಹಳಾರವಕೆ ಕೋಪಿಸುತ ।
ತಲೆ ಮುಸುಕಿನಲಿ ತಾಮ್ರದೊಡಲಿನ
ತಳಿತದುಗುಡದ ವೋಱೆಯಲಿ ಕುರು
ಕುಲಭಯಂಕರನೈದಿದನು ದುಶ್ಶಾಸನನು ನೃಪನ ॥ ೪೦

ಹೊಕ್ಕನೊಳಗನುರಾಯನಂಘ್ರಿಯೊ
ಳೂಕ್ಕನೊಡಲನು ಲೋಚನಾಂಬುಗ
ಳೂಕ್ಕಿದುವು ನೆನೆನೆನೆದು ಸಲೆ [1] ಕರಣೇಂದ್ರಿಯಾದಿಗಳು ।
ಬಿಕ್ಕಿದನು ಬಿರಿಬಿರಿದು ಸೆಱೆಗಳು
ಮುಕ್ಕುಱುಕಿದುವು ಕೊರಳ ಹೃದಯದೊ
ಳೂಕ್ಕಲಿಕ್ಕಿತು ಕೋಕಪಾವಕವಾನೃಪಾತ್ಮಜಗೆ ॥ ೪೧

ಅನುಜನದ್ಭುತಶೋಕರಸದಲಿ
ಕೊನರಿತರಸನ ವೋಪ ಕುರುಕುಲ
ವನಪರಶು ಕುಳ್ಳರ್ದನೊಯ್ಯನೆ ಮಾನಿನಿಯ ಮುಲಗಿ ।
ನಿನಗಿದೇನುಬ್ಬೆಗವೀಪ
ಸ್ತಿನಪುರದ ಸಾಮ್ರಾಜ್ಯಸಿರಿ ರಿಪು
ಜನಪರಿಗೆ ಹುರುಡಿಸಳ ಹೇಪೆಂದೆತ್ತಿದನು [2] ಹಣೆಯ ॥ ೪೨

ಸೆಳದು ಬಿಗಿದಪ್ಪಿದನು ಲೋಚನ
ಜಲವ ತೊಡೆದನು ಪಾಂಡುಪುತ್ರರು
ಸೆಳದು ಕೊಳ್ಳರೆ ನೆಲನನಕಟಾ ಮತ್ಪರೋಕ್ಷದಲಿ ।
ಕುಲವ ನೀನುದ್ಧರಿಸು ಸೇಸೆಯ

1 ಕಳವಳಿಸಿದುವು, ಚ. 2 ಹುದುಗೊಳಿಸದೇಳೆಂದೆತ್ತಿದನು, ಟ
1 ಕರಣೇಂದ್ರಿಯಾದಿಗಳುರಿದುವಿನ್ನೇನು, ಡ.

ತಳವೆ ತಾ ಮುಂದಿಟ್ಟು ಬಳಿದಿ
ನ್ನಜಲದಿರು ಪ್ರಾಯೋಪವೇಶವ ಬಿಡೆನು ತಾನೆಂದ ॥ ೫೫

ಅಚಿದೊಡಚಿವೆ ಭವತ್ಪರೋಕ್ಷದೊ
ಳುಚಿವೆನೇ ನಿನ್ನ ರಸ ಧರೆಗಾ
ನಳುಪುವೆನೆ ನಿನ್ನ ಚಿವನೀಕ್ಷಿಪ ಧೈರ್ಯ ತನಗುಂಟೆ ।
ನೆಲನ ಕುಂತಿಯು ಮಕ್ಕಳೀಕ್ಯೆ
ಕೊಳಲಿ ಮಾಣಲಿ ಸಿರಿಗೆ ಸೇಸೆಯ
ತಳವರಿಗೆ ತಿಳಿ ನಿನ್ನ ಬಿಡದಿಹ ಭಾಷೆ ತನಗೆಂದ ॥ ೫೬

ಧಾತುಗೆಡಲೇಕೀಸು ಕಾತೊಡೆ
ಬೀತುಹೋಹುದು ಬೀತವೆರನೇ
ಕಾತಿಹುದಲೈ ಹತ ವಿಧಿಗೆ ವಿಪರೀತಕೃತಿ ಸಹಜ ॥
ಆತಗಳ ನಮಗುಪಕರಿಸಿ ವಿ
ಖ್ಯಾತರಾದರು ಮರಳಿ ತಾ ವಿ
ನ್ನಾತಗಳನಳಿಸುವುಪಾಯವೆ ಕಂಡೊಡೇನೆಂದ ॥ ೫೭

ಮೆರಳು ತಮ್ಮ ವೃಥಾ ಖಳಾಡಂ
ಬರವಿದಲ್ಲದೆ ಪಾಂಡುಪುತ್ರರ
ಪರಿಭವಿಸಲೊಡಬಡುವೆರೇ ವಿದುರಾದಿಬಾಂಧವರು[1] ॥
ಅರಮನೆಗೆ ನೀ ಹೋಗು ಹೆಸ್ತಿನ
ಪುರಿಗೆ ನೀನರಸಾಗು ವೋಪದ
ಮೆರಳುತನವೀಕ್ಷತ್ರಧರ್ಮವಿದೆಲ್ಲ[2] ಕೇಳೆಂದ ॥ ೫೮

ಮಗಗೆ ಮುನಿವನು ತಂದೆ ತಂದೆಗೆ
ಮಗ ಮುನಿವನೊಡಹುಟ್ಟಿದರು ಬಲು
ಪಗೆ ಕಣಾ ತಮ್ಮೊಳಗೆ ಭೂಪರಿಗೆಲ್ಲ ವಿದ್ಯೆಯಿದು ॥
ಜಗದ ಪರಿವಿಡಿ ನಮ್ಮದಲ್ಲದೆ

---

1 ಬಾಹಿರರು, ಕ. ಖ. ಚ. 2 ಕ್ಷತ್ರಧರ್ಮದೊಳಿಲ್ಲ, ಚ

ಸೊಗಸಿ ರಾಜ್ಯವನಿತ್ತೆ ನೀನಿದ
ವೊಗಬಿದರೆ ತನ್ನಾಣೆ ಯೆನುತಪ್ಪಿದನು ಸಹಭವನ[1] ॥ ೫೯

ದುಶ್ಶಾಸನನು ಹಿಂತಿರುಗಿದುದು.

ಭ್ರಾಂತಿಯೇಕೆ ಭವತ್ಪರೋಕ್ಷದ
ಲಂತಕನ ಪುರವೆಲ್ಲದುರ್ವೀ
ಕಾಂತೆಗಳುಪಿದೆನಾದರೊಡಹುಟ್ಟಿದನೆ ನಿಮ್ಮಡಿಯ ॥
ಸಂತವಿಡುವೀಮಾತು ಸಾಕಿ
ನ್ನಂತಿರಲಿ ನಿಮಗೇನು ಹದನಾ
ತಂಕನೊಳೀಹದನನೀಕ್ಷಿಪೆನೆನುತ[2] ಹೊಱವಂಟ ॥ ೬೦

ನಗರಕ್ಕೆ ಬರಬೇಕೆಂದು ಪುರಜನರ ಪ್ರಾರ್ಥನೆ.

ಧರಣಿಪತಿ ಕೇಳ್ ಬಟಿಕ ಹಸ್ತಿನ
ಪುರದ ನಿಖಿಳಶ್ರೇಣಿಕುಲನಾ
ಗರಿಕಜನಪರಿವಾರ ಮಂತ್ರಿಪಸಾಯ್ತು ಪೌರಜನ ॥
ಅರಸ ಬಿಜಯಂಗೈದು ನಮ್ಮನು
ಹೊರೆವುದಲ್ಲದೊಡಾವನಾಂತರ
ವರಕೆ ನೀಮವ ಕೊಡುವುದೆಂದೊದಱಿದರು ತಮತಮಗೆ ॥ ೬೧

ದುಶ್ಶಾಸನನೇ ಮುಂದೆ ನಿಮ್ಮಗರಸಾಗುವನೆಂದು ಹೇಳುವಿಕೆ.

ಪುರಜನದೊಳವರವರ ಮುಖ್ಯರ
ಕರೆಸಿದನು ದುಶ್ಶಾಸನನು ನಿಮ
ಗರಸು ನೃಪನೀತಿಯಲಿ ಪಾಲಿಸುವೆನು ಮಹೀತಳವ ॥
ಧರೆಯನಾತಂಗಿತ್ತೆ ತನಗೀ
ಸುರನದಿಯ ತೀರದಲಿ ಕಾಶೀ
ಶ್ವರನ ಸನ್ನಿಧಿಯಿರವು ಘಟಿಸುವುದೆಂದನಾಭೂಪ ॥ ೬೨

---

1 ತೆತ್ತಿದನು ಖಳಪತಿಯ, ಡ, 2 ಯ್ತಂತರದೊಳಾಹದನನೀಕ್ಷಿಪುದೆನುತ, ಚ,

ಹೀಗಿರುವಾಗ ದೈತ್ಯರು ಬಂದು ಸಹಾಯರಾಗಿರುವೆವೆಂದು ಹೇಳಿದುದು.

ರಾಯನೀಪರಿನುಡಿದು ಜನಸಮು
ದಾಯವನು ಕಳುಹಿದನು ಸೂನೋ[1]
ಪಾಯಸಾಪೇಕ್ಷನು ವರಸಮೋಧಿಯೆಲಿರಲು ರಾತ್ರಿಯಲಿ।
ದಾಯವಿದು ನಮಗೆಂದು ದೈತ್ಯನಿ
ಕಾಯ ಬಂದು ರಸಾತಳಕೆ ಕುರು
ರಾಯನನು ಕೊಂಡೊಯ್ದು ತಿಳುಹಿದರವರು ಸಾಮದಲಿ ॥ ೬೩

ಅರಸ ನೀ ಪ್ರಾಯೋಪವೇಶದಿ
ಮರಣದೀಕ್ಷಿತನಾದೆ ಗಡ ನಿ[2]
ಮ್ಮರಸುತನಕನುಚಿತವ ಬಗೆದೈ ಕಾಳುಮಾಡಿದೆಲ[3]।
ಸುರರು ಪಾಂಡುಕುಮಾರರಾಗವ
ತರಿಸಿದರು ಗೆಲವವದಿರಿಗೆ ತಾ
ವಿರಲು ಸುಡಲೀದೈತ್ಯವಂಶವನೆಂದರಾಖಳರು ॥ ೬೪

ಸಾಯದಿರು ನಿನಗಿಂದು ಮೊದಲು ಸ
ಹಾಯರಾಹವಕೆ ರಿಪುಕೌಂ
ತೇಯರಿಗೆ ಕೊಡಬೇಡ ನೀನು ತಿಲಾಂಶಭೂತಳವ।
ಲಾಯಸಹಿತೀಗಜರಥಾಶ್ವನಿ
ಕಾಯ ನಿನ್ನದು ದೈತ್ಯಸಚಿವಪ
ಸಾಯಿತರು ನಿನ್ನವರು ಸಾವೆವು ನಿನ್ನ ಸಮರದಲಿ ॥ ೬೫

ಮಾನವರು ತಾವಿಂದು ನೀವೇ
ದಾನವರು ಗಂಧರ್ವರಿಂದಭಿ
ಮಾನವೆಮಗಕ್ಕಾಡಿಹೋಯಿತು ಹೇಃಜಲೇನದನು।
ಮಾನಿನಿಯ ಮೂದಲೆಯನಾಪವ

---

[1] ಸುಮನೋ, ಕ, ಖ, ಟ. [2] ಗಡ ನೀ, ಟ.
[3] ಮರುಳಲಾವಿರುತಿರಲು ನಿನಗೇತಕೀ ಚಿಂತೆ, ಟ.

ಮಾನಸುತನ ಸಗರ್ವವಚನವ
ನೇನ ಹೇಳುವೆನೆನುತ ಸುಯ್ದನು ಕೌರವರ ರಾಯ ॥ ೬೬

ನರರು ನೀವ್ ದಾನವರು ತಾವೆಂ
ದಿರದಿರೊಡಹುಟ್ಟಿದರು ನಿಮಗಿ
ನ್ನುರಸ ವೇಳ್ಳಯಿತರು[1] ವೆಗ್ಗಳದೈತ್ಯಭಟರಿಲ್ಲ।
ಸುರಪುರದ ಸೂಳೆಯರ ಪಡಿಗವ
ನಿರಿಸುವರು ಗಂಧರ್ವರವದಿರ
ಕರುಳ ತಿಂಬೆವು ತಾವೆನುತ ಘರ್ಜಿಸಿತು ಖಳನಿಕರ ॥ ೬೭

ಎಂದು ಭೂಪನ ತಿಳುಹಿ ಕಳುಹಲು
ಬಂದು ಮೆರಳಿ ಮಹೀತಳಕೆ ತ
ನ್ನಿಂದುವದನೆಯ ಮಾತಿನಲಿ ನಿಂದಾತ ತಾನಾಗಿ ।
ಬಂದನರಮನೆಗಖಿಳಜನವಾ
ನಂದರಸದಲಿ ಮುಟ್ಟಿಗೆ ಪುರದಲಿ[2]
ಸಂದಣಿಸಿದುವು ಗುಡಿಗಳೂಸಗೆಯ ಲಳಿಯ ಲಗ್ಗೆಯಲಿ ॥ ೬೮

ಮತ್ತೆ ನೆಗ್ಗಿತು ನಯವಧರ್ಮದ
ಹುತ್ತುದಲೆ ನೆಗಹಿದುದು ಸತ್ಯದ
ಬಿತ್ತು ಹುರಿದುದು ಪಟ್ಟೆಗಟ್ಟಿತು ಮಿಗೆ ಕೃತಘ್ನತೆಗೆ ।
ನೆತ್ತಿ ಕಣ್ಣಾಯ್ತು ಧಮತೆಗೆ ನಗೆ
ಯೊತ್ತಿತಾಡಿದ ಸುಜನಮಾರ್ಗವ
ಕೆತ್ತುದಟಮೆಟವೀಸುಯೋಧನಸಾಮನಸ್ಯದಲಿ ॥ ೬೯

ಮುಱಿದು ಕಳೆದನು ಬಂದಲಜ್ಜೆಯ
ಬಱನದಿನವನು ಮುಂದಣುಪಹತಿ
ಗುಱುವದೈತ್ಯರ ಮೈತ್ರ್ಯದಲಿ ಹಿಗ್ಗಿದನು ನೆನೆನೆನೆದು ।
ಮುಱಿದುದಿನ್ನೇನಹಿತದರ್ಪದ

---

1 ವೆಳ್ಳಯಿತರು, ಕ. ಖ. ಚ. 2 ಪುರನಟ, ಕ. ಖ.

ಹೊಱಗೆ ಯೆಂದುತ್ಸವೆದಲವನಿಪ
ಮೆಱೆದನಧ್ವರಶಾಲೆಯಲಿ ಮಾಡಿದ ಮಹಾಕ್ರತುವ ॥ ೬೦

ಕೇಳಿದರು ಪಾಂಡವರು ಕುರುಭೂ
ಪಾಲಕನ ಸಂಕಲ್ಪವನು ಪಾ
ತಾಳದಲಿ ಸುರವೈರಿವರ್ಗದ ಸಾರಸಂಗತಿಯು ।
ಮೇಲಣಧ್ವರಕರ್ಮವನು ನಗು
ತಾಲಿಸಿದರಡಿಗಡಿಗೆ ಲಕ್ಷ್ಮೀ
ಲೋಲನಂಘ್ರಿಯು ನೆನೆವುತಿರ್ದರು ವೀರನಾರಣನ ॥ ೬೧

ಇಪ್ಪತ್ತೆರಡನೆಯ ಸಂಧಿ ಮುಗಿಯಿತು.

ಇ ಪ್ಪ ತ್ತ ಮೂ ರ ನೆ ಯ ಸ ಂ ಧಿ .

ಸೂಚನೆ.

ಚಂಡಬಲರಾಧೇಯನೆಡೆಗಾ
ಖಂಡಲನು ಬರಲಿತ್ತ ಕೊಟ್ಟನು
ಕುಂಡಲವ ಕವಚವನು ಪಡೆದನು ಸುರಪನಾಯುಧವ ॥

ಕರ್ಣನಿಂದೊಡಗೂಡಿ ದುರ್ಯೋಧನನ ಚಿಂತೆ.

ಕೇಳು ಜನಮೇಜಯ ಧರಿತ್ರೀ
ಪಾಲ ಕೌರವ ಸ್ತೋಷಯಾತ್ರೆಯ
ಮೇಲೆ ದೈವದಿ ಬಂದುದಕ್ಕೆ ಧರ್ಮಜನು ಮಾಡಿದುದ ।
ಬಾಲಿಕೆಯ ನುಡಿ ಚಿತ್ರಸೇನನ
ಕಾಳಗದಿ ತನಗಾದ ಭಂಗದ
ಸೋಲವನು ಚಿಂತಿಸುತಲಿರ್ದನು ಕರ್ಣನೊಡಗೂಡಿ ॥ ೧

ನಾಳೆ ಕರ್ಣನನೆಯ್ದಿ ಸುರಪತಿ
ಲೀಲೆಯಲಿ ಕುಂಡಲವ ಕವಚವ
ಕೊೞಿಗೊಂಡೈತಪ್ಪನೆನೆ ರವಿಯುಸುರಿದು ಮನದೊಳಗೆ ।
ಹೇಱುವೆನು ಕರ್ಣಂಗೆ ಶಕ್ರನ
ಬೇಳುವೆಗೆ ಸಿಲುಕದಪರಿಯನೆಂ
ದಾಲಿಸುತ ರವಿಯಿದ್ದ ನಿತ್ತಲು ರಾಯ ಕೇಳೆಂದ ॥ ೨

ಇರುತಿರುತ ರವಿಸೂನು ಗಂಧ
ರ್ವರಲಿ ತನ್ನಯ ಕೀರ್ತಿಲತೆ ಪೈ
ಸರಿಸಿದಂದವನೈದೆ ಚಿಂತಿಸುತಿರಲು ರಜನಿಯಲಿ ।
ತರಣಿ ಕಂದನ ಮೋಹದಿಂದವೆ
ಧರೆಗೆ ಬಂದನು ನಾಗನಗರಿಯ
ನಿರದೆ ಬಂದಪನರ್ಧರಾತ್ರಿಯೊಳರಸ ಕೇಳೆಂದ ॥ ೩

ತರಣಿ ನಡುವಿರುಳ್ಕಳಿದಿ ಕರ್ಣನ
ಹೊರೆಯೊಳಾವಿರ್ಭವಿಸಲಾಗಳ
ಸುರವರಿಯನಾಗಮನವಾಕಸ್ಮಿಕವಿದೇನೆಂದ ।
ಬರಲಿಕಾತನ ಮನೆಯ ಕಾಹಿನ
ಚರರಱಿಯದಂದದಲಿ ಕರ್ಣಗೆ
ಸರಿಯೆ ನಳನಹುಷಾದಿರಾಯರು ಪುಣ್ಯದೇಙ್ಗಯಲಿ ॥ ೪

ಭರದಿ ವೈಮುಱಿದೆದ್ದು ಮುಂಚದೊ
ಳಿರದೆ ಕೆಲಸಾರುತ್ತ ತನುವನು
ಭರಿತಪುಳಕದ ಬಳವಿಯಲಿ ನೋಡಿದನಿದಾರೆನುತ ।
ಹರಿಯೊ ಗಮನಿಯು ಹರನೊ ಬರುವನು
ಹರಿಯೊ ನಿಜಮೊರುತಿಯೊ ದೇವೋ
ತ್ತರನು ಸಾಕ್ಷಾದ್ಧರಿಯೆನುತ ವೈಯ್ಯಿಕ್ಕಿದನು ಪದಕೆ ॥ ೫

ಬಾಗಿಲಲಿ ಬಂಧನವು ಸಡಿಲಿವೆ
ಈಗ ದೀಪಜ್ವಾಲೆ ಮೆಸುಳಿದು
ವೀಗ ನೀವೆಂತಿಲ್ಲಿಗೈದಿದಿರೆನುತ ಬೆಚ್ಚಿಗಾಗೆ ।
ಯೋಗದಿಂದವೆ ನಿಜವೆ ತೋಱಿಸ
ಲಾಗ ರವಿಸುತ ಹರುಷದಲಿ ತಲೆ
ವಾಗಿರಲು ಕೈವಿಡಿದು ಮಗನನು ನುಡಿಸಿದನು ತರಣಿ ॥ ೬

ಕರ್ಣನಿಗೆ ಸೂರ್ಯನ ಹಿತೋಕ್ತಿ.

ಮಗನೆ ಕೇಳ್ಮೈ ಸುರಪನೆಯ್ದುವ
ನಗಡುಗೊಳಿಸಲು ಕವಚವನು ನೀ
ತೆಗೆದು ಕೊಡದಿರು ಕುಂಡಲವನೀಯದಿರು ನೀನೆನಲು ।
*ಮುಗಿದ ಕರದಲಿ ನುಡಿದನಾಗಳ
ಗಗನಮೇಣಿಯನು ನೋಡುತವೆ ಮಿಗೆ
ಸುಗಮವೇ ಸಂಸಾರ ನಿತ್ಯವೆ ತಾತ ಕೇಳೆಂದ ॥ ೭

ನಾಕಮುಖದಲಿ ಕಮಲಸಂಭವ
ಲೋಕವನು ನಿರ್ಮಿಸುವನದಱೊಳು
ಕಾಕಸೈಯ್ದುವ ನಿಜಮನುಷ್ಯಶರೀರಿ ತಾನಾಗಿ ।
ಓಕರಿಸುವೀವಿಷಯಧರ್ಮವ
ವೇಕೆ ತನಗೀ ಸತ್ಯವೊಂದೇ
ಸಾಕು ಕೇಳಲೆ ತಂದೆ ಚಿತ್ತೈಸೆಂದನಾಕರ್ಣ ॥ ೮

ಕರ್ಣನು ಅದನ್ನೊಪ್ಪದೆ ತನ್ನ ಔದಾರ್ಯವನ್ನು
ಹೊಗಳಿಕೊಂಡುದು.

ಆಡಿದರೆ ಚಿತ್ತದಲಿ ಖತಿಯನು
ಮಾಡಬೇಡೆಲೆ ತಾತ ತನಗೀ

---

*ಮುಗಿದ ಕರದಲಿ ನುಡಿದನಾಕಲಿ
ಯುಗದ ಕರ್ಮದ ದೇಹವಿದನಾ
ಸೊಗಸುವನೆ ಸತ್ಕೀರ್ತಿ ಧರ್ಮವೆ ತನಗೆ ಗತಿಯೆಂದ, ೭.

ಗೂಡಿನಲಿ ಹಿತವಿಲ್ಲ ಕಾವೊದಿಗಳಿಗಾಶ್ರಯವ ।
ಮಾಡಿ ದೃಢವನು ಶಿಬಿದಧೀಚಿಯ
ಗೂಡಿದೀಜೀಮೂತವಾಹನ
ರೂಢಿಗಿವರೊಳಗಿರ್ದ ಕೀರ್ತಿಯನೀವನಲ್ಲೆಂದ ॥ ೯

ತನಯನಿಂಗಿತವಱಿದು ತನ್ನಯ
ಮನದೊಳಗೆ ಮತೊಂದುಪಾಯವ
ನೆನೆದು ರವಿ ನುಡಿಸಿದನು ಕಂದನ ವೇಲಣೊಲವಿನಲಿ ।
ಅನುಪಮದ ಶಕ್ತಿಯನು ನೀನಾ
ದನುಜರಿಪುವಿನಲೀಸಿಕೊ ಯೆಂ
ದೆನುತ ರವಿಯುಡಱಿದನು ಗಗನವನೆರಸ ಕೇಳೆಂದ ॥ ೧೦

ತರಣಿಯುಂತರ್ಧಾನದಲಿ ನಿಲೆ
ತರಣಿನಂದನ ಪರುಷಚಿಂತಾ
ಭರದಲಿದ್ದನು ರಜನಿಯುಡಗಿದುದರುಣನುದಯದಲಿ ।
ಹರಿಯ ನಾಮವ ನೆನೆಯುತಂಗವ
ಮುಱಿಯುತುಪ್ಪವೆಡಿಸಿದನುರುತರ
ತರಣಿಗರ್ಘ್ಯಕ್ರಿಯೆಯ ಮಾಡಿದ ಭಕ್ತಿಭಾವದಲಿ ॥ ೧೧

ವಿಪ್ರವೇಷಧಾರಿಯಾಗಿ ಇಂದ್ರನು ಬಂದುದು.

ಒಂದುದಿನ[1] ಶತಮನ್ಯು ವಿಪ್ರರ
ಛಂದದಲಿ ನಡೆತಂದು ಕರ್ಣನ
ಮಂದಿರಕೆ ಬರಲಾತನಿದಿರೆದ್ದವರ ಸಂತೈಸಿ ।
ತಂದು ಜಲವನು ಪದಯುಗವ ತೊಳ
ದಂದು ಪೀಠದಿ ಕುಳ್ಳಿರಿಸಿ ಪದ
ಕಂದು ನಮಿಸಿದನರ್ಘ್ಯವಿತ್ತಾದರಿಸಿ ಮನ್ನಿಸಿದ ॥ ೧೨

---

[1] ಅಂದಿನಲಿ, ಕ.

ಏನು ಬಿಜಯಂಗೈದ ಹದನನು
ಮಾನನಿಧಿ ನೀವ್ ಬೆಸಸಿ ಯೆನೆ ರವಿ
ಸೂನುವಿಂಗಿತವಱಿಯುತಾಶೀರ್ವಾದವನು ಮಾಡಿ ।
ಸಾನುರಾಗದಿ ಹರಸಿದರೆ ವರ
ಭಾನುನಂದನ ಮೆಚ್ಚಿ ನಿಮ್ಮಡಿ
ಯೇನುವೆನು ವೆರಿಸಿದುದನಿತ್ತಪೆನೆಂದನಾಕರ್ಣ ॥ ೧೩

ಇಂದ್ರನು ಕವಚಕುಂಡಲಗಳನ್ನು ಬೇಡಿದುದು.

ಕೊಡು ತನಗೆ ನೀನಿಂದು ಕವಚವ
ದೃಢತರದ ಕುಂಡಲವೆನೆನಲಾ
ನುಡಿಗೆ ರವಿಸುತ ಖಡುಗದಲಿ ಸೀಳಿದನು ನಿಜತನುವ ।

ಕರ್ಣನ ದಾನ.

ಹಿಡಿ ಯೆನುತ ಕುಂಡಲವ ಕವಚವ
ನೊಡನೆ ತಾ ಧೈರ್ಯದಲಿ ಶಕ್ರಗೆ
ಕೊಡಲು ನಿಜರೂಪಿನಲಿ ನಿಂದನು ಬಿಗಿದಬಿಱಿಗಿನಲಿ ॥ ೧೪

ದೇವದಾನವ ಯಕ್ಷಗಂಧ
ರ್ವಾವಳಿಯ ಸುಭಟರಲಿ ಬಳಿಕಿ
ನ್ನಾವೆಸಾಹಸಿಧೀರನೆಂಬುದನಱಿದುದಿಲ್ಲವಲ ।
ಭಾವಿಸಲು ಸರ್ವಾಂಗರಕ್ತದಿ
ಪೂವಲಿಯ ಮಾಡಿದನು ವೀರರ
ದೇವನೀನೆಂದಿಂದ್ರ ಕೊಂಡಾಡಿದನು ಭಾನುಜನ ॥ ೧೫

ಮೆಚ್ಚಿದೆನು ರವಿಸುತನೆ ನೀ ಮನ
ಮೆಚ್ಚಿದುದ ವರಿಸೆನಲು ತಾ ನೆನೆ
ದಚ್ಚರಿಯ ಬೇಡಿದನು ಶಕ್ತಿಯನೀವುದೆನಗೆನಲು ।

ಇಂದ್ರನು ತನ್ನಾಯುಧವನ್ನು ಕರ್ಣನಿಗೆ ಕೊಟ್ಟುದು.

ಬಿಚ್ಚಿ ಗವಸಣಿಗೆಯಲಿ ತನ್ನಯ
ನಚ್ಚಿನಾಯುಧವೆನ್ನು ಕರ್ಣನ
ನಿಚ್ಚಟದ ವಿನವೈದೆ ಹರುಷದಿ ಕೊಟ್ಟನಮರೇಂದ್ರ ॥ ೧೬

ವರಿಸಿದನು ನಿನಗಾಂತರಿಪುಗಳ
ನೊಯಿಸಿ ಬಲಿಕಿದು ತನ್ನನೆಯ್ದುವ
ವರವಿದಕೆ ಪ್ರತಿಕಾರವಹವರವಿಲ್ಲ ಕೇಳೆಂದ ।
ಹರಸಿ ಕರ್ಣನ ಬೀಳುಕೊಟ್ಟ
ದರಿಸಿ ಸುರಪತಿ ಬಿಗಿದನಭ್ರದೊ
ಳುರುತರಾಕ್ರಮಿ ಯಿದ್ದನಿತ್ತಲು ಭೂಪ ಕೇಳೆಂದ ॥ ೧೭

ಇಪ್ಪತ್ತಮೂರನೆಯ ಸಂಧಿ ಮುಗಿದುದು.

ಇಪ್ಪತ್ತನಾಲ್ಕನೆಯ ಸಂಧಿ.

ಸೂಚನೆ.

ರಾಯನರಸಿಯ ಹಿಡಿದೆಳವರಿಪು
ರಾಯದಳವನು ಮುರಿದು ಫಲುಗುಣ
ವಾಯುಜರು ಪರಿಭವಿಸಿ ಬಿಟ್ಟರು ಕಲಿಜಯದ್ರಥನ ।

ಕೌರವನ ಬಿಡುಗಡೆಯನ್ನು ಸೈಂಧವನು ಕೇಳಿದುದು.

ಕೇಳು ಜನಮೇಜಯ ಧರಿತ್ರೀ
ಪಾಲ ಲೆಕ್ಕಕೆ ಸಂದುದಟವೀ
ಪಾಳಿಪರ್ಯಟನ ಪ್ರಬಂಧಕೆ ವರುಷಹನ್ನೊಂದು ।
ಮೇಲೆಮೇಲೌಕುವ ವಿಪತ್ಕ

ಲ್ಲೋಲಕೋಲಾಹಲಿತಕಲುಷಕ
ರಾಳಕಾಲಾಂಬುಧಿಯೊಳೀಸಾಡಿದರು ಬೇಸಱದೆ ॥ ೧

ಸಿಂಧುದೇಶಕೆ ಬಂದನವನಿಪ
ಬಂಧಕೃತಿಯಲಿ ಬಟ್ಟಿಕ ಬಿಡುಗಡೆ
ಯಂಧಭೂಪತಿಯಳಿಯ ಕೇಳಿದನಾಜಯದ್ರಥನು ।
ಅಂಧತೆಯನೇನೆಂಬೆನೈ ಪ್ರತಿ
ಬಂಧಕರು ಬೇಡೆನಲು ಜಯದಭಿ
ಸಂಧಿಯುಲಿ ಸೀವರಿಸೆ ಸಂವರಿಸಿದನು ಸೈನಿಕವ ॥ ೨

ನೆರಹಿದನು ಹದಿಮೂಱುಸಾವಿರ
ಕರಿಘಟೆಯನೈವತ್ತುಸಾವಿರ
ತುರಗವನು ಹದಿನೆಂಟುಸಾವಿರಕನಕಮಯರಥವ ।
ಚರಣಚಾಪಟರೈದುಲಕ್ಕವ
ಬರಿಸಿದನು ಬಹುವಾದ್ಯರವ ದಿ
ಕ್ಕಿರವೊಡೆಯೆ ಸೂಳ್ಯೈಸೆ ಮೇಳ್ಯೈಸಿದನು ಮೋಹರವ ॥ ೩

ಜೋಯಿಸರ ಮಾತನ್ನು ಪರೀಕ್ಷಿಸಿ ಹೊರಟುದು.

ಜೀಯ ಭಾಸ್ಕರಭೌಮರಶುಭ
ಸ್ಥಾಯಿಗಳು ಗುರುಮಂದರಭಿಭವ
ದಾಯಿಗಳು ವಿಪರೀತದೆಸೆ ಬುಧಶುಕ್ರರಾಹುಗಳ ।
ಯಾಯಿಗಳಿಗಪಜಯ ನಿವಾಸ
ಸ್ಥಾಯಿಗೊಳ್ಳಿತು ಚಿತ್ತವಿಸೆ ಯೆನೆ
ಜೋಯಿಸರ ಜವನಿಕೆಗೆ ಸಿಲುಕೆನೆನುತ್ತ ಹೊಱವಂಟ ॥ ೪

ನಾನಾವಿಧ ಅಪಶಕುನಗಳು.

ಉರಿ ಹೊಗೆಯು ದಿಕ್ಕಿನಲಿ ಹಕ್ಕಿಗ
ಳೂಱಲಿದುವು ಗೋಮಾಯುರವವ
ಬ್ಬರಿಸಿದುದು ದೆಸೆದೆಸೆಗಳಲಿ ಸೂಚಿಸಿತು ರಣಭಯವ ।

ದುರುಳನದ ಕೈಕೊಂಬನೇ ಕುರು
ನರಪತಿಯು ತತ್ಸಂಪ್ರದಾಯದ
ಗರುಡಿಕಾಱನಲಾ ಚತುಷ್ಟಯದುಷ್ಟಮಂತ್ರಿಗಳ ॥ ೫

ಪಾಂಡವರ ಆಶ್ರಮದ ಬಳಿ ಬಂದು ಸೈಂಧವನು ಇಳಿದುದು.

ಭರದ ಪಯಣದ ಮೇಲೆ ಪಯಣದೊ
ಳುರುವಣಿಸಿ ನಡೆತಂದು ಪಾಂಡವ
ರರಸನಿಹ ವಿಮಲಾಶ್ರಮದ ವಿಪಿನೋಪಕಂಠದಲಿ ।
ಹರಹಿದುವು ಗುಡಿ ಗಜಿಹಯದ ಮಂ
ದಿರರಚನೆ ರಹಿಯಾಯ್ತು ಬಿಟ್ಟನು
ಕುರುನೃಪಾಲನ ಮೈದುನನು ಭೂಪಾಲ ಕೇಳೆಂದ ॥ ೬

ದೂತರೊಡನೆ ಆಭರಣಗಳನ್ನು ಕಳುಹಿದುದು.

ಏನ ನೆನೆದನೊ ದುಷ್ಟಮಂತ್ರವಿ
ತಾನದೀಕ್ಷಿತ ಕಳುಹಿದನು ಮದ
ನಾನುರಾಗದಲಾಭರಣವನುಲೇಪನಾದಿಗಳ ।
ಸಾನುನಯದಲಿ ಪಾಂಡುಪುತ್ರರ
ಮಾನಿನಿಗೆ ಕೊಡಿ ನಿರ್ಜನದೊಳಬು
ಜಾನನೆಯ ಸೇರಿಸುವುದೆಮಗೆಂದಟ್ಟಿದನು ಚರರ ॥ ೭

ಬನದೊಳಡಗಿದರವರು ಕುಂತೀ
ತನಯರೈವರು ಬೇಂಟೆಯಾಡಲು
ನೆನೆದು ಧೌಮ್ಯನನಬುಜಮುಖಿಯಾಶ್ರಮದ ಕಾಹಿಂಗೆ ।
ಮುನಿಜನಂಗಳ ನಿಲಿಸಿಕೊಂಡರು
ಧನುವ ಬೆಂಬತ್ತಳಿಕೆಗಳ ನೃಪ
ಜನಲಲಾಮರು ಬನಬನದಲಲಸಿದರು ಮೃಗಕುಲವ ॥ ೮

ಹೊದರವರತ್ತಲು ವಿಕಾರವಿ
ನೋದಶೀಲರು ದುಷ್ಟರುಬ್ಬಟೆ

ಬೀದಿವೆರಿದುದು ಪರ್ಣಶಾಲೆಗೆ ಬಂದರಂಗನೆಯ ।
ಆದರಿಸಿ ಮುನಿಜನವನೊಯ್ಯನೆ
ಕೈದುಗಳ ಹೊಱಗಿರಿಸಿ ದೂರದ
ಲಾದುರಾತ್ಮರು ಕಂಡು ಮೆಯ್ಯಿಕ್ಕಿದರು ಮಾನಿನಿಗೆ ॥ ೯

ದೇವಿ ಚಿತ್ತೈಸುವುದು ನಿಮ್ಮಯ
ಭಾವ ಕಾರವನ್ಯಪನ ವೈದುನ
ಭಾವಿಸಲು ದುಶ್ಶಳೆಯ ರಮಣನು ಕಲಿಜಯದ್ರಥನು ।
ಈವಿವಿಧರತ್ನಾಭರಣ ಪ
ಟ್ಟಾವಳಿಯನನುಲೇಪನಾದಿಯ
ಪಾವುಡವನವಧರಿಸಬೇಕೆಂದಿಱಿಹಿದರು ಮುಂದೆ ॥ ೧೦

ಎಸೆವೆಳೇ ದುಶ್ಶಳ ಜಯದ್ರಥ
ಕುಶಲನೇ ಪಾವುಡುವನೀವೊ
ಪ್ಪಿಸುವುದೊಡೆಯರ ಮುಂದೆ ಬಿಜಯಂಗ್ಯೆವರೀಕ್ಷಣಕೆ ।
ಶಿಶುಗಳಾವೆಮಗೀಸ್ವತಂತ್ರದ
ಯಿಸಕವೆಲ್ಲಿಯದಕಟವಸ್ತು
ಪ್ರಸರವೆಮಗೇಕೆಂದು ನುಡಿದಳು ನಳಿನಮುಖಿ ನಗುತ[1] ॥ ೧೧

ನಾರಸೀರೆಯನುಡುವೆವೆಮಗಾ
ಹಾರವೇ ಫಲಮೂತತಿ ಶ್ಯಂ
ಗಾರವೆಮಗೆ ಪತಿವ್ರತಾಗುಣವಲ್ಲದಿತರದಲಿ ।
ಸೇರುವುದೆ ಮನವಿದನು ಪಾಂಡುಕು
ಮಾರರಿಗೆ ತೋಱಿಸುವುದೈ ಬೀ
ಡಾರವನು ಬಿಡಿ ಬೇಱೆ ವನದೊಳಗೆಂದಳಬುಜಾಕ್ಷಿ ॥ ೧೨

---

[1] ನಗುತ ನಳಿನಾಕ್ಷಿ, ಚ.

ಅವುಗಳನ್ನು ಸ್ವೀಕರಿಸದೆ ಇರಲು ಸೈಂಧವನಿಗೆ ತಿಳುಹಿದುದು.

ತಾಯೆ ನೀನಿವನೊಪ್ಪಗೊಂಬುದು
ರಾಯ ಬಡವನೆ ಮತ್ತೆ ಪಾಂಡವ
ರಾಯರಿಗೆ ಪಾವುಡವನಟ್ಟುವವಿವನುಪೇಕ್ಷಿಸದೆ ।
ಆಯತಾಂಬಕಿ ತೆಗಿಸಿ ಯೆನೆ ನಡಿ
ರಾಯಸವಿದೇಕೆನುತ ದೂತರ
ನಾಯುವತಿ ಜಱಿದೊಳಗೆ ಹೊಕ್ಕಳು ತಳಿರ ಮಂಟಪವ ॥ ೧೩

ಮೆಸುಳಿತವದಿರ ವೋಱಿ ಕಾರ್ಯ್ದದ
ಬೆಸುಗೆ ಹತ್ತದೆ ಸತಿಯ ನುಡಿಯಲಿ
ರಸವ ಕಾಣದೆ ಖಾತಿಯಲಿ ಮರಳಿದರು ಪಾಳೆಯಕೆ ।

ಸೈಂಧವನ ಖರುಪಿಕೆ.

ಉಸುರಲವ್ಮಿವು ಜೀಯ ಸೋಲಳು
ಶಶಿವದನೆ ಗುಣಸಾಮದಲಿ ಸಾ
ಧಿಸುವುದರಿದೆನೆ ತಾನೆ ನೋಡುವೆನೆನುತ ಹೊಱವಂಟ ॥ ೧೪

ಹೆಗಲಹಿರಿಯುಬ್ಬಣಕಶಾರಿಯ
ಬಿಗಿದುಡಿಗೆ ರತ್ನಾಭರಣ ಝಗ
ಝಗಿಸೆ ಝಣಝಣರವದ ರಭಸದ ಖಡಿಯ ಮಿಗೆ ವೀಱಿಯೆ ।
ಒಗುವೆಸಾಧುಜವಾಜಿಕತ್ತುರಿ
ಯಗರುಪರಿಮಳದಂಗಸಾರದ
ವಿಗಡಹೊಕ್ಕನು ಬನವನಾಪಾಱಶಾಲಿಯಾಶ್ರಮವ ॥ ೧೫

ತೊಲಗಿದುದು ಮುನಿನಿಕರವೀತನ
ಸುಳಿವ ಕಂಡು ಸುತೇಜದಲಿ ಖಳ
ತಿಲಕ ಬಂದನು ಪರ್ಣಶಾಲೆಯ ಮುಖದ ಮಂಟಪಕೆ ।

ಸೈಂಧವನ ಮಾತು.

ಲಲನೆ ವೊಳಹೊಗಲೊಡನೆ ಹೊಕ್ಕನು
ನಳಿನಮುಖಿ ಬಂದವ ಜಯದ್ರಥ
ನಳುಕಲೀಕೌ ದ್ರೌಪದಿಯೆ ನೀನಿನುತ ಮಂಡಿಸಿದ ॥ ೧೬

ದ್ರೌಪದಿಯ ಮಾತು.

ಬೆದಱಲೇತಕೆ ನಮ್ಮ ನಾದನಿ
ಮದವಳಿಗ ನೀನಾದರೊಡಹು
ಟ್ಟದನು ನೀನಹೆ ಯೆನಗೆ ನಿನ್ನಲಿ ಬೇಱೆ ಭಯವೇನು ।
ಸದನವಿದು ಪತಿಶೂನ್ಯ ತಾನೆಂ
ಬುದು ಪತಿವ್ರತೆಯಲ್ಲಿ ಯನುಚಿತ
ವಿದು ವಿಚಾರವ ಬಲ್ಲೆ ನೀನೆಂದಳು ಸರೋಜಮುಖಿ ॥ ೧೭

ಅಹಹ ಪಾತಿವ್ರತ್ಯವತಿಸ
ನ್ನಿಹಿತವಲ್ಲಾ ನಿನಗೆ ಹಲಬರ
ಮಹಿಳೆ ಸತಿ ಯೆನಿಸುವೊಡೆ ಸೂಳೆಯರೇಕಪುರುಷರಲಿ ।
ವಿಹರಿಸುವರೇ ಲೋಕಧರ್ಮದ
ರಹಣಿ ರಚಿಸುವುದೈಸಲೇ ನಮ
ಗಿಹುದು ಮತವಲ್ಲದರೆ ಮಾಣಲೆನುತ್ತ ಮುಖವೆದ್ದ ॥ ೧೮

ತರಳ ಮಿಗೆ ತಲ್ಲಣಿಸಿ ತಳರೋ
ವೆರಿಯ ಹೊಗುತಿರಲಟ್ಟಿ ಮೇಲುದ
ಬರಸೆಳೆದು ತುಱುಬಿಂಗೆ ಹಾಯ್ದನು ಹಿಡಿದು ಕುಸುಬಿದನು ।
ಒರಲಿದಳು ಹಾ ಭೀಮ ಹಾ ನೃಪ
ವರ ಧನಂಜಯ ಹಾ ಯೆನುತ ಕಾ
ತರಿಸೆ ಕಮಲಾನನೆಯ ಕಂಠವನವಚಿ ಹೊಱಿವಂಟ ॥ ೧೯

ಮುನಿಜನಗಳ ಬುದ್ಧಿವಾದ.

ರಾಣಿವಾಸವಲಾ ಯುಧಿಷ್ಠಿರ
ನಾಣೆ ಬಿಡು ಬಿಡು ಯೆನುತ ಸುಜನ

ಶ್ರೇಣಿ ಯಡ್ಡೈಸಿದರೆ ಬೀಸಿದನವೆನು ಖಂಡೆಯವ ।
ರಾಣಿ ನಡೆ ನಡೆ ನಮಗೆ ಪಾಂಡವ
ರಾಣಿ ಯಿಟ್ಟರು ಮುನಿಗಳಲ್ಲಿರ
ಲಾಣಿ ತಪ್ಪುವುದೆನುತ ಹೊಱವಂಟಿಸಿದನಾಶ್ರಮವ ॥ ೭೦

ಒಡನೆ ಬಂದನು ಧೌಮ್ಯಮುನಿ ಮೊಱೆ
ಯಿಡುತ ಘನರಕ್ಷೋಘ್ನಸೂಕ್ತವ
ನಡಿಗಡಿಗೆ ಜಪಿಸುತ ಜಯದ್ರಥ ಬೇಡಬೇಡೆನುತ ।
ಮಿಡುಕುದೈತರಲಾಕಿ ಹೊಕ್ಕನು
ಪಡೆಯ ಮಧ್ಯದ ರಥವನೇಱಿಸಿ
ನಡೆದನವ ಸೂಟಿಯಲಿ ತಾಟಿಸಿ ರಥದ ವಾಜಿಗಳ ॥ ೭೧

ಚೆಲ್ಲಿತೀ ಋಷಿವರ್ಗ ದೆಸೆದೆಸೆ
ಗೆಲ್ಲ ಹರಿದರು ಬಾಯುವೋಱೆಯ
ಪಲ್ಲವದಪಾಣಿಗಳ ಸೂಸುವಬರ್ಹಿಸಮಿಧೆಗಳ ।
ತಲ್ಲಣದ ತೋಪಿನ ವಿಷಾದದ
ವೆಲ್ಲರಿಯ ಹೂದೊಡಬೆಗಳ ಹೊ
ಯ್ವಲ್ಲೆಗಳ ಋಷಿಜನವ ಕಂಡರು ಪಾಂಡುನಂದನರು ॥ ೭೨

ಋಷಿಜನರಿಂದ ಅಲ್ಲಿನ ವರ್ತಮಾನವನ್ನು ಕೇಳಿದುದು.

ಏನು ಗಜಬಜ ಋಷಿಜನಂಗಳಿ
ಗೇನಪಾಯವು ನಮ್ಮ ಬನದಲಿ
ದಾನವರ ದುರ್ಘಟದ ದುರ್ನಯವೆಲ್ಲಲೇ ಯೆನುತ ।
ಹಾ ನರೇಂದ್ರ ಮನೋಹರದ ಮೃಗ
ಯಾನಿರೂಢಿಯ ಬಿಸುಟು ಬಂದನಿ
ದೇನಿದೇನೂಳಿಗವೆನುತ ಭೀಮಾರ್ಜುನರು ನಗುತ[1] ॥ ೭೩

1 ಬೆಸಗೊಂಡನವರುಗಳ, ಚ.

ಹೇಳಲವ್ಮೆವು ಜೀಯ ಸಿಂಧುನೃ
ಪಾಲದಶಮುಖನಾದನಾಪಾಂ
ಚಾಲಿ ಜಾನಕಿಯಾದಳಿಂದಿನ ರಾಜಕಾರ್ಯವಿದು।
ಮೇಲೆ ರಾಘವತನದ ತೋಟಿಯ
ತೋಳ ಬಿಂಕವು ನಿಮ್ಮದೆನೆ ನರ
ಪಾಲನನುಜರು ನಗುತ ಹರಿದರು ಬಿಟ್ಟ ಸೂಟಿಯಲಿ ॥ ೭೪

ಐದುವಡೆ ಮೇಣ್ಮಂ ತ್ರಸಿದ್ಧಿಯ
ಕೈದು ಮನೆಯಲಿ ಬೇಂಟೆಕಾಱಱಿ
ಕೈದು ಕೈಯ್ಯಲಿ ಸಮಯವೆಲ್ಲ ಮಹಾಸ್ತ್ರಕರ್ಷಣಕೆ ।
ಮೈದುನನ ಮೈಸರಸಕೀಹುಲು
ಗೈದು ಸಾಲದೆ ತಂಗಿ ದುಶ್ಶಳ
ಯೈದೆತನ ಬಯಲಾಯ್ತೆನುತ ಬೆಂಬತ್ತಿದರು ಖಳನ ॥ ೭೫

ಭೀಮಾರ್ಜುನಸೈನ್ಧವರ ಯುದ್ಧ.

ಕಂಡರಡವಿಯಲವನನೆಲವೋ
ಭಂಡ ಫಡ ಹೋಗದಿರೆನುತ ಕೈ
ಗೊಂಡು ಸುರಿದರು ಸರಳನಾಪಿಂಗಳಿಯ ಸೇನೆಯಲಿ[1] ।
ಭಂಡರಿವದಿರು ತಾವು ಕಡುಹಿನ
ಖಂಡೆಯದ ಸಿರಿವಂತರಿವರು
ದ್ದಂಡಭಟರೆನುತಾಜಯದ್ರಥ ನಿಲಿಸಿದನು ರಥವ ॥ ೭೬

ಸೈನ್ಯಸಹಿತ ತಾನೈದುವೆನು ನಿಜ
ಪುರಿಗೆ ನೀವಾನುವುದು ಭೀಮನ
ನಿಱಿವುದರ್ಜುನನೊಡನೆ ನಿಮಗುಗ್ಗಡದ ಸಮರವಿದು ।
ಇಱಿತಕಂಜದೆ ಸ್ವಾಮಿಕಾರ್ಯದ
ಹೊಱಿಗೆಯುಳ್ಳನವಾಯ ಬಿರುದಿನ
ಮು.ಱಿಕವುಳ್ಳಭಟಾಳಿ ನಿಲುವುದು ತಡೆವುದರಿಭಟರ ॥ ೭೭

---

1 ಪಾಳೆಯಕೆ. ಜ. ಟ.

ಸೈಂಧವನ ರಥವನ್ನು ತಡೆದುದು.

ಎಂದು ವಾಕ್ಯವ ಕೊಂಡು ರಥವನು
ಮುಂದೆ ದುವ್ವಾಳಿಸಿದನಿತ್ತಲು
ಹಿಂದೆ ನಿಂದುದು ಗಜರಥಾಶ್ವಪದಾತಿಚತುರಂಗ ।
ಇಂದುಮುಖಿಸಹ ತೇರು ಹಾಯ್ದುದು
ಮುಂದೆ ಹೊಳ್ಳುಗರಡ್ಡವಿಸಿದರೆ
ಬಂದ ಹೊಲ್ಲೆಹವೇನೆನುತ ಹೊಕ್ಕೆಚ್ಚ ನಾಪಾರ್ಥ ॥ ೦೪

ಮುಱಿದು ಮರನನು ಭೀಮನಹಿತರ
ನೊಱಿಸಿದನು ಮೆಲಿತಾನೆಗಳ ಹೊ
ಕ್ಕು ಱುಬಿದನು ತುಱಿಗಿದನು ಭಟರ ಭದ್ರವಿಮಾನದಲಿ ।
ಜಱಿತಡಗಿನಿಂಡೆಗಳ ವೆದುಳಿನ
ನಿಱಿಗರುಳನೆಣವಸೆಯ ಜಿಗಿಯಲಿ
ವೆಱಿದುದಾಮರನಲ್ಲಿ ತಳಿತುದು ಹೂತುವೆಂಬಂತೆ ॥ ೦೯

ಸಾಯಲಾರದೆ ಸುಭಟವರ್ಗವ
ಕಾಯಲಿರಿಸಿದೆ ಭಟರ ತಲೆಗಳು
ಬೀಯವಾದುವು ಮತ್ತೆ ರಣವ ತೊೞಿಸಾ ರಣಕೆ ।
ರಾಯರಂಗವನೆತ್ತ ಬಲ್ಲ ನಿ
ಜಾಯುಧವ ಹಿಡಿ ನಿನ್ನ ಬಿರುದಿನ
ಬಾಯಲೆಱಿವುದು ಮೆಧುವನೆನುತುರುವಣಿಸಿದನು ಭೀಮ ॥ ೧೦

ಧನುವ ಕೊಂಡನು ಸರಳಸಾರದ
ಲನಿಲಜನು ಮುಸುಕಿದನು ಪಾರ್ಥನ
ವೊನೆಗಣೆಯ ತಱಿದೊಟ್ಟಿ ಬೊಬ್ಬಿಱಿದನು ಜಯದ್ರಥನು ।
ತನತನಗೆ ಸೈಂಧವನ ಬೆಂಗಾ
ಹಿನ ಭಟರು ಭಾರಣೆಯಲೈದಿದ
ರನಿತುವೆನು ನಿಮಿಷದಲಿ ನಿರ್ಜೈಸಿದನು ಕಲಿಪಾರ್ಥ ॥ ೧೧

ಅಂಜದಿರು ಕಮಲಾಕ್ಷಿ ಧೌಮ್ಯನಿ
ರಂಜನನ ಸುತಿವಾಕ್ಯವೇ ಪವಿ
ಪಂಜರವಲೇ ಯೆನುತ ಹಾಯ್ದನು ಪವನಸುತ ರಥಕೆ ।
ಕುಂಜರನು ಕೈಯ್ಯಿಕ್ಕಿ ನಿಲುಕದೆ
ಕಂಜವನವೆನಿಲಜನ ಝಾಡಿಯ
ಜಂಜಡಕೆ ಧಿಟ್ಟನೆ ಜಯದ್ರಥನರಸ ಕೇಳೆಂದ ॥ ೩೦

ಸೆಳೆದೊಡಾಯುಧವಾತನೀತನ
ನಿಲುಕಿ ಹೊಯ್ದನು ದಂಡೆಯಿಂದದ
ಕಳದು ಮಾರುತಿ ಹೊಕ್ಕಡವ ಚಿವ್ಮಿದನು ಚೀಲಯವ ।
ಖಳನ ಬಾಹುವನೊದೆದು ತುಳುಬಿಗೆ
ನಿಲುಕಿ ಕುಸುಬಿದನವನ ಗೋಣಿನ
ನಲಗ ಹೂಡಲು ಕಂಡನರ್ಜುನನಾವ್ಯಕೋದರನ ॥ ೩೩

ಭೀಮ ಬಿಡಿಸದಿರವನ ಗಂಟಲ
ನೀಮದಾಂಧನನೊಯ್ದು ಕೆಡಹುವ
ಭೂಮಿಪತಿಯಂಘ್ರಿಯಲಿ ಕಾಯಲಿ ಮುನಿದು ಮೇಣ್ಕೊಲಲಿ ।
ತಾಮಸನ ಬಿಗಿ ಯೆನಲು ನಗುತು
ದ್ದಾಮನೆಂದನು ಕೊಲುವೆನೆಂದೇ
ಕಾಮಿಸಿದೆನೈ ಪಾರ್ಥ ಕೆಡದೇ ಯೆನ್ನ ಸಂಕಲ್ಪ ॥ ೩೪

ನೆನೆಯದಿರು ಸಂಕಲ್ಪಹಾನಿಯ
ನನುಚಿತಕೆ ಮನಮೊಡದಿರು ಮಾ
ನಿನಿ ಯಿರಲಿ ರಥದಿಂದ ಕುನ್ನಿಯ ಕೆಡಹು ಧಾರುಣಿಗೆ ।
ಮುನಿಪನೀಯಲಿ ರಥದ ವಾಜಿಯ
ನನುಕೊಳಿಸಿ ಸಾರಥ್ಯದಲಿ ಬರ
ಲೆನುತ ಭೀಮನ ಮನದ ಖತಿಯನು ಬಿಡಿಸಿದನು ಪಾರ್ಥ ॥ ೩೫

ಸೈಂಧವನನ್ನು ಕಟ್ಟಿ ಧರ್ಮರಾಯನ ಬಳಿಗೆ ತಂದುದು.

ವೈರಿಬಾಹುದ್ವಯವ ಬದ್ದುಗೆ
ದಾರದಲಿ ಕಟ್ಟಿದನು ನಾರೀ
ಚೋರ ನಡೆ ನಡೆ ಯೆನುತ ತಿಪಿದನು ಬಿಲ್ಲಕೊಪ್ಪಿನಲಿ ।
ಕೌರವೇಂದ್ರನ ಮತವೊ ನಿನ್ನವಿ
ಕಾರವೋ ಹೆಂಗಳ್ಳವಿದ್ಯೆಯ
ನಾರು ಕಲಿಸಿದರೆನುತ ತಂದರು ಧರ್ಮಜನ ಹೊರೆಗೆ ॥ ೩೬

ಅಣ್ಣನ ಅಪ್ಪಣೆಯಿಂದ ಭೀಮನು ಸೈಂಧವನನ್ನು ಬಿಡುವಿಕೆ.

ಸಿಂಧುಭೂಪನಲಾ ಭುಜಾಗ್ರದ
ಬಂಧನವ ಬಿಡು ಭೀಮ ಶಿವ ಶಿವ
ನೊಂದೆನೈ ನಿಷ್ಕರುಣಿ ನೀನೆಂದೆನಲು ನರನಾಥ [1] ।
ಕೊಂದು ಬಿಸುಡುವನೇಮ ಕಂದ
ರ್ಪಾಂಧಕನನುಳುಹುವೊಡೆ ತನಗಿ
ನ್ನಿಂಧನವ ಹೂಡಿಸುವುದೈಸಲೆ ಯೆಂದನಾಭೀಮ ॥ ೩೭

ಹದನಿದೊಳ್ಳಿತು ತಂಗಿ ವೈಧ
ವ್ಯದಲಿ ನವೆಯಳ ಸುಬಲನಂದನ
ಯುದರ ಕುಂತೀದೇವಿಯುದರಕೆ ಭಿನ್ನಭಾವನೆಯೆ ।
ಕದನದಲಿ ಹಿಡಿವಡದವರ ಕೊಲು
ವುದು ನರೇಂದ್ರರ ಧರ್ಮವಲ್ಲಿ
ನ್ನಿದಕೆ ಮೀಲಾವಣಿಯೆವೆಂದನು ಧರ್ಮನಂದನನು ॥ ೩೮

ಈತನಟಿಯದೆ ಮತ್ಪ್ರತಿಜ್ಞಾ
ಖ್ಯಾತಿಮೆಸುಳದೆ ತಿದ್ದುವದನೇ
ಭೂತಳಾಧಿಪ ನೀವು ಬಿಸಸುವುದೆನಲು ಮುನಿಜನವ ।

---

1 ಸೀವೆಂದನವಸೀಕ, ಚ.

ಆತ ನೋಡಿದನಾವುದಿದಕನು
ನೀತಿಯೆನೆ ಧರ್ಮ್ಯಾದಿಸುಜನ
ವ್ರಾತ ನಿಶ್ಚೈಸಿದುದು ಮನದಲಿ ಧರ್ಮನಿರ್ಣಯವ ॥ ೫೯

ಮಾನಧನರಿಗೆ ವಧೆಯೆನಿಪುದಭಿ
ಮಾನಭಂಜನವಿವನು ಕಟ್ಟಭಿ
ಮಾನಿ ಭಂಗಿಸಿ ಬಿಟ್ಟೊಡೀತಂಗಿದುವೆ ಮರಣವಲ ।
ಈನುಡಿಯ ಸಲಿಸಿದನು ಕಲಿಪವ
ಮಾನಸುತನಿದು ಧರ್ಮಶಾಸ್ತ್ರವಿ
ಧಾನವನು ಚಿತ್ತೈಸಿ ಯೆಂದುದು ಸಕಲಮುನಿನಿಕರ ॥ ೬೦

ಅಹುದೆನುತ ಕಲಿ ಭೀಮ ಮಾಡಿದ
ರಹವನದನೇನೆಂಬೆನೈ ಕೂ
ರಿಹಕಠಾರಿಯ ಹಣಿಗೆಯಲಿ ಬಾಚಿದನು ಸಿರಿಮುಡಿಯ ।
ಅಹಿತಶಿರವಿದೆಲಾ ಯೆನುತ ಗೃಹ
ಮೆಹಿಳೆಯರು ವಿಹಿತಾಂಗುಲಿಯ ಸಂ
ಪ್ರಹರಣದಿ ಪರಿಭವಿಸಿದರು ಘೊಳ್ಳನಲು ನಿಖಿಳಜನ ॥ ೬೧

ಬಿಟ್ಟರೀತನ ತೋಳ ಹಿಂಗೈ
ಗಟ್ಟುಗಳ ನೆಲೆ ಘಡ ಕುನ್ನಿ ಹೋಗೆನೆ
ಕೆಟ್ಟಕೇಡನದೇನ ಹೇಳುವೆನಾಜಯದ್ರಥನ ।
ಬೆಟ್ಟದಿಂದುರುಳುವೆನೊ ಹಾಸಖಿ
ಗಟ್ಟ ಹೊಗುವೆನೊ ಮಡುವನೆನುತಡಿ
ಯಿಟ್ಟನಂತಃಕಲುಷ ಚಿತ್ತದುರಂತಚಿಂತೆಯಲಿ ॥ ೬೨

ಖಳಿಕ ಸೈಂಧವನ ತಪಸ್ಸು

ಚಿಂತಿಸಿದೊಡೇನಹುದು ಹೊಗುವೆನು
ಕಂತುವೈಥನನ ಮಜ್ಜಿಯನಿವದಿರಿ
ಗಂತಕನು ತಾನಹೆನು ಗೆಲುವೆನು ಬಟಿಕ ಬವರದಲಿ ।

ಭ್ರಾಂತಿಯೇ ಬಿಡು ತನ್ನನೆನುತ ಪು
ರಾಂತಕಧ್ಯಾನದಲಿ ವಿಮಲ
ಸ್ವಾಂತನೇಕಾಗ್ರದಲಿ ಭಜಿಸಿದನಿಂದುಶೇಖರನ ॥ ೪೩

ಇವನ ನಿಷ್ಠೆಗೆ ಮೆಚ್ಚಿ ಗೌರೀ
ಧವನು ಮೈದೋಱಿದನು ರಾಜ
ಪ್ರವರ ಕೊಟ್ಟೆನು ಬೇಡು ಸಾಕು ಭವನ್ಮನೋರಥವ ।
ವಿವರಿಸೆನೆ ಕಂದೆಱಿದು ಮುಂದಣ
ಶಿವನ ಕಂಡನು ಮೈಯ್ಯ ಜಾಚಿದ
ನವನಿಯಲಿ ಜಯ ಜಯ ಮಹೇಶ ನಮೋ ಶಿವಾಯ ಯೆನೆ ॥ ೪೪

ಸೈಂಧವನಿಗೆ ಈಶ್ವರನು ವರವನ್ನು ಕೊಟ್ಟುದು

ವರದನಾದೈ ಶಂಭು ಕರುಣಾ
ಕರ ಹಸಾದವು ಪಾಂಡುಸುತರೈ
ವರನು ದಿನವೊಂದಱಿಲಿ ಗೆಲುವುದು ತನಗಭೀಷ್ಟ ವಿದು ।
ಕರುಣಿಸಾದರೆ ಯೆನಲು ನಕ್ಕನು
ಗಿರಿಸುತೆಯ ಮೊಗ ನೋಡಿ ಭಾರಿಯ
ವರವನೆ ವರಿಸಿದನು ಜಯದ್ರಥನೆಂದನಿಂದುಧರ ॥ ೪೫

ಪಾಶುಪತಶರವೆನ್ನ ಸತ್ವವಿ
ಲಾಸನದೆ ಫಲುಗುಣನ ಕೈಯ್ಯಲಿ
ವಾಸವಾಬ್ಜಭವಾದಿಬಿರುದರ ಬಗೆಯದಾಹವಕೆ ।
ಅಸುಭಟ ನೊಬ್ಬನನುಚಿಯೆ ಬಲಿ
ಕೇಸು ಪಾಂಡವರುಗಳನೊಂದೇ
ವಾಸರದಿ ಗೆಲು ಹೋಗು ನೀನೆಂದನು ಮಹಧ್ವಂಸಿ ॥ ೪೬

ಸಾಕು ಜೀಯ ಹಸಾದ ವೆಂದವಿ
ವೇಕನಿಧಿ ಬೀಳ್ಕೊಂಡನೀಶನ
ನೀಕುಮಾರರು ವನದಲಿದ್ದರು ಖತಿಯು ಭಾರದಲಿ ।

ನೂಕು ನೂಕಾಡುವ ವಿಪತ್ತಿನ
ವೈಕೃತಿಗೆ ನಾನೊಬ್ಬನೇ ದಿಟ
ವಾಕೆವಾಳನೆ ಶಿವ ಶಿವಾ ಯೆಂದರಸ ಬಿಸುಸುಯ್ದ ॥ ೪೫

ಯುಧಿಷ್ಠಿರಮಾರ್ಕಂಡೇಯಸಂವಾದ

ಬಂದಮಾರ್ಕಂಡೇಯಮುನಿಗಭಿ
ವಂದಿಸಿದನೀಬ್ರಹ್ಮಸೃಷ್ಟಿಯ
ಲಿಂದು ತಾನಲ್ಲದೆ ಸುಧಾಕರಸೂರ್ಯವಂಶದಲಿ ।
ಹಿಂದೆ ನವೆದವರಾರು ಪರಿಭವ
ದಿಂದ ನಮ್ಮಂದದಲಿ ವಿಪಿನದೊ
ಳಿಂದುಮುಖಿಯರು ಭಂಗ ಬಟ್ಟರೆ ಯೆನುತ ಬಿಸುಸುಯ್ದ ॥೪೮

ಎನಲು ನಕ್ಕನು ಮುನಿಪನವನಿಪ
ಜನಶಿರೋಮಣಿ ಕೇಳು ನಿಮ್ಮಾ
ಟನದೊಳಬುಜಾನನೆಯನೊಯ್ದನಲೇ ಜಯದ್ರಥನು ।
ಅನುಜರಾಗಳ ಹರಿದು ಮರಳಿಚಿ
ವನಜಮುಖಿಯನು ತಂದರವನನು
ನೆನೆಯಬಾರದ ಭಂಗಬಡಿಸಿದರೆಂದನಾಮುನಿಪ ॥ ೪೯

ಅರಸ ಮಱುಗದಿರಾವೆಪಾಡಿನ
ನರಪತಿಗಳೈ ನೀವು ವಿಶ್ವಂ
ಭರನ ಘನತೆಯ ಕೇಳಿದಱಿಯಾ ಕೈಟಭಾಂತಕನ ।
ವರಮುನಿಯ ಶಾಪವನು ತಾನೇ
ಧರಿಸಿ ನರರೂಪಿನಲಿ ನವೆದುದ
ನರಸ ಬಣ್ಣಿಸಲೆನ್ನ ಹವಣಲ್ಲೆಂದನಾಮುನಿಪ ॥ ೫೦

ಶ್ರೀರಾಮಕಥೆಯನ್ನು ಮಾರ್ಕಂಡೇಯರು ಹೇಳಿದುದು

ಅಡವಿಯಲಿ ತೊಱಲಿದನು ರಾವಣ
ಮಡದಿಯನು ರಕ್ಕಸನು ಕದ್ದನು

ಕೆಡಿಸಿ ಬಚ್ಚಿಕಳಿಸಿದನು ರಾಣೀವಾಸವನು ಕೂಡೆ ।
ಕಡಲ ಮಧ್ಯದ ಖಳನೊಡನೆ ಕೈ
ದುಡುಕಲಲ್ಲಿಗೆ ತೆತ್ತಿಗರು ನಾ
ಡಡವಿಗೊಡಗದಾಳುಕುದುರೆಗಳಸುರವಿಗ್ರಹಕೆ ॥ ೪೧

ಸಾಗರದ ತೆಱಿಗಳಲಿ ಗಿರಿಗಳ
ತೂಗಿ ಸೇನೆಯ ನಡೆಸಿ ದಶಶಿರ
ನಾಗ ಹಿಂಗಿಸಿ ರಾಮ ರಮಣಿಯ ಬಿಡಿಸಿದಾಯಸವ ।
ಈಗಳೀನರರೇನನಾನುವ
ರಾಗರುವರಘುರಾಮ ವಜ್ರಕೆ
ಬೇಗಡೆಯ ವಿಧಿ ಮಾಡಿತೆಂದನು ಮುನಿ ನೃಪಾಲಂಗೆ ॥ ೪೨

ಎಂದು ರಾಮಾಯಣವ ವಿಸ್ತರ
ದಿಂದ ಹೇಱುತ ಸಂತವಿಟ್ಟನು
ಕಂದುಕಸರಿಕೆ ಯುಡಗಿತಾಧರ್ಮಜನ ಚಿತ್ತದಲಿ ।
ಸಂದಣಿಸೆ ತನುಪುಳಕಪರಮಾ
ನಂದರಸಮಯನಯನಜಲಭರ
ದಿಂದಲೆಸೆದರು ವೀರನಾರಾಯಣನ ಕರುಣದಲಿ ॥ ೪೩

ಇಪ್ಪತ್ತನಾಲ್ಕನೆಯ ಸಂಧಿ ಮುಗಿದುದು.

ಇಪ್ಪತ್ತೈದನೆಯ ಸಂಧಿ.

ಸೂಚನೆ.

ಮೊರಣದ ಮಂತ್ರದಲಿ ಪಡೆದನು
ದಾರನೃತ್ಯವನರಸ ಕೌರವ
ವೀರ ಪಾಂಡುಕುಮಾರಕರನೊಱಸೆಂದು ನೇಮಿಸಿದ ।

ಮಾರ್ಕಂಡೇಯನು ನಾನಾಕಥೆಗಳನ್ನು ಹೇಳಿದುದು.

ಕೇಳು ಜನಮೇಜಯ ಧರಿತ್ರೀ
ಪಾಲ ರಾವೊಯಣವನಾಮುನಿ
ಹೇಳಿದನು ಹೂಡಿದನು ಭೂಪನ ಮೊನಸವ್ಯೆಥೆಯ।
ಹೇಳಿದನು ಸಾವಿತ್ರಿಯುನ್ನತ
ಶೀಲವನು ಪತಿಭಕ್ತಿಯಿಂದಲೆ
ಕಾಲನುಂಗಿದ ಪತಿಯ ತಾ ಮರಳಿಸುತ ತಂದುದನು ॥ ೧

ಪತಿಭಕುತಿಯುನ್ನತಿಕೆಯಲಿ ನಿ
ಷ್ಕೃತಿಯುಲಾ ಸಾವಿತ್ರಿಯಾಕೆಯ
ನುತಚರಿತ್ರರ ವೋಲು ನಿಮ್ಮಾ ಪ್ರಪದೀದೇವಿ ॥
ಹಿತವನಾಚರಿಸುವಳು ವಂಶೋ
ನ್ನತಿಯನುದ್ಧರಿಸುವಳು ನಿಮಗುಪ
ಹತಿಯದೆಲ್ಲಿಯದೆಂದು ಮಾರ್ಕಂಡೇಯಮುನಿ ನುಡಿದ ॥ ೨

ಮಾನನಿಧಿಸಾವಿತ್ರಿಯ ಉಪಾ
ಖ್ಯಾನವೆನು ಕೇಳಿದನು ಚಿತ್ತ
ಗ್ಲಾನಿಯನು ಬೀಟ್ಟೊಕ್ಕಟನಮಳೋತ್ಸಾಹಭಾವದಲಿ ॥
ಕಾನನಾನುಭವಕ್ಕೆ ಕಡೆ ಯಿ
ನ್ನೇನು ನಮಗೆನುತತುಳಹರುಷಾ
ನೂನಕುಂತೀತನುಜರಿರ್ದರು ಪರ್ಣಶಾಲೆಯಲಿ ॥ ೩

ಹಿಂಗಿದುವು ಹನ್ನೊಂದುವರೆವರು
ಷಂಗಳಟವೀತಟದೊಳಿರಲಾ
ತಿಂಗಳೊಳಗೊಂದಾದುದಾಪತ್ತಾಮೆಹೀಶರಿಗೆ ॥
ತುಂಗವಿಕ್ರಮನೀಮುನೀಶ್ವರ
ಸಂಗತಿಯ ಸೊಗಸಿನಲಿ ಬಹುದಿವ
ಸಂಗಳನು ನೂಕಿದನು ನೃಪತಿ ಪಲಾಶಶಾಲೆಯಲಿ ॥ ೪

ಕೀಚಕನು ಕೌರವರ ಗೋವುಗಳನ್ನು ಹಿಡಿದುಕೊಂಡು ಹೋದುದು.

ಇತ್ತಲಾಕುರುರಾಯವೆಳತವೆ
ಮುತ್ತಿದನು ಕೀಚಕನು ತುಱುಗಳ
ವೊತ್ತವನು ತೋಳಿಡಿದು ತಿರುಗಿದನತ್ತ ವಹಿಲದಲಿ ॥
ಬಿತ್ತಿದರು ಕುರುಪತಿಗೆ ಭಯವೆನು
ತತ್ತಳದ ತವಕದಲಿ ರಾಯನ
ವೊತ್ತದಕ್ಷೌಹಿಣಿಯ ಮೂರ್ಬಲಸಹಿತ ಹೊಱಮಟ್ಟಂ ॥ ೫

ಭೀಷ್ಮಾದಿಗಳು ಕೀಚಕನನ್ನು ತಡೆದುದು.

ನದಿಯ ಮಗ ಗುರು ಗುರುತನೂಜನು
ವಿದುರಭಾರದ್ವಾಜಮುಖ್ಯರು
ಕದನಗಲಿಗಳು ಕರ್ಣಸೌಬಲಸಕಲಭಟನಿಕರ ॥
ಮದಮುಖದ ಕಾಲಾಳು ತೇರಿನ
ಕುದುರೆ ಮದಗಜರಾಜಿಬಹಳಾ
ಭ್ಯುದಿತ ಬಲ ನೆರೆದೆದ್ದು ನಡೆದುದು ಭರದ ಪಯಣದಲಿ ॥ ೬

ಬಿಟ್ಟಸೂಟಿಯೊಳೈದಿ ಪಯಣದೊ
ಳಟ್ಟಣಿಸಿ ನಿಂದಲ್ಲಿ ನಿಲ್ಲದೆ
ಮುಟ್ಟಿ ಬಂದರು ತಾಗಿದರು ಚೂಣಿಯಲಿ ನಾಯಕರು ॥
ಒಟ್ಟವಿಸಿ ಕೀಚಕನು ಮುಱಿದರೆ
ಯಟ್ಟಿ ಹೊಯ್ದರು ಪುರಕೆ ಮುಷ್ಟ್ಯಾ
ಮುಷ್ಟಿಯಲಿ ಗುರುಭೀಷ್ಮರವಿಸುತರಡ್ಡಗಟ್ಟಿದರು ॥ ೭

ಎಲವೊ ಕೀಚಕ ಹೋಗದಿರು ನಿ
ಲ್ಲೆಲವೊ ಹುಲುಮಂಡಳಿಕ ನಿನ್ನಯ
ಬಲುಗಡಿಯ ತೋಱುವುದು ನಿನ್ನಂತರದ ರಾಯರಲಿ ॥
ತೊಲಗು ಸೈರಿಸೆನುತ್ತಲುಱಿ ಬಿಲು

ಬಲುಸರಳ ಸರಿವಳಿಯ ಸುರಿಯ
ಲ್ಕಲಘುವಿಕ್ರಮ ಕೀಚಕನು ಸವಳಿದನು ಶರತತಿಯ ॥ ೪

ಎರಡುಶರದಲಿ ಕರದ ಚಾಪವ
ತರಿದನಾರವಿಸೂನು ತುರಗವ
ವರರಥವ ಹುಡಿಮಾಡಿದನು ಗಂಗಾಕುಮಾರಕನು ।
ಶರತತಿಯಲವನುರವನುದರವ
ಬಿರಿಯ ಕೆತ್ತಿದ ದೋರ್ಫಣ ನೊಸಲಲಿ
ಯಿರದೆ ಹಾಯ್ದನು ಕೀಚಕನು, ಪರಿಭವದ ಸೂಜಿಯಲಿ ॥ ೫

ಮುಳಿದನುತ್ತರನಾವಿರಾಟನು
ಪುರಕೆ ಸರಿದನದಿತ್ತ ತುಳುಗಳು
ಮರಳಿದುವು ತಾ ಯಿರುಳುಗಾಳಗದೊಳಗೆ ನಲವಿನಲಿ ।
ಅರಸ ಕೌರವರಾಯ ಹಸ್ತಿನ
ಪುರಿಗೆ ಬಂದನು ಮತ್ತೆ ರಿಪುಗಳ
ಪರಿಹರಿಸುವಂದವನು ನೆನೆದೋರಂತೆ ಚಿಂತಿಸಿದ ೧೦

ದುರ್ಯೋಧನನು ಮಾರಣಹೋಮಕ್ಕೂ ಸ್ಥರ ಕನಕನನ್ನು ಕರೆಕಳುಹಿದುದು.

ಅರಸ ಕೇಳ್ಯ ಕನಕನೆಂಬನು
ವರಮಹಾಮಾರಣದ ಯಜ್ಞದ
ಪರಿಯನಳಿಯುವನೆಂದು ಕುರುಪತಿ ಕರೆದು ಬೆಸಗೊಳಲು ।
ಕರವ ಮುಗಿದನು ಕೇಳು ಭಾಷೆಯ
ನರಸ ಯಜ್ಞವ ರಚಿಸುವೆನು ಕುರು
ಸರಸಿರುಹವನದಿನಪನೆಂಬುದ ಕೇಳ್ದು ನೀನಳಿಯ ॥ ೧೧

ಕನಕನು ತನ್ನನ್ನು ಹೊಗಳಿಕೊಂಡುದು.

ವಿತಳಗಳನೇಳುವೆನು ಬಗಿದಾ
ಯತಳದಲ್ಲಡಗಿರಲಿ ಮೇಣೀ

ಕ್ಷಿತಿಯನೇಂ ನಿನು ಮಿಾಳಿ ಬ್ರಹ್ಮನ ಪುರಿಯೊಳಡಗಿರಲಿ ।
ಪೃತೆಯ ಮೆಕ್ಕಳ ಕೊಂದು ಪೂರ್ಣಾ
ಹುತಿಯೊಳಗ್ನಿಗೆ ಬೇಳದೊಡೆ ಸ
ನ್ನುತಪುತಾಶನಗೀವೆ ತನುವನು ಕೇಳು ಕುರುರಾಯ ॥ ೧೦

ಮೃಡನು ತನ್ನಯ ಜಡೆಯಡಿಯನಡು
ಗಡಲಮಡುವಿನೊಳರಿಸಿ ಕೊಳ್ಳಲಿ
ಬಿಡದೆ ಪಾಂಡುಕುಮೊರರಡಗಲಿ ಹರಿಯು ಹೊಕ್ಕಳಲಿ ।
ಮೆಡಗಿ ಕೊಳಲಾಬ್ರಹ್ಮ ತನ್ನಯ
ನಡುಕಮಂಡಲದೊಳಗೆ ರಿಪುಗಳ
ಕಡಿದು ತಿನಿಸುವೆನಿದಕೆ ಸಂಶಯವೇಕೆ ಹೇಱೆಂದ ॥ ೧೩

ಆಗ ದುರ್ಯೋಧನನು ಯಜ್ಞಸಾಧನವನ್ನು ಒದಗಿಸಿಕೊಟ್ಟುದು.

ಎನಲು ಹರುಷಿತನಾಗಿ ಕೌರವ
ಜನಪನೇಕಾಂತದಲಿ ಮನ್ನಿಸಿ
ಕನಕಗೊಲಿದೊಡನಿತ್ತನನುಪಮೆಹೋಮಸಾಧನವ ।
ನೆನೆದ ರೀತಿಯ ತಂತ್ರ[1]ಮಾರಣ
ದನುಪಮಿತಮಂತೊ್ರೀಚ್ಚರಿತರಹ
ವಿನುತಪೂಜಾಪಾತ್ರರನು ಕರೆಸಿದನು ಭೂಸುರರ ।
ಚರುಘೃತಾದಿಯ ಸಂಸ್ತರಣದಿಂ
ಬರುಹಿಹೊಱಿಗಳ ಸಮಿಧೆಯಾಹುತಿ
ವರಣಮಂತಾನ್ವಾಹಪೂರ್ಣಾಹುತಿಸದಾಕೃತಿಯ ।

ಯುದ್ಧದಲ್ಲಿ ಭೂತೋತ್ಪತ್ತಿ.

ಕರಣಕಾರ್ಪಣ್ಯದಲಿ ಹುತವಹ
ಗೊಱಿದು ಮೆಱಿ ಸಲಗ್ನಿಕುಂಡದೊ
ಳುರುಭಯಂಕರಭೂತವುದಿಸಿತು ರೌದ್ರರೂಪಿನಲಿ ॥ ೧೫

---

[1]ನೆನೆದನೂದರುವಮಾತ್ರ. ಖ.

ಮೊಱುವೊಗ ಬಾಯಾಱು ಕಣ್ಣೀ
ರಾಱು ಕೃತ್ಯೆಯ ಬೆನ್ನೊಳೂಪ್ಪುವ
ಮೊಱುಕಾಲುಗಳೇಱುಕ್ಕೆ ಕಣ್ಣೊಂದು ನೆತ್ತಿಯಲಿ ।
ತೋರಕರದ ಕಪಾಲವೊಂದುಱೆ
ಮ್ಮಾಱು ಮೆಱೆವ ತ್ರಿಶೂಲಬಟ್ಟಲ
ಭೂರಿಭೀಕರಭೂತ ನುಡಿದುದು ಕೃತ್ಯವೇನೆಂದು ॥ ೧೬

ಆ ಭೂತವು ಕನಕನ ಅಪೇಕ್ಷೆಯಂತೆ ಪಾಂಡವರನ್ನು ಕೊಲ್ಲಲು
ಅವರ ಆಶ್ರಮಕ್ಕೆ ಬಂದುದು.

ಹೋಗು ಪಾಂಡವರಾಯರಿಹ ವನ
ಕಾಗಿ ನೀನವರೈವರನು ನೆಱೆ
ನೀಗಿ ನೀನಾಹುತಿಯನಿಂದನುವಾಗಿ ಭಕ್ಷಿಪುದು ।
ಬೇಗದಲಿ ಕೊಲು ಹೋಗಿಯವರನು
ಸಾಗಿಸಿಯೆ ಯಡಗಗ್ನಿಕುಂಡದೊ
ಳೀಗಿದುವೆ ತಾ ನೇಮವೆಂದನು ಕನಕ ಕೈಮುಗಿದು ॥ ೧೭

ಎಂದು ನೇಮಿಸೆ ಭೂತ ಭುಗಿಭುಗಿ
ಲೆಂದು ಧಗಧಗಿಸುತ್ತಲುರಿ ಭುಗಿ
ಲೆಂದು ಕರ್ಬೊಗೆ ತುಡಕುಲಬುಜಭವಾಂಡಮಂಡಲವ ।
ನಿಂದು ನೋಡುತ ಕೆಲಬಲನನೋ
ರಂದದಿಂ ದಗೆ ಪಾಂಡುಪುತ್ರರ
ನಂದಗೆಡಿಸುವೆಭರದೊಳೈದಿತು ಘೋರಕಾನನಕೆ ॥ ೧೮

ಕಂಡು ವೈಮಱೆದಾಗ ಖಗಗಳು
ದಿಂಡುಗೆಡೆದುವು ಹೊಗೆಯ ಹೊಯ್ಲಿನ
ಚಂಡತರದೈವಕ್ಕೆ ಸರಿಯಿದಿರಿಲ್ಲವೆಂದೆನಲು ।
ಗಂಡುಗರ್ವವುದಾರತೇಜೋ
ದ್ದಂಡಮಂಡಿತರಾಹುಗಜನು
ದ್ದಂಡಭೂತ ವಿಪಿನಕೆ ನಡೆದುದು ಪಾಂಡವಾಶ್ರಮಕೆ ॥ ೧೯

ಆಗ ಶ್ರೀಕೃಷ್ಣನು ಪಾಂಡವರ ಸಂರಕ್ಷಣೆಗೋಸ್ಕರ ಉಪಾಯ
ವನ್ನು ಚಿಂತಿಸಿದುದು.

ಇತ್ತಲಾದ್ವಾರಕೆಯೊಳಗೆ ದೇ[1]
ವೋತ್ತಮನು ತಾ[2]ನಱಿದು ತನ್ನಯ
ಚಿತ್ತದಲಿ ಕೃತ್ರಿಮದ ಮಖದೊಳಗಟಿವರಿವರೆನುತ ।
ಮೃತ್ಯುವಿರಹಿತರೂಪನಾಹ್ವಣ
ಕಿತ್ತಲೊಬ್ಬನೆ ನಡೆದು ಬಂದನು
ಭಕ್ತವತ್ಸಲನಾಗಿ ಮಮ ಪ್ರಾಣಾ ಹಿ ಬಿರುದೆನಿಸಿ ॥ ೮೦

ಯಮನ ನೆನೆಯಲು ಬಂದನಾಹ್ವಣ
ಕಮಲನಾಭಗೆ ಕರವ ಮುಗಿದನು
ಯಮಗೆ ಬೆಸನೇನುಂಟು ಜೀಯ ನಿರೂಪಿಸುವುದೆನಲು ।
ಸುಮನಸಾನತಚರಣ ನುಡಿದನು
ವಿಮಳಕೃತ್ರಿಮಮಖದಲಟಿವರು
ಹವಣ ಹೇಟೆಂದೆನಲು ನುಡಿದನು ಭಾನುನಂದನನು ॥ ೮೧

ದೇವ ನೀನೇ ಬಲ್ಲೆ ಮಾಯಾ
ಕೋವಿದನು ನೀನಱಿಯದುದ ನಾ
ವಾವೆತೆಱದಿಂ ತಿಳಿವೆವೀಪಾಂಡವರ ಜೀವನಕೆ ।
ಆವತೆಱದಿಂದುಚಿವು ಘಟಿಸುವು
ದಾವ ಬಗೆಯನು ಬಲ್ಲಿರೆನೆ ರಾ
ಜೀವಲೋಚನ ನಗುತ ಬಟಿಕಿಂತೆಂದನಾಯಮಗೆ ॥ ೮೨

ಅಸುವನುಚಿದವರುಗಳ ನುಟ್ಟದು
ವಿಷದ ಕೊಳದೊಳಗಿರಲು ಕೊಲ್ಲದು
ಅಸಮತತ್ವದ ಧರ್ಮಸಾರವ ನುಡಿಯುತಿರೆ ಕಂಡು ।

---

[1] ಳೋಲಗ ಖ, ಝ. [2] ವಿತ್ತುಹರಿಯಿವ, ಖ, ಝ.

ಮಿಸುಕದಿದು ತಾ ಮರಳಿ ಕನಕನ
ವಸುಮತೀಶನ ಮುಖದಿ ಪೋಪುದು[1]
ವಿಷಮಭೂತಕ್ಕ ಜಭವಾದಿಗಳರಿದು ಕೇಳೆಂದ ॥ ೨೩

ಯಮನಿಗೆ ಯಾಜ್ಞನಾಗೆಂದು ಹೇಳಿ ತಾನು ಮೃಗರೂಪವನ್ನು ತಾಳುವೆನೆಂದು ಹೇಳಿದುದು.

ನೀನು ವನದೊಳು ವಿಷಸರೋವರ
ದಾನದಿಯ ಕಾದಿಹುದು ನಾನಾ
ಮಾನನಿಧಿಗಳ ಅಗ್ನಿಹೋತ್ರದ ಮನೆಯ ಹೊಕ್ಕಲ್ಲಿ ।
ನ್ಯೂನದೌಪಾಸನದ ಅರಣಿಯ
ಸಾನುರಾಗದಿ ಮೃಗದೊಳಾಯ್ವೆನು
ಕಾನನಾಂತರಬಟಿಸಲುವರೆನ್ನೊಡನೆ ನೃಪವರರು ॥ ೨೪

ಆ ಭೂತವು ಇದನ್ನು ನೋಡಿ ಹಿಂತಿರುಗುವುದೆಂದು ಹೇಳಿದುದು.

ಬಂದು ಮಾರ್ಗಶ್ರಮದ ಬಟಲಿಕೆ
ಯಿಂದ ನೀರಡಸುವರು ವಿಷವನು
ಮುಂದಣಿಯದೀಂಟುವರು ಸಾವರು ಬಟಿಕಲವನಿಪರು ।
ನಿಂದು ನೀರೊಳು ಧರ್ಮಶಾಸ್ತ್ರವ
ನಂದದಿಂ ನಿನ್ನೊಡನೆ ಪೇಟುವ[2]
ಸಂಧಿಯಲಿ ಯಾಕೃತ್ಯ ತಾನನುಚಿತದಿ ಮರಳುವುದು[3] ॥ ೨೫

ಎನಲು ಯಮ ಕೈಕೊಂಡು ಬೀಳ್ಕೊಂ
ಡನುಪಮನ ಮನವೇಗದಿಂ ತಾ
ನೆನೆದ ನಿರ್ಮಿಸಿಯಾಹ್ವಣದಿ ವಿಷಸರಸು ಯಮನಲ್ಲಿ ।
ಘನತರದ ಯಜ್ಞಸ್ವರೂಪದ
ವಿನುತಮಾಯೆಯೊಳಡಗಿದನು ಯಮ
ಜನಪ ಕೇಳ್ ಕೃಷ್ಣರಾಯನ ಕಪಟನಾಟಕವ ॥ ೨೬

---

1 ಅಸುವ ಭಕ್ಷಿಸಿ ಮಡಗುವುದು ಮಿಗೆ, ಝ, ಖ.

2 ಪೇಟುತ್ತ, ಖ. 3 ಸಂದಿರಲಿ ಕಾಹೂತಕೃತಿಯನುಚಿತದಿ ಮರಳುವುದು, ಕ.

ಸಾರವೆಹ ಮೃಗರೂಪದಿಂದನು
ಸಾರಿಯಾಗಲು ಹೊತ್ತು ಕೃಷ್ಣನು
ದಾರಪಾಂಡವರಾಯ ವಿಮಳಾಶ್ರಮದ ವನತತಿಯ ।
ಕಾರಣಿಕಮೃಗವೆರಣಿಯನು ಕೊಂ
ಡೋರೆಯಲಿ ಕೊಂಡೊಯ್ವೆನೆನುತವೆ
ವೋರೆಯಿಂದೀಕ್ಷಿಸುತಲಿರ್ದುದು ಕೇಳು ಕೌತುಕವ ॥ ೭೫

ಆರನಾರೈ ಕೊಲುವರಾರಿಂ
ದಾರು ಸಾವರು ಹರಿಯುಮೊಪತಿ
ನೀರಜಾಪ್ತರು ಮುನಿಯೆ ಹರಿವುದೆ ಆಯು ತೀರದೊಡೆ ।
ಮಾರಿ ಮೃತ್ಯುಗಳೊತ್ತಿ ಮೊಬ್ಬಿಪ
ಕಾರವಾವುದು ಸತ್ಯನಿಷ್ಠರ
ಸಾರಭಕ್ತರ ಕಾವ ಗದುಗಿನ ವೀರನಾರಣನು ॥ ೭೬

ಇಪ್ಪತ್ತೈದನೆಯ ಸಂಧಿ ಮುಗಿದುದು.

ಇಪ್ಪತ್ತಾರನೆಯ ಸಂಧಿ.

ಸೂಚನೆ.

ಧರಣಿಪತಿ ತಂದಿತ್ತನಾದ್ವಿಜ
ನರಣಿಯನು ಬಿಟ್ಟಿಕಮಲಧರ್ಮದ
ಸರಣಿಯಿಂದೆತ್ತಿದನು ಬನದಲಿ ನಿಜಸಹೋದರರ ॥

ಪಾಂಡವರು ವನದಲ್ಲಿದ್ದುದು.

ಕೇಳು ಜನಮೇಜಯ ಧರಿತ್ರೀ
ಪಾಲ ಪಾಂಡುಕುಮಾರರಡವಿಯ
ಪಾಳಿಯಲಿ ಕಾಲವನು ಕಳೆದರು ಹಲವುಮಾಸವನು ।
ಆಳದರು ವನವಾಸದಾಯಸ

ದಾಳಿಕೆಯ ಸಾಮ್ರಾಜ್ಯವನು ಸಂ
ಮೇಳಸೌಖ್ಯವ ಸೌಮನಸ್ಯದ ಸುಖದ ಭಾರದಲಿ ॥ ೧

ಮೃಗರೂಪಿಯಾಗಿ ಅರಣಿಯನ್ನು ಕೊಂಡೊಯ್ದುದು.

ಪಾಲಿಸಲು ಭಕ್ತರನು ಪರಮದ
ಯಾಳು ದ್ವಾರಕೆಯಿಂದ ಲಕ್ಷ್ಮೀ
ಲೋಲ ಬಿಜಯಂಗೈದು ಪಾಂಡವರಕ್ಷಣಾರ್ಥದಲಿ ।
ಕಾಲನನು ಕರೆದೊಂದುಪಾಯವ
ಮೇಳವಿಸಿ ತಾ ಬಚಿಕ ಭೂಸುರ
ನಾಲಯವ ಸಾರಿದನು ಹೊಮ್ಮಿ ಯಾಕೃತಿಯ ತಾಳ ॥ ೨

ವಿಮಲವಾನಪ್ರಸ್ಥಜನರಾ
ಶ್ರಮದೊಳಗೆ ಸಾರಂಗಮೃಗವಿಳ
ಯಮೆರನೌಪಾಸನದ ಸಾಧನದರಣಿಯನು ಕೊಂಡು ।
ಕಮಲಸಖನುದಯದಲಿ ಸಂಧ್ಯಾ
ರಮಣಿಯಭಿವಂದನೆಗೆ ಸನ್ಮುನಿ
ಸಮಿತಿ ಹಿಂಗಿದ ಒಜಿಕ ಕೊಂಡೋಡಿತ್ತು ವಿಪಿನದಲಿ [1] ॥ ೩

ಎಲೆಲೆ ಮೃಗವರಣಿಯನು ವಂಚಿಸಿ
ಕಳದುದೋ ಕಾಳಾಯ್ತೆನುತ ತ
ಲ್ಲಳಿಸಿದಳು ನಿಜಪತಿಯು ಭಯದಲಿ ಮುನಿಯು ವಧುವೆಂದು ।
ಹೊಳಯು ಸಂಜೆಯ ಸಾಧುಗಳು
ಕಳವಳಿಸಲಾದ್ವಿಜನಖಿದು ಪಾರ್ಥಿವ
ರಿಳಯ ಬಿಟ್ಟರಲಾ ಯೆನುತ ಹರಿತಂದನಾಶ್ರಮಕೆ ॥ ೪

ಧರ್ಮರಾಯರಲ್ಲಿ ಈ ಸಂಗತಿಯನ್ನು ತಿಳಿಸಿದುದು.

ಎಲೆ ಯುಧಿಷ್ಠಿರ ದೋಷವಿದು ನಿ
ನ್ನಳವಿಗೈದುವುದರಣಿಯನು ಮೃಗ

---

1 ಡಿತು ವಸಾಂತರಕೆ, ಚ.

ವೆಳದು ಕೊಂಡೀಹೊದರ ಹೊಕ್ಕುದು ಬಹಳಕಾನನವ ।
ಅರಣಿಯನ್ನು ತಂದುಕೊಡುವುದಕ್ಕಾಗಿ ಹೋದ ಪಾಂಡವರನ್ನು
ವಿಷಸರೋವರಕ್ಕೆ ಕರೆತಂದುದು.
ಅಟ್ಟಿದುದನ್ವಾಧಾನ ವಿತರರ
ಹಟ್ಟವಿಗಾನೊಳಗಾದೆನೆನೆ ದ್ವಿಜ
ತಿಲಕನೌಪದ್ರವನಳಿದವನೀಶ ಹೊಲಿವೆಂಟ ॥ ೫

ಜಾಳಿಸಿದ ಹೆದೆಬಿಲ್ಲು ಮುವ್ಮೊನೆ
ಬೋಳಿಗಳ ನಿಡುಗುಂಡುಗಳ ಬಡಿ
ಕೋಲುಗಳನೆಕ್ಕಡವೆನುರುಪಾರಿಯದ ಕುಪ್ಪಸವ ।
ಮೇಳವಿಸಿ ಹೊಲಿವೆಂಟನವನೀ
ಪಾಲ ಬೇಂಟೆಗೆ ಮೃಗದ ಹೆಜ್ಜೆಯ
ಮೇಲೆ ಹೆಜ್ಜೆಯ ಹರಿಸಿದನು [1] ತನ್ನನುಜರೊಡಗೂಡಿ ॥ ೬

ಕಾಣಿಸುತ ಕಂಗಳಿಗೆ ತಾನತಿ
ಜಾಣಿನಿಂದುಱಿ ದೂರವಲ್ಲದೆ
ಕಾಣಿಸುತ್ತರಣಿಯನು ನೋಡುತ ಮುಳಿದು ಕೆಲಬಲನ ।
ಕ್ಷೋಣಿಪತಿಗಳು ಮುಟ್ಟಿ ಬರಲ
ಕ್ಷೀಣಮೃಗ ಪುಟನೆಗೆದು ಹಾಱುತ
ಕೇಣದಲಿ ಕೊಂಡೊಯ್ದುದಿವರನು ವಿಷಸರೋವರಕೆ ॥ ೭

ತರಣಿಯನ್ವಯನಂದು ಮಾಯಾ
ಹರಿಣನನು ಬೆಂಬತ್ತಿ ವಿಪ್ಲವ
ಕರಣನಾದಂದವರು ಮಹದಾರಣ್ಯವಾಸದಲಿ [2] ।
ಧರಣಿಪತಿ ಬಟ್ಟಸಲಿಸಿ ಮುನಿಪತಿ
ಯರಣಿಯನು ಕೊಂಡೊಯ್ವ ಹುಲುಮೃಗ
ಸರಣಿಯಲಿ ಸೈವರಿದರಂದಾರಣ್ಯಮೋರ್ಗದಲಿ [3] ॥ ೮

---

[1] ನಡಸುವನು, ಚ. [2] ವೀಥಿಯಲಿ, ಕ. ಖ. [3] ಕರ್ಣವಮಾರ್ಗಣರು, ಚ.

ಇಷುಬಿನೊಳಗದೆ ಕುತ್ತು ಪೆರ್ಮ್ಮರ
ದುಱಿಗಲೊಳಗದೆ ತೊಡಚು ಬಾಣವ
ನೆಱಿಗಿ ತಿವಿ ತೋಡಿಟ್ಟೆಯಲಿ ಸಿಡಿವಲೆಯನೊಡ್ಡಿನುತ ।
ಅಱಿಸಿದರು ನಟ್ಟಡವಿಯಲಿ ನುಂ
ದುಱುಬಿದರು ಬೆಳ್ಳಾರವಲೆಗಳ
ಹರಹಿ ಸೊಪ್ಪಿನ ಸೋಹಿನಲಿ ಸಿಲುಕಿಸಿದರಾಮೃಗವ ॥ ೯

ಆ ಮೃಗವನ್ನು ಹಿಡಿದುದು.

ಕೇಳು ಜನಮೇಜಯ ಹಿಮಾಂಶುವಿ
ಶಾಲವಂಶಜರಡವಿಯಲಿ ಮುನಿ
ಪಾಲನರಣಿಯನೊಯ್ದ ಮೃಗವನು ಹಿಡಿದರೊಳಬಿದ್ದು ।

ಆಗ ದಾಹವಾಗಲು ನೀರನ್ನು ತಾರೆಂದು ನಕುಲನಿಗೆ
ಹೇಳಿದುದು.

ಮೇಲೆ ತೋಱುತ ಧಗೆ ಮಹೀಶರ
ತಾಳಗೆಗಳೂಣಗಿದುವು ಬಟಲಿಕೆ
ಯೇಟಿಗೆಯಲಾಸನ್ನ ಲತೆಯಿಱುಬಿನಲಿ ಮಲಗಿದರು ॥ ೧೦

ದೂರವಾದುದು ನಿಳಯವೀಕಾಂ
ತಾರ ನಿರ್ಜಲವೈದಲಂಘ್ರಿಗೆ
ಭಾರ ಪದವಿನ್ನೇನು ಹದನೆಂದರಸನಟವಿದು ।
ನೀರ ತಾರೈ ಹೋಗು ನಕುಲ ಸ
ರೋರುಹದ ಪತ್ರದಲಿ ನಿರ್ಮಲ
ವಾರಿಯನು ತಹುದೆಂದು ಕುಂತೀಸೂನು ನೇಮಿಸಿದ ॥ ೧೧

ನಕುಲನ ಗಮನ.

ಬಗೆದನೇ ಬಟಲಿಕೆಯನತಿಸಹ
ಸಿಗಳ ದೇವನು ಹಿರಿಯನಾಜ್ಞೆಯ
ನುಗುಳಲಮ್ಮದೆ ಧನುವ ಕೊಂಡನು ನಡೆದನತಿಪಥವ ।

ದೃಗುಮೆನೋಮೆಂಜಳದ ಕಂಜಾ
ಳಗಳ ಕಡುಪರಿಮಳದ ಪಸರದ
ಸೊಗಸು ಮಿಗೆ ತೀಡಿತ್ತು ಪದ್ಮಾಕರದ ಪವಮಾನ ॥ ೧೦

ಹಿತವನೈ ಹಿರಿಯೈಯ್ಯನೆನಗೆಂ
ದತುಳಬಲ ಪರಿತೋಷದಲಿ ಮಾ
ರುತನ ಬಟಿವಿಡಿದೈದಿದನು ನಕುಲಾಂಕನಾಕೊಳನ ।
ಹತಿಯಹುದು ನಿನಗೊಮ್ಮೆ ತಪ್ಪದು
ಹಿತವು ಬಟಿಕೆಂಬಂತೆ ಖಗ ಸಂ
ತತಿಗಳುಲಿದೊಪ್ಪಿದುವು ಪದ್ಮಾಕರದ ತೀರದಲಿ ॥ ೧೩

ಇರವಿನಲಿ ರಚನೆಯಲಿ ಮಧುರೋ
ತ್ತರವ ನೆಜೆ ಬೀಱುತ್ತಲಂತಃ
ಕರಣದಲಿ ಕತ್ತರಿಸಿ ಕೊಂಡಿಹಕುಜನರಂದದಲಿ ।
ಪರಿಮಳದ ಪಸರದಲಿ ಶೈತ್ಯೋ
ತ್ಕರುಷದಲಿ ಲೇಸೆನಿಸಿ ಕುಡಿದರೆ
ಹರಣವನೆ ಹಿಂಗಿಸುವ ಸರಸಿಯ ವಾರಿ ಚೆಲುವಾಯ್ತು ॥ ೧೪

ಖಳರ ಸತ್ಯದ ವೋಲು ವಂಚಿಸಿ
ಕಳೆದುದಾತನ ಮನದ ಮಾಯೆಯ
ಚಲುವಿನಂತಿರೆ ಚದುರುಗೆಡಿಸಿತು ತಿಳಿಯಲರಿದೆನಿಸಿ ।
ಲಲನೆಯರ ಹೃದಯದವೊಲೀಕ್ಷಿಸೆ
ನೆಲೆಯನೀಯದ ಕೃತಕಸರಸಿಯ
ಸುಲಭತೆಗೆ ಸಹದೇವನಣ್ಣನು ಸೋತು ನಡೆತಂದ ॥ ೧೫

ಇಟ್ಟಿದು ವೊನೆಮೆಂಜಿಱಿಗನಗ್ರಕೆ
ಒಲಿದು ಹೊಕ್ಕನು ಜಾನುದಘ್ನ
ಸ್ಥಳವನಂಜಳಯಿಂದ ತೊಳೆದನು ಚರಣಮೆದನವನು ।

ತುಳುಕಿದನು ವಾರಿಯನು ತನ್ನಯ
ಬಟ್ಟಲಿಕೆಯ ಪರಿಹರಿಸಿ ಭೂಪತಿ
ಗಳಿಗೆ ಬಟ್ಟಿಕಾನೊಯ್ವೆನೆಂದನು ತನ್ನ ಮನದೊಳಗೆ ॥ ೧೬

ನಕುಲನು ನೀರನ್ನು ಕುಡಿವಾಗ ಯಕ್ಷನು ಬೇಡೆಂದು ಹೇಳಿದುದು.

ಜಲವನಂಜಳಿಯಿಂದ ಮೊಗದೀಂ
ಟಲು ನೆನೆಯಲಭ್ರದಲಿ ಗುಹ್ಯಕ
ನುಲಿದನೆಲೆ ನಕುಲಾಂಕ ಮೌಢಿನಗುತ್ತರವ ರಚಿಸಿ ।
ಬಟ್ಟಿಕ ಸಲಿಲವನೀಂಟು ಮಾತುಗ
ಳೂಳವ್ರ ಮರುಳಾಗದಿರೆನಲು ಛಗೆ
ಗಳುಕಿ ಬಟ್ಟಲಿಸೆ ಮೇಲನಾಲಿಸಿ ಮಾಱುದನು ನುಡಿಯ ॥ ೧೭

ನಕುಲನು ಕೆಳಗೆ ಬೀಳಲು ಸಹದೇವನ ಆಗಮನ.

ಜಡಿಯಲೆರಡಳ್ಳಿಗಳು ಕೊಳದಲಿ
ಕುಡಿದನುದಕವನಬುಜದೆಲೆಯಲಿ
ಪಿಡಿದನನಿಬರಿಗಮಲಜಲವನು ಮರಳಿ ನಿಮಿಷದಲಿ ।
ತಡಿಯನಡರಿಲು ಧೊಪ್ಪನವನುಱಿ
ಕೆಡೆದು ಪರವಶನಾದನಿತ್ತಲು
ತಡೆದನೇಕೆಂದಟ್ಟಿದನು ಸಹದೇವನನು ನೃಪತಿ ॥ ೧೮

ತವಕ ಮಿಗೆ ನಡೆತಂದು ವೈಮುಱಿ
ದವನ ಕಂಡನು ಬಹಳ ಛಗೆ ಪರಿ
ಹರಿಸಲುದಕವ ಕುಡಿದು ಬಟ್ಟಿಕಾರೈವೆನಿದನೆನುತ ।

ಆತನು ಯಕ್ಷನ ಮಾತನ್ನುಪೇಕ್ಷಿಸಲು ಕೆಳಗೆ ಬೀಳುವಿಕೆ.

ಲವೆಲವಿಸಿ ತಾಳಿಗೆಯ ತಲ್ಲಣ
ದವನು ಹೊಕ್ಕನು ಕೊಳನನಮಳಾಂ
ಬುವನು ಮೊಗೆದನು ಮೊಗಕೆ ನೆಗಹಲು ಮೇಲೆ ದನಿಯಾಯ್ತು ॥

ಬಿಡುಬಿಡೆಲೆ ಸಹದೇವ ತನ್ನಯ
ನುಡಿಗೆ ಮಾಱುತ್ತರವ ಕೊಡು ಮುಂ
ಗೆಡದೆ ಮುಂದಣ ನಿನ್ನವನ ಕಂಡಿಂತು ಮರುಳಹರೆ ।
ಮಡಿಯಲೆಳಸದಿರೆನಲು ಛಗೆಯವ
ಗಡಿಸೆ ಸೈರಿಸಲಱಿಯದುತ್ತರ
ಗುಡದೆ ಜಲವೀಂಟಿದನು ದಾಂಟಿದುದಸು ಕಳೇಬರವ॥ ೬೦

ಈತನತಿ ಮೈಮಱೆದನಿತ್ತಲು
ಕಾತರಿಸಿದನು ಭೂಪನಿಬ್ಬರ
ಮಾತು ಮುಖದಿರುಹಿತ್ತು ಶಿಶುಗಳಿಗಾವಹದನಾಯ್ತೊ ।

ಅರ್ಜುನಾಗಮನ.

ತಾತ ಹೋಗೈ ಪಾರ್ಥ ಬಾಲಕ
ರೇತಕತ್ತಲು ತಡೆದರೆಂಬುದ
ನೀ ತಿಳಿದು ತಾ ಜಲವನೆನೆ ಕೈಕೊಂಡು ನಡೆತಂದ ॥ ೬೧

ಹಿಮೆದ ಗಾಳಿಯ ಪಥವಿಡಿದು ಮೆ
ಧ್ಯಮೆದ ಪಾಂಡವನೈತರುತ ಮುಂ
ದಮಲಸರಸಿಯ ತೀರದಲಿ ಕೀಲಿಸಿದ ಮಗ್ಗುಲಲಿ ।
ಯಮಳರೊಱಗಿರೆ ಕಂಡು ಮನದಲಿ
ತಮವ ಹಿಡಿದನು ನೀರಕುಡಿದೀ
ಮಮತೆ ಏಗಲಾರೈವೆನೆನುತೀಕ್ಷಿದನು ಸರೋವರವ ॥ ೬೨

ಚರಣವದನವ ತೊಳದು ಛಗೆ ಡಾ
ವರಿಸಲಕ್ಷಮನಾಗಿ ಕರದಲಿ
ತೆಱೆಗಳನು ತೆಗೆನೂಕಿ ಮೊಗೆದನು ಗರಳಮಯಜಲವ ।
ಮರುಳ ನೀ ಕೌಂತೇಯ ಮಾದ್ರೀ
ಯರನು ನೋಡುವುದೇನು ನನಗು
ತ್ತರವನಿತ್ತುದಕವನು ಕುಡಿ ಯೆಂದುದು ನಭೋನಿನದ [1] ॥ ೬೩

[1] ನಭನ, ಚ.

ಮೇಲನಾರೈವನೆ ಸುತೃಷ್ಣಾ
ಲೋಲಚಿತ್ತನು ಕಾಮಮೃಗಯಾ
ಕೇಳಿಲಂಪಟನರ್ಥಲಾಭದ್ಯೂತಲೋಲುಪನು ।

ಅರ್ಜುನನು ಪರವಶನಾಗಿ ಕೆಳಗೆ ಬಿದ್ದುದು.

ಕೇಳು ಜನಮೇಜಯ ತಟಾಕದ
ಕಾಳಕೂಟವನೀಂಟಿ ತಡಿಯಲಿ
ಕಾಲಿಡುತ ಡೆಂಥಣಿಸಿದನು ಮೈಮಱೆದನಾಪಾರ್ಥ ॥ ೭೪

ಮಡಿದರಿತ್ತಲು ಮೂವರನುಜರು
ತಡೆದರೇನು ವಿಚಿತ್ರವಾಯಿತು
ನಡೆ ಸಮೀರಕುಮಾರ ನೀ ಹೋಗತ್ತಲಡಗದಿರು ।

ಭೀಮನು ಬಂದು ಇವರ ಸ್ಥಿತಿಯನ್ನು ನೋಡಿ ತಾನೂ
ನೀರನ್ನು ಕುಡಿದುದು.

ತಡೆಯದೈತಹುದೆನೆ ಹಸಾದದ
ನುಡಿಯಲವನೈದಿದನು ಹೆಜ್ಜೆಯ
ಹಿಡಿದು ಬಟಿಸಲಿಸಿದನು ಬರೆ ಬರೆ ಕಂಡನದ್ಭುತವ ॥ ೭೫

ಥಟ್ಟುಗೆಡೆದಸುಗಳೆದ ತನ್ನೊಡ
ಹುಟ್ಟಿದರನೀಕ್ಷಿಸಿದನುಸುರಿನ
ಬಟ್ಟೆಯನು ನೋಡಿದನು ಮೂಗಿನ ಬೆರಳ ಬೆಚ್ಚಿಗಿನಲಿ ।
ಮುಟ್ಟಿತಿವರಿಗೆ ಮರಣವಿನ್ನೀ
ನಟ್ಟ ಕೊಲುವೆನು ಜವನ ಮೈತ್ಯವ
ನಿಟ್ಟಿಲುವೆನುದುರಿಸುವೆನೆನುತೊದಱಿದನು ಕಲಿಭೀಮ ॥ ೭೬

ಮನ್ನಣೆಗೆ ಹಿರಿಯೈಯ್ಯನೆಂದಾ
ನಿನ್ನ ಬಗೆವೆನೆ ಜವನ ಗಂಟಲ
ಮುನ್ನ ತಿರುಹುವೆನೆನುತ ಕಿಡಿಕಿಡಿಯಾಗಿ ಖಾತಿಯಲಿ ।

ಇನ್ನೊ ದಱು ಫಲವೇನು ಕುಡಿವೆನು
ಮುನ್ನ ಜಲವನು ಬಟಿಕ ನೋಡುವೆ
ನೆನ್ನವರ ಮೊಗರ್ವನೆನುತ ಮೊಗೆದನು ವಿಷೋದಕವ ॥ ೦೬

ಮಾಣುಮಾಣುತ್ತರವ ಕೊಡು ಮುಂ
ಗಾಣಬೇಹುದು ತಂದೆ ತನಗೀ
ಕ್ಷೋಣಿಯಲಿ ಪೂರ್ವದ ಪರಿಗ್ರಹವೀಸರೋವರವು ।
ಜಾಣನಾದರೆ ಜಾರಬಿಡು ಬಿಡು
ಕೇಣವನು ಮಾಣೆನಲು ಗಗನದ
ವಾಣಿಯನು ಮನ್ನಿಸದೆ ಪವನಜನೀಂಟಿದನು ಜಲವ ॥ ೦೭

ಭೀಮನೂ ಪರವಕನಾಗಿ ಬಿದ್ದುದು.

ದಡದಡಿಸಿ ಕೊಳನಿಂದ ಹೊಱಟಡಿ
ಯಿಡುತ ಬಟಿಲಿದನನಿಲಸುತನವೆ
ರೊಡನೆ ಮೆಯ್ಯಿಕ್ಕಿದನು ಕಳಚಿವ ನೀಲಗಿರಿಯಂತೆ ।

ಆಗ ಧರ್ಮರಾಯನ ಆಗಮನ.

ಅಡಿಗೆಡೆದನಾಭೀಮನಿತ್ತಲು
ಕಡು ನಿರೋಧವೆ ಹಿಡಿದು ತಾನೇ
ನಡೆದು ಬಂದನು ಧರ್ಮಸುತನಾಕೊಳನ ಪಥವಿಡಿದು ॥ ೦೮

ಮೇಲೆ ಮಗುಳ್ದಾಲಿಗಳ ಚಾಚಿವ
ತೋಳ ಮೇಲಣ ತಲೆಯ ಸುಯ್ಲಿನ
ಲೀಲೆಯುಡಗಿದ ಮುಖದ ಮಸುಳಿದ ಕಾಯಕಾಂತಿಗಳ ।
ಮೇಲೆ ಮಸಗಿದ ಮಗ್ಗುಲಿನಲಿಹ
ನಾಲುವರನೀಕ್ಷಿಸಿ ಮಹೀಪತಿ
ಕೋಲು ಮಱಿಮೊನೆಗೊಂಡವೋಲ್ ಮಱುಗಿದನು ಚಿತ್ತದಲಿ ॥

ಮುಸುಕನರೆದೆಗೆದವರವರ ಮುಖ
ದುಸುರುಗಳನೀಕ್ಷಿಸಿದನಕಟಾ

ಶಿಶುಗಳಿಗೆ ಕಡುಹಾನಿಯಾಯಿತೆ ಶಿವ ಶಿವ ಮಹಾದೇವ ।
ನಿಶಿತಶಸ್ತ್ರದ ಗಾಯವಿಲ್ಲು
ಬ್ಬಸದ ಸಾವಿಂಗಾವುದೋ ತಾ
ನಸುಗಳಯದೆಯು ಕೆಟ್ಟೆನೆಂದಟ್ಟಲಿದನು ಮನದೊಳಗೆ ॥ ೩೧

ಧರ್ಮರಾಯನ ಪ್ರಲಾಪ.

ಇಂದಿನಲಿ ಕಡೆಯಾಯ್ತಲಾ ವಿಮ
ಲೇಂದುವಂಶಕೆ ಕೌರವನ ಛಲ
ಸಂದುದಿನ್ನಹಿತಾವನೀಶರಿಗಾಯ್ತು ಪರಿತೋಷ ।
ಕೊಂದರಾರೋ ಅಕಟಕಟ ಅರ
ವಿಂದನಾಭನ ಕೃಪೆಗೆ ಬಾಹಿರ
ನಿಂದು ತಾನಾದೆನೆ ಮಹಾದೇವನೆನುತ ಚಿಂತಿಸಿದ ॥ ೩೨

*ಹರ ಹರಾ ಶಂಕರ ಕೃಪಾಕರ
ಪೊರೆಯೊ ಪುರಹರ ಆವತೆರದಿಂ
ತೊರೆವೆನೊಡಲಿದನಕಟಕಟ ಶ್ರೀಕಾಂತ ಮುರವೈರಿ ।
ಗರುಡವಾಹನ ಕಮಲಲೋಚನ
ಧರೆಗೆ ಹೊರೆಯಾದೆನ್ನ ತನುವನು
ಯಿರದೆ ಬಿಸುಡುವತೆರನ ಕೃಪೆಮಾಡೆಂದನಾಭೂಪ ॥ ೩೩

ಧಾರುಣಿಗೆ ಬಲವಂತತಮ್ಮದಿ
ರೋರಣದಿ ಮಿಗೆ ನಾಲ್ವರಿರುತಿರೆ
ಭೂರಿಮುದದಿಂ ದಡವಿಯೇ ಸಾಮ್ರಾಜ್ಯವೆನುತಿದ್ದೆ ।
ಆರಿಗೊಲಿಲುವೆನಾರ ಸಾರುವೆ
ನಾರು ತನ್ನನು ಸಲಹುವರು ಕಾಂ
ತಾರದೊಳಗಾನೊಬ್ಬನಾದೆನೆ ಶಿವ ಶಿವಾ ಯೆಂದ ॥ ೩೪

---

* 33ನೆಯ ಪದ್ಯದಿಂದ ಆರುಪದ್ಯಗಳು ಕ, ಗ, ಝ ಪುಸ್ತಕಗಳಲ್ಲಿರುತ್ತವೆ.

ಎಲ್ಲಿ ಗರಳವ ಕುಡಿವೆನೋ ತಾ
ನೆಲ್ಲಿ ಸುರಗಿಯನೊಡ್ಡಿ ಬೀಳ್ವೆನೊ
ಯೆಲ್ಲಿ ನೂಕುವೆನೀತನುವ ಯಿದನೆಂತು ಕಳಚುವೆನು।
ಫುಲ್ಲನಾಭನ ಕೃಪೆಗೆ ಬಾಹಿರ
ನಲ್ಲದೊಡೆ ಕೃಪೆದೋಱಿನೇ ತಮ
ಗಿಲ್ಲಿ ಕಡೆಯಾಯ್ತು ಪವಿಯೊಳಗೆಂದೆನುತ ಪಲುಬಿದನು ॥ ೫೫

ಆವೆಜನ್ಮದ ದುರಿತಫಲನಿಂ
ದೀವಿಪತ್ತಿಗೆ ಸೇರಿಸಿತು ಮು
ನ್ನಾವನೋಂಪಿಯನರೆಯನೋಂತೆನೊ ಯಿಲ್ಲದಿರೆ ತನ್ನ।
ಜೀವಸಖರುಗಳಿಂಗೆ ಮರಣವ
ತೀವಿ ತಾ ಕಣ್ಣಾ ಱೆ ಕಂಡಿ
ನ್ನಾವೆಬಾಳಿಕೆಗೊಡಲ ಹಿಡಿದಪೆನೆನುತ ಪೊರಳಿದನು ॥ ೫೬

ತೊಱೆದಿರೇ ತಮ್ಮಿದಿರ ತನ್ನನು
ಮಱೆದಿರೇ ಸುಕುಮಾರರಿರ ಮೈ
ಮಱೆದಿರೇ ತಾ ಮಾಡಿದವಗುಣದಖಿಳದಾಯಸವ।
ನೆಱೆಯ ತಾಳುತ ನಿಮ್ಮ ಮನ ಬೇ
ಸಱಿಕೆ ಯಾದುದೆ ಅವ ತೆರದಿಂ
ದುಱುವಪ್ರಾಣವ ತೊಱೆದಿರೆಂದನು ದೆಸೆಗೆ ಬಾಯ್ವಿಡುತ ॥ ೫೭

ಎಂದು ದೆಸೆದೆಸೆಗಳಿಗೆ ಬಾಯ್ವಿಡು
ತಂದು ನಾನಾತೆರದಿ ನಿಜಗುಣ
ವೃಂದವನು ಪಲುಬಿದನು ತಮ್ಮಿದಿರಿರವನೀಕ್ಷಿಸುತ।
ಕಂದರಿವರನು ಕಾಣೆನೇ ಹಾ
ಯೆಂದು ಪಗೆಯವಗಡಿಸಲಾಕ್ಷಣ
ನಿಂದು ನೋಡಿದ ಕೊಳನ ಜಲವನು ಭೂಪನೆಚ್ಚವಡೆದು ॥ ೫೮

ನೀರನ್ನು ಕುಡಿಯಲು ಧರ್ಮರಾಯನ ಪ್ರಯತ್ನ.

ಹೋಗಲಿನ್ನೀ ನೀರುಗುಡಿದಿವ
ರಾಗಹೋಗಲಿಸುವೆನೆನುತ ಥಗೆ
ತಾಗಿದವನಿಪನಿಟಿದು ಹೊಕ್ಕನು ವಿಷಸರೋವರವ ।
ಬಾಗಿ ಮೊಗೆದನು ಜಲವನಭ್ರದೊ
ಳಾಗಲಾದುದು ರಭಸವೆಲೆ ಸಕ
ಲಾಗಮಜ್ಞ ಮಹೀಶ ಕೇಳೆಂದುದು ನಭೋನಿನದ ॥ ೫೯

ಅನುಜರವಿವೇಕಿಗಳು ಪರಿಣತ
ತನದಲಧಿಕನು ನೀ ನಿಧಾನಿಸಿ
ತನಗೆ ಮೊಬ್ಬುತ್ತರವನಿತ್ತು ನಿರಂತರಾಯುದಲಿ ।
ತನುಮಿಗಾಪ್ಯಾಯನವ ಮಾಡುವು
ದೆನಲು ಸೈರಿಸಿ ಥಗೆಯ ನೋಡದೆ
ಥನಪಥದ ನುಡಿಯಾರದಂದವನೀಕ್ಷನಾಲಿಸಿದ ॥ ೬೦

ಬಿಸುಟನುದಕವನಾನುಡಿಯನಾ
ಲಿಸಿದನಾರೈ ನೀನು ನಿನಗಾ
ಗಸದಲಿರವೇನಸುರನೋ ಕಿನ್ನರನೊ ನಿರ್ಜರನೊ ।
ಉಸುರೆನಲು ತಾಂ ಯಕ್ಷನೀಸಾ
ರಸವು ನನ್ನದು ನಿನ್ನ ತಮ್ಮಂದಿ
ರಸುವನೆಳೆದವನಾನು ಕೇಳ್ ಧರ್ಮಸುತ ಯೆಂದ ॥ ೬೧

ಬಾಲಕರು ನೀವೆನ್ನ ಮಾತನು
ಕೇಳಿ ಯುದಕವ ಕುಡಿವುದೆನೆ ಭೂ
ಪಾಲ ನಿನ್ನವರೆನ್ನ ಮಾತನು ಕೇಳಿ ಮನ್ನಿಸದೆ ।
ಯಕ್ಷನು ಹೇಳಿದುದು.
ಮೇಲುಗಾಣದೆ ನೀರಗೆಡಿದು ವಿ
ಟಾಳಿಸಿದರಿಂದೆನ್ನ ಮಾತನು
ಕೇಳಿ ನೀನುತ್ತರವ ರಚಿಸೆಲೆ ರಾಯ ನೀನೆಂದ ॥ ೬೨

*ಆವುದೈನಿನ್ನ ಹಿತ ನಿನಗಾ
ನಾವ ಪರಿಯಿಂದುಸುರ್ವೆ ನೀನದ
ನೋವಿ ಬಿಸಗೊಳಲೆನಿತ ಕೇಳುವೆನೆನಲು ಗುಹ್ಯಕನು ।
ನೀವು ಕರ ಧರ್ಮಜ್ಞರೆಂಬಭಿ
ಧಾವಿಗಳು ಗಡ ಧರ್ಮಕಥನವ
ನೋವಿ ರಚನೆಯ ರಚಿಸುವುದು ಯೆನೆ ನೃಪತಿಯಿಂತೆಂದ ॥ ೪೩

ಧರ್ಮರಾಯನ ವಾಕ್ಯ.

ಧರ್ಮವೆಂಬುದನುಸುರಬಹುದೇ
ಧರ್ಮವಾರಿಗೆ ಗೋಚರವು ತ
ದ್ಧರ್ಮಸಾರವನಖಿಲನಾರೀವರ್ತಮಾನದಲಿ ।
ಧರ್ಮವಳಿದುದನರಿಪುವೆನು ತಾ
ನಿಮ್ಮ ಚಿತ್ತಕೆ ಸೊಗಸಿದೊಡಮದ
ನೆಮ್ಮ ಕೇಳಲಿ ಖಚರ ಪ್ರಶ್ನೆಯ ನೃಪತಿಗಿಂತೆಂದ ॥ ೪೪

ಯಕ್ಷ ಮತ್ತು ಧರ್ಮರಾಯನ ಪ್ರಶ್ನೋತ್ತರಗಳು.

ಜಲನಿಧಿಗೆ ಸರಿ ಸರಸಿಯಾವುದು
ನೆಲಕೆ ಹಿತವನದಾರು ಮರ್ತ್ಯರ್ಗೆ
ವಳಗೆ ಮಾತೆಯದಾರು ಸೂರ್ಯಪ್ರಭೆಗೆ ಸರಿಯೇನು ।
ತಿಳುಹು ಧರ್ಮಜ ಸಕಲಧರ್ಮಾ
ವಳಿಯ ಸಾರವನೆನೆಲು ಯಕ್ಷನ
ಬಲುಮೆಗವನೀಪಾಲನತಿಪರಿತೋಷದಲಿ ನುಡಿದ ॥ ೪೫

ಗಗನವಬುಧಿಗೆ ಸರಿ ಸರೋವರ
ಜಗಕೆ ಹಿತವೆನು ಶಕ್ರ ಮರ್ತ್ಯರ್ಗೆ
ಳಗಳ ಮಾತಾರೂಪುಗೋವುಗಳಿದು ನಿದಾನ ಕಣ ।
ಬಗೆಯಲಗ್ಗದ ಸತ್ಯವೆಂಬುದು

* 43–44ನೆಯ ಪದ್ಯಗಳು ಕ, ಗ, ಝ, ಪುಸ್ತಕಗಳಲ್ಲಿಲ್ಲ.

ಗಗನಮೆಣಿಗೆಣೆ ಯೆನಲು ಚಿತ್ತಕೆ
ಸೊಗಸಿ ತಲೆದೂಗಿದನು ಮಗುಟಿಂತೆಂದನಾಖಚರ ॥ ೪೬

ನಯವಿದನೆ ಕೇಳಾವನೈ ಹ್ಷ
ತ್ರಿಯನು ವಿಪ್ರನೊಳಾವನೈ ಶ್ರೋ
ತ್ರಿಯನು ಸುಜನರೊಳಾವನೈ ಮಹಪುರುಷನೆಂಬುವನು ।
ನಿಯತಧೀರನದಾರು ದೇವ
ಪ್ರಿಯನದಾವನು ಕಠಿನಕಷ್ಟ
ಶ್ರಯನದಾವನು ಧರ್ಮಸುತ ಹೇಟೆಂದನಾಖಚರ ॥ ೪೭

ಧೃತಿಯುತ ಹ್ಷತ್ರಿಯನು ವೇದ
ವ್ರತಯುತ ಶ್ರೋತ್ರಿಯನಹಿಂಸಾ
ರತನು ಮಹಪುರುಷನು ಸುಧೀರನು ಸಾಧುಸೇವಕನು ।
ಸತತ ಪರರುಪಕಾರಿ ದೇವ
ಪ್ರತತಿವಲ್ಲಭ ಪರರ ಗುಣದು
ನ್ನತಿಯ ಸೈರಿಸದವನೆ ಕಷ್ಟನು ಯಹ್ಷ ಕೇಳೆಂದ ॥ ೪೮

ನಿಂದ್ಯನಾವನು ಲೋಕದೊಳಗಭಿ
ವಂದ್ಯನಾವನು ಜೀವವಿರೆ ಮೃತ
ನೆಂದೊಡಾವನು ದೇಶ ಕಳವಹುದಾವತೆರದಿಂದ ।
ಸಂದ ಯಜ್ಞವದೆಂತು ಕೆಡುನ್ನದು
ತಂದೆ ಹೇಟೆನೆ ಧರ್ಮಸುತ ಸಾ
ನಂದದಿಂದವೆ ಕಾಣಿಸಿದನಾ ಖಚರಗುತ್ತರವ ॥ ೪೯

ಕೇಳು ಪರನಿಂದಕನೆ ನಿಂದ್ಯನು
ಹೇಳಲೇಂ ಪರಹಿತನೆ ವಂದ್ಯನು
ಹೇಟಿದಿಕ್ಷೆಗೆ ನಡೆವ ನೃಪತಿಗ ಕೆಡುವುದಾದೇಶ [1] ।
ಕೇಳು ನಡೆವೆಣನೇ ದರಿದ್ರನು

[1] ನೃಪನಿಂದಟಿವುದಾದೇಶ, ಚ.

ಸಾಲದೆಣಿಸಿದ ದಕ್ಷಿಣೆಯ ಯ
ಜ್ಞಾಳಿ ನಿಷ್ಫಲವೆಂದು ನುಡಿದನು ರಾಯಕೌಂತೇಯ ॥ ೫೦

ನರಕಿ ಯಾವನು ಸುಜನರಲಿ ಬಾ
ಹಿರನದಾವನು ಲೋಕವಶ್ಯಿಯಲು
ಹರಣವಿರೆ ಹೊಂದಿದನದಾವನು ಭೂಮಿಪಾಲರಲಿ ।
ಮರುಳನಾವನು ಮಾನಭಂಗದಿ
ಭರಿತನಾವನು ಹೇಱು ಧರ್ಮಜ
ಸರಸಿಯಲಿ ಬಿಟ್ಟಿಕುದಕವನು ಕುಡಿ ಯೆಂದನಾಖಚರ ॥ ೫೧

ಕೊಳೆದ ಮಧ್ಯದಿ ಧರ್ಮನಂದನ
ತಿಳುಹುತಿರ್ದನು ಧರ್ಮತತ್ವವ
ಬಿಟ್ಟಿಲಿದನು ಬಿರುತಡಿಯಲೇ ಕೌರವನ ಕೃತ್ತಿಮದ ।
ಬಲುಬಿರಿವಜ್ಞನಭೂತ ಬಂದುದು
ನೆಲೆಯ ಧರ್ಮಜನಾಗ ಕಂಡುದು
ಎಲೆ ಮಹಾದೇವೆನುತ ಮುಟ್ಟಿದುದು ಹಸ್ತಿನಾಪುರಿಗೆ ॥ ೫೨

ಎನೆ ಕೃತಘ್ನನೆ ನರಕಿ ವಿದ್ಯಾ
ಧನಮದಾಂಧನೆ ಬಾಹಿರನು ಹೊ
ಕ್ಕನುವರವೆ ಹಿಂಗುವೆ ಮಹೀಪತಿ ಜೀವವಿರೆ ಮೃತನು ।
ವಿನುತಗುರುವಶ್ಯಿಯದನೆ ಮರುಳಂ
ಗನೆಯರಲಿ ವಿಶ್ವಾಸಪರನೇ
ಜನವಶ್ಯಿಯಲಭಿಮಾನಹೀನನು ಯಹ್ಷ ಕೇಳೆಂದ ॥ ೫೩

ಒಲಿದನೊಡಲನು ಧರ್ಮಸಂಗತಿ
ಗಳ ಸುಸಂವಾದದಲಿ ನಿಜತನು
ಪುಳಕ ಗಬ್ಬರಿಸಿದುದು ಸಲೆ ನೀಗಿದುವು ದುಷ್ಕೃತವ ।
ಎಲೆ ಮಹೀಪತಿ ಮೆಚ್ಚಿದೆನು ಬೇ

ಡಚಿದ ತಮ್ಮಂದಿರಲಿ ವೊಬ್ಬನ
ತಲೆಯ ಒದುಕಿಸಿ ಕೊಡುವೆನೆನೆ ಯಮತನುಜನಿಂತೆಂದ ॥ ೪೪

ಅಸುವನಿತ್ತೈ ಯಜ್ಞಪತಿ ಜೀ
ವಿಸಲಿ ನಕುಲನು ಧನ್ಯ ತಾನೆನೆ
ನಸುನಗುತ ಚೇತರಿಸಿ ವೈಮುಖ್ಯದೆದ್ದನಾನಕುಲ ।
ನಿಶಿತಮತಿ ವೆಂಬಿದೆನು ಮಗುಟಿ
ನ್ನಸುವನೊಬ್ಬಂಗಿತ್ತೆನೆನೆ ಜೀ
ವಿಸಲಿ ಸಹದೇವಾಂಕನೆಂದನು ಧರ್ಮನಂದನನು ॥ ೪೫

ಜನಪ ನಿನ್ನಾಳಾಪವೆನ್ನಯ
ಮನಕೆ ವಿಸ್ಮಯವಾಯ್ತು ಭೀಮಾ
ರ್ಜುನರು ನಿನ್ನೊಡಹುಟ್ಟಿದರು ನೀನವರಿಗತಿಹಿತನು ।
ಅನುಜರವರಿರಲೇಕೆ ಮಾದ್ರಿಯ
ತನುಜರೆಚ್ಚರ ಬಯಸಿದೈ ಹೇ
ಡೆನಲು ನಸುನಗೆ ವೊಳೆಯೆ ನುಡಿದನು ಧರ್ಮನಂದನನು ॥ ೪೬

ನಾವು ಬೊಪ್ಪಂಗಾಗೆ ಮಾದ್ರೀ
ದೇವಿ ತನ್ನನು ಕರೆದು ಶಿಶುಗಳ
ನೋವುಕೇಡಿದು ನಿನ್ನದಾರೈದಿವರ ಸಲಹುವದು ।
ಭಾವಭೇದವನಣುವೆ ಬಗೆಯದೆ
ಕಾವುದೈ ಯೆಲೆ ಮಗನೆ ಬೆಸಸಿದ
ಳಾವೆಪರಿಯಲಿ ಮಜ್ಜಿವೆನೈ ಮಾದ್ರೀಕುಮಾರಕರ ॥ ೪೭

ಎನಲು ಮೆಚ್ಚಿದನಚ್ಚಿದ ಭೀಮಾ
ರ್ಜುನರ ಹರಣವನಿತ್ತು ನಿಜನಂ
ದನನನಪ್ಪಿದನೊಲವು ಮಿಗೆ ಯಮರಾಜನೈತಂದು ।
ತನುಜ ಸಾಕಿನ್ನಾಯ್ತು ನಿಮಗೀ
ವನನಿವಾಸವು ಬೀಱುಕೊಡಿ ಮುನಿ
ಜನವೆ ನಿನ್ನಜ್ಞಾತವಾಸಕೆ ಮನವ ಮೊಡೆಂದ ॥ ೪೮

ಆ ಭೂತವು ಕನಕನನ್ನು ತಿಂದುಹೋಗುವಿಕೆ.

ಆ ಸಮಯದಲಿ ಕನಕ ಹರಹಿಸಿ
ದಾಸುಹೋಮಕೆ ತೃಪ್ತಿವಡೆಯಿಸಿ
ಮಾಸಲಿನ ಪೂರ್ಣಾಹುತಿಯ ಕೊಡುವಾಮುಹೂರ್ತದಲಿ ।
ಭಾಸುರದ ತೇಜಃಪ್ರಕಾಶದ
ಮಾಸಲಟಿಯದ ಭೂತ ನಡೆತಂ
ದಾಸಗರ್ವನ ಕನಕನನು ತಿಂದಡಗಿತಗ್ನಿಯೊಳು ॥ ೫೯

ಬಳಿಕ ಯಮನು ಈ ವೃತ್ತಾಂತವನ್ನು ಮಗನಿಗೆ ಹೇಳಲಾಗಿ
ಕೃಷ್ಣನನ್ನು ಕೊಂಡಾಡಿದುದು.

ಯಮನ ಬಟಿಕೊಲಿದೀಪ್ರಸಂಗದ
ಕ್ರಮವ ಕೃತ್ಯೆಯು ಪದನನೆಲ್ಲ
ಯಮತನೂಜಂಗಱುಹೆ ತವ್ವೃತ್ತಾಂತಸಂಗತಿಯು ।
ಕಮಲನಾಭನ ಕರುಣವಳತೆಯ
ಕ್ರಮವನಱಿಹಿಸಿ ಬಟಿಕ ಮುಂದಣ
ವಿಮಲದಜ್ಞಾತಕ್ಕೆ ನೇಮಿಸಿ ಹರಹಿದನು ಮಗನ ॥ ೬೦

ನೀವು ಪಾಂಡವರೆಂದು ನಿಮ್ಮನ
ದಾವ ಮಾನವರಱಿಯದಿರಲಿ ಮ
ಹಾವಿಭವದಲಿ ಬೆಳಗುವ್ರದು ಬಟಿಕವೆನಿಮೆಂಡಲವೆ ।
ದೈವಬಲ ನಿಮಗುಂಟು ಮೋಹಿ
ನ್ನಾವುದರಿದಲ್ಲೆಂದು ತನುಜನ
ನೋವಿ ಮನ್ನಿಸಿ ಬೀಱುಕೊಟ್ಟನು ಪಾಂಡುನಂದನರ ॥ ೬೧

ಅರಣಿಯನು ತಂದಿತ್ತು ಧರಣೀ
ಸುರನ ಮನ್ನಿಸಿ ಕಳುಹಿ ಮುನಿಗಳ [1]
ಕರೆಸಿ ಧೌಮ್ಯಾದಿಗಳಿಗೀಪದನಱುಹಿ ಬಳಿಕಿನಲಿ [2] ।

---

1 ಮುನಿಗಳನು ಭೂ, ಚ
2 ಸುರರ ಸಚಿವರ ಪರಿಕರರ ಧೌಮ್ಯಾದಿಮಂತ್ರಿಗಳ, ಚ.

ವೆರಸುಭದ್ರಾಸೂನುಪಾಂಚಾ
ಲರನು ಧೃಷ್ಟದ್ಯುಮ್ನ ಮೊದಲಾ
ಗಿರೆ ನಿಜಾಪ್ತರನವರವರ ಪಟ್ಟಣಕೆ ಕಳುಹಿದನು ॥ ೬೦

* ಹರಿನವೋ ಜಯ ಭಕ್ತಾರಘೆಸಂ
ಹರ ನವೋ ಜಯ ಸಕಲಭುವನೇ
ಶ್ವರ ನವೋ ಜಯ ಕೃಷ್ಣ ಕೇಶವ ವಿಷ್ಣು ವಾಮನನೆ ।
ಪರಮಪುಣ್ಯಶ್ಲೋಕ ಜಯ ಗುಣ
ಭರಿತ ನಿರ್ಮಳರೂಪ ಜಯ ಜಯ
ಕರುಣಿ ರಕ್ಷಿಸು ರಾಯ ಗದುಗಿನ ವೀರನಾರಯಣ ॥ ೬೧

ಅಂದು ಭೂಪತಿ ನೆರೆದಪರಿಜನ
ವೃಂದವನು ಸಂತವಿಸಿ ನೀವು ಮನ
ಬಂದ ಠಾಹಿನಲಿಹುದು ವಮ್ಮಜ್ಞಾ ತಪೋಪಸಕಾ ।
ಎಂದು ಕಳುಹಿಸಿ ಅನುಜರೊಡನಾ
ಯಿಂದುಮುಖಿ ಸಹಗಮಿಸಿದನು ನಲ
ವಿಂದ ನೆನೆವುತ ವೀರನಾರಾಯಣನ ಪರಿಪಾಡಿ ॥ ೬೨

§

ಇತಿ ಶ್ರೀಮದಚಿಂತ್ಯಮಹಿಮಾಗದಗು ವೀರನಾ ರಾಯಣ ಚರಣಾರವಿಂದ
ಮಕರಂದವ ಧುಪಾನ ಪುಷ್ಟಜಟಕಷ್ಪ ಟ್ಟಬೀಸಿಕಾಯು ಶ್ರೀಮತ್
ಕುಮಾರವ್ಯಾಸವಿರಚಿತವಪ್ಪ
ಕರ್ಣಾಟ ಭಾರತಕಥಾ ಮಂಜರಿಯೊಳ್
ಅರಣ್ಯಪರ್ವಂ ಮುಗಿದುದು.

---

* ಕೆಲವು ಪುಸ್ತಕಗಳಲ್ಲಿ ಈ ಪದ್ಯವಿದ.

§ ತಾಯಿತಂದೆಯು ನೀನೆ ಸರ್ವರಿ । ಗೀಯಸತ್ತು ಜಗತ್ತು ನಿನ್ನಲಿ
ಮಾಯೆಯಿಂ ತೋರುವುದು ನಿನ್ನನು ತಿಳಿಯಲಱಗುವುದು । ಮಾಯಿ ನೀ
ಸವಿಶೇಷಮಿಥ್ಯೆಯು ॥
ಮಾಯೆಯಟಿದದ್ವೈತ ಸತ್ಯವು ॥ ರಾಯಗದುಗಿನ ವೀರನಾರಾಯಣನೆ ಪೆರ
ತಿಲ್ಲ ॥ ಇದು ಮುದ್ರಿತವಾದ ಬೂದು ಪುಸ್ತಕದಲ್ಲಿ ಮಾತ್ರ ಇರುವುದರಿಂದ
ಗ್ರಂಥದಲ್ಲಿ ಸೇರಿಸಲಿಲ್ಲ.